ಲಕ್ಷ್ಮಗಟ್ಟಿಲೆ ಜನರಿಂದ ಶ್ಲಾಘಿಸಲ್ಪಟ್ಟು ಲಕ್ಷ್ಮಗಟ್ಟಲೆ ಜನರು ನಿರೀಕ್ಷಿಸುತ್ತಿರುವ, ಸ್ಥಳೀಕ ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ನಾಳೆ (ತಾ 29-4-1933)ರಿಂದ ಪ್ರದರ್ಶಿಸಲ್ಪಡಲಿರುವ 'ತ್ಯಮ ಸುಂದರ' ವೆಂಬ ಮನಾಡುವ ಉಜ್ವಲ ಚಲಚಿತ್ರದ ಒಂದು ದೃಶ್ಯ.

ಕೃತ ಸಂ. ೨ ಫಾಲ್ಗುಣದಿಂದ ಶ್ರೀಮುಖ ಸಂವತ್ಸರದ ಪೌಷ ಮಾಸಂ ಪರ್ಯಂತರಂ ಸೂರ್ಯ ಚಂದ್ರರ ಉದಯಾಸ್ತಮಾನಗಳ ಸಮಯಂಗಳ್

(ಸ್ಥಳಕಾಲಮಿ ಮೇಲೆ—ಪಗ್ಗು).

ತಾರೀಕು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯರ. ಉ	ಅ
29	ಶು	೪	೭	ಪುಷ್ಯಾ	೨೬॥	ಸಿ.	6.13	6.43
30	ಭಾ	೫	೧೦॥	ಆಶ್ಲೇ	೩೦॥	೧೦	6.13	6.43
1	ಸೋಮು	೬	೧೩॥	ಪೂರ್ವಾಷಾ	೩೫॥	೧೧	6.12	6.43
2	ಭೌ	೭	೧೬	ಪುಷ್ಯಾ	೧೨	೧೨	6.12	6.44
3	ಬುಧ	೮	೧೮॥	ಶತ್ಲೇಷಾ	೧೪॥	೧೩	6.12	6.44
4	ಗುರು	೯	೨೧॥	ಮಘಾ	೧೮॥	೧೪	6.11	6.44
5	ಶುಕ್ರ	೧೦	೨೪॥	ಪೂರ್ವಾ	೨೨॥	೧೫	6.11	6.44

ಮಂಗಳೂರಿನ ವಾಯುಸ್ಥಿತಿ.

Date. ತಾರೀಕು	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಇಮಮಳಾ ಮಳೆ.
20	90— 2	77— 9	—	—
21	90— 5	79— 6	—	—
22	91— 4	77— 9	0—49	—
23	90— 4	73— 3	0—56	—
24	89— 7	76— 9	—	—
25	90— 2	78— 4	—	—
26	90— 0	79— 5	—	2—56

ಮಂಗಳೂರಿನ ಪೇಟೆ ಧಾರಣೆ.

ಜೀಪಸು	ಇಂದ ರೂ. ಆ.	ವರೆಗೆ ರೂ. ಆ
ಹೊಸ ಮುಸ್ಕಡ	3—10	4— 6
ಹೊಸ ರಾಶಿ ಅಕ್ಕಿ ...	3— 4	3— 2
ಗುಮ್ಮು ...	3— 6	3—14
ಸುಗ್ಗಿ ...	3— 6	3—12
ಊಡಿ ಅಕ್ಕರ್ ಬೆಲ್ಲಗೆ ...	4— 4	5— 0
ರಂಗೂನು ಬೆಲ್ಲಗೆ ಗೋಣಿ ಗಳ್ಳೆ ...	5—	5—10
ಎಲ್ಲಾರು ಬೆಲ್ಲಗೆ ಪುಡಿ ಗಳ್ಳೆ ...	3—12	4—
ಗೋದಿ ಗೋಣಿ ಗಳ್ಳೆ ...	10— 8	12— 8
ತೊಗರಿ ಗೋಣಿ ಗಳ್ಳೆ ...	9— 8	12— 0
ಹುರುಳಿ ಗೋಣಿ ಗಳ್ಳೆ ...	5— 4	5— 8
ಕಡಲೆ ಗೋಣಿ ಗಳ್ಳೆ ...	8— 4	9— 0
ಹೊಗಂಬೇಳೆ ಗೋಣಿ ಗಳ್ಳೆ ...	9—	10— 0
ಉದ್ದು ಗೋಣಿ ಗಳ್ಳೆ ...	8— 8	9— 8
ಹೆಸರು ಗೋಣಿ ಗಳ್ಳೆ ...	8— 0	9— 0
ಊರುಬೆಲ್ಲ ಖಂಡಿ ಗಳ್ಳೆ ...	32— 8	35— 0
ಉಪ್ಪು ಗೋಣಿ ಗಳ್ಳೆ ...	4—12	5— 4
ಹೊಸ್ತಿ ಖಂಡಿ ಗಳ್ಳೆ ...	52—	55—
ಹೊಸ್ತಿ ಹಿಂಡಿ ಖಂಡಿ ಗಳ್ಳೆ ...	21—	21— 8
ಎಳ್ಳಂಡಿ ಖಂಡಿ ಗಳ್ಳೆ ...	26— 4	27— 8
ಹೊಸ್ತಿ ಎಳ್ಳೆ ಮಣ ಗಳ್ಳೆ ...	4— 0	5— 0
ಎಳ್ಳೆಣ್ಣೆ ಮಣ ಗಳ್ಳೆ ...	6—12	7— 0
ಹಿಮಿಡಿಎಣ್ಣೆ ಬೆಲ್ಲಗೆ ಗಳ್ಳೆ ...	4— 7	8—12
ಕೊಬ್ಬರಿ ಸಣ್ಣರಿ ಮಣ ಗಳ್ಳೆ ...	3—15	4— 0
ಹೊಸ ಹೊಸರು ...	5— 8	5—12
ಸಾಸಿವೆ ಮುಡಿ ಗಳ್ಳೆ ...	4—12	5— 0
ಕೇರಿಎ ಕಾಫಿ ಖಂಡಿ ಗಳ್ಳೆ ..	200— 0	225—
ಕಾಳುಮೆಣಸು ಖಂಡಿ ಗಳ್ಳೆ .	13— 0	140—
ಯೇಲಕ್ಕಿ ಮಣ ಗಳ್ಳೆ ...	19— 0	22—
ಗೇರುಬೀಜ ಮುಡಿ ಗಳ್ಳೆ ...	2— 0	—
ಕಳ್ಳಿಕಾ ಖಂಡಿ ಗಳ್ಳೆ ...	25— 0	25— 8
ಕಾಂಪ್ಲಿ ಕಣಸು ಮಣ ಗಳ್ಳೆ ...	9— 8	9—10
ಕಾಂಪ್ಲಿ ಹಾಕ್ಸಗೆಲ್ಲ ಮಣ ಗಳ್ಳೆ ...	15— 0	16— 0
ಕಾಯಿಕಳ್ಳಿ ಸೇರು ಗಳ್ಳೆ ...	14— 4	13— 8
ಒಣಮೆಣಸು ಮಣ ಗಳ್ಳೆ ...	9— 0	9— 8
ಬದಮು ಗಳ್ಳೆ ...	19—	19— 4
ಮೂಂಗ್ ಮುಡಿ ಖಂಡಿ ಗಳ್ಳೆ ...	42— 8	45—
ಕುಡಿಲ ಕಾಫಿ ಖಂಡಿ ಗಳ್ಳೆ ...	200—	
ಪಚ್ಚೆಕಾಫಿ ...	100—	125
ಮಿಂಡಿ ಕಾಫಿ ...	100—	118

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಮುಖ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೊಡಲಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಾದರೆ ಪ್ರತಿದಿನವೂ ನಾಲ್ಕು ಸಾರಿ ಉಡುಪಿಗೆ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಸೀಟುಗಳನ್ನು ಕಾಯ್ದಿರಿಸಿಕೊಳ್ಳಬಹುದು. ಹಿಂದೂ ತೀರ್ಥಕ್ಷೇತ್ರವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮ್ಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ಹೋಗಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ದೇಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವುದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ತಿರುಗ್ಗಳ್ಳೆ 12 ಗಂಟೆ ತಲಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್;

ಚಿಕ್ಕಮಗಳೂರು.

ಮುಂಬಾಯಿಯಿಂದ ⟷ ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ತಿರುಗ್ಗಳ್ಳೆ, ಬೇರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ತಿರುಗಾಟದ ಪ್ರಯಾಣ! ಉತ್ತಮತರ ಸೌಕರ್ಯ!

ವೇಳಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

(ಬ್ಯಾಂಕಿನವರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ವಿಭಿನ್ನ ಲೇಖನಗಳಿಗೆ ಎಡಕೊಡಲಾಗುವುದಿಲ್ಲ. ಲೇಖನಗಳು ಸ್ಥಳಾಭಾವದಿಂದ ಪ್ರಕಟಿಸಲಾಗದೆ ಹೋದಲ್ಲಿ ಹಿಂತಿರುಗಿಸಲಾಗುವುದು. ಸಂಪಾದಕರ ಅಭಿಪ್ರಾಯಕ್ಕೆ ಲೇಖನಗಳು ಒಳಪಟ್ಟಿರುತ್ತವೆ. ಸಂಪಾದಕರು ಪತ್ರಿಕೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಸಂಪಾದಕರಿಗೆ ಬರೆಯುವ ಪತ್ರಗಳಿಗೆ ಉತ್ತರವನ್ನು ಕಳುಹಿಸಲು ಅಂಚೆ ಚೀಟಿಯನ್ನು ಕಳುಹಿಸಬೇಕು. ಪತ್ರಿಕೆಯ ಕಛೇರಿಯ ವಿಳಾಸ: ಮ್ಯಾನೇಜರ್, ಸ್ವದೇಶಾಭಿಮಾನಿ, ಮಂಗಳೂರು – ಸಂ. ಸ್ವ.)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರೀವೇಣ ಸಂಗಮವಾಯಿತೇ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿ. ಪಿ. ಜನಮಾನ್ ಮತ್ತು ತಂಕರ್ ವಿಟ್ಟಲ್ ಕಂಪೆನಿಯ ಮಾಲಕರೂ ಟಾಲಕರೂ ಪರಸ್ಪರ ಸಹಾನುಭೂತಿಯುಳ್ಳವರಾಗಿ, ಅದೊಂದು (ಕಂಬ್ಯಾಂಡ್) ಸಂಯುಕ್ತ ಕ್ರಮದಲ್ಲಿ ಒಂದಾಗಿ ಮಂಗಳೂರು – ಕುಂದಾಪುರ ಲೈನಿನಲ್ಲಿ ತಮ್ಮ ಬಸ್ಸುಗಳನ್ನು ನಡಿಸಲಿಕ್ಕೆ ಪ್ರಾರಂಭಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಶಸ್ತ್ಯದ ಸಂಗತಿಯಾಗಿದೆ

ಮೊದಲಾದರೋ – ಎಲ್ಲಾ ಕಂಪೆನಿಗಳ ಬಸ್ಸುಗಳನ್ನೂ ನಾವಾನ್ನು ಒಂದೇ ಸಮಯದಲ್ಲಿ ಬಿಡುತ್ತಿದ್ದ ಕಾರಣ ಎಂತಹ ತೊಂದರೆಗಳಲ್ಲಿದ್ದರೂ ಪ್ರಯಾಣಕರು ಒಂದೇ ಮುಹೂರ್ತಕ್ಕೆ ಸರಿಯಾಗಿ ಆಫೀಸಿಗೆ ಬರಬೇಕಿತ್ತು. ಹಾಗೆ ಬರುವ ಜನರನ್ನು ವಿಜಂಟರ್ಲ್ಲಿ ಹಲವರು ತಮ್ಮ ತಮಗೆ ತಿಳಿದಿರುವ ರೀತಿಯಲ್ಲಿ ಕುಡಿಸಿ ದನಿಸಿ ಗಲಿಬಿಲಿ ಮಾಡುತ್ತಿದ್ದರು. ಜನರನ್ನು ಕುಂದಿಸುವುದಕ್ಕೆ ಲೆಕ್ಕವಿಲ್ಲ. ಸಾಮಾನು ಹಾಕುವುದಕ್ಕೆ ಮತಿಯಿಲ್ಲ. ಕ್ಲಿಪ್ಪ ಕಾಲಕ್ಕೆ ಬಂದ ಪ್ರಯಾಣಕರು ಎಷ್ಟು ಮೊರೆಯಿಟ್ಟರೂ ಕೇಳದೆ ಸರ್ವಸ್ವತಂತ್ರರಾದ ವಿಜಂಟರು ತಮ್ಮ ಕೈಯಿಂದ ಟಿಕೇಟು ಪಡಕೊಂಡು ಎಲ್ಲಿಯೋ ಎರಾಮಾರಾಮದಲ್ಲಿ ಮೈಕುರಿತಿರುವ ಕೆಲವು 'ದೊಡ್ಡ ಮನುಷ್ಯರ' ಸನ್ನಿಧಿಗೆ ಬಸ್ಸುಗಳನ್ನು ತಳುಹಿಸಿ 'ಮುದಿವೆ' ಚಪ್ಪರದಲ್ಲಿ ಸಮ್ಮಾನವನ್ನು ಮಾಡಿ ಕೃತಾರ್ಥರಾಗುತ್ತಿದ್ದರು. ಡ್ರೈವರರಾದರೂ ಅಂಥಾ 'ದೊಡ್ಡ ಮನುಷ್ಯರ' ಸಮಯವನ್ನು ಕಾದು ಕಾದು ಕೊನೆಗೆ ತಡವಾಗಿ ಬಿಟ್ಟ ತಮ್ಮ ಬಸ್ಸುಗಳನ್ನು ಪ್ರಚಂಡ ವೇಗದಿಂದೋಡಿಸಿ, ನೊಡಲು ಹೋದ ಬೇರೆ ಕಂಪೆನಿಯ ಬಸ್ಸನ್ನು ಹಿಂದಿಕ್ಕಿ ಮುಂದಿನ ನಿಲ್ದಾಣವನ್ನು ತಾವೇ ಮುಂದಾಗಿ ಸೇರುವುದಕ್ಕೆ ಪ್ರಯತ್ನಿಸುತ್ತಿದ್ದರು. ಈ ಪ್ರಯತ್ನದ ಆವೇಗದಲ್ಲಿ ಎಷ್ಟೋ ಮೋ ಹಾರುಗಲ್ಲ. ಒಂದು ತಗಲಿ, ಮಗುಚಿಬಿದ್ದು ದಾರಿಗರನ್ನೂ ಕುಳಿತವರನ್ನೂ 'ಟಾಟು' ಕೊಡುವ ಗಂಜಾಂಕರಗಳಿಗೆ ಅಸ್ಪದವಾಗುತ್ತಿತ್ತು. ಇಂತಹ ಅರಾಯವ್ಯವಸ್ಥೆಯಲ್ಲಿ ಸಿಲುಕಿದವರೂ ಅನಿವಾರ್ಯತೆಯಿಂದ ಅದೇ ಕಂಪೆನಿಯ ಮತ್ತೊಂದು ಬಸ್ಸು ಬರುವ ವರೆಗೆ ಅಲ್ಲೇ ಕಾದು ಬಿದ್ದಿರಬೇಕಿತ್ತಲ್ಲದೆ ಕಿಟ್ಟಿದಿರಲ್ಲೇ ಪೆಸೆಂಜರ್'ಗಳಲ್ಲದೆ ಧರ್ಮಕ್ಕೆ ಹಾದುಹೋಗುವ ಬೇರೆ ಕಂಪೆನಿಯ ಬಸ್ಸಿನ ಡ್ರೈವರ್ – ಕಂಡಕ್ಟರ್'ಗಳ ಆನಾದರದ ಹಾಗೂ ನಿರ್ದಾಕ್ಷಿಣ್ಯಾದ ಪವ್ಯಾಸ ಪಡಬೇಗಳನ್ನೂ ಸಹಿಸಿಕೊಂಡು ಮುಂದೆ ಸಿವಿಲ್ ಕ್ರಿಮಿನಲ್ ಕೋರ್ಟುಗಳಲ್ಲಿ ಅಲೆದಾಡುವ ಪ್ರಸಂಗವಿಯೂ ಪ್ರಾಪ್ತವಾಗುತ್ತಿತ್ತು. ಈ ಕಾರಣಗಳಿಂದ ಕಂಪೆನಿಗಳೆಲ್ಲವೂ ದಿನೇ ದಿನೇ ಅಧೋಗತಿಗೆ ಇಳಿಯುವಂತಿದ್ದುವು

ಈಗಲಾದರೋ ಒಂದೊಂದು ಘಂಟೆಯ ಅಂತರವಾಗಿ (Interval) ಪ್ರಾತಃಕಾಲ ೫ ಘಂಟೆಯಿಂದ ಸಾಧಾರಣ ಸಾಯಂಕಾಲದ ವರೆಗೆ ಕ್ರಮಾನುಕ್ರಮವಾಗಿ ಅತ್ತಿತ್ತ ಒಂದೊಂದಾಗಿಯೇ ಈ ಮೂರು ಕಂಪೆನಿಗಳ ಬಸ್ಸುಗಳು ಹೊರಡುವ ವ್ಯವಸ್ಥೆಯಾಗುವುದರಿಂದ ಪ್ರಯಾಣಿಕರು ತಮಗನುಕೂಲವಾದ ಸಮಯವನ್ನು ಆರಿಸಿಕೊಂಡು ಪ್ರೋರಡುವುದಕ್ಕೆ ಸಾಧ್ಯವಿದೆ. ಆಫೀಸಿನಲ್ಲೇ ಟಿಕೇಟು ಕೊಡುವ ವಿರ್ವಾಡಿರುವುದರಿಂದ ವಿಜಂಟರ ತಂಟೆಯಿಲ್ಲವಾಗಿದೆ. ಜನರನ್ನು ಹತ್ತಿಸುವುದರಲ್ಲಿ ಮತಿಯಿಂದೆ ಸಾಮಾನು ತುಂಬಿಸುವುದರಲ್ಲಿ ಹದ ಬೆದೆ 'ದೊಡ್ಡ ಮನುಷ್ಯರ ಸಮ್ಮಾನಕ್ಕಾಗಿ ಹೋಗಲಿಕ್ಕಿಲ್ಲವೆಂದೂ ಎಲ್ಲರೂ ಸಕಾಲದಲ್ಲಿ ಹೊರಡಬಹುದಾಗಿದೆ. ಬೇರೆ ಬೇರೆ ಸಮಯ ಕಲ್ಲಿ ಬಿಡುವುದರಿಂದ ಬಸ್ಸುಗಳು ಒಂದಕ್ಕೊಂದು ಧಕ್ಕೆಯಾಗಲೆಡೆಯಿಲ್ಲದಾಗಿದೆ. ಆದುದರಿಂದ ಗಂಡಾಂತರಗಳು ಕಡಿಮೆಯಾಗುವುದಿದೆ. ಒಂದು ಬಸ್ಸು ಯಾವ ಕಾರಣದಿಂದಲಾದರೂ ನಡು ದಾರಿಯಲ್ಲಿ ನಿಂತು ಹೋದರೆ, ಅವಕಾಶವೇ ಒಂದು ಘಂಟೆಯಲ್ಲಿ ಬರುವ ಬಸ್ಸನ್ನು ಅದೇ ಟಿಕೇಟಿನಿಂದ ನಿರಾತಂಕವಾಗಿ ಅಶ್ರಯಿಸಬಹುದಾಗಿದೆ. ಕೋರ್ಟು ಕಛೇರಿಗಳಿಗೆ ಹೋಗುವ ಅವಕಾಶವು ಹೊಸ್ಸವಾಗುವಂತಿದೆ. ಈ ಸಮ್ಮಿಲಿತ ಸಂಘದಲ್ಲಿ ಸೇರಿದ ಕಂಪೆನಿಗಳಿಗಿಗೆ ಅಡೆತಡೆಯಿಲ್ಲದೆ ಒಂದೊಂದು ಬಗೆಯ ದಾನಾಶಾಲೆಯ ಅಂಶ ಸ್ವೀಕಾರ ಶ್ರದ್ಧಮಿಯುವುದರಿಂದ ಯಾವ ಕಂಪೆನಿಗೂ ಹಿಂದಿನ ಕಾಲದಂತೆ ನೋಲವಿಲ್ಲದಂತಾಗಿದೆ.

"ಸರ್ವಥಾ ನಾಸ್ತಿ ವಿರ್ದೋಷಂ ಸರ್ವಥಾ ನಾಸ್ತಿ ನಿರ್ಗುಣಂ" ಎಂಬಂತೆ ಈ ಸಂಯುಕ್ತ ಸಂವಿಧಾನದಲ್ಲಿಯೂ ಹಲವು ಗುಣಗಳ ಕೊಂದಿಗೆ ಕೆಲವು ದೋಷಗಳೂ ಇರಬಹುದು. ಇಂತಹ ದೋಷಗಳನ್ನು ಹೋಗಲಾಡಿಸುವುದಕ್ಕೆ ಬಲ್ಲವರಾದ ಹಿತಚಿಂತಕರು ಈ ಯೋಜನೆಯ ಸಾಧಕರಾದ ಶ್ರೀಮಾನ್—ಆರೂರು–ಕುಷ್ಣ – ನಾಯಕ ರಿಗೆ, ಉಚಿತಯುಕ್ತವಾದ ಸಲಹೆಗಳನ್ನು ಕೊಟ್ಟು ಸಹಾಯ ಮಾಡುವುದು ಅತ್ಯಗತ್ಯವಾಗಿದೆ. ಈ ಕಾರ್ಯದಲ್ಲಿ ಹೆಚ್ಚಿನ ಪ್ರೋತ್ಸಾಹ ಪಬ್ಲಿಸಿಟಿಯ ಇಂದಿನ ತಿಕ್ಷ್ಣ ಪ್ರೋರ್ಟ್ / ಪ್ರಸಿಡೆಂಟರಾದ ಸಜ್ಜನ ಸ್ವಾ ಪಿ ಶೆಟ್ಟಿ, ಎಂ. ಎಲ್ ಸ್ವಯಿದರಂತೆ ಆನುಭವದಾಲಿಗಳಾದ ಬೇರೆ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ, ಇತರ ಮಹಾನುಭಾವರೂ ತಮ್ಮತಮ್ಮ ಪ್ರಾಂತದಲ್ಲಿ ತಿಮಿದ ಬಸ್ಸು ಕಂಪೆನಿಗಳ ಈ (ಕಂಬ್ಯಾಂಡ್) ಸಮ್ಮಿಲಿತ ಸಂಘೋಗಗ ರೀತಿಯನ್ನನುಸರಿಸುವ ಹಾಗೆ ಸಾಧಿಸುವುದು ಕಾರ್ಯೋಚಿತ ಕರ್ತವ್ಯವಾಗಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನವೀನವಾಗಿರುವ ಈ ಮೂರು ಕಂಪೆನಿಗಳ 'ಶ್ರೀವೇಣಿ ಸಂಗಮ' ಕ್ರಮವಿದು ಜನಪ್ರಿಯವಾಗಿ ಅವಿರ್ಭಾವ್ಯವಾಗಿದೆ! ಶಭಾಸ್ತು!

The Combined Booking Agency—It blesseth him that gives and him that takes — *Shakespeare*

ತಾ ೧೫—೪—೩೪ ಮಂಗಳೂರು

ಪಬ್ಲಿಸಿಟಿಗ.

ಸಂಪಾದಕ ಮಹಾಶಯರೇ,

ಕಳೆದ ವರ್ಷದ ಟೀಚಿಂಗ್ ಸ್ಟ್ರೀಟಿನ ಕಡೆತದ ಫಲವಶಿ ಇಲ್ಲಿಯ ಕೆನರಾ ಹೈಸ್ಕೂಲಿನ ವಿದ್ಯೆ ಅದರಲ್ಲೂ ಉಪಾಧ್ಯಾಯರ ಸಂಬಳದ ಮೇಲೆ ಅಡಳಿತದಾರರು ಕೊಡಲಿಯನ್ನುಪಯೋಗಿಸಿರುವ ತ್ತರೆಂಬ ವಾರ್ತೆಯು ಸರ್ವತ್ರ ಹಬ್ಬಿರುತ್ತದೆ ಈ ಉಪಾಧ್ಯಾಯರು ಪ್ರತ್ಯಕ್ಷದ ಸ್ಥಿತಿಯಲ್ಲೇ ಬದಕ ಕ್ಷಮೆಯ ಸಂಬಳ ಕೊಂಡುವವರಿದು ತ್ತಾರೆ ಅವರ ಕಷ್ಟವನ್ನು ವಿವರಿಸಿರದು ಕಳೆದ ವರ್ಷದಲ್ಲಿ ಅವರ ಸಂಬಳವನ್ನು ಹೆಚ್ಚಿಸಲಾಗಲಿಲ್ಲ ಈ ವರ್ಷ ಅವರ ಸಂಬಳವು ಹೆಚ್ಚಿಸಲ್ಪಡುವುದೊಂದಲ್ಲದೆ, ಈಗಿನ ಸಂಬಳದ ಮೇಲೆಯೂ ಒಂದು ಕಡಿತವಿದೆಯಂತೆ ಕಳೆದ ವರ್ಷದ ಮುದ್ರಿತ ಶಾಲಾ ರಿಪೋರ್ಟಿನಿಂದ ಈ ವಿಷಯವು ಸ್ಪಲ್ಪ ಸ್ಪಲ್ಪ ಅರ್ಥವಾಗುತ್ತದೆ. ಶಾಲೆಯ ಆರ್ಥಿಕ ಸ್ಥಿತಿಯು ಸಾಕಷ್ಟು ಶ್ರೀಯಃ ಸ್ಥಿತಿಯಲ್ಲಿರುವ ದಿಲ್ಲವೆಂಬುದನ್ನೂ ಖರೆ ಈ ದುರ್ಮಾಘವದ ದಿನಗಳಲ್ಲಿ ವಂತಿಗೆ ವರಾಡಗಳೆಷ್ಟು ಬಂದಾವೆಂದು ನಾವೇ ಊಹಿಸಬಹುದು ಹೀಗಿರುವಾಗ ಹಿತಚಿಂತಕರೂ ಹಳೆ ವಿದ್ಯಾರ್ಥಿಗಳೂ ಬಡ ಶಾಲಾ ಉಪಾಧ್ಯಾಯರ ಕೃಪಕ ರಕ್ಷಣೆಗಾಗಿ ಸ್ಥಳೀಕ ಶ್ರೀ ವೆಂಕಟರಮಣ ದೇವಸ್ಥಾನದ ಆಶ್ರಯದ ಕಡೆಗೆ ಸರಗೊಡ್ಡಲು ಮನಸ್ಸು ಮಾಡಿದರೆ ಹೆಚ್ಚಾದೀತೆ? ಈ ಶಾಲೆಯ ಹಳೇ ವಿದ್ಯಾರ್ಥಿಗಳಾಗಿರುವ ಈ ದೇವಸ್ಥಾನದ ಟ್ರಸ್ಟಿಗಳಿಂದ ಉಪಾಧ್ಯಾಯರುಗಳನ್ನು ಕಾಂಪ್ಲಿಸಬಹುದೇ ಅಯ್ಯಾ ಸಂಪಾದಕರೇ, ನನ್ನೀ ಮನವಿಯು ಶ್ರೀ ದೇವಸ್ಥಾನದ ಆಡಳಿತದಾರರಿಂದ ಯಾವ ರೀತಿಯಿಂದ ಸ್ವೀಕೃತವಾಗಿದೆಯೆಂದು ತಿಳಿಸಬಹುದೇ ಶ್ರೀ ವೆಂಕಟರಮಣನು ನಮ್ಮನ್ನು ಸತ್ಕಾರ್ಯದಲ್ಲಿ ನಡಿಸಲೆಂದು ಪ್ರಾರ್ಥಿಸುವ

ಕೆನರಾ ಹೈಸ್ಕೂಲಿನ
ಹಳೆ ವಿದ್ಯಾರ್ಥಿ

ಶ್ರೀ ಜ್ಞಾನೋದಯ ಸಮಾಜದ ಇಪ್ಪತ್ತು ಮೂರನೇ ವಾರ್ಷಿಕೋತ್ಸವ.

ಕಳೆದ ಸೌಂಯುಗಾದಿಯ ಎರಡು ದಿವಸಗಳಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು ತಾ ೧೪ನೇ ಪ್ರಾತಃಕಾಲ ಸಮಾಜದ ಸದಸ್ಯರೆಲ್ಲರೂ ಸಮುದ್ರ ಬದಿಯಲ್ಲಿ ಒಟ್ಟು ಸೇರಿ ವೈದಿಕ ಧ್ವಜಾರೋಹಣಗೈದರು ಮತ್ತು ಸ್ನಾನ, ಹವನ, ಸಂಧ್ಯಾವಂದನ ಭಜನೆಗಳ ತರುವಾಯ ಶ್ರೀ ವೀರಭದ್ರನ ತಿಂಗಳಾಯರಿಂದ ಧರ್ಮೋಪದೇಶ ಮಾಡಲ್ಪಟ್ಟು ಎಲ್ಲರಿಗೂ ಯಜ್ಞೋಪವೀತವನ್ನು ಕೊಡಿಲ್ಪಟ್ಟಿತು ಮತ್ತು ಪ್ರತಿಯೊಬ್ಬರು ತಮ್ಮ ಮಧ್ಯಪರಿತ್ಯಾಗ ವ್ರತವನ್ನು ನವೀಕರಿಸಿ ಕೊಂಡರು ೧೩ ಜನರು ಹೊಸ ಸದಸ್ಯರಾಗಿ ಸೇರಿದರು. ಈ ಸಮಾರಂಭಕ್ಕಾಗಿ ಬೆಂಗರೆಯ ಸಮಾಜದವರು ದೋಣಿಯ ಹಾಯಿಗಳಿಂದಲೇ ಒಂದು ವಿಶಾಲವಾದ ಸಭಾಮಂಟಪವನ್ನು ಸಜ್ಜುಗೊಳಿಸಿದ್ದರು

ಮಧ್ಯಾಹ್ನ ನಾಲ್ಕುವರೆ ಗಂಟೆಗೆ ಸಮಾಜಮಂದಿರದಲ್ಲಿ ಸ್ತ್ರೀಪುರುಷರ ಮಹಾಸಭೆಯು ನೆರೆದುಬಂತು ಮಹಿಳೆಯರಿಂದ ಈಶ್ವರ ಸ್ತುತಿ ಪ್ರಾರ್ಥನೆಗಳಾದ ತರುವಾಯ ಮಧ್ಯಾಹ್ನದ ಹಿತಾಸಿತದ ಕುರಿತು ಕೆಲವರು ಎರಡು ಪ್ರಶ್ನವಾಗಿ ನಿಶ್ಚ ಪ್ರಶ್ನೋತ್ತರ ಗೀತಗಳನ್ನು ಹಾಡಿದರು. ಈ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀಮಾನ್ ಉಳ್ಳಾಲ ಮಂಗೇಶರಾಯರಿಗೆ ಒಂದು ಅಪರಿಹಾರ್ಯ ತೊಂದರೆಯು ಸಿಲುಕಿತ್ತು ಬರಲಿಕ್ಕಾಗದ್ದರಿಂದ ಅಂದಿನ ಕೆಲವು ಕಾರ್ಯಕ್ರಮಗಳನ್ನು ಮಾರನೇ ದಿನಕ್ಕಿಡಲಾಯಿತು. ನಂತರ ವೇದದ್ಧಜ ಪತಾಕೆಯೊಂದಿಗೆ ಸುಮಾರು ಒಂದು ಸಾವಿರ ಜನಸ್ತೋಮದೊಡನೆ ಸ್ತ್ರೀಪುರುಷರ ಪ್ರತ್ಯಪ್ರತ್ಯೇಕ ಭಜನೆ ಕೂಟಗಳ ಮೆರವಣಿಗೆಯಾಯಿತು ಮಾರನೇ ದಿನ ಬೆಳಿಗ್ಗೆ ಶಾಲಾ ವಿದ್ಯಾರ್ಥಿಗಳ ಸಂದ್ಯಾವಂದನ ಉಪಹಾರ ಸಮಾರಂಭವೂ ಜರಗಿತು ಮಧ್ಯಾಹ್ನ ೪॥ ಗಂಟೆಗೆ ಶ್ರೀಮಾನ್ ಪಂಜ ವಿಂಗೇಶರಾವ್, ಬಿ ಎ ಎಲ್ ಬಿ ಇವರ ಅಧ್ಯಕ್ಷತೆಯಲ್ಲಿ ಮಹಾಸಭೆಯು ನೆರೆದು ಬಂತು ಮಹಿಳೆಯರಿಂದ ಈಶ್ವರಾರಾಧನೆಯಾಗಿ, ಅಧ್ಯಕ್ಷರ ಹುನ್ನುಡಿಯೊಡನೆ ಸಭಾಕಾರ್ಯವು ಪ್ರಾರಂಭಿಸಲ್ಪಟ್ಟಿತು ಸಮಾಜದ ಕಾರ್ಯದರ್ಶಿಯವರಿಂದ ಸಮಾಜದ ವರದಿ ವಾಚನವೂ ಆಯ, ಎಸ್. ಕುಂದಲಾಯರಿಂಚ ಶಾಲಾ ವರದಿ ವಾಚನವೂ ಆಗಿ, ಅಧ್ಯಕ್ಷರ ಮುಖೇನ ಯೋಗ್ಯ ವಿದ್ಯಾರ್ಥಿಗಳಿಗೆ ಬಾರಿತೋಷಕಗಳನ್ನೂ ಕೊಡಲಾಯಿತು ಇವುಗಳಲ್ಲಿ ಸ್ವರ್ಗೀಯ ಶ್ರೀ ಲಕ್ಷ್ಮಣ ತಿಂಗಳಾಯರ ಶಾಶ್ವತ ಸ್ಮರಣಾರ್ಥ ಎಲ್ಲಾ ವಿದ್ಯಾರ್ಥಿಗಳ ಯೋಗ್ಯತೆಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದ ಸುಂಜುನಾಥನಿಗೆ ಒಂದು ಸಂಪೂರ್ಣ ಉಡಿಗೆಯನ್ನು ಹೊನ್ನಮ್ಮ ಎಂಬವಳಿಗೆ ಒಂದು ಕೀರ್ತಿಯೂ ಕೊಡಲ್ಪಟ್ಟಿತು. ನಂಕ್ಷರ ಶ್ರೀ ವಿದ್ಯಾಭ್ಯಾಸದ ಅವಶ್ಯಕತೆಯ ಕುರಿತು ಕುಮಾರಿ ಇಂದಿರಾದೇವಿ ಯವರಿಂದ ತುಳು ಭಾಷೆಯಲ್ಲಿ ಸುರಸವಾದ ಭಾಷಣವೂ, ಶ್ರೀ ಮಾಧವ ತಿಂಗಳಾಯರಿಂದ ಶ್ರದ್ಧಾನಂದ ಉಚಿತ ವಾಚನಾಲಯದ ವರದಿ ವಾಚನವೂ ಆಯಿತು ಕೃಷ್ಣ ಸಮಾಜದ ರಜತ ಜಯಂತಿ ನಿಧಿಯ ಕುರಿತು ಕಾರ್ಯದರ್ಶಿಯವರು ಪ್ರಸ್ತಾಪಿಸಲ್ಕೆತ್ತಿ ಈ ಕನಕ್ಕೆ ಇದಕ್ಕೆ ಸುಮಾರು ೧೯೫೦ ರೂಪಾಯಿಗಳು ವಾಗ್ದಾನವಾಗಿದೆಯೆಂದೂ, ಇದರಲ್ಲಿ ೫೦೦ ರೂಪಾಯಿಗಳನ್ನು ವಸೂಲಾಗಿದೆಯೆಂದೂ ಸಮಾಜದ ಕಾರ್ಯನಿರ್ವಾಹಕ ಸಭೆಗಳನ್ನು ವಿಸ್ತರಿಸೋಣಿ ಅವುಗಳನ್ನು ಶಾಸ್ತ್ರಸಮ್ಮೋಷ ತಕ್ಕ ಸ್ಮಿರಕೋಪಕ್ಷಾಧಿಗೆ ಎಲ್ಲರೂ ತಮ್ಮ ಶಕ್ತಿಮೀರಿ ಸಹಾಯಮಾಡಿ ಸಮಾಜದವರು ಪ್ರಾರಂಭಿಸಿದ ಈ ಯಜ್ಞಕಾರ್ಯವನ್ನು ಸಕಾಲದಲ್ಲಿ ಪೂರ್ತಿಗೊಳಿಸುವ ಪುಣ್ಯಭಾಗಿಗಳಾಗಬೇಕಾಗಿಯೂ ಪ್ರಾರ್ಥಿಸಿದರು ಆಗ ಮೊಗವೀರ ಸತ್ಯೋರ್ತ್ತೇಜಕ ನಾಟಕ ಮಂಡಲಿಯವರು ರೂ. ೧೦೦, ಬೊಕ್ಕಪಟ್ಣ ಬಾಬು ಪುತ್ರನ್'ರವರು ರೂ ೫೦, ಬೋಳಾರ ತಿಮ್ಮಪ್ಪ ಕರಿಯದಕ್ಕರವರು ರೂ. ೫೦ ಯಟ್ ಕೃಷ್ಣಪ್ಪ ತಿಂಗಳಾಯರು ರೂ ೫೦ ಹೊಗೆ ಬಜಾರ ಟೋಟು ಕೃಷ್ಣನವರು ರೂ ೫೦ ಕೂಡಾ ೭೦೦ ರೂಪ್ಯಾಗಳು ವಾಗ್ದಾನ ಮಾಡಲ್ಪಟ್ಟವು ತದುವಾಯ ಚಿಕ್ಕ ಬಾಲಕಿಯರಿಂದ ಹಾಸ್ಯರಸ ಭರಿತವಾದ ಕನ್ನಡ ಸಂಭಾಷಣೆಗಳು ನಡೆದು, ಶ್ರೀ ಮಾಧವ ತಿಂಗಳಾಯರಿಂದ ವರೆಯಲ್ಪಟ್ಟ — ಮಧ್ಯಾನ ಮಾರಿಪೂಜೆ ಪರದರ್ಶನೆ, ಆಸ್ಪೃಶ್ಯತಾನಿವಾರಣಸಮ್ಮಾನ ಇತ್ಯಾದಿ ಸಾಮಾಜಿಕ ದೋಷಗಳನ್ನು ಕೋಸಿಸುವ ಜನವರ್ಲ್ಲಿ ಎಂಬ ನಾಟಕವು ತುಳುಭಾಷೆಯಲ್ಲಿ ವಿದ್ಯಾರ್ಥಿಗಳಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು ಅಧ್ಯಕ್ಷರ ಭಾಷಣಾನಂತರ ಉಗ್ರಾಣಸ್ಯರಣೆಯೂ ತುಳುನಾಡ ಗೀತೆಯೂ ಆಗಿ ಪ್ರಸ್ತೀರ್ ಪ್ರಶ್ನೆಯೊಂದಿಗೆ ಸಭಾ ಕಾರ್ಯವು ಕೊನೆಗೊಂಡಿತು.

NOTICE.

ದಿ ಕೆನರಾ ಬೀಂಕಿಂಗ್ ಕೋಪರೇಶನ್, ಉಡುಪಿ, ಲಿಮಿಟೆಡ್ ಮಂಗಳೂರು

ಇದೇ 1933ನೇ ಇಸವಿ ಎಪ್ರಿಲ್ ತಿಂಗಳ ತಾ 7ನೇ ಶುಕ್ರವಾರದ ಸ್ವದೇಶಾಭಿಮಾನಿ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಕೆಳಗೆ ಹೆಸರು ಕಾಣಿಸಿದವರು ಅಡಮಿಷ್ಟು ಸಗಗಳನ್ನು ತಾ 22 ನೇ ಎಪ್ರಿಲ್ ತಿಂಗಳ 1933 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಗಂಟೆ ೧೧ರಿಂದ ೩ ರ ವರೆಗೆ ಒಪರೇಂಗವಾಗಿ ಎಲಂ ಮಾಡಿ ಹುಟ್ಟು ಬಂದ ಎವೇಜು ಗಳನ್ನು ಬ್ಯಾಂಕಿಗೆ ಬಹಾ ಆಸಲು ಬಡ್ಡಿ ವಗ್ಗೆರೆ ವಜಾ ಮಾಡಿ ಉಳಿದ ಎವೇಜನ್ನು ಸದ್ರಿಯವರ ಲೆಕ್ಕಕ್ಕೆ ಅಮಾನತ್ತು ಇಟ್ಟುದ್ದು ತ್ಕರ್ಜದಲ್ಲೇ ಕೊಂಡು ಹೋಗಬೇಕಾಗಿಯೂ ಆದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ

1 ಸಾಲದ ನಂಬ್ರ 340 30 ಉಳ್ಳಾಲ ಬೆಂಗ್ರೆಯಲ್ಲಿರುವ ಗುಲಾಮ್ ಬ್ಯಾರಿಯವರ ಮಗ ಅಹಮ್ಮದ್ ಬ್ಯಾರಿ ಎಲಂ ಮಾಡಿ ಹುಟ್ಟುಬಂದ ಹಣ ರೂ 11 ಬ್ಯಾಂಕಿಗೆ ಬಹಾ ಆಸಲು ಬಡ್ಡಿ ವಗ್ಗೆರೆ ವಜಾ ಮಾಡಿದ್ದು ರೂ 10 – 9 ಅಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ 82 – 13 – 3

2 ಸಾಲದ ನಂಬ್ರ 94 – ಆಕ್ರಮಣಯಲ್ಲಿರುವ ಪಿ ವಾಸುದೇವರಾಯರ ಮಗ ಪಿ ವೆಂಕಟ್ರಾವ್ ಮಂಗಳೂರು ಎಲಂ ಮಾಡಿ ಹುಟ್ಟಿಬಂದ ಹಣ ರೂ 220 ಬ್ಯಾಂಕಿಗೆ ಬಹಾ ಆಸಲು ಬಡ್ಡಿ ವಗ್ಗೆರೆ ವಜಾ ಮಾಡಿದ್ದು ರೂ 164 – 4 – 11 ಅಮಾನತು ಲೆಕ್ಕಕ್ಕೆ ಇಟ್ಟು ಉಳಿದ ಹಣ ರೂ 55 – 11 – 1

3 ಸಾಲದ ನಂಬ್ರ 199 32 ಕಂದಕದಲ್ಲಿರುವ ಬಾವಾ ಬ್ಯಾರಿಯವರ ಮಗ ಎಸ್ ಅಬ್ದುಲ್ ರಹಿಮಾನ್ ಬ್ಯಾರಿ C/o ಯಂ ಕುಂಞಾಂಬು ಬ್ಯಾರಿ ಮಂಗಳೂರು ಎಲಂ ಮಾಡಿ ಹುಟ್ಟಿ ಬಂದ ಹಣ ರೂ 110 ಬ್ಯಾಂಕಿಗೆ ಬಹಾ ಆಸಲು ಬಡ್ಡಿ ವಗ್ಗೆರೆ ವಜಾ ಮಾಡಿದ್ದು 67 – 15 – 1 ಅಮಾನತು ಲೆಕ್ಕಕ್ಕೆ ಇಟ್ಟು ಉಳಿದ ಹಣ ರೂ 42 – 0 – 11

4 ಸಾಲದ ನಂಬ್ರ 344 13 ಪಿ ವಾಸುದೇವರಾವ್ S/o ವೆಂಕಪ್ಪಯ್ಯ ಬಂಟ್ವಾಳ ಎಲಂ ಮಾಡಿ ಹುಟ್ಟಿ ಬಂದ ಹಣ ರೂ 115 ಬೇರಕಿಗೆ ಬಹಾ ಆಸಲು ಬಡ್ಡಿ ವಗ್ಗೆರೆ ವಜಾ ಮಾಡಿದ್ದು 67 – 4 – 9 ಅಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ ಪೈ 47 – 11 – 3

5 ಸಾಲದ ನಂಬ್ರ 648/30 ನೇಮಿರಾಜ ಬಂಗಾ. S/o ಅಪ್ಪ

ನಿಮಗೆ ಬೇಕಾದುದು
ದಿನ—

ರಬ್ಬರ್ ವಸ್ತುಗಳು

ಕಡಿಮೆ ದರ.

ದೀರ್ಘ ಕಾಲದ ಬಾಳಿಕೆ ಉತ್ಕೃಷ್ಟ ತರಗತಿ

ನಿತ್ಯವೂ ತಾರೀಕನ್ನು ಬದಲಾಯಿಸಿ ಬರುವಂಥ ಅತ್ಯುತ್ಕೃಷ್ಟ ಹಾಗೂ ಸರಳವಾದ ರಬ್ಬರ್ ಮೊಹರುಗಳು; ಇಂಗ್ಲಿಷ್, ಮರಾಠಿ, ಕನ್ನಡ, ಹಿಂದೀ, ಸಂಸ್ಕೃತ ಮೊದಲಾದ ಅಕ್ಷರಗಳನ್ನುಪಯೋಗಿಸಿ, ಯಾವುದೇ ಆಕಾರದಲ್ಲಿ, ಯಾವುದೇ ಬಣ್ಣಗಳಿಂದ ನೀವು ಅಪೇಕ್ಷಿಸುವಂಥ ಸುಂದರ ಅಕ್ಷರಗಳನ್ನುಪಯೋಗಿಸಿ ಕೊಡಲಾಗುತ್ತದೆ. ಅದಲ್ಲದೆ ನಿಮ್ಮ ದಸ್ತಿನ ಮೊಹರು, ಹಿತ್ತಾಳೆ, ಇತ್ಯಾದಿ ಲೋಹಗಳ ಮೇಲಿನ ಕೆತ್ತನೆಯ ಕೆಲಸ ಗ್ಲಾಸ್, ಮಾರ್ಬಲ್, ಪೈಂಟಿಂಗ್, ಬೋರ್ಡುಗಳೂ, ಫುಟ್ಪಾತ್‌ದ ಜಾಹೆಗೆ ಬೇಕಾಗುವ ಬ್ಲೊಕ್ ವಗೈರೆ ನಾವು ತಯಾರಿಸಿ ಕೊಡುತ್ತೇವೆ.

ವಿ. ಸೂ:—ನಮ್ಮ ಆರ್ಡರಿನಂತೆ ಕೆಲಸ ತೃಪ್ತಿಕರವಾಗಿ ತೋರದಿದ್ದಲ್ಲಿ ಹಣ ಫರತ್ ಕೊಡುವೆವು

ಹೆಡ್ ಆಫೀಸು:—

ದಿ ಕ್ವೀನ್ ರಬ್ಬರ್ ಸ್ಟಾಂಪ್ ಕಂಪೆನಿ,
No. 2. ಬಲ್ಮಠ ರಸ್ತೆ, ಮಂಗಳೂರು, ದ. ಕನ್ನಡ.

ಕೇಸರಿಯವರ

ಅಮೃತ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ಹುತುತೂಲೆ, ಬಹಿಷ್ಪೆಯಾಗದಿರುವುದು, ಅಕಾಲ ಬಹಿಷ್ಪೆ, ಋತುಸ್ರಾವವು ಜಾಸ್ತಿಯಾಗಿಯೂ ಕಡಮೆಯಾಗಿಯೂ ಹೋಗುವುದು, ಕುಸುಮ ರೋಗ, ಸಂತಾನ ಹೀನತೆ, ರಕ್ತಹೀನತೆ, ಮಲ್ಲುಬ್ಬಸ, ಸೂತಿಕಾ ವಾತ, ಕೀಲು ನೋವುಗಳು, ಅಂಗಾಲು ಅಂಗೈ ಉರಿ ಮುಂತಾದ ಸ್ತ್ರೀಯರ ಮರ್ಮವ್ಯಾಧಿಗಳೆನ್ನೂ ಗುಣ ಮಾಡುವುದು.

ಸ್ತ್ರೀಯರ ಭಾಗ್ಯಕ್ಕೆ ಇದು ವರಪ್ರಸಾದವೆಂದೂ, ಕಲ್ಪವೃಕ್ಷವೆಂದೂ, ಕಾಮಧೇನುವೆಂದೂ; ಸೆರಗುಭಂಗಾರವೆಂದೂ, ರಕ್ಷಾಉಚಿತ ಆಭರಣವೆಂದೂ, ಸರ್ವಾಭಿವೃದ್ಧಿಪ್ರದಾಯಿನಿಯೆಂದೂ ಉಪಯೋಗಿಸಿದವರು ಅನೇಕ ವಿಧವಾಗಿ ಸ್ತೋತ್ರಮಾಡುತ್ತಿದ್ದಾರೆ.

ದೊಡ್ಡ ಬಾಟಲ್ ಗೆ ಔನ್ಸ್ ರೂ. ೩—೦—೦.
ಸಣ್ಣ ಬಾಟಲ್ ೬ ಔನ್ಸ್ ರೂ. ೧—೧೦—೦

ಟಪ್ಪಾಲು ಖರ್ಚು ಪ್ರತ್ಯೇಕ. ಕೆಲಸಗಾರ ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ಕೇಸರಿ ಕುಟೀರ,
ಆಯುರ್ವೇದ ಔಷಧ ಶಾಲಾ, ಎಗ್ಮೋರ್ ಮದರಾಸು,

ಸ್ಟೋಕಿಸ್ಟ್ಸ್— ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು
ಪೈ ಕಂಪೆನಿ, ಹಂಪನಕಟ್ಟೆ, ಮಂಗಳೂರು

For Sale!

One Chevorlet 1928 Model 4 Cylinder touring car in perfect running order with brand new tyres.

Apply to:— X
C/o **The Swadeshabhimani,**
Mangalore

S U N & CO.

Choukhamba Benares City

ಮೂರು ಇನಾಮುಗಳು.

ನಮ್ಮಲ್ಲಿ ಕಾಶ್ಮೀರ್ ಶಾಲುಗಳಿಗಿಂತಲೂ ಅತ್ಯುತ್ಕೃಷ್ಟವಾದ ಕಸೂತಿಗಳಿಂದೊಪ್ಪುವ ಶುದ್ಧ ಸ್ವದೇಶೀ ಬದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2—8—0 ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4—8—0, ರೂ. 5. ಅಲ್ಲದೆ ಸ್ವದೇಶೀ ಬದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ. ಮತ್ತು ಜರೀಕಾಂಠೀ ಶೀರೆಗಳೂ ಪೀತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಫಾಣಂಟಿಂಗ್—ಪಂಚಾಯತನ ಸುದರ್ಶನ ಹಿತ್ತಾಳೆ ತ್ರಾಮಿಗೆ ವಿಷ್ಣು, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಷ್ಣುಕ್ಷರ ವಚ್ಚೆ, 1 ಕಾತೀನಚ್ಚೆ, 1 ಕೆಟಲಾಗಿನೊಡನೆ 3 ಇನಾಮುಗಳು.

ವಿಳಾಸ—

ವಿಶ್ವೇಶ್ವರಜೀ ಶಾಕಾರ್ಯಜಾ ಶಾಕಾರ್ಯ್ ಮತ್ತು ಕಂಪೆನಿ, ಶಾಕಾರ್ಯ್ ಜೌಸ್ (ರಾಜ)

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ರುಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ರುಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ

'ZANDU'

ರುಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಬೆಂಗಳೂರು ಏಜಂಟ್—ಬಿ. ಪ್ಲಾಪರ್ ಲಾಲ ಕಂಪೆನಿ, ೫೧ ಆರ್ಕಟ್ ಶ್ರೀನಿವಾಸಾಚಾರ ಸ್ಟ್ರೀಟ್.
ವಿಜಾಪುರ ,, ಗೋವಿಂದ ಗೋಪಾಲ ಗಾಡಗೀಳ.
ಮಂಗಳೂರು ,, ದಿ ಉಲನ್ ಮಾರ್ಟ್ ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ.
ಗದಗ ,, ವಿದ್ಯಾವಿಲಾಸ ಬುಕ್ ಡಿಪೊ ಬೆಳಗಾಂವ ,, ಪ್ರೊವಿಜನ್ ಸಪ್ಲ್ಯಾ ಕೊ.
ಹುಬ್ಬಳ್ಳಿ ,, ತಿಪ್ಪಣ್ಣ ಕೃಷ್ಣಪ್ಪ, ಧೂಸಪೇಟೆ ಬೈಲಹೊಂಗಲ್ ,, ಜೆ. ಬಿ ಉದಾಪುಡಿ.

ಬೇರೆ ಎಲ್ಲಾ ಕಡಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ವಿಜಂಟರಿಂದ ಪಡೆಯಿರಿ.

ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವಮಾನದ ಅಮೃತ. ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನಿ ಔಷಧಗಳ ರಾಜ" "ಸರ್ವ ಸಿದ್ಧೌಷಧ"
"ವ್ಯಾಧಿಗಳಿಂದ ನಂಗಟು ಹಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ ಪರೋಪ್ತುನ್ನ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಧಾರವೂ ಆದ

ಜೀವಾಮೃತವೇ.

ಇದು ಪಂಚಮಿ ಶ್ರೀ ಗೋಪಾಲಾಚಾರ್ಯರವರು ಅಂತು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂಬ ಹಿಂದೂಸ್ಥಾನದಲ್ಲಿರುವ ಸುಪ್ರಸಿದ್ಧವಾಗಿದೆ. ಗಣಕೇರೇ ಇದನುಯಿಂಬಲೂ ಇದು ಬಳಕೆಯಲ್ಲಿದೆ. ಪರಗಸ ದೌಬಾಳ್ಯವು ಮುಕ್ಕುಳ್ಳದ ಪೀಡೆಗೆ ಪಡೆದು ಅಯಾಸ ರಕ್ತ ಪೀಡೆಗೆ, ಪರಗಸ ಅಕ್ಕಳಿಕೆ, ನೆಮ್ಮಳು ಬೈಕಟ್ಟಗುಂದುವಿಕೆ, ಮೂಳಲ್ಲಿ ಇಡುಮಯಾಗಿರುವುದು. ಇತ್ಯಾದೀಯ ಸಮಸ್ತ ಕ್ಲಿಷ್ಟದಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿದ. ಇದರಿಂದ ನಿಮಗೆ ಪರಮಾತ್ಮರ್ಯಕಾರವಾದ ಗುಣಾನುಭವಾಗುವುದು. ಹೆಚ್ಚಿನಂಶ ನಾರಿ ಸೇವಿಸಲು ಪ್ರಾರಂಭಿಸಿದಾರಭ್ಯದೇ ಅವರ ಕ್ಲೇಶ್ಯ ಗುಣಗಳು ನಿಮಗೆ ಸೇತ್ಯಾಗುತ್ತವೆ. ಸಮ್ಮ ಕೈಕೆಲ ಅವುಗಳಿಗೆ ರೂ. ೩—೪—೦ ಮತ್ತು ಮೂ ೧—೧೦-೦ಕ್ಕೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆಯುರ್ವೇದಾಶ್ರಮಂ, ಪೋ: ಬಾಕ್ಸು ನಂ: ೨೮೬, ಮದ್ರಾಸು.

ಸೋಲ್ ಏಜಂಟರು— ನಿಲ್ ಮೆಡಿಕಲ್ ಮತ್ತು ಜನರಲ್ ವಿಜ್ಞಾನ ಶಾಲೆ ಬೆಳ್ಳೂರೇಟೆ ಬೆಂಗಳೂರು. (ಉಳಿದ ಮೂಲೆಯಲ್ಲಿ ನೋಡಿ)
ಕನ್ನಡ ಅಕ್ಷರಗಳ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಪೋಲೀಸು—ಇವರನ್ನು ಬಿಟ್ಟರೆ, ಪೋಲೀಸ್ ಲೋಕಪ್ಪಿನಲ್ಲಿ ಸನಾತನ ಧರ್ಮ ಸಭೆಗೆ ಜನ ಸಾಕಷ್ಟು ಇಲ್ಲ

ತಿಮ್ಮಸ್ಯ ಹೆಗ್ಡೆಃ—(ಧರ್ಮರಾಜ ಉಪಾಧ್ಯರನ್ನು ನೋಡಿ)ನಮ್ಮ ಮೇಲೆ ಏನು ಇಲ್ಲವೆಲ್ಲಾ

ಮತ್ತೊಬ್ಬ ಪೋಲೀಸು—ಒಹೊ, ನರವ್ಯಾಘ್ರ ಪ್ರಭುಗಳೇ, ಇದೆ, ಇದೆ, ನೀವು ಸೆರೆ ಕುಡಿದು ನಮ್ಮ ಕಾಫಿ ಹೊಟೇಲಿನ ಮುಂದೆ ಅಸಹ್ಯಕರವಾಗಿ ನಡಕೊಳ್ಳುತ್ತೀರೆಂದು ನಿಮ್ಮ ಮೇಲೆ ಆರೋಪವಿದೆ ಇದೊ ನೋಡಿ ಆಹ್ವಾನಪತ್ರಿಕೆ, ತಾವೂ ಹೊರಡಿ

ರಾಮಚಂದ್ರಃ—ಸಭಿಕರೇ ಸನಾತನ ಧರ್ಮ ಸಭೆಯು ಪೋಲೀಸ ಲೋಕಪ್ಪಿನಲ್ಲಿ ಜರಗುವುದು ಈಗ ಆಮಂತ್ರಿಸಲ್ಪಟ್ಟ ಮಹನೀಯರಂತೆ ಹೋಗಲು ಯೋಗ್ಯತೆ ಇದ್ದವರು ಮಾತ್ರ ಹೋಗ ಬಹುದು.

(ಪೋಲೀಸರು ನಾಲ್ವರನ್ನೂ ಕೊಂಡುಹೋಗುವರು)

ಗೋಪಾಲಃ—ಎಂತಹ ವ್ರತಚಂಡ ಧರ್ಮ ಸೂರ್ತಾಂಡರು ಸುಬ್ಬಾ ಜೋಯಿಸರೇ, ದೇವಸ್ಥಾನ ಪ್ರವೇಶಿಸಲು ಇವರಲ್ಲವೇ ಯೋಗ್ಯರೂ ಅಲ್ಲದೆ, ಭಕ್ತಿಯಿಂದ ಬರುವ ಭಾವಿಕ ಹೊಲೆಯರೇ?

ಸುಬ್ಬಾ ಜೋಯಿಸಃ—ನನ್ನ ಭ್ರಮ ನಿರಪನವಾಯಿತು ಇಂದಿನಿಂದ ನಾನು ಹರಿಜನ ಸೇವೆಯನ್ನೇ ಕೈಕೊಳ್ಳುವೆನು

ರಾಮಃ—ಧನ್ಯ, ಹಾಗಾದರೆ ಹರಿಜನ ಸೇವಾ ಸಂಘವಿದ್ದೆಡೆಗೆ ಈಗಲೇ ಹೋಗೋಣ

ಸಮಾಪ್ತ —

++ + ++

ವ್ಯಾಪಿಸಿರಲು, ಅಸ್ಪೃಶ್ಯವೆಲ್ಲಿ?

ಅನಿಯೊಳಗೆ ವ್ಯಾಪಿಸಿರಲು
ದೇವ ನೀನು ಸ್ಪರ್ಶಿಸಿರಲು
ಹೊಲೆಯ ಸ್ಪರ್ಶದಿಂದ ನೀನು ಬ್ರಹ್ಮ ಜಿದೆಯೋ?
ದುರಿತರಿರುವ ವಿಶ್ವದಲ್ಲಿ ಪತಿತನಾದೆಯೋ?
ಇಳೆಯ ನೀನು ಮನೆಯ ಮಾಡಿ
ಇಳೆಯ ಜನರ ಜನನ ಮಾಡಿ
ಸೂರ್ಯ, ಚಂದ್ರ, ನೀರು ಗಾಳಿ ಸರಿಸಮಾನರಿ
ಸರ್ವ ಪ್ರಜೆಗಳಿಂಗೆ ಇತ್ತೆ ದಿನ್ಯ ಸಾಸನವಿ
ಇಪ್ಪು ದಯದ ಗುಣನ ಸರಿಸಿ
ಸ್ಪಷ್ಟ ರೀತಿ ನ್ಯಕ್ತಗೊಳಿಸಿ
ಲೋಕನನ್ನು ರಚಿಸಿ ನೀನು ಪ್ರೇಮ ತೋರಿದೆ
ಶೋಕವನ್ನು ಅಳಿಸಲೆಂದು ಸೌನ್ಯ ತೋರಿದೆ
ಎಳೆದು ಹೊಲೆಯ ಬಿಡುತಲಿರುವ
ಗಾಳಿಯನ್ನು ಸೇದುತಿರುವ
ಇಳೆಯ ಗಾಳಿಯೆಲ್ಲವನ್ನು ಸೇದುತಿರುವರು
ಕೀಳು ಮೇಲು ಭೇದವನ್ನು ತೋರದಿರುವರು
ಹೊಲೆಯರಲ್ಲಿ ಚಲಿಸುತಿರುವ
ಗಾಳಿಯನ್ನು ನಿಲಿಸದಿರುವ
ಜನರು ನಿನ್ನ ಬಂಧಿಸಲ್ಕೆ ಯತ್ನಿಸಿರುವರ
ತಾಣ ನಿನ್ನ ದೇವಸ್ಥಾನವೆನ್ನುತ್ತಿರುವರು
ದೇವ ನಿನ್ನ ನರವ ತತ್ವ
ಭಾವನಿರುವ ರೀತಿ ಸತ್ಯ
ನರರು ಅರಿತು ಅರಿಯ ದಂತೆ ನಟಿಸುತಿರುವರು
ಅರಿವ ಬೀರಿ ಗುಡಿಯ ಒಳಗೆ ಬಂಧಿಸಿರ ನರ

(ವಿ. ಸತ್ಯಾರ್ಥಿ ಸಿದ್ಧಾಂತ ವಿಕಾರದ).

ಕೆಳಗಿನವು ನಮಗೆ ಬಂದಿವೆ.

The Madras Presidency (1881—1931) ಲೇಖಕರು ಪಿ. ಜಿ. ಬೋಗ್ ಸಿ. ಐ. ಇ ಐ ಸಿ ಎಸ್ ಮುದ್ರಕರು ಸರಕಾರೀ ಮುದ್ರಣಾಲಯ ಇದ್ದು ಮದ್ರಾಸ್ ಸರಕಾರದ ಅಡಳಿತೆಯ ವರದಿ ಬೆಲೆ ರೂ ೨೦೦

ಕುಶಲವಃ ಕಿರಿಯರ ಸ್ವಪಂಚ ಉಡುಪಿ ಬೆಲೆ ಸಾಲ್ಯಾಣಿ ಲೇಖಕರು ಶ್ರೀ ಕೆ ಕಾಂತಪ್ಪಶೆಟ್ಟಿ ನಾಟಕ ಪುಸ್ತಕ

ರಾಜಾ ಹರದೌಲ—ಬೆಳಗಾವಿಯ ಒಂದಾಣೆ ಮಾಲೆಯ ೧೫೬ನೆಯ ಪುಸ್ತಕ ಅನುವಾದಕರು ಶ್ರೀ ಪ್ರಲ್ಹಾದ ವಾರ್ಷಿಕ ಚಂದಾ ೧ ೪ ೦ ಇದೊಂದು ಐತಿಹಾಸಿಕ.

(೧) ಮದ್‌ಮಾಳತ್ತ ಮದ್‌ಮಾಯೆ— ಲೇಖಕರು—ಶ್ರೀ ಏಟ್ಟಲ ಹೆಗ್ಡೆ ಬೆಲೆ ಎರಡಾಣೆ ತುಳುಭಾಷೆಯಲ್ಲಿ ಕಥೆಯೊಂದು

(೨) ತುಳು ಪದ್ಯ ಮಾಲಿಕೆ—ಬರೆದುದು ಶ್ರೀ ಕೆ ಗಂಗಾಧರ ರಾಮಚಂದ್ರ ಬೆಲೆ ಒಂದಾಣೆ

(೩) ಬಂಗಾರ್ದಂಗಿದ ಕತೆ—ಬರೆದುದು ಶ್ರೀ ಎ ಎನ್ ಶೇಷಪ್ಪ ಹೆಗ್ಡೆ ಬೆಲೆ ಒಂದಾಣೆ ಇವು ಮೂರೂ ಪ್ರಕಾರಕರು ಉಡುಪಿಯ ತುಳು ನಾಡ ಭಾಷಾಪಾಸಂ ಶ್ರೀ ಬಿ ಹುಬ ಪಣಿಯಾಡಿಯವರು

ಹಾರ್ಮೋನಿಯಂ ಜೋಧನ ಕ್ರಮಃ ಪುನರ್ಮುದ್ರಣ ಲೇಖಕರು ಶ್ರೀ ಎ ರಾಮಪ್ಪ ಪಾಂಡೇಶ್ವರ ಮಂಗಳೂರು ಶ್ರೀ ಎಂ ಎನ್ ಕಾಮತ್‌ರವರ ಮುನ್ನುಡಿಯೊಡನೆ ಬೆಲೆ ಹನ್ನೆರಡಾಣೆ! ಸಂಗೀತೋತ್ಸಾಹಿಗಳಿಗೆ ಆತ್ಯುಪಯುಕ್ತ

ವಿಮರ್ಶೆಯು ಯಥಾವಕಾಶವಾಗಿ

++ + + +

ಸಾಹಿತ್ಯ ಸ್ವದೇಶಾಭಿಮಾನಿ ಸಂಚಿಕೆ.

ಸಂಪುಟ ೨ ಏಪ್ರಿಲ್ ೨೮—೪—೧೯೩೩. ಸಂಚಿಕೆ ೩

— ಅನುಕ್ರಮಣಿಕೆ —

	ಪುಟ
ಪ್ರಾಚೀನ ಕವಿಗಳು	೧೭
ಶ್ರೀ ವಿ. ಜಿ. ಆಲೂರರು	೧೫
ಕಡಲ ತೆರೆ	೧೯
ಇಲ್ಲವಿನಸು ಬೆಳಕು	
ಸನಾತನ ಧರ್ಮ ಸಭೆ	೩೦
ವ್ಯಾಪಿಸಿರಲು ಅಸ್ಪೃಶ್ಯವೆಲ್ಲಿ?	೨೪
ವಿಮರ್ಶೆ	

ಏಪ್ರಿಲ್ ತಾರೀಕು ೨೮ನೇ ಶುಕ್ರವಾರ ೧೯೩೩.

ಪ್ರಾಚೀನ ಕವಿಗಳು.

ಕನ್ನಡ ನಾಡಿನ ಪ್ರಾಚೀನ ಕವಿಗಳ ವಿಷಯ ಈಗೀಗ ಹೆಚ್ಚಿನ ಸಂಶೋಧನೆಯು ನಡೆಯುತ್ತಲಿದೆ ಅವರ ಜೀವನಮಾನದ ವಿಷಯ ಅವರ ಪದ್ಯಗಳಿಂದ ತಿಳಿದು ಬರುದೆಲ್ಲ ಪುಸ್ತಕ ರೂಪದಲ್ಲಿಯೂ ಲೇಖನ ರೂಪದಲ್ಲಿಯೂ ಪ್ರಸಿದ್ಧವಾಗಿದೆ ಈ ಕೆಲಸವು ನಿಜವಾಗಿಯೂ ಬಹಳ ಕಠಿಣವಾದುದಾದರೂ ಉಪಯೋಗಕ್ಕೆ ಬೀಳುವಂಥಾದ್ದು ಎಂದು ನಿಸ್ಸಂದೇಹವಾಗಿ ಹೇಳಬಹುದು ಕುಮಾರವ್ಯಾಸನ ಕಾಲದ ವಿಷಯವೂ ಅವನ ಹುಟ್ಟೂರಿನ ವಿಷಯವೂ ಚರ್ಚೆಯಾಗಿ, ಇನ್ನೂ ನಡೆಯುತ್ತಲೆ ಇದೆ ಇನ್ನು ಸುಂದರ ಸಂಶೋಧನೆ ಮಾಡುತ್ತಾ ಹೋದರೆ ಇನ್ನೂ ಅನೇಕ ಕವಿಗಳ ವಿಷಯ ಹೆಚ್ಚಿನ ಮಾಹಿತಿಯು ಸಿಗುವುದು ದುರ್ಲಭವಲ್ಲ ಕವಿಗಳ ವಿಷಯ ಹೆಚ್ಚಿಗೆ ತಿಳಿದರೆ, ಅವರ ಕವಿತ್ವದ ಅಭ್ಯಾಸ ಮಾಡುವವರಿಗೆ ಸಹಾಯವಾಗುತ್ತದೆ ಇಂಗ್ಲಿಷಿನಲ್ಲಿ ಶೇಕ್ಸ್‌ಪಿಯರ ಅಥವಾ ಮಿಲ್ಟನ ಇವರ ನಾಟಕ ಕಾವ್ಯಗಳನ್ನು ಅಭ್ಯಾಸಿಸುವವರು ಮೊದಲು ಆ ಶ್ರೇಷ್ಠ ಕವಿಗಳ ಜೀವನ ಚರಿತ್ರೆಗಳನ್ನು ಓದುತ್ತಾರೆ ಅದಲ್ಲದೆ ಅವರ ಜೀವನದ ಕಾಲವನ್ನೂ ಅಧ್ಯಾಸಿಸುತ್ತಾರೆ ಕಾಲದ ಮಹಿಮೆಯು ಕವಿತೆಯಲ್ಲಿ ಕಾಣುವುದು ಕವಿತೆಯು ಕಾಲದ ಮಹಿಮೆಯನ್ನು ಅನುಸರಿಸಿಯೆ ಇರುತ್ತದೆ ಅದನ್ನೆಲ್ಲವನ್ನು ಅರಿತು ಅಭ್ಯಾಸಿಸಿದವನಿಗೆ ಕವಿತೆಯಲ್ಲಿಯ ಅಲಂಕಾರಗಳೂ, ಗೂಢವಾದ ಉಪಮೆಗಳೂ ತಿಳಿಯುವುವು

ನಮ್ಮ ಪ್ರಾಚೀನ ಕವಿಗಳ ವಿಷಯ ಬರೆಯಲ್ಪಡುವ ಟೀಕೆಗಳು ಹೆಚ್ಚಾಗಿ ಅವರನ್ನು ಹೊಗಳಿಕೆಯ ಶಿಖರಕ್ಕೆ ಮುಟ್ಟಿಸುವುವಲ್ಲದೆ, ಅವರ ನಿಜಸ್ಥಿತಿಯನ್ನು ತೋರಿಸುವಂಥವುಗಳಲ್ಲ. "ಅವನ ಛಂದಸ್ಸು ಒಳ್ಳೆಯದಿದೆ, ಭಾಷೆಯು ಶುದ್ಧವಾಗಿದೆ, ಶೈಲಿಯು ಸರಳ, ತಕ್ಕದಾದ ಉಪಮೆಗಳಿವೆ, ಕವಿತ್ವವು ಶ್ರೇಷ್ಠತರದ್ದಾಗಿದೆ" ಎಂಬುದನ್ನು ಪ್ರತಿಯೊಬ್ಬ ಕವಿಯ ವಿಷಯ ನಾವು ಓದುವೆವು. ಈ ಕರದ ಟೀಕೆಗಳು ಕವಿಯ ನಿಜಸ್ವರೂಪವನ್ನು ವ್ಯಕ್ತಗೊಳಿಸಿ ಅವನಿಗೆ ಸಲ್ಲತಕ್ಕ ಸ್ಥಾನವನ್ನು ಸಲ್ಲಿಸದೆ, ಜನರಿಗೆ ಮಾರ್ಗದರ್ಶಿಗಳಾಗಲು ಅನರ್ಹವಾಗಿವೆ

ಟೀಕೆ ಮಾಡುವವರು ಹೆದರದೆ, ತಮ್ಮ ಮನಸ್ಸಿಗೆ ತೋರಿದುದನ್ನು ಬರೆಯಬೇಕು, ಅದರೊಡನೆ ಜ್ಞಾನವನ್ನೂ ಅಭ್ಯಾಸವನ್ನೂ ತೋರ್ಪಡಿಸಬೇಕು ಕವಿಯ ಹೊಗಳಿಕೆಯೊಂದಿಗೆ ಅವನ ಕುಂದುಗಳನ್ನೂ ತೋರ್ಪಡಿಸಿದರೆ, ಅವನ ಕೀರ್ತಿಗೆ ಪ್ರತಿಭೆಯನ್ನು ಕೊಟ್ಟಂತಾಗುವುದು

ಕಾವ್ಯಗಳನ್ನು ಇನ್ನೊಂದು ರೀತಿಯಲ್ಲಿ ಅಭ್ಯಾಸಿಸಬಹುದು. ಒಬ್ಬ ಕವಿಯ ಗ್ರಂಥಗಳಿಂದ ನಮಗೆ ದೊರಕುವ ರಾಜಕೀಯ ಜ್ಞಾನವೆಷ್ಟು? ಅವುಗಳಿಂದ ಎಂತಹ ಸಾಮಾಜಿಕ, ನೈತಿಕ, ಧಾರ್ಮಿಕ ಸ್ಥಿತಿಗತಿಯು ತೋರುವುದು? ಎಂದು ಮೊದಲಾದ ರೀತಿಯಲ್ಲಿ ಅನೇಕ ವಿಷಯಗಳನ್ನು ಶೋಧಿಸಬಹುದು ಕುಮಾರ ವಾಲ್ಮೀಕಿಯ ಪದ್ಯಗಳಿಂದ ಆ ಕಾಲದ ಸ್ಥಿತಿಯು ತಿಳಿದುಬರುತ್ತದೆ ಹೀಗೆ ಆಲೋಚಿಸುತ್ತಾ ಹೋದರೆ ಎಷ್ಟೋ ವಿಷಯಗಳು ನಮಗೆ ದೊರಕಿ ಬಹುದು ಕವಿಯು ಉತ್ತಮೋತ್ತಮ ಮಾಡಿದ ಶಬ್ದಗಳನ್ನು ಅಭ್ಯಾಸಮಾಡುವುದು; ಆದರಂತೆಯೆ ಅವನ ಛಂದಸ್ಸು, ಅವನ ಶೈಲಿ, ಹೇಗಿತ್ತೆಂದು ಅವನ ಮೇಲೆ ಇತರ ಕವಿಗಳ ವರ್ಣನೆಯು, ಇವೆಲ್ಲವನ್ನೂ ತಿಳಿದುಕೊಂಡರೆ ಸಾಹಿತ್ಯವಿಚಾರಗಳು ಹೆಚ್ಚಾಗುವುವೆಂಬುದಕ್ಕೆ ಸಂದೇಹವಿಲ್ಲ.

ಇತ್ತೀಚೆ ಪ್ರಸಿದ್ಧ ಪುರುಷರು. ೩.

ಶ್ರೀ. ವಿ. ಬಿ. ಅಲೂರರು.

(ಲೇಖಕ:—ಶ್ರೀ. ಕೊ. ಶಿ. ಕಾರಂತರು.)

ಶ್ರೀ ಅಲೂರರು ಕರ್ನಾಟಕದ ಜನರಿಗೆ ತುಂಬಾ ಪರಿಚಿತರು. ಅವರ ಹೆಸರು ಈ ನವಯುಗದಲ್ಲೇ ಅಷ್ಟು ಕೇಳಿಸುತ್ತಿಲ್ಲವೆಂಬುದು ನಿಜವಾದರೂ, ಕೆಲವೊಂದು ವರುಷಗಳ ಹಿಂದೆ ಅವರ ಹೆಸರೂ ಚಟುವಳಿಗಳು ತುಂಬಾ ಇದ್ದುವು. ನಾನು ಅಲೂರರರ ಹೆಸರನ್ನು ಮೊದಲಿಸ್ಟ್ ಬಾರಿಗೆ ಕೇಳಿದುದು ಅವರನ್ನು ಕಂಡ ಮೇಲೆ. ಆಗ ನಾನು ವಿದ್ಯಾರ್ಥಿಯಾಗಿದ್ದೆ. ಕರ್ನಾಟಕದಲ್ಲಿ ಜಾಗೃತಿಯನ್ನು ಉಂಟುಮಾಡುವ ಸಲುವಾಗಿ, ಅವರೂ ಮುದವಿಡು ಕೃಷ್ಣರಾಯರೂ ಒಟ್ಟಿಗೆ ಕರ್ನಾಟಕವನ್ನು ಜತೆಯಿಂದ ಸಂಚರಿಸುತ್ತಿದ್ದರು. ಆ ಸಂದರ್ಭದಲ್ಲಿ ಅವರು ತಮ್ಮ ಗೆಳೆಯರಂತೆ ವಕೀಲ ಉದ್ಯೋಗವನ್ನು ಮಾಡುತ್ತಿದ್ದರಬೇಕು. ಸಾಧಾರಣ ಸು ವರುಷಗಳ ಹಿಂದಿನ ಕಥೆಯಿದು.

ಅಂದಾವರದ ನಗರ ಮಂದಿರದಲ್ಲಿ ಅವರ ಉಪನ್ಯಾಸ ವಿಷಯವೇನೆಂದು ನನಗೆ ನೆನಪಿಗೆ ಬಾರದು. ಪ್ರಾಯಶಃ ಅವರ ವೈಭವವಿರಬೇಕು. (ಗಳಿ). ಅವರ ಉಪನ್ಯಾಸವು ಕೋಮುರಂಧ್ರಗಳನ್ನೂ ಹೊತ್ತು ನನ್ನನ್ನು ಹುರುಪಿನಲ್ಲಿ ತುಂಬಿ ಬಿಟ್ಟಿತು. ಆಗಲೇ ತುಸು ಸಮಯದ ಬಳಿಕವೋ "ಕರ್ನಾಟಕಗವೈಭವ"ವೆಂಬ ಅವರ ಗ್ರಂಥವು ಹೊರಬಿತ್ತು. ಓದಿದ್ದೆ. ತಿರುಗಿ ನರಡನೆಯ ಬಾರಿಗೆ ೬೦೦೦ ವೋಲ್ಟೇಜಿನಷ್ಟು ಶಕ್ತಿಯುತವಾದ ವಿದ್ಯುತ್ ಪ್ರವಾಹವು ನನ್ನನ್ನು ನಾಟಿತು. ಕರ್ನಾಟಕ ಅಭಿಮಾನವನ್ನು ತುಂಬಿಸುವ ಶಕ್ತಿ ಅವರ ಗ್ರಂಥದಲ್ಲಿ ಬಲು ಇದೆ.

ಅಲೂರರಲ್ಲಿ ನಿಜವಾದ ಪರಿಚಯವು ಅಂದರೆ ಮುಖಮುಖ ಆಯಿತು ನಿಶ್ಚಿತವೂ ನನಗೆ ದೊರೆತದ್ದು ಇನ್ನೂ ಸ್ವಲ್ಪ ಸನ ತರುವಾಯ—ಅಂದರೆ ೮—೧೦ ವರುಷಗಳ ಹಿಂದೆ "ಗೆಳೆಯರ ಗುಂಪಿನ" ಹುಟ್ಟಿಯರಾಗಿ, "ಜಯಕರ್ನಾಟಕ" ವೆಂಬ ಕನ್ನಡದ ಹಿರಿ ಪತ್ರಿಕೆಯನ್ನು ಹೊರಡಿಸಿದಾಗ. ಆಗ ನನ್ನದೂ ಒಂದು ಪತ್ರಿಕೆಯಿದ್ದು ನಾಕೂ ಒಟ್ಟು ಸಂಪಾದಕನಾಗಿ, ಸಾಕಷ್ಟು ಕೀಲಿಯಿಂದಲೇ ಆಗ ಆತ್ಮೀಯರಾಗಿ ಉಳಿದೆ.

ಅಲೂರರ ಕೇವಲ ಮುಖಾವಲೋಕನದಿಂದ ಅವರ ಮಹಿಮೆಯನ್ನು ಯಾರಿಗೂ ತಿಳಿಯುವಂತಿಲ್ಲ. ಸಾದಾ ಮನುಷ್ಯರವರು. ಕನ್ನಡವರಿಗೆ ಅವರು ತಮ್ಮ ಉಡುಗೆಯಿಂದ ಒಬ್ಬರು ಪಾರಿಗಾಗಿ ಕಾಣಿಸಲೂ ಬಹುದು; ಉತ್ತರ ಕನ್ನಡವರಿಗೆ ಪೂರ್ಣಾಡಕರಾಗಿ ಕಾಣಿಸುವರು. ಸೌಮ್ಯಶಕ್ತಿ ಮಾತಿ ಮಾತಿನಲ್ಲಿ, ಮಕ್ಕಳನ್ನು ಮೋಹಿಸುವ ಹೆಚ್ಚುಗಳೂ ಅಬಿಲ್ಲ, ತುಸು ಮಾತ್ರವೇ ಗಂಭೀರ. ಆಗ ನೆನಗೇ ಅನಿಸಿತು—ಇಂಥವರೊಬ್ಬರು ಅಂದು ಕರ್ನಾಟಕದವರನ್ನು ಜೀಗೆ ಹೊರಳಾಡಿಸಿದರೆಂದು. ಅವರು ಮೊದಲು ಪರಿಚಯವಾಗಿದ್ದೆಯೆಂದೆನ್ನಿ. ಆಗ ಸಾಕಷ್ಟು ಹೆಸರೂ ಅನುಕೂಲತೆ ಅವರಿಗೆ ತಮ್ಮ ನೈಪುಣ್ಯದಿಂದ ಅಂಟಾದುದರಿಂದ ಅವರು ಜನಕ್ಕೆ ಹೋಗದೆ, ರಾಷ್ಟ್ರೀಯ ಚಳವಳಿಯಲ್ಲಿ ಕೈ ಹಾಕಿದರು. ಅಸಹಕಾರ ನೂಡಿ ವಕೀಲಿಯನ್ನು ಬಿಟ್ಟರು. ಇತ್ತ ಪತ್ರಿಕೋದ್ಯೋಗವನ್ನೂ ಕೈಕೊಂಡರು.

ಅಂದಿನ 'ಜಯಕರ್ನಾಟಕ'ವು—ಇಂದಿನ 'ಜಯಕರ್ನಾಟಕ ವಲ್ಲ:—ಆಗ ಅದು ಇದೇ ಗೆಳೆಯರ ಗುಂಪಿನಿಂದ ಹೊರಟಿತ್ತಾದರೂ, ಅಲ್ಲಿರುವನು—ಅಲೂರರೊಬ್ಬರ ಹಿರಿತನವನ್ನು ಬಿಟ್ಟರೆ, ಉಳಿದವರೆಲ್ಲ ಇನ್ನೂ ಹಾರಲು ಕಲಿಯುವ ಹಕ್ಕಿಗಳು. ಒಂದು ವರುಷದೊಳಗಾಗಿ ಅಲೂರರ ಪತ್ರಿಕೆಯು ಬಲು ಹೆಸರನ್ನು ಹೊಂದಿ, ಮಾಸಪತ್ರಿಕೆಗಳು ವ್ಯಾಪಾರಿ ಸಮಸ್ಯೆಗಳಲ್ಲಿ ಎಂಬುದನ್ನು ಖಚಿತ ಮಾಡಿದಂತೆ ಕಂಡಿತು. ಇಂಥ ದೊಡ್ಡ ಸಂಸ್ಥೆಯನ್ನು, ಚಿಕ್ಕ ಮಕ್ಕಳನ್ನು ಕೂಡಿ ನಡೆಯಿಸಲು ಸಾಧ್ಯವಿಲ್ಲೆಂಬುದರಿಂದ ಅಲೂರರು ತಾವಾಗಿ ತಮ್ಮ ಕೈಯಿಂದ ನಡೆಯಿಸಲು ತೊಡಗಿದರು. ಅನಂತರವೂ, ಜಯಕರ್ನಾಟಕವೂ ತನ್ನ ಕಾಲಮೇಲೆ ಕಾನು ನಿಂತು, ಅನ್ನ ಕೊಡುವವರಿಗೆ ಅನ್ನ ತೋರಿಸಿ:ತ್ತಿತ್ತು.

ಇದೇ ಸಮಯದಲ್ಲೋ ತುಸು ಮೊದಲೋ, ಅವರು ಐತಿಹಾಸಿಕ ಸಂಶೋಧನ ಮಂಡಲದಲ್ಲಿ ಕಾರ್ಯಭಾಗವನ್ನು ವಹಿಸಿ, ಹಲವು ತಾಳೆಗರಿ ಪುಸ್ತಕಗಳನ್ನು ನೂಡಿದರು. ಇದೇ ಸಮಯದಲ್ಲೆಲ್ಲೊ, ಅವರ ಹೆಸರಿನಲ್ಲಿ ತಿಲಕರ ಗೀತಾ ಟೀಕೆಯ ಕನ್ನಡ ಅನುವಾದವೂ ಒಂದು ಹೊರಟಿತು. ಅಲೂರರ ಕಾರ್ಯ ಕ್ಷೇತ್ರವು ಜಯಕರ್ನಾಟಕದಿಂದಾಗಿ ಅಖಿಲಕರ್ನಾಟಕಕ್ಕೆ ಆವರಿಸಿತು. ಆ ಪತ್ರಿಕೆಯಿಂದಾಗಿ, ಕರ್ನಾಟಕವು ಕನಿಷ್ಠ ಸಾಲಾಗರು ಅಡಿಗಳಷ್ಟಾದರೂ, ಮೇಲಕ್ಕೆದ್ದು, ಮೈಲಿಗಿ ನಿದ್ದೆ ಹೋಗುವ ತರುಣವೃಂದವೂ, ಜುನ್ನುನೆ ಎಚ್ಚೆತ್ತೀತು ಎಂದು ಅವರು ತಿಳಿದರು. ಆದರೆ ಅವರ ಆಕಯು ಕೊನೆಗೊಂಡಂತೆ ಕಾಣುವುದಿಲ್ಲ. ಕಾರಣ, ಜಯಕರ್ನಾಟವು ತುಸು ಇಳಿಹಾದಿಯನು ಕೊಂಡು, ನಿಜವಾದ ವ್ಯಾಪಾರೀ ಸಮಸ್ಯೆಯಾಗಿ ಬಂದಿತು. ತಾನು ಸಾಕಿದ ಕೊಸು, ತನ್ನನ್ನೆ ಈ ರೀತಿ ವಂಚಿಸೀತೆಂದು ಅವರು ತಿಳಿಯಲಿಲ್ಲ. ಹೀಗಾಗಿ, ಆ ಮುಗುವನ್ನು ತಿರುಗಿ, ಅದರ ಜನನಕ್ಕೆ ಕಾರಣವಾದ ಗೆಳೆಯ ಕೂಟದವರ ಕೈಗೊಪ್ಪಿಸಲು ಅವರು ನಿರ್ಧರಿಸಿದರು. ಅವರು ಅದನ್ನು ಯೋಗ್ಯವಾಗಿ ನಡಿಸುವರೆಂಬ, ನಾನಾ ವಿಧದ ಭದ್ರತೆಗಳನ್ನು ಪಡೆದು ಆ ಪತ್ರಿಕೆಯನ್ನು ಒಪ್ಪಿಸಿದರು. ಈಗ ಗೆಳೆಯರ ಗುಂಪಿನ ಹಕ್ಕಿ ಹಾರುತ್ತಿದೆ.

ಇರಲಿ, ಅಲೂರರ ಕರ್ನಾಟಕ ಸೇವಾಕಾರ್ಯವು ಅಲ್ಲಿಯೇ ನಿಲ್ಲಲಾರದು. ಅವರು ಒಮ್ಮೆಗೇ ದೇಶಮಾತೆಯ ಕೈ ಬಿಡುವವರಲ್ಲ. ಅದರಿಂದಾಗಿ ಅಖಿಲ ಕರ್ನಾಟಕದ ಋಣವನ್ನು ತೀರಿಸಲು, ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದರು. ಅವರ ವೈಸೂರಿನ, ಅಧ್ಯಕ್ಷ ಭಾಷಣವು, ಅಲೂರರ ವಿದ್ವತ್ತಿನ ಸ್ಮಾರಕವಾಗಿ ಉಳಿದೀತೆನ್ನಲು ಸಂಶಯವಿಲ್ಲ! ಅಂಥ ಘೋರವಾದ ವೇದಾಂತ ಮಯವಾದ ಭಾಷಣವನ್ನು, ಇದು ವರೆಗೆ ಸಾಹಿತ್ಯ ಪರಿಷತ್ತಿನಲ್ಲಿ ಯಾರೂ ಕೇಳಿದವರಲ್ಲ. ಪ್ರಾಚೀನ ಉದ್ಗ್ರಂಥಗಳಂತೆ ಅದರ ಅರ್ಥ ಮಾಡಿಕೊಳ್ಳುವದು ಕಠಿಣ. ಮಾಡಿದರೆ ಅರ್ಥವಾಗುವುದೂ ಕಠಿಣ.

ಯರು ಕ್ರೈಸ್ತರಾಗಿ ನಮ್ಮ ಧರ್ಮವನ್ನು ಖಂಡಿಸಲು ಸುರು ಮಾಡಿದ ಕೂಡಲೆ! ಅನರು ಅತಿಥಿಗಳಾಗುತ್ತಾರೆ, ನಮ್ಮ ಸಮಾನರಾಗುತ್ತಾರೆ, ಈ ನಿನ್ಯ ಸಿದ್ಧಾಂತ ಯಾವ ಶಾಸ್ತ್ರದಲ್ಲಿದೆ ಸ್ವಾಮೀ? ಸದಸದ್ವಿವೇಕ ಬುದ್ಧಿಗೆ ವಿರೋಧವಾದ ಈ ತಕ್ಕಕ್ಕೆ ಶಾಸ್ತ್ರವೆನ್ನುವರೇ?

ಪುಟ್ಟಣ್ಣಯ್ಯ:—ಇದೆ ಸ್ವಾಮಿ, ಇದೆ. ಶಾಸ್ತ್ರದಲ್ಲೇ ಇದೆಯೆಂದು ನಮ್ಮೂರಿಗೆ ಹತ್ತು ವರ್ಷಗಳ ಮೆಂಡಲು ಬಂದು ಮಹಾ ಪಂಡಿತರು. ಹೇಳುತ್ತಿದ್ದರೆಂದು ಅದನ್ನು ಕೇಳಿದವರೊಬ್ಬರು ಹೇಳುತ್ತಿದ್ದರಂತೆ. ನಮ್ಮಣ್ಣ ಹಾಗೆ ಹೇಳಿದ್ದು ನೆನಪು ಕಾಣುತ್ತದೆ, ನನಗೆ.

ಗೋಪಾಲ:—ಇದಕ್ಕಲ್ಲವೇ ಪ್ರಮಾಣವೆನ್ನುವುದು. ಯಾರೊ ಒಬ್ಬನು ಓದಿದ್ದಾನೆಂದು ಯಾರೊ ಹೇಳಿದ್ದೆಂದು ಯಾರಿಗೊ ನೆನಪು ತೋರುತ್ತದೆ. ಶಾಸ್ತ್ರಗಳನ್ನು ಓದಿದವರೂ ಇಲ್ಲ, ಓದಿದ್ದನ್ನು ಕೇಳಿದವರೂ ಇಲ್ಲ. ಯಾರೊ ಏನೊ ಹೇಳಿದ್ದನ್ನು ನಂಬಿ ಅದೇ ಶಾಸ್ತ್ರಧಾರವೆಂದು ನಂಬಿ ದೇಪರು ಕೊಟ್ಟ ವಿವೇಕ ಬುದ್ಧಿಯನ್ನು ಉಪಯೋಗಿಸುವುದೇ ಇಲ್ಲ.

ರಾಮಚಂದ್ರ:—ಹಿಂಡಿನ ಮೊದಲಿದ್ದ ಕುರಿ ಹೊಂಡಕ್ಕೆ ಬಿದ್ದರೆ ಹಿಂದಿದ್ದ ಎಲ್ಲಾ ಕುರಿಗಳೂ ಹೊಂಡಕ್ಕೆ ಬೀಳುತ್ತವಂತೆ. ಹಿಂದೂ ಸಮಾಜದ ಸ್ಥಿತಿ ಹಾಗೆಯೇ ಇದೆ.

ಸುಬ್ಬಾ ಜೋಯಿಸ:—ಮುಕ್ಕಳೇ, ಗಲಾಟೆ ಮಾಡಬೇಡಿರಿ. ಆಗಮ ಶಾಸ್ತ್ರಗಳನ್ನು ನಮ್ಮಪ್ಪ ಚಿನ್ನಾಗಿ ಅಭ್ಯಾಸ ಮಾಡಿದ್ದರು. ಅವರು ಹೇಳುತ್ತಿದ್ದರು ದೇವಸ್ಥಾನದಲ್ಲಿ ಕಲ್ಲು ಗೊಂಬೆಯನ್ನಿಟ್ಟ ಮಾತ್ರಕ್ಕೆ ದೇವರ ಸಾನಿಧ್ಯವು ಲಭಿಸುವುದಿಲ್ಲ. ನೂರಿಯಮನ್ನು ಶಾಸ್ತ್ರೋಕ್ತ ರೀತಿಯಿಂದ ಪ್ರತಿಷ್ಠಿಸಿ ಆಗಮಗಳಲ್ಲಿ ಹೇಳಿದ ಎಲ್ಲಾ ವಿಧಿಗಳನ್ನು ಆಚರಿಸಿದರೆ ಮಾತ್ರವೇ ದೇವರ ಸಾನಿಧ್ಯವು ಅಲ್ಲಿ ಇರುವುದು. ಆಗಮಗಳಲ್ಲಿ ಅಸ್ಪೃಶ್ಯರನ್ನು ಒಳಗೆ ಬಿಡಬಾರದೆಂದು ಸ್ಪಷ್ಟವಾಗಿ ಹೇಳಿದೆ.

ರಾಮಚಂದ್ರ:—ಒಳಗೆ ಬಿಟ್ಟರೇನು?,

ಸುಬ್ಬಾ ಜೋಯಿಸ:—ಒಳಗೆ ಬಿಟ್ಟರೆ, ಆಗಮಗಳ ನಿಯಮವನ್ನು ಉಲ್ಲಂಘಿಸಿದಂತಾಗುವುದು. ಪರಮಾತ್ಮನ ಸಾನಿಧ್ಯವು ಅಲ್ಲಿಂದ ಮಾಯವಾಗುವುದು.

ರಾಮು:—ಪರಮಾತ್ಮನು ಸರ್ವ ಶಕ್ತನಲ್ಲವೇ? ಅವನ ಸಾನಿಧ್ಯವು ಎಲ್ಲೆಲ್ಲಿಯೂ ಇರುವುದಲ್ಲವೇ?

ಸುಬ್ಬಾ ಜೋಯಿಸ:—ಹೌದು.

ರಾಮಚಂದ್ರ:—ತಮ್ಮ ಪ್ರವೇಶ ಮಾತ್ರದಿಂದ ಸರ್ವ ಶಕ್ತನಾದ ಪರಮಾತ್ಮನ ಸಾನಿಧ್ಯವನ್ನು ತೊಲಗಿಸುವ ಶಕ್ತಿಯು ಅಸ್ಪೃಶ್ಯರಿಗಿದ್ದರೆ, ಪರಮಾತ್ಮನಿಗಿಂತ ಅವರ ಶಕ್ತಿಯೇ ಅಧಿಕವಾಯಿತು. ದೇವರಿಗೆ ತನ್ನ ಬಳಿಗೆ ಬರುವ ಅಸ್ಪೃಶ್ಯರನ್ನು ಪಾವನ ಮಾಡುವ ಶಕ್ತಿಯಿಲ್ಲ. ಇವರಿಗೆ ದೇವರನ್ನು ದೇವಸ್ಥಾನಗಳಿಂದೊಡಿಸುವ ಶಕ್ತಿಯಿದೆ. ಅಂದರೆ, ಪರಮಾತ್ಮನಿಗಿಂತಲೂ ಇವರೇ ಶ್ರೇಷ್ಠರಾದರು. ಏನು ಜೋಯಿಸರೇ, ದೇವರ ಬದಲಾಗಿ ಇವರನ್ನೇ ಪೂಜಿಸಬೇಕಾಯಿತಲ್ಲಾ ಸಭಿಕರು ತಮ್ಮೊಳಗೆನೇ ಮಾತಾಡಿಕೊಳ್ಳುವರು. ಒಬ್ಬನು "ಇವರು ಹೇಳುವುದರಲ್ಲಿ ಅರ್ಥವಿದೆ" ಎನ್ನುವನು.

ಪುಟ್ಟಣ್ಣಯ್ಯ:—ಹಾಗಲ್ಲ ಸ್ವಾಮಿ- ಜೋಯಿಸರು ಗಲಿಬಿಲಿಯಿಂದ ಏನೊ ಅಂದು ಬಿಟ್ಟರು. ಪರಮಾತ್ಮ ಸಾನಿಧ್ಯವು ಹೊಲೆಯರಿಂದೆಂದೂ ಹೋಗಲಾರದು.

ರಾಮಚಂದ್ರ:—ಹಾಗಾದರೆ, ಅವರನ್ನು ಒಳಗೆ ಬಿಡಬಾರದ್ದಾಕ? ನರಮಾತ್ಮ ಸಾನಿಧ್ಯದಿಂದ ಅವರು ಪುನೀತರಾಗಲಿ.

ತಿಮ್ಮೆಗ್ರ. ಹೆಗ್ಡೆ:—(ಸ್ವಗತಂ) ಈ ಸುಧಾರಕರ ಹತ್ತರ ಮಾತಾಡಿ ಜಯಿಸಲು ಸಾಧ್ಯವೇ ಇಲ್ಲ ಹೇಳಿದ್ದಕ್ಕೆಲ್ಲಾ ಉತ್ತರ ತಯಾರಿದೆ ಇವರ ಕೈಯಲ್ಲಿ. ಇವರೊಡನೆ ವಾದ ಮಾಡುತ್ತಾ ಕೂತರೆ ನಮ್ಮ ಶರಾವು ಪೂಸಾಗುವುದು ಕಷ್ಟ.

(ಪ್ರಕಾಶಂ) ಅಧ್ಯಕ್ಷರೇ, ಸಂಧ್ಯಾವಂದನೆಯ ಹೊತ್ತಾಯಿತು. ಬೇಗನೆ ಸಭೆಯನ್ನು ಮುಕ್ತಾಯ ಮಾಡೋಣಾಗಲಿ.

ಅಧ್ಯಕ್ಷ:—ಸರಿಯಾದ ಮಾತು. ಈ ಧರ್ಮವೆನ್ನುವಿಯದ ಮೊಂಡುನ್ಯಾಯ ನೂಕಾಡುವ ಹುಡುಗರ ಹತ್ತರ ಚರ್ಚೆ ಮಾಡುವುದು ನಿರರ್ಥಕ. ಸಭಿಕರೇ, ಶಂಠಾವುಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಮೊದಲನೇದು.

(ಪೋಲೀಸರಬ್ಬರು ಬರುವರು. ಸಭಿಕರೆಲ್ಲರೂ ಬೆಚ್ಚಿಬೀಳುವರು. ಅಧ್ಯಕ್ಷರು ನಿಶ್ಚಬ್ಧರಾದರು)

ಒಬ್ಬ:—ಚಲೋದಾಯಿತು. ಎಲ್ಲರೂ ಇಲ್ಲೇ ಇದ್ದಾರೆ. (ಅಧ್ಯಕ್ಷರನ್ನು ಉದ್ದೇಶಿಸಿ) ಮುದಿ ಗೂಬೆ, ನಿನಗೆ ಆಮಂತ್ರಣ ಕೊಡಲು ಬಂದಿರುವೆವು.

ರಾಮು:—ಲಗ್ನ ಮಂಟಪಕ್ಕೇನು?

ಪೋಲೀಸು:—ಅಲ್ಲ, ಮಾವನ ಮನೆಗೆ. ಕೋಪಂಡ ಶಾಸ್ತ್ರಿಗಳೇ, ನಿಮ್ಮ ಐದನೇಯ ಹೆಂಡತಿಯನ್ನು ಕೊಂದುದಕ್ಕಾಗಿ ನಿಮ್ಮ ನೇಲೂ ನಿಮ್ಮ ವೇಶ್ಯೆಯ ಮೇಲೂ ವಾರಾಂಟಿದೆ.

ಮತ್ತೊಬ್ಬ ಪೋಲೀಸು:—ತುಪ್ಪದೊಟ್ಟಿಗೆ ವ್ಯಾಗಗಳ ಕೊಬ್ಬನ್ನು ಸೇರಿಸಿ ಮಾರಿದುದಕ್ಕಾಗಿ ತುಪ್ಪದಂಗಡಿ ಲಂಬೋದರ ಭಟ್ಟರ ಮೇಲೆ ಖಟ್ಲೆಯಾಗಿದೆ. ಭಟ್ರೇ ಬನ್ರಿ.

ಪುಟ್ಟಣ್ಣಯ್ಯ:—ಲಂಬೋದರ ಭಟ್ರೇ ಹೀಗ್ಮಾಳ ಮಾಡಿದರಿ?

ಪೋಲೀಸು:—ನಿಮಗೂ ಆಮಂತ್ರಣವಿದೆ ಪುಟ್ಟಣ್ಣಯ್ಯನವರೇ, ಎಳೇ ಪ್ರಾಯದ ಅಸ್ಪೃಶ್ಯ ಹುಡುಗಿಯನ್ನು ಕದ್ದೊಯ್ದು ಬ್ರಾಹ್ಮಣ ಹುಡುಗಿಯೆಂದು ನೋಸಗೊಳಿಸಿ ದೇವಸ್ಥಾನದಲ್ಲೇ ಮದುವೆ ಮಾಡಿಸಿದಕ್ಕೆ ನಿಮ್ಮನ್ನು ಜಾರ್ಜು ಮಾಡಲಾಗಿದೆ.

ಪುಟ್ಟಣ್ಣಯ್ಯ:—ನಾನು ಮಾಡಿದ್ದು ಅಸ್ಪೃಶ್ಯತಾ ನಿವಾರಣೆಯಲ್ಲವೇ? ಅದು ತಪ್ಪಲ್ಲ.

ರಾಮು:—ಪೋಲೀಸರೇ, ಅವರನ್ನು ಬಿಟ್ಟು ಬಿಡಿರಿ; ಅಸ್ಪೃಶ್ಯತಾ ನಿವಾರಣೆ ಮಾಡಿದರು; ಅವರು.

ತಿಮ್ಮಸ್ವ ಹೆಗ್ಡೆ:—ಹಾಗೆ ಯಾರು ಹೇಳಿದರು? ಆದರೆ, ಹಿಂದಿನ ಪುಣ್ಯ ಯುಗಗಳ ನಿಯಮಗಳನ್ನು ಪೂರ್ಣವಾಗಿ ಆಚರಿಸಲು ಈಗ ಸಾಧ್ಯವಿದೆಯೇ?

ಗೋಪಾಲ:—ಹಾಗಿದ್ದರೆ, ಅಸ್ಪೃಶ್ಯರ ವಿಷಯಕ ನಿಯಮಗಳನ್ನೇಕೆ ಬದಲಿಸಬಾರದು?

ಲಂಬೋದರ:—ಏನು ಹುಚ್ಚರ ಹಾಗೆ ಮಾತಾಡುತ್ತೀರಯ್ಯಾ? ಅಸ್ಪೃಶ್ಯರು ಸ್ಪೃಶ್ಯರಾಗುವುದು ಹೇಗೆ? ಕತ್ತೆಯು ಕುದುರೆಯಾಗುವುದೇ?

ರಾಮಚಂದ್ರ:—ಕುದುರೆಯು ಕತ್ತೆಯಾಗುತ್ತದೆ ಶ್ರೀರಾಮನ ಇಲದ ವಿಪ್ರೋತ್ತಮರಿಲ್ಲ, ಕಾಫಿ ಹೊಟೇಲು, ಗಾಂಜಾ ಅಂಗಡಿ, ಟ್ಟು ನಮ್ಮಂತಹ ಬ್ರಾಹ್ಮಣರಿಲ್ಲಿ? ನಿಜವಾದ ಧರ್ಮವು ಎಲ್ಲಾ ದರೂ ಉಳಿದಿದ್ದರೆ, ಆ ಹೊಲೆಯರ ಗುಡಿಸಲುಗಳಲ್ಲಿ ಆತ್ಮಾಹಾರದ ೀಂದ್ರಗಳಾದ ದೇವಸ್ಥಾನಗಳಲ್ಲಿ ಅಲ್ಲ.

ಸುಬ್ಬಾ ಜೋಯಿಸ:—ಆಗಮಶಾಸ್ತ್ರವನ್ನರಿಯದ ಹುಡುಗರ ಹತ್ತರ ದೇವಸ್ಥಾನ ಪ್ರವೇಶದ ಚರ್ಚೆಯೇನು ಮಾಡುತ್ತೀರಿ ಲಂಬೋದರ ಭಟ್ರೇ?

ಗೋಪಾಲ:—ಆಗಮಶಾಸ್ತ್ರಗಳೊಂದು ಬಾಕಿ ಬರಲಿ ಅದು, ಹೂಂ ಸುಬ್ಬಾ ಜೋಯಿಸರೇ, ಸುರುವಾಗಲಿ ನಿಮ್ಮದು

ಸುಬ್ಬಾ ಜೋಯಿಸರು:—(ಎದ್ದು ನಿಂತು ಕಜ್ಜಿಯನ್ನು ಗಟ್ಟಿಯಾಗಿ ಕಚ್ಚಿ) ಮಾನ್ಯ ಅಧ್ಯಕ್ಷರೇ, ಇತರ ಧರ್ಮಸಂಸ್ಥಾಪಕರ ದೇವಸ್ಥಾನಗಳು ಯಾವ ಆಗಮ ಶಾಸ್ತ್ರಗಳ ಮೇಲೆ ರಚಿಸಲ್ಪಟ್ಟಿವೆಯೋ ಅವುಗಳಲ್ಲಿ ಅಸ್ಪೃಶ್ಯರನ್ನು ಒಳಗೆ ಬಿಡಬಾರದೆಂದು ಸ್ಪಷ್ಟವಾಗಿ ಬರೆದಿರುತ್ತದೆ. ಅಸ್ಪೃಶ್ಯರು ಪುಣ್ಯವಾನ ಮಾಡುವವರು ನುಲಿಸರು, ಸತ್ತ ಗೋವುಗಳನ್ನು ತಿನ್ನುವವರು ಅಂತಹವರನ್ನ ದೇವನ ಎರ ದೊಳಗೆ ಬಿಡುವುದು ನ್ಯಾಯವೇ? ಸಭಿಕರೇ, ೀವೇ ಹೇಳಿರಿ

(ಎಲ್ಲರೂ ಸರಿಯಲ್ಲ, ಸರಿಯಲ್ಲ ಎಂದು ತಲೆ ಅಲ್ಲಾಡಿಸುವರು)

ಗೋಪಾಲ:—ಬಾಕಿ ಜಾತಿಯವರಲ್ಲೂ ನೆರೆ ಕುದಿಯುವವರಿದ್ದಾರಲ್ಲಾ! ಅವರನ್ನು ಒಳಗೆ ಬಿಡಬಹುದೇ? ಅದಲ್ಲದೆ, ಅಸ್ಪೃಶ್ಯರಲ್ಲಿ ಸತ್ತ ಪ್ರಾಣಿಗಳನ್ನು ತಿನ್ನದ ಎಷ್ಟೋ ವರ್ಗದವರಿದ್ದಾರೆ ಅವರನ್ನಾಕೆ ಒಳಗೆ ಬಿಡಬಾರದು?

ಅಧ್ಯಕ್ಷ:—ಏನು ಉದ್ಧಟತನ ಈ ಹುಡುಗರದು ವಾದ ಮಾಡಲು ಇದು ಕೋರ್ಟಲ್ಲ ಆಗಮಗಳಿಂದರೆ ಋಷಿವಾಕ್ಯಗಳು ಅವುಗಳ ವಿಷಯ ಹೀಗೆ ಅನುಮಾನವೆತ್ತಿದ ಮಾತ್ರಕ್ಕೆ ಸರಕಾರ ಪರಿಸ್ಥಿಯಾಗುವುದು

ರಾಮಚಂದ್ರ:—ಏದು ಹೆಂಡರನ್ನು ಕೊಂಡ ನೀವೂ ಗಾಂಜಾ ಮಾರುವ ಬ್ರಾಹ್ಮಣರೂ ಹೋಗುವುದು ಸ್ವರ್ಗಕ್ಕಾದರೆ, ನಮಗ ನರಕವೇ ಒಳ್ಳೆದು

ಅಧ್ಯಕ್ಷ:—(ತಿರಸ್ಕಾರದಿಂದ) ಹೂಂ, ಸುಬ್ಬಾ ಜೋಯಿಸರೇ ಮುಂದುವರಿಸಿರಿ, ಇವರ ಮಾತು ಏನು ಕೇಳುತ್ತೀರಿ?

ಗೋಪಾಲ:—(ಜೋರಿನಿಂದ) ನಮ್ಮ ಪ್ರಶ್ನೆಗ ಸರಿಯಾದ ಉತ್ತರ ಸಿಗಬೇಕು ರಥವನ್ನು ತಂದ ಮೇಲೆ ಅದರ ಸರಿಯಾದ ಚರ್ಚೆಯಾಗಬೇಕು

ಸುಬ್ಬಾ ಜೋಯಿಸ:—ಮುಕ್ಕಳೇ, ಸ್ವಲ್ಪ ಸಮಾಧಾನವನ್ನು ತಾಳಿರಿ ಎಲ್ಲಾ ಸರಿಯಾಗಿ ವಿವರಿಸುತ್ತೀನೆ ಅಸ್ಪೃಶ್ಯರು ಮಾಕೆ ಅಸ್ಪೃಶ್ಯರಾಗಿ ಹುಟ್ಟಿದ್ದಾರೆ ಎ ಬುದನ್ನು ತಿಳಿಕೂಳ್ಳೋಣ ಅನೇಕ ಯೋನಿಗಳನ್ನು ದಾಟಿದ ನೀಲೆ ಜೀವಾತ್ಮನಿಗೆ ಮನುಷ್ಯ ಜನ್ಮವು ಪ್ರಾಪ್ತವಾಗುವುದು ಹಿಂದಿನ ಯೋನಿಗಳಲ್ಲಿ ತಾನು ಗಳಿಸಿದ ಪುಣ್ಯವು ಮನುಷ್ಯ ಜನ್ಮ ಲಭಿಸಿ ವಿಪ್ಪಿದ್ದರೂ ಆ ತಹ ಸಾಧವೇನಾದರೂ ಮಾಡಿದ್ದಲ್ಲಿ, ಜೀವನು ಅಸ್ಪೃಶ್ಯನಾಗಿ ಹುಟ್ಟುವನ ಅಸ್ಪೃಶ್ಯ ಜನ್ಮದಲ್ಲಿ ಅವನು ಸದಾಚಾರಿಯಾಗಿದ್ದರೆ, ಸುಃ ದೆ ಉಚ್ಚ ವರ್ಣಗಳಲ್ಲಿ ಹುಟ್ಟುವನು ಒದು ರೀತಿಯ ದ ನೋಡಿದರೆ ಅಸ್ಪೃಶ್ಯರೇ ಪುಣ್ಯವಂತರು ಅವರಿಗೆ ದೇವಸ್ಥಾನದ ಗೋಪುರದ ದರ್ಶನ ಸೂತ್ರದಿಂದ ಸದ್ಗತಿಯೊ ದೊರೆಯುವುದ ಉಚ್ಚವರ್ಣದವರಂತೆ ಅವರ ಪೂಜಾದಿಗಳನ್ನು ನೂಡಬೇಕಾದ ದಿಲ್ಲ ಅವರ ಜಾತಿ ಕಸಬನ್ನ ಮಾಡಿ ಗೋಪುರಕ್ಕೆ ದೂರದಿಂದ ನಮಸ್ಕರಿಸಿದರೆ ಸಾಕು

ರಾಮಚಂದ್ರ:—ಸುಬ್ಬಾ ಜೋಯಿಸರೇ, ನಮ್ಮ ಮಕ್ಕಳು ಸಂಧ್ಯಾವಂದನೆ ಮಾಡುವುದಿಲ್ಲವೆಂದ ಯಾವಾಗಲೂ ಬೊಬ್ಬೆ ಹೊಡಿಯುತ್ತೀರಲ್ಲಾ ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿಬಿಡಿರಿ ಅಂದರೆ ಗೋಪುರದ ದರ್ಶನ ಮಾತ್ರದಿಂದ ಅವರಿಗೂ ಸದ್ಗತಿ ದೊರೆಯುವುದು ಜಪ ಕಸ, ಸಂಧ್ಯಾವಂದನೆ ಯಾಕೆ? ಗೋಪುರ ನೋಡಿದರೆ ಸಾಕ

ಸುಬ್ಬಾ ಜೋಯಿಸ:—ಬ್ರಾಹ್ಮಣರು ತಮ್ಮಕರ್ಮಗಳನ್ನು ಬಿಟ್ಟ ಮಾತ್ರಕ್ಕೆ ಹೊಲೆಯರಾಗುವರೇ? ಇವೆಲ್ಲಾ ಜನ್ಮಸಂಸ್ಕಾರಗಳು ಕರ್ಮವಿ ದ ಹೋಗ ತಪುಗಳಲ

ರಾಮಚಂದ್ರ:—ಜನ್ಮಸಂಸ್ಕಾರಗಳು ಕರ್ಮದಿಂದ ಹೋಗುವುದಾದರೆ ಹೊಲೆಯರು ಕ್ರೈಸ್ತ ಅಥವಾ ಮುಸಲ್ಮಾನರಾದ ಮಾತ್ರಕ್ಕೆ ಅವರು ಸ್ಪೃಶ್ಯರಾಗುವುದು ಹೇಗೆ?

ತಿಮ್ಮಸ್ವ ಹೆಗ್ಡೆ:—ಮುಸಲ್ಮಾನರಾಜ್ಯದಲ್ಲಿ ಮುಸಲ್ಮಾನರನ್ನು ದೇವಸ್ಥಾನದೊಳಗೆ ಬಿಡುವುದಿಲ್ಲವೆ ದರೆ ಅವರ ಕೇಳುತ್ತಾರೆಯೇ ಅದರ ಕೆ ಈಗ ಕ್ರೈಸ್ತರಾಜ್ಯ, ಕ್ರೈಸರನ್ನು ಒಳಗೆ ಬಿಡರಿೋದ ಹೇಗೆ?

ಗೋಪಾಲ:—ಆಗಮಶಾಸ್ತ್ರಗಳ ಯುಗಗಳೆಲ್ಲವೂ ದುರ್ಬಲರಿಗೆ ಮಾತ್ರ ಅನ್ವಯಿಸುತ್ತವೆ ಅವುಗಳ ಅಧಿಕಾರವು ಶಕ್ತಿ ಇದ್ದವರ ಮೇಲಿಲ ಹೀಗಿದಯೇನ ಶಾಸ್ತ್ರಾಧಾರ?

ಪುಟ್ಟಣ್ಣಯ್ಯ:—ಹಾಗಲ್ಲ ಕಸ್ತೂರಿಯೇ, ಮುಸಲ್ಮಾನರು, ಕ್ರೈಸ್ತರು ನಮಗೆ ಅತಿಥಿಗಳು ಅತಿಥಿ ಸತ್ಕಾರವು ನಮ್ಮ ಕರ್ತವ್ಯವು ನಮ್ಮಲ್ಲಿ ನಾವು ಕಲ್ಪಿಸಿಕೊ ಡಿ ಏಯ ಯುಗಗಳನ್ನು ಅವರಿಗೆ ಹಚ್ಚಲಾಗ ವುದೇ?

ಸಭಿಕರು ಸರಿ ಸರಿ ಹೋಗ್ಲಿ ಎನ್ನುವರು)

ಗೋಪಾಲ:—ನಮ್ಮ ಧರ್ಮದಲ್ಲಿ ನಂಬಿಕೆಯಿದ್ದ ಹೊಲ

ನಿಜವಾಗಿಯೂ ವೇದಾಂತಿಗಳಿಗೆ ಪರಮಪ್ರಿತಿಗೆ ಯೋಗ್ಯವಾದ ಭಾಷಣವದು

ಈ ಸಾರ್ವಜನಿಕ ಸೇವಯು ನಂತರ ಅಲೂರರ ಸೇವೆಯು, ಈಗ ನವಜೀವನ ಗ್ರಂಥಮಾಲೆಯಲ್ಲಿದೆ ಕನ್ನಡಕ್ಕೊಂದು 'ಹೋಮಯುನಿವರ್ಸಿಟಿ ಲ್ಯಾಬ್ರೆರಿ'ಯನ್ನು ಕಲ್ಪಿಸಿ ಕೊಡುವ ಉದ್ದೇಶದಿಂದ ಅವರು ಅದನ್ನು ಕೊಡಗಿದ್ದಾರೆ ಈಗಾಗಲೇ ಆ ಮಾಲೆಯಲ್ಲಿ ಾಲ್ಕಾರು ಗ್ರಂಥಗಳು ಹೊರಬಿದ್ದಿವೆ ಆ ಮಾಲೆಗೆ ಅವರೇ ಸಂಪಾದಕರೆಂಬ ಹೆಸರೂ ಅಲ್ಲಿ ಕಾಣುತ್ತದೆ. ಶ್ರೀ ಅಲೂರರ ಇಂದಿನ ಚಳವಳಿವು–ಸರಕಾರದವರು ಅವರನ್ನು ಕಲ್ಪುಟಿಗಯಲ್ಲಿ ನಿರ್ಬಂಧದಲ್ಲಿರಿಸಿರುವ ನಿಮಿತ್ತ ನನಗೆ ಕಾಣಿಸುವುದಿಲ್ಲ ರಾಜಕೀಯ ವಿಚಾರದಲ್ಲಿ ಅವರಿಂದ ತಮಗೆ ಅಪಾಯ ಬಂದೀತೆಂದು ಸರಕಾರದವರು ತಿಳಿದುದು ಹೆಚ್ಚಿನ ಮೌಢ್ಯವೆಂದೇ ಅನಿಸುತ್ತದೆ ಈ ವಿಷಯದಲ್ಲಿ ಅವರನ್ನು ನಿರ್ಬಂಧದಲ್ಲಿರಿಸಿದುದು ಅನ್ಯಾಯವೇ ಸರಿ

ಶ್ರೀ ಅಲೂರರು–ಒಟ್ಟಿಂದ ಹೇಳುವುದಾದರೆ ಕನ್ನಡದ ಹಿರಿಮನುಷ್ಯರು. ಎಷ್ಟೋ ವಿಷಯಗಳಲ್ಲಿ ನುಂದಾಳುಗಳೂ ಮಾರ್ಗದರ್ಶಕರಾಗಿಯೂ ಇದ್ದರು ಅದಕ್ಕಾಗಿ ನಾವೆಲ ಅವರಿಗೆ ಋಣಿಗಳಾಗಲೇ ಬೇಕು ಆದರೆ, ಮಾರ್ಗದರ್ಶನ ಮಾಡಿಸುವುದಕ್ಕಿಂತ ಹೆಚ್ಚಿನ ಕೆಲಸವನ್ನು ಅನರು ಮಾಡದಿರುವುದು ಒಳಿತು ಕಾರಣ ನುಂದಿನ ಉಡಾಳಕನಕ್ಕೆ ಸಾಕಷ್ಟು ಕಸುವು ಅವರಿಲ್ಲ ಅವರು ಈಗಿನ ತರುಣ ವಿಾಸಿಗಳಿಗೆ ಹಳಬರಾಗಿ ಕಂಡರೂ, ಒಂದು ಭಾಗದಲ್ಲಿ ಅವರು, ಎಷ್ಟೊ ಜನರಿಗೆ ಇನ್ನೂ ಗುರುಗಳಾಗಿಯೇ ಉಳಿದಿದ್ದಾರೆ ಮಾಧ್ವರಲ್ಲಿನ ಸಾಂಪ್ರದಾಯ ವಾದಿಗಳು ಅವರನ್ನು ಆರಾಧಿಸಲೇ ಬೇಕು ಅವರ ಸಾಂಪ್ರದಾಯಿಕ ಅಭಿಪ್ರಾಯಗಳು ಎಂಥ ಕ್ರಾಂತಿ ಯುಗವನ್ನೂ ತಡೆದು ನಿಲ್ಲುತವು ಈಗಿನ ಸಾಮಾಜಿಕ ಸುಧಾರಣೆಗಳು ಅನರ ನುನಸ್ಸಿಗೆ ಬರಲಾರವು ಅಲ್ಲದೆ ಅವರಿಗೆ, ಪ್ರಪಂಚದ ವಿಚಾರಗಳು ತಿಳಿದು ಬಂದಿವೆ ಎ ಬುದು ಗೊತ್ತಿದ್ದರೂ ಇನ್ನೂ ತಿಳಿಯುತ್ತವೆ ಎಂಬುದನ್ನು ಅನರು ಒಪ್ಪುವ ಸಾಹಸಿಗರಲ್ಲ ಇಂಥಾ ವಿಚಾರಗಳಲ್ಲಿ ಅವರ ದೃಷ್ಟಿಕೋನವು, ತೀರ ಸಂಕೋಚ ವೆಂದರೂ ಅನ್ಯಬಹುದು ಅವರ ವ್ಯಾಪಾರೀ ದೃಷ್ಟಿಗೂ ಈಗಿನ ತರುಣರ ದುಡುಕುವ ದೃಷ್ಟಿಗೂ ಮೇಳೈಸುವುದು ಒಂದು ದೊಡ್ಡ ಸಮಸ್ಯೆ ಅಂತೂ ಅಲೂರರು ಕರ್ನಾಟಕಕ್ಕೆ ಮಾಡಿದ ಉಪಕಾರವು, ಅವರ ಹಿಂದಿನ ಜಯಕರ್ನಾಟಿಕದ ಹೊರಗಿನ ಮುಚ್ಚಳಿಕೆಯಿಂದಲಾದರೂ, ಸ್ಮರಣೆಯಲ್ಲಿ ಉಳಿಯುವಂತೆ ಬಾದರಲಿ ಸಂಶಯವಿಲ್ಲ

'ಕಡಲ ತೆರೆ

ಏನು ರಭಸವೋ? ತೆರೆಗಡಿಪ್ಪು ರಭಸವೋ!'?
ಬಾಳುವೆಯ ಸಮುದ್ರದಲ್ಲಿ,
ಕಾಲವಾತ ಘಾತದಲ್ಲಿ
ನಾವಪುಣ್ಯ ಕೂಡುತಲ್ಲಿ,
ಏಳುತಿರುವ ತೆರೆಗಳಲ್ಲಿ,
ಏನು ರಭಸವೋ? ತೆರೆಗಡಿಪ್ಪು ರಭಸವೋ!?
ಭಾವಿಕನ ಪ್ರಶಾಂತಭಾವ
ಲಹರಿಯದನು ನಿಹಸಿಕಾನನ್ಯ
ದೇವನಿಯನುವೆನುನ ದಾವ,
ಸೇರ್ವಕಡಲ ತೆರೆಯಬರುವ
ದೇನು ರಭಸವೋ? ತೆರೆಗಡಿಪ್ಪು ರಭಸವೋ!?
ಇಳಿತ ಭರತವಾಗುವಲ್ಲಿ,
ಏಳು ಬೀಳು ಮಾಲೆಯಲ್ಲಿ,
ಸುಳಿದು ಬರುವ ಸುಳಿಗಳಲ್ಲಿ,
ನೊರೆಯಹೊತ್ತ ತೆರೆಗಳಲ್ಲಿ,
ಏನು ರಭಸವೋ? ತೆರೆಗಡಿಪ್ಪು ರಭಸವೋ!?

ಕಾಪು ಮಂಜುನಾಥ ಶೇಣೈ.

ಇಲ್ಲವಿನಿಸು ಬೆಳಕು.

ನಿನ್ನಯ ಪೂಜಾ ಮಂದಿರವಿದರಲಿ
ಇಲ್ಲವಿನಿಸು ಬೆಳಕು
ನಿನ್ನಯ ಪದ–ಪೀಠದಲೆಲ್ಲೆಲ್ಲಿಯು
ಕುಂಬಿಹುದೈ ಕೊಳಕು
ಬೆಳಕು ಹೊತ್ತಿಸಲು ಪೂಜಾಗಾರಕೆ
ತೆರೆಳುವೆ ದೀವಿಗೆ ಹಿಡಿಯುತೆ, ದ್ವಾರಕ
ಪೋಪನಿತರೊಳೇ ಇಚ್ಛೆಯ ಸುಯ್ಲಲಿ
ನಂದುವುದಾ ಬೆಳಕು

ಒಮ್ಮೆಯ ಕಸವನು ಗುಡಿಸಿ ಬಿಸುಡುತೆ
ಪೋಪೆ–ಕಸ ಬಂದಾ ಸ್ಥಳನ ನಡಸಿದರೆ,
ಕೆಲಸವ ಪೂರಯಿಸುವೆನೆಂತೋ, ಸ್ವಭು,
ಪೋಪುದೆಂತೊ ಕೊಳಕು
ನೀರಿಹ ಭವನದ ಬೆಳಕಿರಬೇಕು
ನಿನ್ನಯ ಮಂದಿರ ಶುಚಿಯಿರಬೇಕು.
ತಿಳಿದಿಹೆನಿದನೂ, ಆದರಭೇದ್ಯವು
ಅತಿಇಚ್ಛೆಯ ತೊಡಕು

ನಿನ್ನನು ಪೂಜಾಗಾರಕೆ ಕರೆದು
ಪೂಜಿಸಲಿಚ್ಛೆಯಿಹುದು ಬಲು ಪಿರಿದು,
ಕತ್ತಲು ಮುತ್ತಿದ ದೇಹದ ಕೊಳಿಕೆಗೆ
ಕರೆಯಲು ಬಲು ಅಳುಕು
ಅಂಧಕಾರದಲಿ ಬಂದಿರೆಲಾರೆಯ?
ಕೊಳಕಿನ ಪೀರದಿ ಕುಳ್ಳಿರಲಾರೆಯ?
ಏನು ಬಂದ ಕೂಡಲೆ ಕೊಳಿಕೋಡುತ
ತುಂಬುವುದೈ ಬೆಳಕು'

ಶ್ರಾವಣ ೧೯೩೩ **ವೆಂಕಟರಮಣಾಚಾರ್ಯ,**
(ಮಿತ್ರಮಂಡಲಿ, ಉಡುಪಿ).

ಸನಾತನ ಧರ್ಮ ಸಭೆ.

(ಒಂದು ಪ್ರಹಸನ)

ಪಾತ್ರಗಳು— 1. ಕೋದಂಡ ಶಾಸ್ತ್ರಿಗಳು.
2. ಕುಪ್ಪದಂಗಡಿ ಲಂಬೋದರ ಭಟ್ಟರು.
3. ಗಾಂಜಾ ಅಂಗಡಿ ಧರ್ಮರಾಜ ಉಪಾಧ್ಯರು.
4. ಕಾಫಿಹೋಟೇಲು ತಿಮ್ಮರ್ಸ ಹೆಗ್ಡೆಯವರು.
5. ಸುಬ್ಬಾ ಜೋಯಿಸರು.
6. ಮೊಕ್ತೇಸರ ಪುಟ್ಟಣ್ಣಯ್ಯನವರು.
7. ರಾಮಚಂದ್ರ ರಾಯರು. } ಸುಧಾರಕರು
8. ಗೋಪಾಲ ರಾಯರು. }
9. ಇಬ್ಬರು ಪೋಲೀಸರು, ಸಭಿಕರು.

[ಸೂಚನೆ—ಶ್ರೀ ರಂಗನಾಥ ಕಂಪೆನಿಯ, ಬಿ. ಎ. ಎಲ್. ಎಲ್. ಬಿ. ಮಂಗಳೂರು [illegible] ಪಾತ್ರಗಳನ್ನೆಲ್ಲಾ, ಶ್ಲಾಘನೆಗಾಗುವುಗೇ, ಅಲ್ಲದೆ, ಇತೀಯೂ [illegible] ಮೇಲೆ ಟೀಕೆಯೆಂದು ಯಾರೂ ತಿಳಿಯಬಾರದು. ಪುರಾಣ [illegible] ಎತ್ತಿಕೊಳ್ಳಲಾಗಿರುವ ಸನಾತನಾಭಿಮಾನಿಗಳಾದ ಸಂಭಾವಿತರೆಂಬುದನ್ನು ನಾವು ಅಲ್ಲಗಳೆಯುವುದಿಲ್ಲ. [illegible] ಶಾಸ್ತ್ರಿ, ಲಂಬೋದರ ಭಟ್ಟರಂತವರೂ ಈಗ ಧರ್ಮಪರಿವರ್ತನೆಯ [illegible] ಸಮಾಜದಲ್ಲಿ ಕಂಡುಬರುತ್ತಿರುವುದನ್ನು ನಾವೂ ಮರೆಯಬಾರದು. ಅಂಥವರನ್ನೆಲ್ಲಾ ಕೆಲವು ಕಡೆಗಳಲ್ಲಿ ಬಂಡಿಸುತ್ತಿದೆ. ಹಾಗೂ ಅಸ್ಪೃಶ್ಯರು ಏಕೆ ದೇವಸ್ಥಾನಗಳಿಗೆ [illegible] ಸಾಮಾನ್ಯವಾಗಿ ತೊಲ್ಲುವುದರ ಕಾರಣಗಳನ್ನು ವಿಮರ್ಶಾತ್ಮಕ [illegible] ಸನಾತನ ಧರ್ಮದ ಆಮಯಾಯಿಗಳು ಇದರಿಂದ [illegible] ಪ್ರಯೋಜನವಿಲ್ಲ—ವೇಷ.]

(ವೇಷಾಂಬರಗಳನ್ನುಟ್ಟು ಭಸ್ಮಧಾರಿಗಳೂ, ನಾಮಧಾರಿಗಳೂ ವಿದ್ವಾಕ್ಷರು ಸಭೆಯಲ್ಲಿ ಕುಳಿತಿರುವರು. ಇಬ್ಬರು ಸುಧಾರಕರೂ ಅಡುಪನ್ನಿರುವರು.)

ಮೊಕ್ತೇಸರ ಪುಟ್ಟಣ್ಣಯ್ಯನವರು:—(ಎದ್ದು ನಿಂತು) ಸನಾತನ ಧರ್ಮಾಭಿಮಾನಿಗಳೇ, ಈ ಹೊತ್ತಿನ ಸಭೆಗೆ ವಯೋವೃದ್ಧರೂ, ವಿದ್ವಾಂಸರೂ ಆದ ಕೋದಂಡ ಶಾಸ್ತ್ರಿಗಳನ್ನು ಅಧ್ಯಕ್ಷಸ್ಥಾನಕ್ಕೆ ಆಮಂತ್ರಿಸಿದ್ದೇವೆ. ಈ ಸ್ಥಾನವನ್ನಲಂಕರಿಸಲು ಅವರೇ ಯೋಗ್ಯರೆಂಬು ದಾಗಿ ಪ್ರತ್ಯೇಕ ಹೇಳಬೇಕಾಗಿಲ್ಲ. ಅವರ ಕಾರ್ಯಗಳೇ, ಅವರ ಧರ್ಮಾಚರಣೆಯನ್ನು ಜಗತ್ತಿಗೆ ಸಾರುತ್ತಿವೆ. ಅವರಿಗೆ ಎಪ್ಪತ್ತೆರಡು ವರ್ಷ ಮುಂದಿದ್ದರೂ 'ಅಷ್ಟ ವರ್ಷಾ ಭವೇತ್ ಕನ್ಯಾ' ಎಂಬ ವಾಕ್ಯವನ್ನನುಸರಿಸಿ ಅವರು ಎಂಟೇ ವರ್ಷದ ಹುಡುಗಿಯನ್ನು ವರಿಸಿದ್ದರು. ಜನರ ಪ್ರಚಂಡ ವಿರೋಧವನ್ನು ಧಿಕ್ಕರಿಸಿ 'ಅಷ್ಟ ಗರ್ಭಾಸ್ತು' ಎಂಬ ಶಾಸ್ತ್ರವಾಕ್ಯದಲ್ಲಿ ಪೂರ್ಣ ನಂಬಿಕೆ ಇಟ್ಟಿದ್ದಾಗಿ, ಪದಿನೆಯ ಹೆಂಡತಿ ಸತ್ತ ಹದಿನಾಲ್ಕನೆಯ ದಿನವೇ ಮೂರನೆಯವಳನ್ನು ಧೈರ್ಯದಿಂದ ವರಿಸಿದರು. ಸತ್ಕಾರ್ಯಕ್ಕೆ ಅಡ್ಡಿ ಬರಬೇಕೆ! ಈ ಪುಣ್ಯಕಾರ್ಯದ ಸಮಯದಲ್ಲಿ ತನ್ನ ಮನೆಯಲ್ಲಿ ವಿರೋಧವಾದ ಯಾವ ಆಚರಣೆಯೂ ಇರಬಾರದೆಂದು ತನ್ನ ಗಂಡನಿದ ಮಗನ ಹೆಂಡತಿಯ ಕೇತವದನವನ್ನು ಅವಳು ಧೈರ್ಯದಿಂದ ಬಲಾತ್ಕಾರದಿಂದ ಮಾಡಿಸಿದರು. ಎಂತಹ ಧರ್ಮಾಭಿ

ರಾಮಚಂದ್ರ:—ಪುಟ್ಟಣ್ಣಯ್ಯನವರೇ, ಇವರು ಚುಡೈಗಲ್ಲಿಯಲ್ಲಿ ಆ ವೇಶ್ಯೆಯನ್ನು ಇಟ್ಟುಕೊಂಡಿರುವರಲ್ಲ. ಅದನ್ನೂ ಹೇಳಿಬಿಡಿರಿ.

ಮೊಕ್ತೇಸರ ಪುಟ್ಟಣ್ಣಯ್ಯ:—ಆ ಸುಧಾರಕರ ಹಾಗೆ, ಗಾಂಧಿ ಕಡೆಯವರ ಹಾಗೆ ಮಾತಾಡಬೇಡಿರಿ. ಅವರು ವೇಶ್ಯೆಯನ್ನು ಇಟ್ಟುಕೊಂಡರೆ ನಿಮಗೇನು? ಅವರು ಅವಳಲ್ಲಿ ಏನು ಊಟಮಾಡುತ್ತಾರೆಯೇ?

ಕುಪ್ಪದ ಅಂಗಡಿ ಲಂಬೋದರ ಭಟ್ಟ:—ಅವಳೊಡನೆ ಊಟಮಾಡುವುದು ಇರಲಿ. ಅವಳ ಅಣ್ಣ ಕಂಪೌಂಡರು ಒಬ್ಬರು ಇದ್ದಾರಲ್ಲ, ಅವರೊಡನೆ ಊಟ ಮಾಡಿದ್ದಕ್ಕೆ ಮಾಸ್ತರ ಶಾಮರಾಯರಿಗೆ ಜಾತಿಬಹಿಷ್ಕಾರ ಹಾಕಲು ಮುಖ್ಯ ಕಾರಣ ಈ ನಮ್ಮ ಕೋದಂಡ ಶಾಸ್ತ್ರಿಗಳೇ.

ಪುಟ್ಟಣ್ಣಯ್ಯ:—ಅಷ್ಟೇ ಅಲ್ಲ, ಇವರ ಜನವಾರಕ್ಕೆ ಅವಳ ಸ್ಪರ್ಶವಾಯಿತೆಂದು ಇವರು ಪಂಚಗವ್ಯ ಕುಡಿದು ದೊಡ್ಡ ಬ್ರಾಹ್ಮಣ ಸಂತರ್ಪಣೆ ಮಾಡಿಸಲಿಲ್ಲವೇ?

ಗಾಂಜಾ ಅಂಗಡಿ ಧರ್ಮರಾಜ ಉಪಾಧ್ಯರು:—ಆ ಸಂತರ್ಪಣೆಗೆ ಸಾವಿರಕ್ಕಿಂತ ಮೇಲೆ ಬಂದಿದ್ದರು ಬ್ರಾಹ್ಮಣರು. ನಾನಿದ್ದೆ ಸ್ವಾಮಿ. ಆ ಜನವಾರವೆಂದರೆ ನೀರು ಸೇದುವ' ಹಗ್ಗದಷ್ಟು ತೋರ ಇತ್ತು. ಈಗಿನ ಸುಧಾರಕರು ಒಂದು ಮಿನಿಟು ಹಾಕಿಕೊಳ್ಳಲಿಕ್ಕಿಲ್ಲ. ಅಂತಹ ಜನವಾರವನ್ನು ಕೋದಂಡ ಶಾಸ್ತ್ರಿಗಳ ಧರ್ಮಾಭಿಮಾನವನ್ನು ಟೀಕಿಸುವುದೆಂದರೆ ಚಂದ್ರನನ್ನು ನೋಡಿ ನಾಯಿ ಬೊಗಳಿದ ಹಾಗೆ!

(ಸಭಿಕರೆಲ್ಲರೂ ಧರ್ಮಾಭಿಮಾನದಿಂದ ಕೈಚಪ್ಪಾಳೆ ಹೊಡೆಯುವರು.)

ರಾಮಚಂದ್ರ:—ವೇಶ್ಯೆಯರ ಕೈಯ್ಯ ನೀರು ಕುಡಿಯುವುದು ಧರ್ಮಕ್ಕೆ ವಿರೋಧ. ವ್ಯಭಿಚಾರ ವಿರೋಧವಲ್ಲವೇ?

ಲಂಬೋದರ:—ಇವನ್ಯಾರೋ ಸುಧಾರಕನು! ದಬ್ಬಿರೊ ಇವನನ್ನು ಹೊರಕ್ಕೆ! ಇಂಗ್ಲಿಷ್ ಕಲಿತು ಕಿರಿಸ್ತಾನರ ರೊಟ್ಟಿ ತಿನ್ನುವ ಈ ಹುಡುಗರಿಗೆ ಧರ್ಮ ಅಂದರೆ ಏನು ಗೊತ್ತು?

ಗೋಪಾಲ:—ಹಾಗಾದರೆ, ನಿಮ್ಮ ಮಕ್ಕಳನ್ನು ಏಕೆ ಇಂಗ್ಲಿಷ್ ಶಾಲೆಗೆ ಹಾಕಿದ್ದೀರಿ?

ರಾಮಚಂದ್ರ:—ದಿನಾಲೂ ರುಜಾರಿ ಪರ್ಬು ಬ್ರೆಡ್ ತರುವುದಿಲ್ಲವೇ, ನಿಮ್ಮ ಮನೆಗೆ?

ಲಂಬೋದರ:—ಮುಚ್ಚಿ ಬಾಯಿ! ಹಿರಿಯರ ಮುಂದೆ ಎಷ್ಟು ಮಾತಾಡುತ್ತೀರಿ? ಏನು ನೋಡುತ್ತೀರೋ, ದಬ್ಬಿರಿ ಇವರನ್ನು ಹೊರಕ್ಕೆ!!!

(ಸಭಿಕರಲ್ಲಿ ಕೆಲವರು ಗೋಪಾಲ, ರಾಮಚಂದ್ರರ ಬಳಿ ಹೋಗುವರು.)

ಗೋಪಾಲ:—ನಿಮ್ಮ ಋಣ ಧರ್ಮದ ಟೊಳ್ಳು ಧೈರ್ಯ ನನಗೆ ಗೊತ್ತಿದೆ. ಯಾರು ನಮ್ಮನ್ನು ಹೊರಗೆ ಹಾಕುವವರು? ಬನ್ನಿರಿ!

(ಧರ್ಮರಾಜ ಉಪಾಧ್ಯರು ಮುಂದಾಗಿದ್ದವರು ಈ ಮಾತು ಕೇಳಿ ಹಿಂದೆ ಸರಿದು)

ಈ ಸುಧಾರಕರು ಯಾವುದಕ್ಕೂ ಹಿಂಜರಿಯುವವರಲ್ಲ. ಉಪಾಯವಿಲ್ಲ, ಸಭೆಯಾಗಲೇ ಬೇಕು. ಕೋದಂಡ ಶಾಸ್ತ್ರಿಗಳೇ, ಅಧ್ಯಕ್ಷಸ್ಥಾನವನ್ನು ಅಲಂಕರಿಸೋಣಾಗಲಿ.

(ಕೋದಂಡ ಶಾಸ್ತ್ರಿಗಳು ಅಧ್ಯಕ್ಷಸ್ಥಾನದಲ್ಲಿ ಕುಳಿತು ಕಿಸೆಗೆ ಮೂರು ನಾಲ್ಕು ಸಾರಿ ಕೈಹಾಕಿ ಒಂದು ಕಾಗದವನ್ನು ತೆಗೆದು ಓದುವರು.)

ಸನಾತನ ಧರ್ಮರಕ್ಷಕರೇ,

ನಮ್ಮ ಅನಾದಿ, ಅನಂತವಾದ ಈ ಸನಾತನ ಧರ್ಮಕ್ಕೆ ಒದಗಿರುವಂಥಾ ಆಪತ್ಕಾಲದಲ್ಲಿ ನಾವೆಲ್ಲರೂ ಏಕತ್ರ ಸೇರಿ ಧರ್ಮರಕ್ಷಣೆಯ ಮಾರ್ಗಗಳನ್ನು ಶೋಧಿಸಬೇಕು. ದಿವ್ಯಜ್ಞಾನ ಸಂಪನ್ನರಾದ ಸ್ಮೃತಿಕಾರರ ವಚನಗಳು ಈಗಿನ ಧರ್ಮಗ್ಲಾನಿಯ ಅಂಧಕಾರದಲ್ಲಿ ದೀಪಸ್ತಂಭಗಳಂತೆ ದಾರಿ ತೋರಿಸುತ್ತಿವೆ. ಕಂಸದಲ್ಲಿ (bracket) ಕೈಚಪ್ಪಾಳೆಗಳ ಕಡಕ್ಕಡಾಟ. (ಕೈಚಪ್ಪಾಳೆ ಇಲ್ಲದುದನ್ನು ನೋಡಿ) ವಿಸ್ಮಯಗೊಳ್ಳುವರು).

(ಗೋಪಾಲ, ರಾಮಚಂದ್ರರು ಕಂಸದಲ್ಲಿದ್ದುದನ್ನು ಓದಿದ ಶಾಸ್ತ್ರಿಗಳ ಮೂರ್ಖತನಕ್ಕೆ ನಗುವರು)

ಗೋಪಾಲ:—ಕೋದಂಡ ಶಾಸ್ತ್ರಿಗಳೇ, ಏದು ಜನ ಹೆಂಡಿರ ಸ್ಮಶಾನಯಾತ್ರೆಯ ಜ್ವಾಲೆಯು ದೂರ ಮಾಡದಿದ್ದ ನಿಮ್ಮ ಮನಸ್ಸಿನ ಅಂಧಕಾರವು ಸ್ಮೃತಿವಚನಗಳಿಂದ ಹೋದೀತೇ?

ರಾಮಚಂದ್ರ:—ಏನು ಹೇಳುತ್ತೀರಿ, ಗೋಪಾಲ ರಾಯರೇ? ದಯೆ, ನೀತಿ, ಇವುಗಳಿಗೂ ಕೋದಂಡ ಶಾಸ್ತ್ರಿ, ಕುಪ್ಪದ ಅಂಗಡಿ ಲಂಬೋದರ ಭಟ್ಟ, ಗಾಂಜಾ ಧರ್ಮರಾಜ ಉಪಾಧ್ಯ, ಕಾಫಿ ಹೋಟೆಲು ತಿಮ್ಮರ್ಸ ಹೆಗ್ಡೆ ಇವರ ಸನಾತನ ಧರ್ಮಕ್ಕೂ ಏನೂ ಸಂಬಂಧವಿಲ್ಲ.

ಕೋದಂಡ ಶಾಸ್ತ್ರಿ:—(ಇಪ್ಪರ ತನಕ ಗಡಿಬಿಡಿಯಿಂದ ಕಿತ್ತಿಗಳನ್ನು ನೋಡುತ್ತಾ ನಿರಾಶೆಯಿಂದ ಕಾಗದ ಮಡಚುತ್ತಾ) (ಸ್ವಗತ) ಓಹೋ, ಧಾಷಣದ ಬಾಕಿ ಕಾಗದಗಳನ್ನು ಮನೆಯಲ್ಲೇ ಬಿಟ್ಟಿನು. ಮೋಸವಾಯಿತು, ಅಗಲಿ; ಹೇಗಾದರೂ ಸುಧಾರಿಸಬೇಕು.

(ಪ್ರಕಾಶ್ಯ) ಸಭಿಕರೇ, ನೀವೆಲ್ಲವರೂ ಧರ್ಮಜ್ಞಾನಿಗಳೇ ಇರುವಿರಿ. ಗಾಂಧಿಯವರು ಅಸ್ಪೃಶ್ಯರನ್ನು ದೇವಸ್ಥಾನದೊಳಗೆ ಬಿಡಲು ಉಪವಾಸ ಮಾಡುವುದಾದರೆ, ಬಿಡದಿದ್ದಾರೆಂಬುದಕ್ಕಾಗಿ ನೀವೂ ನನ್ನಂತೆಯೇ ದಿನಕ್ಕೆ ಇನ್ನು ಎರಡು ಊಟ ಹೆಚ್ಚು ಮಾಡಲು ಸಿದ್ಧರಿರುವಿರೆಂದು ನಾನು ತಿಳಿಯುತ್ತೇನೆ.

ಲಂಬೋದರ ಭಟ್ಟ:—ಇದು ಬಹಳ ಯೋಗ್ಯ ಸೂಚನೆ. ಗಾಂಧಿಯವರು ನೂಡುವುದೆಲ್ಲಾ ಧರ್ಮವಿರುದ್ಧ, ಅವರು ಉಪವಾಸ ಮಾಡಿದರೆ, ಧರ್ಮಾಭಿಮಾನಿಗಳಾದ ನಾವು ಎರಡು ಊಟ ಜಾಸ್ತಿ ಮಾಡಲೇ ಬೇಕು. ಇದಕ್ಕೆ ಎಲ್ಲರ ಒಪ್ಪಿಗೆ.

(ಸಭಿಕರೆಲ್ಲರೂ ಕೈಚಪ್ಪಾಳೆಗಳಿಂದ ಸಮ್ಮತಿಯನ್ನು ಸೂಚಿಸುವರು.)

ಕೋದಂಡ ಶಾಸ್ತ್ರಿ:—ನಿಮ್ಮ ನಿರ್ಧಾರವನ್ನು ಕೇಳಿದರೆ, ಸುಧಾರಕರ ಚಳವಳಿಂದ ಧರ್ಮವು ನಾಶವಾಗುವುದೆಂಬ ಭೀತಿಯೇ ತೊಲಗಿ ಹೋಗುವುದು. ಇನ್ನು ಮುಂದಿನ ತೀರಾನ್ನು ಲಂಬೋದರ ಭಟ್ಟು ತರುವರು.

ಲಂಬೋದರ ಭಟ್ಟರು:—(ಎದ್ದು ನಿಂತು ಮುಂಡಾಸನ್ನು ಸರಿಪಡಿಸಿ) ಅಸ್ಪೃಶ್ಯತೆಯೇ, ಹಿಂದೂಧರ್ಮದ ಮೂಲಾಧಾರವೆಂಬ ಅಸ್ಪೃಶ್ಯತೆ ಇಲ್ಲದಿದ್ದರೆ ಹಿಂದೂಧರ್ಮವು ಉಳಿಯಲಾರದೆಂಬ ಈ ಸಭೆಯ ಅಭಿಪ್ರಾಯವಾಗಿದೆ. ಈ ತೀರಾನ್ನು ನಿಮ್ಮ ಮುಂದೆ ಇಡಲು ಬಹಳ ಸಂತೋಷಪಡುತ್ತೇನೆ. ವಿಪ್ರೋತ್ತಮರೇ, ಅಸ್ಪೃಶ್ಯರು ಚಂಡಾಲರು. ತಾವು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕಾಗಿ ಅವರು ಹೊಲೆಯರಾಗಿ ಹುಟ್ಟಿರುವರು. ಪರಮಾತ್ಮನ ಇಚ್ಛೆಗನುಸಾರವಾಗಿಯೇ ಅವರು ಪೀಜ ಸ್ಥಿತಿಯಲ್ಲಿರುವರ್ಥ. ಅವರು ಉತ್ತಮ ಸ್ಥಿತಿಗೆ ಬರಬೇಕೆಂದಿದ್ದರೆ, ಪರಮಾತ್ಮನಿಗೆ ಅದು ಅಸಾಧ್ಯವೇ? ಅವನು ಆ ಸ್ಥಿತಿಯಲ್ಲಿಟ್ಟಿರುವನ್ನು ನಾವು ಮೇಲೆ ತರುವೆಂದರೆ ಅವನಲ್ಲಿ ದ್ರೋಹ ಮಾಡಿದಂತಾಗುವುದು.

(ಸಭಿಕರು ಶಂ, ಶಂ ಎನ್ನುವರು)

ಗೋಪಾಲ:—ಲಂಬೋದರ ಭಟ್ಟರೆ, ಆ ಸಾರಿ ನಿಮ್ಮ ಮನೆಗೆ ಬೆಂಕಿ ಬಿದ್ದಾಗ ಅರಿಸಲಿಕ್ಕೆ ಬನ್ನಿರೆಂದು ಬೊಬ್ಬೆಯಾಳ ಮಾಡಿದಿರಿ? ನಿಮ್ಮ ಮನೆ ಸುಟ್ಟು ಹೋಗಬೇಕೆಂಬ ಇಚ್ಛೆಯಾದ್ದರಿಂದಲ್ಲವೇ ಅಗ್ನಿಯು ಆಕ್ರಮಿಸಿದ್ದು? ಆ ಬೆಂಕಿಯನ್ನು ಅರಿಸಿದ್ದು ಪರಮಾತ್ಮನಲ್ಲಿ ದ್ರೋಹವಲ್ಲವೇ?

(ಉತ್ತರ ಕೊಡಲು ದಾರಿಗಾಣದೆ ಲಂಬೋದರ ಭಟ್ಟರು ಏಕ್ಕಡಿಗಾಗುವರು)

ರಾಮಚಂದ್ರ:—ಏನು ಭಟ್ಟರೇ, ಉತ್ತರವಿಲ್ಲವೇ?

ಲಂಬೋದರ ಭಟ್ಟ:—(ಜೋಗಸೆ) ನನ್ನ ಭಾಷಣ ಮುಗಿಯಿತು. ಇನ್ನು ಧರ್ಮರಾಜ ಉಪಾಧ್ಯರು ಮಾತಾಡಲಿರುವರು. ಅವರನ್ನು ಕೇಳಿರಿ.

ಧರ್ಮರಾಜ ಉಪಾಧ್ಯ:—(ಎದ್ದು ನಿಂತು ದೋತ್ರವನ್ನು ಸೈಪ್ಕೆಗೊಳಿಸಿ) ಪ್ರತಿಯೊಂದು ವರ್ಣದವರು ತನ್ನ ಜಾತಿಧರ್ಮವನ್ನು ಅನುಸರಿಸಿದರೆ ಮಾತ್ರವೇ ಅವರಿಗೆ ಮುಕ್ತಿ. ಅಷ್ಟ ವರ್ಣದವರು ಧರ್ಮಶಾಸ್ತ್ರಗಳಲ್ಲಿ ಕೈಹಾಕಬಾರದು. ಹಿಂದುಸ್ಥಾನದ ಕಾಲದಲ್ಲಿ ಹಾಗೆ ಮಾಡಿದವರನ್ನು ತಕ್ಕ ಶಿಕ್ಷೆಗೆ ಗುರಿಮಾಡುತ್ತಿದ್ದರು. ತಪಸ್ಸು ಮಾಡಲು ತೊಡಗಿದ ಶಂಬೂಕನೆಂಬ ಶೂದ್ರನನ್ನು ಶ್ರೀ ರಾಮನು ಸಂಹರಿಸಿದ್ದನ್ನು ನೀವು ಕೇಳಿಲ್ಲವೇ? ಅಂತಹ ರಾಜರು ಈಗ ಇಲ್ಲದುದರಿಂದಲೇ ಧರ್ಮಗ್ಲಾನಿಯಾಗಿ ಹಿಂದೂಧರ್ಮವು ಅವನತಿಯನ್ನು ಹೊಂದಿದೆ.

ಗೋಪಾಲ:—ಬಹಳ ಯೋಗ್ಯವಾದ ಮಾತು. ಶ್ರೀರಾಮನ ಕಾಲದಲ್ಲಿ ನಿಮ್ಮಂತೆ ಗಾಂಜಾ ಮಾರುವ ಬ್ರಾಹ್ಮಣರು ಇದ್ದಿರಲಿಕ್ಕಿಲ್ಲ. ಇದ್ದರೆ, ಅವರಿಗೆ ಯಾವ ಶಿಕ್ಷೆ ಕೊಡುತ್ತಿದ್ದನೆಂ!

ತಿಮ್ಮರ್ಸ ಹೆಗ್ಡೆ:—ಕಲಿಕಾಲವಾದುದರಿಂದ ಬ್ರಾಹ್ಮಣರು ಕೂಡ ಜೀವನೋಪಾಯಕ್ಕಾಗಿ ಅಂತಹ ಕೆಲಸಗಳನ್ನೂ ಮಾಡಬೇಕಾಗಿದೆ.

ಗೋಪಾಲ:—ಅಂದರೆ, ಧರ್ಮವು ಕಲಿಕಾಲಕ್ಕೆ ಅನ್ವಯಿಸುವುದಿಲ್ಲವೇ?

ಕರ್ನಾಟಕೀಯ ವಾರ್ತೆ.

ಕೊಡಗು

ತಾ: ೧೬–೪–೩೨ನೇ ಆದಿತ್ಯವಾರ ಕಾಫಿ ಪ್ಲಾಂಟರಾದ ಮೆ. ರಸೂಲ್‌ಭಾಯ್ ಸಾಹೇಬರು ಅವರ ಅಬ್ಬಾಲ್ ತೋಟದಲ್ಲಿ ವ್ಯಕ್ತರಾದರೆಂದು ತಿಳಿಯಲು ವಿಷಾದಿಸುತ್ತೇನೆ

ಕೊಟ್ಟೂರು ಹೈಯರ್ ಎಲಿಮೆಂಟರಿ ಕಾಲಾ ವಾರ್ಷಿಕೋತ್ಸವವು ಇದೇ ಮೇ. ತಾ. ೨೫ನೇ ಮಂಗಳವಾರ ದಿನ ರಾ ಬ. ಪಟ್ಟಣದ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು.

ಮಡಿಕೇರಿ ಮಹದೇವ ಪೇಟೆಯಲ್ಲಿ ಜಿನಿವಾರ ರಾಮ ಚಂದ್ರಯ್ಯನೆಂಬವನು ಕೆರೆಗೆ ಬಿದ್ದು ಅತ್ಯಪಹತ್ಯೆ ಮಾಡಿಕೊಂಡಿರುವನು. ಕಾರಣ ತಿಳಿದಿರುವುದಿಲ್ಲ ಪೋಲೀಸರು ತನಿಖೆಯಲ್ಲಿದ್ದಾರೆ

ಮಡಿಕೇರಿಯಲ್ಲಿ ನಾಟಕಗಳನ್ನು ಅಭಿನಯಿಸುತ್ತಿದ್ದ ಚಂದ್ರಕಲಾ ನಾಟಕ ಕಂಪೆನಿಯವರು ವೀರಾಜಪೇಟೆಗೆ ತಾ ೧೫ರಲ್ಲು ಹೊರಟುಹೋಗಿರುವರು ಅಲ್ಲಿ ಏಳೆಂಟು ನಾಟಕ ಗಳನ್ನಾಡಿ ಮೈಸೂರಿಗೆ ತೆರಳುವರು.

ತಾ. ೧೬–೪–೩೨ನೇ ಆದಿತ್ಯವಾರ ಬೆಳಿಗ್ಗೆ ಸುಮಾರು ೧೦॥ ಗಂಟೆಗೆ ಮಡಿಕೇರಿಯಲ್ಲು ತಕ್ಕಮ್ಟು ಬಲವಾದ ಹಿಂದು ಭೂಕಂಪವಾಯಿತು ಇದು ಕೊಡಗಿನ ಎಲ್ಲಾ ಭಾಗಗಳಲ್ಲೂ ತೋಚರವಾಯಿತಾಗಿ ತಿಳಿಯುತ್ತೇನೆ

ಕೊಡಗಿನ ಸಬ್ ಜಡ್ಜರಾದ ಮೆ. ಪಾಲೇಕಂಡ ಮೇದಪ್ಪ ನವರು ಬೆಂಗಳೂರು ಕೆಂಟೊನ್‌ಮೆಂಟಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯರ ಚಾರ್ಜನ್ನು ತಾ. ೧೦–೫–೩೨ರಲ್ಲು ತೆಗೆದು ಕೊಳ್ಳುವರು. ಮತ್ತು ಸಬ್ ಜಡ್ಜಿಯರ ಚಾರ್ಜನ್ನು ಮೆ. ಭುಜಂಗರಾಯರು ತಾ. ೧೨–೫–೩೨ರಲ್ಲು ವಹಿಸಿಕೊಳ್ಳುವರು

ಕಳೆದ ವಾರ ಪಾಂಡಿಚೇರಿಯ ಗವರ್ನರರು ಅವರ ಪತ್ನಿ ಸಮೇತರಾಗಿ ಕೊಡಗಿಗೆ ತಮ್ಮ ಕಾರಿನಲ್ಲಿ ಬರುವಾಗ ತಿತಿಮತಿಯ ಹತ್ತಿರ ಅಕಸ್ಮಿತವಾಗಿ ಕಾರು ಮಗುಚಿ ಬಿದ್ದು ಡ್ರೈವರನ ಹೊರತು ಮತ್ತೆಲ್ಲರಿಗೂ ಜಖಂ ಆಗಿದೆ ಘಾಯ ಪಟ್ಟವರೆಲ್ಲರೂ ವೀರಾಜಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದು ತ್ತಿರುವರು.

ಮಡಿಕೇರಿಯಲ್ಲಿ ಈ ವರೆಗೆ ೪೨೫ ಜನರಿಗೆ ಪ್ಲೇಗು ತಗ ಲಿದೆ ೨೮ ಜನರು ಸತ್ತಿರುವರು ೧೧೦ ಜನರು ವಾಸಿಯಾಗಿ ಬಿಡುಗಡೆಯಾಗಿರುವರು ಬಾಕಿಯವರು ಗುಣಹೊಂದುವ ರೆಂದು ವರ್ತಮಾನ

ತಾ. ೧೬–೪–೩೨ನೇ ಸೋಜಿ ರೋಮನ್ ಕೆಥೊಲಿಕ್ ಕ್ರೈಸ್ತರು ಪ್ಲೇಗ್ ರೋಗದ ನಿವಾರಕರಾದ ಸೈಂಟ್ ಆರೋಗ್ಯ ನಾಥರ ತೇರು ಅಲ್ಲದೆ ಸೈಂಟ್ ತೆರೇಜಮ್ಮನವರ ತೇರು ಮತ್ತು ಸೈಂಟ್ ಅಂತೋನಿಯವರ ತೇರನ್ನೂ ಸಹ ಪ್ಲೇಗ್ ರೋಗದ ನಿವಾರಣೆಗಾಗಿ ಮಹದೇವಪೇಟೆ ಸುತ್ತಲೂ ಬಹು ಅಲಂಕಾರ ದಿಂದ ಮೆರವಣಿಗೆ ನಡೆಸಿದರು.

ಈ ಮಡಿಕೇರಿಯಲ್ಲಿ ಇದೇ ತಾರೀಕು ೨೯ ಮತ್ತು ೩೦ರಲ್ಲಿ ಜರಗಲಿಕ್ಕಿ ಇದ್ದ ಸರ್ವ ಧರ್ಮಗಳ ಸಮ್ಮೇಳನವು ಕಾರಣಾಂತರ ಗಳಿಂದ ಮುಂದುವರಿಯಲ್ಪಟ್ಟಿರುವುದು

ವಿಜಾಪುರದ 'ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕ ಶ್ರೀ ಮೊಹರೆ ಹಣಮಂತರಾಯರು ಕಳೆದ ವಾರ ಬಿಡುಗಡೆ ಹೊಂದಿದರು

ಅಪಮಬಾದಿನ ಗಿರಣಿಮಾಲಕ ಶೇಟ್ ಅಂಬಲಾಲ ಸಾರಾಭಾಯಿ ಇವರ ಮಗಳು ಕು। ಮೃದುಲಾ ದೆನ ಇವರು ಬೆಳಗಾವ ಕೆಂಟೊನ್‌ಮೆಂಟ್ ಭಾಗ ದಿಟ್ಟುಹೋಗಬಾರದೆಂಬ ಹುಕುಂ ಮುರಿದು ಬೆಳಗಾವದಲ್ಲಿ ಪಿಕೆಟಿಂಗ್ ಮಾಡಿದ್ದಕ್ಕಾಗಿ ಇವರಿಗೆ ೬ ತಿಂಗಳ ಶಿಕ್ಷೆ, ೫೦೦ ರೂಪ್ಯಾ ದಂಡ ವಿಧಿ ಸಲ್ಪಟ್ಟಿತು

ಶ್ರೀಮತಿ ಸತ್ಯಭಾಮಾಬಾಯಿ ಪ್ರಧಾ, ಅನ್ನಪೂರ್ಣಾ ಬಾಯಿ ಮುರಕಂಬಿಕರ ಇವರಿಗೆ ಬೆಳಗಾವದಲ್ಲಿ ಪಂದೇಕಿ ಅರಿವೆ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ್ದಕ್ಕಾಗಿ ೬ ತಿಂಗಳೆ ಕಠಿಣ ಶಿಕ್ಷೆಯಾಯಿತು

ಶ್ರೀ ಗೋವಿಂದ, ವಾಮನ, ಗುರುಲಿಂಗಪ್ಪ ಮತ್ತು ಸಂಗಬಸಪ್ಪ ಈ ನಾಲ್ವರು ಸ್ವಯಂಸೇವಕರಿಗೆ ಬೆಳಗಾವದಲ್ಲಿ ರಾಷ್ಟ್ರಧ್ವಜವನ್ನು ಹಿಡಿದು ಸಾಯಂಥೇರಿ ತೆಗೆದದ್ದಕ್ಕಾಗಿ ೪ ತಿಂಗಳೆ ಕಠಿಣ ಶಿಕ್ಷೆಯಾಯಿತು

ಸಿದ್ಧಾಪುರದ ಮ್ಯಾಜಿಸ್ಟ್ರೇಟರು ಒಬ್ಬ ರೈತನಿಗೆ ಕರನಿರಾ ಕರಣೆಯ ಸಂಬಂಧದಲ್ಲಿ ಮಾಡಿದ ಶಿಕ್ಷೆಯ ವಿರುದ್ಧ ನುಂಜೈ ಹೈಕೋರ್ಟಿಗೆ ಅಪೀಲು ಮಾಡಿದ್ದಿತು ತಾ ೧೫ಕ್ಕೆ ಅದರ ವಿಚಾರಣೆಯಾಗಿ, ಹೈಕೋರ್ಟಿನವರು ಕೆಳಕೋರ್ಟಿನ ನಿರ್ಣಯ ವನ್ನು ಕೆತ್ತು ಹಾಕಿದರು

ಮೈಸೂರು ಸರ್ಕಾರದ ಕಂಟ್ರೋಲರ್ ಆಫೀಸಿನ ಅಕೌಂಟೆಂಟರು ಮತ್ತು ಆಡಿಟರುಗಳ ಸಂಘದ ವಾರ್ಷಿಕೋತ್ಸವವು ಸಂಘದ ಅಧ್ಯಕ್ಷರಾದ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ ರವರ ಅಧ್ಯಕ್ಷತೆಯಲ್ಲಿ ೨೫ನೇ ತಾರೀಕಿನಲ್ಲಿ ಸಂಧ್ಯಮಯದಿಂದ ನಡೆಯಿತು

ತಿಪ್ಪಗೊಂಡನಹಳ್ಳಿ ನೀರಿನಲ್ಲಿ ಕತ್ತಲವಿದ್ದು ಜನರ ಆರೋಗ್ಯ ಕೆಡುವುದೆಂದು ಡಾ। ಪಾಣಿಯವರು ಕೊಟ್ಟ ವರ್ತಮಾನ ದಿಳೆಯ ಮೇಲೆ ಅಧಿಕಾರಿಗಳು ಜಲ ಪರೀಕ್ಷೆಮಾಡು ತ್ತಿದ್ದಾರೆ.

ತಿರುವಿಹಾರಕ್ಕಾಗಿ ಸ್ವಂತ ಹಣದಿಂದ ಕಟ್ಟಿಸಿ ಕೊಟ್ಟ ಶ್ರೀ ಗೋಪುರಂ ಬ್ರಹ್ಮಶ್ರೀ ಶ್ರೀನಿವಾಸ ಜೋಸ್ಯರ ಚಿತ್ರಪಟವನ್ನು ಶ್ರೀ ವೆಂಕಟ ಕೃಷ್ಣಯ್ಯನವರು ಗಿಟನೇ ತಾ. ೨೦ನೆ ಆ ತಿರುವಿಹಾರದಲ್ಲಿ ಅನಾವರಣ ಮಾಡಿದರು. ಶ್ರೀ ವಿ. ಟಿ ಶೇಷಯ್ಯಂಗಾರರು ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಮಹಾರಾಜೇಂದ್ರ ಕಲಾ ಕಾಲೆಯ ಶ್ರೀ. ಶಾಮಣ್ಣಯ್ಯನವರನ್ನು ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನಾಗಿ ಭಡ್ತಿಯಾಯಮಾಡಿದರು.

ಕೋಲಾರದ ಜಿಲ್ಲಾ ಬೋರ್ಡು ಅಧ್ಯಕ್ಷತೆಗಾಗಿ ದೆಲ್ಲಿ ದೊಳಗೆಲ್ಲಾ ಅನಾಧ್ಯ ಚಳವಳಿ ನಡೆಯುತ್ತಿದೆ ಇಬ್ಬರು ಮೂವರು ಸ್ಪರ್ಧೆಗಾರರಿದ್ದಂತಿದೆ

ಚಿತ್ರದುರ್ಗದ ಕೋಟೆ ಕಂದಕಗಳನ್ನು ಮುಚ್ಚಿಸಿ, ಆ ನಿವೇಶಗಳನ್ನು ಮಾರಾಟ ಮಾಡಬೇಕೆಂದು ಪೌರ ಸಭೆಯವರ ಆಲೋಚನೆಯಿತ್ತು ಜಲಕೆಲವರು "ನಾವೇ ಕಂದಕ ಮುಚ್ಚು ತ್ತೇವೆ ನಮಗೇ ಕೊಟ್ಟುಬಿಡಿ"ರೆಂದು ಕೇಳಿದ್ದರು ಈಗ ಕೆಲವರು ಪೌರ ಸಭೆಯಲ್ಲಿರುವರು ಒಳಗೊಳಗೇ ಆ ನಿವೇಶನ ಗಳನ್ನು ಪಡೆಯಲು ಪ್ರಯತ್ನ ಮಾಡುತ್ತಿರುವುದಾಗಿ ವರ್ತ ಮಾನ

ಕಲಾಪ್ರದರ್ಶನ

ಯಾವತ್ತೂ ಕಲಾ ಕೋವಿದರಿಗೆ ಶುಭವಹಿಸುವ ದೇನೆಂದರೆ —ಮೇ ತಿಂಗಳ ೧೮–೧೯ನೇ ತಾರೀಕಿನ ದಿವಸ ಧಾರವಾಡದಲ್ಲಿ ೧೯ನೇ ಅಖಿಲ ಶ್ರೀ ಮದ್ವೀರಶೈವ ಮಹಾಸಭೆ ಯನ್ನು ನೆರವೇರಿಸಬೇಕೆಂದು ಸ್ವಾಗತ ಸಮಿತಿಯವರು ನಿರ್ಧರಿ ಸಿರುವರು ಆ ಕಾಲಕ್ಕೆ ಸ್ವೀಯದಿಂದ ಮತ್ತು ಪುರುಷರಿಂದ ತೆಗೆಯಲ್ಪಟ್ಟಿಂಥ ಚಿತ್ರ ಮುಂತಾದ ಕಲೆಗಳ ಪ್ರದರ್ಶನವನ್ನು ಮಾಡಿರತಕ್ಕದ್ದೆಂದು ನಿರ್ಧಾರ ಮಾಡಲ್ಪಟ್ಟಿರುತ್ತದೆ ಆದುದ ರಿಂದ ಕಲಾ ಕೋವಿದರು ತಮ್ಮ ಕೈಯಲ್ಲಿ ಬರೆದ ವೆನ್ಸಿಲ್ ವಾಟರ ಕಲರ ಆಯಿಲ್ ಪೇಂಟ್ ಮುಂತಾದ ಚಿತ್ರ ಪಟಗಳನ್ನೂ ಮತ್ತು ಕತ್ತು ಜಾರ್ಜು ಉಗುರಿನಿಂದ ಕಾಗದಗಳಲ್ಲಿ ತಯಾರಿ ಸಿದ ಚಿತ್ರ, ನಕ್ಷೆ ಮುಂತಾದುವುಗಳನ್ನೂ ಹೆಣಿಗೆ, ಹೂಲಿಗೆ, ಕಸೂತಿ ಮತ್ತು ಇದರ ಉಚ್ಚತರದ ಯಾವತ್ತು ಕೈಗಾರಿಕೆ ಸಾಮಾನುಗಳನ್ನು ೧೯ನೇ ಇಸವಿಯ ಮೇ ತಿಂಗಳ ೧೮ನೇ ತಾರೀಕಿನ ಒಳಗಾಗಿ ಕೆಳಗೆ ಬರೆದ ವಿಳಾಸಕ್ಕೆ ಕಳುಹಿಸಿಕೊಡ ಬೇಕು. ಚಿತ್ರಪಟಗಳು ಹಾಗೂ ಉಳಿದ ಸಾಮಾನು ಸುರ ಕ್ಷಿತವಾಗಿ ಮುಟ್ಟುವಂತೆ ಎತ್ತರಿಕೆ ತೆಗೆದುಕೊಳ್ಳತಕ್ಕದ್ದು ಹೆಣಿಗೆ, ಹೂಲಿಗೆ, ಕಸೂತಿ, ಇದರ ಮತ್ತು ಕೈಹೊಲಿ ವಿದ್ಯಾರ್ಥಿ ಕೆಲಸಗಳ ಹೊರತು ಉಳಿದವುಗಳಿಗೆ ಪ್ರತಿಯೊಂದಕ್ಕೂ ೦೫ ೧೫–೦ ಪ್ರವೇಶ ಫೀ ಇಟ್ಟಿರುತ್ತದೆ ತಮ್ಮ ಚಿತ್ರ ಪಟ ಗಳನ್ನು ಇಲ್ಲದೆ ಇತರ ಸಾಮಾನುಗಳನ್ನು ಯಾರಾದರೂ ಮಾರಲಿಚ್ಛೆಸುವವರು ಇದ್ದಲ್ಲಿ ಅದರಂತೆ ಅವುಗಳ ಕ್ರಯವನ್ನು ಬರೆದು ತಿಳಿಸಬೇಕು. ೧೯೩೨ನೇ ತರಗತಿಯಲ್ಲಿ ಪಾಸ್ ಮಾಡಲ್ಪಟ್ಟಿಂಥ ವಿದ್ಯಾರ್ಥಿಗಳಿಗೆ ಬಹುಮಾನ ಸರ್ಟಿಫಿಕೇಟ್ ಮುಂತಾದುವುಗಳನ್ನೂ ಕೊಡಲಾಗುತ್ತದೆ. ಪ್ರದರ್ಶನ ಕೆಲಸವು ಮುಗಿದ ನಂತರ ಕಮಿಟಿಯ ಖರ್ಚಿನಿಂದ ಅವರವರ ಪದಾರ್ಥ ಗಳನ್ನು ತಿರುಗಿ ಕಳುಹಿಸುವ ವ್ಯವಸ್ಥೆ ಮಾಡಲಾಗು ವುದು ಎಂದು ಎಸ್ ಆರ್ ಕೆತ್ತೂರ, ಸೆಕ್ರೆಟರಿ, ಚಿತ್ರಕಲಾ ಮತ್ತು ಕೈಗಾರಿಕೆ ಪ್ರದರ್ಶನ ಧಾರವಾಡ, ಇವರು ತಿಳಿಸಿರುವರು

ಹುಬ್ಬಳ್ಳಿಯಲ್ಲಿರುವ ೨೦ನೇ ವರ್ಗ ಸಬ್ ಜಡ್ಜ್ ಮಿ। ಜಿ ಎಚ್ ಹೆನ್ನುಳಗುಂದ ಇವರು ಜಾ। ಸಬ್‌ಜಡ್ಜರಾಗುವರು

ಮಿ। ಎನ್ ಎನ್ ಮಾಸ್ತರ ಇವರು ರಜೆಯ ಮೇಲಿಂದ ಬಂದ ಕೂಡಲೇ ಬೆಳಗಾವಿಗೆ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ ರಾಗುವರು.

ಧಾರವಾಡ ಜಿಲ್ಲೆಗೆ ಬರತಕ್ಕವರಾದ ಮಿ। ಎಫ್ ಎಚ್ ನಾಯಿಟ್ ಇವರ ರಜೆಯು ಮತ್ತೆ ಎರಡು ತಿಂಗಳು ದೆಳೆ ಸಲ್ಪಟ್ಟಿದೆ

ಮಿ। ಎಸ್ ಎಮ್ ಕೈಕಿಣಿ ಇವರು ಪುಣೆ ಸಬ್ ಜಡ್ಜ ರಾಗಿ (ಇನ್ವರ್ಟ್ ಆಗಿ,) ಹುಬ್ಬಳ್ಳಿಯಲ್ಲಿ ೨೦ನೇ ವರ್ಗ ಸಬ್ ಜಡ್ಜರಾಗುವರು

* ** **

ನಿಮ್ಮ

ದೇಹಶಕ್ತಿಯನ್ನು ವೃದ್ಧಿಸಿರಿ.

ಈ ರೀತಿಯಿಂದ.....

ಅಸ್ವಸ್ಥದಿಂದೇಳುವ ಸಮಯದಲ್ಲಿ ಹೊರ್ಲಿಕ್ಸ್ ಮೊಲ್ಟೆಡ್ ಹಾಲಿನುಪಯೋಗವು ಅಸಮಾನವಾದುದು. ಶುದ್ಧ ದನದ ಹಾಲಿನ ಕೆನೆಯಿಂದಲೂ ಬೆಳೆದ ಬಾರ್ಲಿ, ಗೋದಿಯ ರಸದಿಂದಲೂ ಅದು ತಯಾರಿಸಲ್ಪಟ್ಟಿದ್ದು ನಿಃಶಕ್ತರಿಗೆ ತಕ್ಕುದಾದ ದೇಹಪೋಷಣೆಯನ್ನು ಒದ ಗಿಸಿ ಕೊಡುತ್ತದೆ. ಕರಗಿ ಹೋದ ಜೀವಾಣುಗಳನ್ನದು ಕೂಡಲೇ ಪುನರ್ವೃದ್ಧಿಸುತ್ತದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಟ್ಟು ಮುಂದಕ್ಕೆ ಯಾವ ರೋಗದ ಬಾಧೆಯೂಗದಂತೆ ರಕ್ಷಿಸುತ್ತದೆ.

Horlick's in Convalescence ಎಂಬ ಧರ್ಮಾರ್ಥ ಪತ್ರಕ್ಕಾಗಿ 2229 ಕ್ಕೆ ಬರೆದು

'ಹೊರ್ಲಿಕ್ಸ್'

ಮೂಲಧೂತ ಮೊಲ್ಟೆಡ್ ಹಾಲು.

ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ.

ಹೊರ್ಲಿಕ್ಸ್‌ಮಿಲ್ಕ್‌ರ್ ನಮೂನೆ ಎಲ್ಲಾ ಸ್ಟೋರುಗಳಲ್ಲಿ ಯೂ ಸಿಗಬಹುದು ಅಥವಾ 14 ಆಣೆ ಬೆಲೆಗೆ ಟಿ ಪೆಟ್ಟಿಗೆ 2229 ಕ್ಕೆ ಬರೆದರೆ ಸಿಗುತ್ತದೆ.

ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ದಾಮಬಾಣ!



ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಮೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷಧ ಕೊಟ್ಟು ರಕ್ಷಿಸಿರಿ!

ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮುವಿನಿಂದ ಪಾರುಮಾಡಿಯುದಿ ಮಹದುಪಕಾರವಾದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರುಗಳು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯೌಷಧವಾಗಿದೆ

ಮದ್ರಾಸಿನಲ್ಲಿ ದಿ ಒರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡ ಜಿಲ್ಲಾ ಸೋಲ್ ಏಜೆಂಟ್ಸ್-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು

WANTED.

Four Organisers to organise the work of the South Indian General Assurance Society, Ltd, in the following places noted below Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co Ltd
64 3rd Cross Road Srirampur Extn
Malleswaram Post, BANGALORE

OR

The Managing Agents,
The S I G A Co Ltd
55 Poonamallee High Road, Kilpauk MADRAS

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಅನೇಕ ಮಹಾವಿದ್ವಾನ್ ಮೋಟುಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು

ಮತಕ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ ಈಗ 11—12ನೇಯ ಸ್ಕಂಧಗಳುಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬೈರಿಗೆ ಸಿದ್ಧವಾಗಿದೆ ಹಿಂದಣ ಗ್ರಾಹಕ ಮಹಾಶಯರು ದೇಶಬಾಂಧವರೂ ಸಹಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

1ನೇಯ ಸಂಪುಟ (1—2ನೇ ಸ್ಕಂಧಗಳು)	3	4 0
2 ,, (3ನೆಯ ಸ್ಕಂಧ)	3	12-0
3 ,, (4 ,,)	3	8-0
4 ,, (5-6ನೇಯ ಸ್ಕಂಧಗಳು)	4	0-0
5 ,, (7, 8, 9 ಸ್ಕಂಧಗಳು)	5	8-0
6 ,, (ದಶಮ ಪೂರ್ವಭಾಗ)	5	0 0
7ನೆಯ ಸಂಪುಟ (ದಶಮ ಉತ್ತರಭಾಗ)	4	8-0
8 ,, (11, 12ನೆಯ ಸ್ಕಂಧಗಳು ಪೀಠಿಕೆ ಸಹಿತ)	4	8-0
(ಈ ಭಾಗವತ ಪುರಾಣ ವಿಮರ್ಶೆ ಮಾತ್ರ	0	8-0
ಕರ್ನಾಟಕ ಮುದ್ರಾಂಕ್ಷರ ನಾಮಕ	1	4-0
(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟಿದ್ದು)		

ಈ ಬೆಲೆಗಳಿಗೆ ಟಪಾಲು ಹಾಸಲು ಸೇರಿಲ್ಲ. ಹೆಚ್ಚು ವಿಷಯಗಳಿಗೆ ತಿಳಿಸಿದ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಧಾರವೀ ಧವನಂ, ಜಾಮರಾಜಪೇಟೆ, ಬೆಂಗಳೂರು ಸಿಟಿ.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಸೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮುದ್ರಿಸಲ್ಪಡುವವು

ದಿ ಮಂಗಳೂರು ಪ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಏಷ್ಯಾಟಿಕ್ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ಇದರ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್ ಕೇಶವರವರ
ಪ್ರೊಪ್ರೈಟರ್ ಗುಳಿಗೆಗಳು
ಅಮೃತಸರ ಪಂಜಾಬ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಫಾರುಲ್ಡ್ಯಾರ್ಸ್, ಮುಂಬಾಯಿ ಸ್ಟೇಶನ್ ಹತ್ತಿರ
[ರಥಬೀದಿಯಲ್ಲಿ ಎಸ್ ಆರ್ ಅಡಿಗರವರ ಅಂಗಡಿಯಲ್ಲಿ] ಮಂಗಳೂರು.

ಕ್ಷಯಕ್ಕೆ ಟಾದಿಗಳಿಗೆ
ಚ್ಯವನಪ್ರಾಶನ ಲೇಹ
ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ
ಕಸ್ತೂರಿ ವಿಶ್ರಣ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,
ದೊಣಗಲಕೇರಿ ರಸ್ತೆ, ಮಂಗಳೂರು

THE SOUTH INDIA
CO-OPERATIVE INSURANCE SOCIETY
The Real criterion of Prosperity is the substantial Surplus disclosed after a severe test by the Actuary. Surplus disclosed is nearly 5½ times more than that disclosed at the last valuation

Interim Bonus Rs 15/ per 1,000/- per year

both on whole life and endowment with Profit Policies becoming claims before 1st January 1934 FORECAST STILL GREATER PROSPERITY

WANTED LADIES & GENTS in Unrepresented Areas

Earn Rs 100/ to 500/ independently per month

For particulars apply or please call at —

Chief Organising Office,
Harbour View MANGALORE

ನಮ್ಮ ಕಾರ್ಖಾನೆಯು ಕಳದ ವರ್ಷದಲ್ಲೇ ಸ್ಥಾಪಿತವಾದರೂ, ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ಕಳೆದ ಮಾರ್ಚ್ ತಿಂಗಳಲ್ಲಿ ಕುಂಬಳೋಣದ ಮಹಾ ಮಳೆ ಕಾಲದಲ್ಲಿ ಜರಗಿದ ಸ್ವದೇಶೀ ವಸ್ತು ಪ್ರದರ್ಶನದಲ್ಲಿ ಮೊದಲನೆ ತರಗತಿಯ ಬಹುಮಾನ ಪತ್ರವೂ 2 ಸುವರ್ಣ ಪದಕಗಳೂ ಶುದ್ಧತೆಯ ಬಗ್ಗೆ ಮಂಗಳೂರಿನ ಬಳಿದ ವ್ರತೇಶ ಕಾಲದಲ್ಲಿ ಒಂದು ಸ್ವರ್ಣ ಪದಕವೂ ಪಡೆದಿದೆ

ದಿ ವಜಿಟೇಬಲ್ ಸೋಪ್ ವರ್ಕ್ಸ್‌ನ

'ಮಲಬಾರ' ಸಾಬೂನುಗಳನ್ನೆ

ಉಪಯೋಗಿಸಿರಿ.

ಸೆಂಡಲ್‌ವುಡ್, ಜಸ್ಮಿನ್, ಲಿಲಿರೋಸ್, ಲೀಮ್ದಾ ಟರ್ಕಿಶ್ ಬಾತ್ ಲಿಕ್ವಿಡ್ ಸೆಂಡಲ್ ಸಾಬೂನುಗಳೂ

ಇವುಗಳು ನಮ್ಮವಾದ ಟ್ರೇಲಿಟಿಗಳು.

ಉತ್ತಿಗೆ ತೊಡಿಗೆಗಳ ಬಗ್ಗೆ ಮಲಬಾರ ಟ್ವೀನ್, ಕ್ಯೂಬ, ಬೆಬಲೆಟ್ಟು, ಬಾರ ಮತ್ತು 101 ನಂಬ್ರದ ವಾಶಿಂಗ್ ಸೋಪುಗಳನ್ನು ಕೊಂಡುಕೊಳ್ಳಿರಿ

'ಸನ್' ಗುರುತಿನ (ಸೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಖಂ ಸಿಗುವುದು.

ಈ ಹಿಲ್ಲಿಗೆ ಪ್ರವರ್ತಕರು:—

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

S. U N & CO.

Choukhamba, Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳ ಗಿಂತಲೂ ಅತ್ಯುತ್ತಮವಾದ ಕಸೂತಿಗ ಳಿಂದೊಪ್ಪುವ ಶುದ್ಧ ಸ್ವದೇಶೀ ಬಿದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೊಬರೂ 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಬಿದ್ದರ್ ಮಡಿ ಗಳೂ, ಶೀರೆಗಳೂ ಅಂಚುಗಳಲದೆ ಎಲ್ಲಾ ರಂಗುಗಳಲ್ಲಿ ರಂ ತ್ತವೆ ಮತ್ತು ಜರೀಕಾವೀ ಶೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಶ್ಯಾಮಿಗೆ ಮಿಶ್ರಣ, ಮಡಿ ಧೋವಳ ಶಾಲು ಜಗನ್ನಾಥ ಗಂಜಗಳೂ ಕೂಡಾ ಸವಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕಟಲಾಗಿನೂ ದನೆ 3 ಇನಾಮುಗಳ

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಾಂಬಾ ಬನಾರಸ್ (ಕಾಶೀ)

The Canara Industrial & Banking Syndicate, Ltd

WANTED Agents Accountants & Clerks on the following grade —

Agents on	Rs 40 — 2 — Rs	200
Accountants	Rs 30 — 4 — Rs	120
Clerks	Rs 15 — 3 — Rs	90

Special allowance of Rs 15 10 and 5 are given in some of the offices Qualification Agents Accountants and Clerks should be atleast graduates undergraduates and matriculates respectively of any Indian University and should possess a fair knowledge of English and also any of the vernaculars viz Canarese Malayalam and Marathi

All are required to undergo one year's probation during which period they are not entitled for any remuneration

No caste distinction Applicants should write in their own hand stating their age the languages they know and must submit them along with their certificates and testimonials so as to reach the Managing Agents before the 30th June 1933 The selected candidates will be duly informed about their duties etc on the 7th July 1933

Udp 29th April 1933

P A Pai Bros
Managing Agents

NOTICE.

Sealed tenders are invited by the undersigned up to 2 P M on the 15th July 1933 for the construction of a girder bridge of 5 spans of 105 feet over the Kumaradhara river on the Mangalore Manjerabad Ghat road at Uppinangady 32 miles from Mangalore Approximate cost excluding girders Rs 93600 0—0 Coditions of contract plan, specification etc, will be supplied at a cost of Rs 10-0-0 per set These documents can be seen in the District Board Engineer's Office on working days between 11 A M and 4 P M.

Mangalore 19—5—1933

Sd K. Krishna Pillai,
Dt. Board Engineer, S. K.

ಸೆರೆಯ ನೀರಾಗಳ ದಾಣ

ಒಂದೂರಿನಲ್ಲಿ ಒಬ್ಬ ಅರಸ! ಆ ಅರಸನಿಗೊಬ್ಬ ಮಂತ್ರಿ!

† † † † † †

ಅರಸನ ತೋಟವನ್ನು ಹಾಳುಗೈದವೆಂದು ಆನೆಗಳಿಂ ಕೆಲವು ಆನೆಗಳನ್ನು ಹಿಡಿದರು.

† † † † † †

ಈ ಆನೆಗಳನ್ನು ಅರಸನು ಒಂದು ಪ್ರತ್ಯೇಕ ಜೈಲಿನೊಳ ಗಿಟ್ಟು ಸಾಕಿದ–ರಾಗಿ ಗಂಜಿ ಕುಡಿಸಿದ–ತರಬೇತಿ ಮಾಡಿದ!

† † † † † †

ಮಂತ್ರಿಯು ಬಹಳ "ಪುರಿಕಂಟಿ!" "ಒಂದು ಸೈಗೆ ಗಂಟು ಹಾಳುತ್ತಾನೆ" ಎಂತಾರಲ್ಲ ಹಾಗೆ!

† † † † † †

ಮಂತ್ರಿಯ ಮನೆಗೆಲಸಗಳಿಗೆ ಜನರು ಬೇಕಾಗಿದ್ದರು ಆದರೆ ಹೆಣ ಹೋಗುತ್ತದಲ್ಲಾ! ಅದಕ್ಕಾಗಿ ತನ್ನ ಕೆಲಸಗಳನ್ನು ಜೈಲಿನ ಆನೆಗಳಿಂದ ಮಾಡಿಸಬೇಕೆಂದು ಒಂದು ದಿನ ಆಲೋಚಿಸಿದ

† † † † † †

ಅರಸನಿಗೆ ಗೊತ್ತಿಲ್ಲದಂತೆ ಈ ಆನೆಗಳನ್ನು ತನ್ನ ಮನೆಗೆ ದಿನಾಲು ತರಿಸುತ್ತಿದ್ದು ಸಣ್ಣ ಕಂದಿಗೆಗಳನ್ನು ಆನೆಗಳ ಸೈಯಲ್ಲಿ ಕೊಟ್ಟು ಗುಡಾಣಕ್ಕೆ ನೀರು ತುಂಬಿಸ ಹೇಳಿದ

† † † † † †

ಮನೆಯವರು ಕ್ಷೇಮವಾಗಿ ಮಲಗಿದರು ಈ ಆನೆಗಳು ಕಟ್ಟಿಗೆ ಒಡೆದುವು ಶಾಖ್ರಿ ತೊಳೆದುವು ಅಂಗಳ ಗುಡಿಸಿದುವು. ಇತ್ಯಾದಿ, ಇತ್ಯಾದಿ

† † † † † †

ಸಂಜೆಯಾಗುತ್ತಲೇ ಮಂತ್ರಿಯು ಇವುಗಳನ್ನು ಇವುಗಳ ಜೈಲಿಗೆ ಕಳುಹಿಸಿದನು ಆಲ್ಲಿ ಇವುಗಳಿಗೆ ರಾಗಿ ತಿನ್ನಿಸಿದರು

† † † † † †

ಶಾಖ್ರ! ಈ ಆನೆಗಳಿಗೆ ಜೈಲುವಾಸ ಬೇರೆ! ಜೈಲಿನ ಕೆಲಸ ಗಳು ಬೇರೆ! ಆದರ ಮೇಲೆ ಮಂತ್ರಿಯ ಗುಟ್ಟಿನ ಮನೆ ಕೆಲಸ ಬೇರೆ!

† † † † † †

ಕೆಲಸ ಮಾಡುವುದಿಲ್ಲವೆಂದು ಹೇಗೆನ್ನುವುದು? ಮೊದಲೇ ಕೈದಿಗಳಾವ ಆನೆಗಳು! ಜೈಲು ಹೊರಗೆ ಬಂದರೆ ಸಾಕೆಂದು ನೆನಸು

† † † † † †

ಮನೆಯಲ್ಲಿ ರಜೆಯಿದರೂ ಆನೆಗಳಿಗೆ ಮಂತ್ರಿಯು ಆಟ ನನ್ನೂ ಹಾಕುತ್ತಿದ್ದಿಲ್ಲ. ಅವುಗಳನ್ನು ಜೈಲಿನ ರಾಗಿ ತಿನ್ನಲು ಕಳುಹಿಸುತ್ತಿದ್ದ! ಎಂತಹ ಅನ್ಯಾಯ!

† † † † † †

ಈ ಮಂತ್ರಿಗೆ ಕೆಲಸಗಾರನ್ನಿಡಲಿಕ್ಕೇನು! ಈ ಆನೆಗಳನ್ನು ಸೆರೆಯ ಒಂದು ಮೈಲು ದೂರದಲ್ಲಿರುವ ತನ್ನ ಗುಡ್ಡದ ಮನೆಗೆ ಒಯ್ದು ಅವುಗಳನ್ನು ದನಿಸಲೇಕೆ! ಎಂದು ಜನರ ಮಾತು

† † † † † †

ಮಂತ್ರಿಯ ಈ ಆಟದ ಸುದ್ದಿಯು ಎಲ್ಲರಿಗೂ ಗೊತ್ತು! ಆದರೆ ಅವನ . ಗೆ ಹೆದರಿ ಎಲ್ಲರೂ ಚಪ್ಪೆ!

* * * *

ಆ ಊರ ಅರಸನಿಗೆ ಈ ಗುಟ್ಟು ಗೊತ್ತಾಗದಿಲ್ಲವೆಂದು ಸುದ್ದಿಯಿತ್ತು ಗೊತ್ತಾದರೆ ಏನಾಗುವುದೋ?

† † † † † †

ಮಂತ್ರಿಯ ಮನೆಯಲ್ಲಿ ಆನೆಗಳು ಕೆಲಸ ಮಾಡುವ ಛಾಯಚಿತ್ರವನ್ನು ಒಬ್ಬರ್ು ತೆಗೆದಿರುತ್ತಾರೆ ಅದನ್ನು ತನ್ನ ಪಿಟೆ ಶನ್‌ನೊಂದಿಗೆ ಒಬ್ಬ ಪ್ರಜೆಯು ಅರಸನಿಗೆ ಕಳುಹಿಸಿಲಿರುವರು

† † † † † †

ಅರಸನ ತೋಟವನ್ನು ಹಾಳುಗೈದ ಈ ಆನೆಗಳ ಅದೃ ಷ್ಟವೇ! ಕಷ್ಟವೇ! ಈ ಆನೆಗಳಿಗೆ ಬಾಯಿ ಬರುತ್ತಿದ್ದರೆ ಮಾತ ನಾಡುತಿದ್ದುವು ಶಾಖ್ರ! ಇವುಗಳಿಗೆ ಸೊಂಡಿಲು ಮಾತ್ರ ಇದೆ.

† † † † † †

ಅಷ್ಟು ಕುದ್ದ ಸೊಂಡಿಲು ಇರುವ ಬದಲಿಗೆ ಇವುಗಳಿಗೆ ಇಷ್ಟು ಸಣ್ಣ ನಾಲಿಗೆಯೊಂದಿರುತ್ತಿದ್ದರೆ!

† † † † † †

ಈ ಮಂತ್ರಿಗೆ ತನ್ನ ಸಂಸಾರದ ಮೇಲಿರುವ ಅಕಾರ ಮಮತೆಯೊಡನೆ ಈ ಆನೆಗಳ ಮೇಲೆ ಕಿಂಚಿತ್ತು ಪ್ರೇಮ ವಿರುತ್ತಿದ್ದರೆ!

† † † † † †

ಈ ಆನೆಗಳಿಗೆ ರಾಜನು ಕಳುಹಿಸುವ ರಾಗಿಯನ್ನು ಮಂತ್ರಿಯು ಮನೆಗೆ ಸಾಗಿಸುತ್ತಾನಂತೆ ಶಾಖ್ರ! ಈ ಆನೆಗಳ ಹೊಟ್ಟೆಗೆ ಕಲ್ಲು!

† † † † † †

ಇದೊಂದು ಅಕ್ಷ ಇದರ ನೈತಿಕ ಅರ್ಥವು ನಿಮಗೆ ಬೇಗನೇ ತಿಳಿಯುವುದು!

† † † † † †

ಹರಿಜನ ಸೇವೆ

ಹರಿಜನ ಸೇವೆಯು ಭರದಿಂದ ನಡೆಯಬೇಕೆಂದು ಮಹಾತ್ಮರು ಆದೇಶಮಾಡಿಕೊಂಡಿದ್ದಾರೆ

† † † † † †

ಮಂಗಳೂರಿನವರು ಅವರ ಆದೇಶೆಯನ್ನು ಶಿರಸಾ ವಹಿಸಿ ಕೆಲಸವನ್ನು ಮುಂದೊತ್ತುತ್ತಿದ್ದಾರೆ

† † † † † †

ಇಷ್ಟರ ತನಕ ಹರಿಜನೋದ್ಧಾರದ ಗಾಳಿಯು ಬಂದಿರದ ಕಡೆ ಬೀಸಿರಲಿಲ್ಲ ಈಗ ಬೀಸಿತು

† † † † † †

ನೀರೇಶ್ವಾಲ್ಯರಲ್ಲಿ ಶ್ರೀ। ಎನ್ ಗೋವಿಂದಾರ್ಯರು ತನ್ನ ಮನೆಯ ಬಾಗಿಲನ್ನು ಹರಿಜನರಿಗಾಗಿ ತೆರದಿರುತ್ತಾರೆಂಬ ಸಂತೋಷ ವಾರ್ತೆಯು ಬಂದಿದೆ

† † † † † †

ಸಮಾಜದವರು ಅವರನ್ನು ಮೇಲೆ ಕಳಗೆ ಮಾಡುತ್ತಾ ರೆಂಬ ದುಃಖ ವಾರ್ತೆಯೂ ಬಂದಿದೆ

† † † † † †

ನುಡಿಯಂತೆ ನಡೆಯಬೇಕು ಸರ್ವರಿಗೆ ಹೇಳುವ ಮೊದಲು ತಾನು ಸರಿಯಾಗಿರಬೇಕು ಆರ್ಯರ ಕೆಲಸವು ಸ್ತುತ್ಯ!

† † † † † †

ಜನತೆಯ ಮನಸ್ಸಿಗೆ ನಾಟುವ ಕುದಾಕಾರ ಕಾರ್ಯಗಳನ್ನು ಮಾಡಿಯೇ ಹರಿಜನ ಸೇವೆಯಾಗಬೇಕಲ್ಲದೆ ಮತ್ತೆ ಬೇರೆಯಲ್ಲ.

† † † † † †

ಹರಿಜನ ಸೇವೆಗೆ ತೊಡಗುವ ಮೊದಲು ಅಂತಃಸಾಕ್ಷಿಗೆ ಸರಿಯಾಗಿ ನಡೆಯುವೆನೆಂದು ನಿರ್ಧರಿಸಬೇಕು

† † † † † †

ನಮ್ಮೂರ ಹರಿಜನ ಸೇವೆಯಲ್ಲಿ ಶ್ರೀ ರಾಮಚಂದ್ರ ಅಯ್ಯರರ ಸಾಹಸವೂ ಅಭಿನಂದನೀಯವಿದೆ ಹಳೆಯ ರಾದರೂ ಎಳಯರ ಉತ್ಸಾಹವು ಅವರಲ್ಲಿದೆ ಯುವಕರು ಕಣ್ತೆರೆಯಬಾರದೇ?

ದಿವ್ಯದೃಷ್ಟಿ.

ಓದುವುದಕ್ಕೂ ಓದಿಸುವುದಕ್ಕೂ ಕಲಿಯುವುದಕ್ಕೂ ಕಲಿಸುವುದಕ್ಕೂ

ಸ್ವದೇಶಾಭಿಮಾನಿ ಪತ್ರಿಕೆಯೊಂದೇ.

ಓದಿ ಮುಗಿದೊಡನೆ ಕಸಬುಟ್ಟಿಯ ಪಾಲಾಗುವ ಪತ್ರಿಕೆ ಸ್ವದೇಶಾಭಿಮಾನಿಯಲ್ಲ–ಇದು ಕಾಲ ಕಾಲಕ್ಕೂ

ಬೇಕಾದುದು ಇದನ್ನು ಜೋಪಾನವಾಗಿಡಿರಿ.

ಬಿಡಿ ಸಂಚಿಕೆ ನಿಮ್ಮೂರ ಏಜಂಟರಲ್ಲಿ ದೊರೆಯುತ್ತದೆ.

The Canara Industrial & Banking Syndicate Limited

Established in 1925. Branches Mangalore, Payyanur, Brahmavar, Kumta, Karwar, Hubli & Honnavar **Head Office:— UDIPI**

Authorised Capital Rs 1,00,000 Subscribed Capital Rs 1 00,000 Paid up Capital Rs 20 000

STATEMENT OF AFFAIRS OF THE SYNDICATE AS ON 30ST APRIL 1933

LIABILITIES			ASSETS		
Paid up Capital	Rs	20,000 0 - 0	Loans on Land mortgage	Rs	1,57,172— 3— 5
Reserve & other funds	,,	20,250—0—0	Loans on Valuable Securities	,	2,48,680— 9— 8
Deposits	,	8 90 247— 12— 0	Bills of Exchange Hundis and Promissory Notes		4 35 711— 5—1
Due to Bankers	,	27,518— 2— 7	Investment on Shares of other Companies	,,	43,575— 0— 0
On Bills & D P Notes	,,	50,000— 0— 0	On Deposits with Bankers	,	90,000— 0— 0
Bills for Collection	,,	8,827—11—0	Bills for collection (per contra)	,,	8,827— 11—0
Sundries	,,	67,589—11— 9	Sundries	,,	71 639—10— 9
			Cash in hand & with Bankers	,,	28,826 —9— 5
Total Rs		10,84,433 - 5 — 4	Total Rs.		10,84,433 - 5 — 4

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 9—5—1933

P. A. Pai Bros., *Managing Agents.*

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage.
FOR
4. Only 20 per cent extra Money

A TIRE UN-IMITATED & EXCLUSIVE.

Dealers Earn Profits. *Users Save Money.*

The Canara Public Conveyance Co., Ltd.

MANGALORE.

ಸುತ್ತುವ ಚಾರಗಳು.

ಅಂದಿನ ಸುದ್ದಿ ಕೇಂದಿಗಾ!

ದರ್ಬಂಡಿನಲ್ಲಿ ಶಾಂತಿಯುಂಟಾದಾಗ, ಅಲ್ಲಿನ ಪ್ರತಿನಿಧಿಗಳನ್ನು ಇಂಗ್ಲೆಂಡಿಗೆ ಕರೆಸಿಕೊಂಡು ಸಂಧಾನ ಮಾಡಲು ಬ್ರಿಟಿಷ ಮಂತ್ರಿ ಮಂಡಲವು ತವಕಗೊಂಡಿತು. ಪ್ರತಿನಿಧಿಗಳಾಗಿ ಮಿ. ಕೊಲ್ಲಿನ್ಸ್ ಮತ್ತು ಗ್ರಿಫಿತ್ಸರನ್ನು ಕರೆದರು. "ಹಿಂಸೆಯೆನೂ ಮಾಡದೆ ಕೈದಿನಲ್ಲಿದ್ದ ಎಲ್ಲರನ್ನು ಬಿಡುಗಡೆ ಮಾಡಲೆ ನಾವು ಹೊರಡುವ ಹಾಗಿಲ್ಲ" ಎಂದು ಅವರಿಬ್ಬರೂ ಹೇಳಿಬಿಟ್ಟರು. ಪ್ರತಿನಿಧಿಗಳ ಮಾತನ್ನು ಕಿವಿಯಾರೆ ಕೇಳಲೊಪ್ಪದ ಲೋಯ್ಡ ಜೋರ್ಜರೇ, 'ಆ ಕರ್ತವ್ಯವನ್ನು ಒಪ್ಪಿಕೊಂಡರು. ಇನ್ನೆಲ್ಲಿ? ಸಂಧಾನವಾಗುವ ವರೆಗೆ ಬ್ರಿಟಿಷ ಮುತ್ಸದ್ದಿಗಳಿಷ್ಟನ ಈ ಪ್ರತಿನಿಧಿಗಳು 'ಶೇಕ್ ಹೇಂಡ್ಸ್' ಮೂಡಲೂ ಒಪ್ಪಲಿಲ್ಲ. ಯಾವ ತರದ ಚಾಕೂಟ ಮೊದಲಾದುವುಗಳಲ್ಲೂ ಸೇರದೆ, ಆದರಾತಿಥ್ಯವನ್ನೂ ಸಹ ಸ್ವೀಕರಿಸದೆ ಸಂಧಾನವಾಗುವ ತನಕ ದೇರೇ ಯಾಗಿದ್ದರು. ಕೈದಿನಲ್ಲಿ ಬಾಂಧವರಿರುವಾಗ. ಇಂಗ್ಲೆಂಡಿನಲ್ಲಿ ಉಂಡುಂಡು ಕುದಿಕುದಿದು ಹಿಂದೀ ಪ್ರತಿನಿಧಿಗಳೆಂಬವರು ಮೆರೆದರಲ್ಲಿ. ಇದರಲ್ಲೇ ಭಾರತದ ದುರ್ಬಲತೆಯು ಪ್ರಕಾಶಗೊಳ್ಳುತ್ತಿದೆ. ಅದೇನನ್ನುವಿರೋ! ಭಾರತದ ಪ್ರತಿನಿಧಿಗಳೆಂಬವರು ಜನತಾಂಗದಿಂದ ಆನುವಾಣಿ ಹೊಂದಿದವರೇ ಅಲ್ಲ; ಸರಕಾರದಿಂದ ನೇಮಕ ಹೊಂದಿದವರು. ಹೀಗಿದ್ದು, ಸರಕಾರವೆನ್ನುವಂತೆ ಅವರು ಕಲಸ ಮಾಡದೆ ಇರಲಾಗುವುದಿಲ್ಲ—ಎಂದು ಶ್ರೀಮತಿ ಗ್ಯಾಯ್ಮೆತ್ ಫೊಡನ್ ಎಂಬಾಕೆ ಪತ್ರಿಕೆಗಳಿಗೆ ಬರೆದಿರುವಳು.

ಫಿಟ್ಟೆ ಎಷ್ಟು ಕೊಡಬಹುದು?

ಪಂಜಾಬಿನಲ್ಲಿ ಒಬ್ಬ ಸುಂದರ ಇಲಾಖಾ ಗುಮಾಸ್ತನು ಸರಕಾರದ ೫೦೦೦ ರೂಪಾಯಿಗಳನ್ನು ತನ್ನ ಜೇಬಿಗಿಳ್ಸಿಟ್ಟು ಕೊಂಡನೆಂದು, ಅವನ ಮೇಲೆ ಮೊಕದ್ದಮೆಯಾಗಿ ೫೦೦೦ ರೂಪಾಯಿ ಜುಲುಮಾನೆಯೂ ೧೦ ವರ್ಷದ ಸಜೆಯೂ ವಿಧಿಸಲಾಗಿವೆ ಎಂಬ ವಿಶೇಷ ವಿಚಿತ್ರ ವಾರ್ತೆ ಪ್ರಕಟವಾಗಿದೆ. ಒಂದು ಬಗೆಯ ವಿಹಿತತ್ವದ ರೀತಿಯೆಂದರೇನೆಂದು ಮೆಜಿಸ್ಟ್ರೇಟರಿಗೆ ತಿಳಿಯದೆ ಇರುವುದುಂಟೆ? ಪಂಜಾಬಿನ ನ್ಯಾಯಸ್ಥಾನಗಳ ಇತಿಹಾಸವನ್ನು ಬರೆವಾಗ ಈ ಮೆಜಿಸ್ಟ್ರೇಟರ ಹೆಸರನ್ನು ಸ್ವರ್ಣಾಕ್ಷರಗಳಲ್ಲಿ ಬರೆಯಲೇ ಬೇಕಾಗಿದೆ. ಇಂತಹ ಸಡಸುತಿಗಳಿಂದೀಗ ನ್ಯಾಯ ತೀರ್ಮಾನವೆಂಬುದು ಗೌರವ ಪಡೆದಿದೆ. ಇತರರಾದರೆ, ಸೇಕಡಾ ೫೦೦೦ ಸಲೆ ಬಡ್ಡಿ ಹೊರಿಸುವ ಮಾರವಾಡಿಗಳಂದು ಸರ್ವರೂ ಹೇಯಾಳಿಸುವಾಗ, ಇಂತಹ ದಂಡನೆಗಳಿಗೆ ಏನೆನ್ನುತ್ತಿದ್ಯೋ! ಸಂಕಲ್ಪವನ್ನೇ ಲುಟಾಯಿಸ ಹೊರಟವನೇ ಆದರೂ ಅಪಾದಿತನು ಒಬ್ಬ ಮನುಷ್ಯನು, ಅಧಿಕವೆಂದರೆ ನೂರು ವರ್ಷ ಒಟ್ಟು ಬದುಕಬಹುದಾಗಿರುವವನು, ಹೀಗಲ್ಲೇ ಮನೆ ಸೇರಿದ್ದ ಗುಮಾಸ್ತ — ಈಗಲಾದರೂ ಇವನ ವಯಸ್ಸು ಸುಮಾರು ೬೦ ಇರಬಹುದು. ಸತ್ತು ಬಳಿಕ ಹುಟ್ಟಿ ೩೦ ವರ್ಷವಾದರೂ ಜೈಲು ಶಾಲಾಗದೆ ಇವನಿಗೆ ವಿಮೋಚನೆ ಸಾಧ್ಯವಿಷ್ಟಿತ್ತಗಳೆಲ್ಲ. ಅಪರಾಧ ಮಾಡಿದ್ದಕ್ಕೆ ಹೀಗೆ ದಂಡನೆ ಕೊಡುವವರಿಗೆ ಬಡ್ತಿ ಎಷ್ಟು ಎಂದು ಕೌನಿಕಲಿನ ಟೀಕೆ.

ನಮ್ಮ ಚಿನ್ನದ ರಥ್ತು

ಈ ಕಾರಿತಾಗಿ ಸರ್ ಸಾಮುವೇಲ್ ಹೋರರು ಪಾರ್ಲಿಮೆಂಟಿನಲ್ಲಿ ವಿವರಿಸಿರುವ ಸ್ಥಿತಿಯು ನಿಜಸ್ಥಿತಿಯೇ ಎಂಬ ದೊಂದು ಪ್ರಶ್ನೆ ಇದೆ. ಈ ಬಗೆಯಲ್ಲಿ ಇಂಡಿಯದಿಂದ ಚಿನ್ನವು ರವ್ತಾದ ಕಾರಣ ಅದರಿಂದ ಇಂಡಿಯಕ್ಕೂ ಮಿಕ್ಕ ಎಲ್ಲ ರಾಜ್ಯಗಳಿಗೂ ಎಂದರೆ ಇಡೀ ಪ್ರಪಂಚಕ್ಕೂ ಉಪಕಾರವುಂಟಾಗಿದೆ ಎಂದು ಹೋರರ ಟೀಕೆ. ಪ್ರಪಂಚಕ್ಕೂ ಉಪಕಾರವಾಗಿದ್ದಿರಬಹುದು, ಇಂಡಿಯಕ್ಕೆ ಆಗಿರುವುದೇ ಎಂದು ಸಂದೇಹದಿಂದ ಕೇಳಬಹುದು. ಮುಖ್ಯವಾಗಿ ಬ್ರಿಟಿಷ ಸರಕಾರಕ್ಕೆ ಬಹಳ ಉಪಕಾರವಾಗಿದೆ. ಬ್ರಿಟಿಷ ಸರಕಾರವು ತನ್ನಲ್ಲಿರ್ದ ಚಿನ್ನದ ರಾಶಿಯನ್ನು ಹಾಗೆಯೇ ಇಟ್ಟುಕೊಂಡು, ಇಂಡಿಯದ ಚಿನ್ನ ದಿಂದಲೇ ವಹಿವಾಟು ಸಾಗಿಸಲು ಅನುಕೂಲವಾಡಿಕೊಂಡಿತು. ಚಿನ್ನವನ್ನು ಪರದೇಶಕ್ಕೆ ಕಳುಹಿ ಇಂಡಿಯಕ್ಕೆ-ಉಪಕಾರವೋ ಲಾಭವೋ ಆಯಿತೆಂದಾದರೆ, ಇಂಗ್ಲೆಂಡು ಸಹ ಚಿನ್ನವನ್ನೇತಕ್ಕೆ ರವ್ತು ಮಾಡುತ್ತಿಲ್ಲ? ಅದಕ್ಕೇನು ಉಪಕಾರವಾಗಲು ಆಸೆಯಿಲ್ಲವೆ? ತಮ್ಮ ಚಿನ್ನವನ್ನು ಹುಗಿದಿಡುತ್ತಾರೆ. ಉಪಕಾರ ಪಡೆಯುವ ಆಸೆಯೂ ಇಲ್ಲ. ಹೋರರು ಹೇಳುವ ಮಾತಿನಿಂದ, ಇಂಡಿಯದವರಿಗೇ ಇಂಡಿಯದ ವಿಷಯವಾದ ವಾತ್ಸಲ್ಯವು ಬ್ರಿಟಿಷರಿಕ್ಕಿಂತಲೂ ಹೆಚ್ಚಾಗಿ, ಹೋರರಿಗೇ ಇಂಡಿಯದ ವಾತ್ಸಲ್ಯವು ಹೆಚ್ಚಾಗಿದೆ ಎಂದೇ ಕಾಣುವುದಲ್ಲ!

ಇಪ್ಪತ್ತೆರಲ್ಲಿ ಸಣ್ಣಾಹ

ಜರ್ಮನಿಯು ಸೈನ್ಯವನ್ನು ತರ್ಕೀತು ಮಾಡುತ್ತಿದೆ. ಹಿಟ್ಲರ ಸಾಹಸಿಲನ ಪಾಠಾಗಳು ಇನ್ನೂ ಇನ್ನೂ ದರ್ಪಯುಕ್ತವಾಗಿ ಗರ್ಜಿಸುತ್ತಲಿವೆ. ಶಾಂತಿಯ ಮಾತು ಕೇಳ ಸಿಗದಂತೆ ಫ್ರಾನ್ಸಿನ ಪ್ರಯತ್ನಗಳು ಸಾಗುತ್ತಲಿವೆ. ಇಂತಹ 'ಭಯಂಕರ' ಚಳವಳಿಯನ್ನು ಮುರಿದಿಕ್ಕಲು ಸಿವಿಲ್ ಮತ್ತು ಸೈನಿಕ ಪಾತ್ರೆಗಳು ಪ್ರಯತ್ನಿಸಬೇಕೆಂದು ಫ್ರಾನ್ಸಿನ ಆಜ್ಞೆಯಾಗಿದೆ. ಹೀಗಿರುವಾಗ, ಚಿಮೀವದಲ್ಲಿ ಸೇರಿರುವ ಯಾವನೊಬ್ಬ ರಾಷ್ಟ್ರ ಪ್ರತಿನಿಧಿ ನಿಷ್ಕ್ರಿಯವಾಗಿಯೂ ಯಶಾರ್ಥವಾಗಿಯೂ ಶಾಂತಿಗಾಗಿ ಪ್ರಯತ್ನಿಸುತ್ತಾನೆಯೆ ಎಂದು ಸಂದೇಹದಿಂದ ಕೇಳಬೇಕಾಗಿದೆ. ಇಂಡಿಯದ ಸ್ವರಾಜ್ಯ ಪ್ರಶ್ನೆಯನ್ನು ಹೇಗೆ ಇತ್ಯರ್ಥಿಸುವರೋ, ಅದರ ಮೇಲೆ ಇತರ ಯಾವತ್ತು ಪ್ರಶ್ನೆಗಳೂ ಆಧರಿಸಿವೆ.

ಬರ್ಮಾನ ಮಹಾರಾಜರು

ಎಂದಾದರೂ ಭಾರತವರ್ಷದ ಪರವಾಗಿ ನಾಲ್ಕು ಮಾತ ನ್ನಾಡಿದರೆಂದರೆ, ನಿರ್ವಿವಾದವಾಗಿ ಅದನ್ನು ಒಪ್ಪುವುದೂ ಕಷ್ಟ. ನಿಸ್ಸಂದೇಹವಾಗಿ ಅದನ್ನು ನಂಬುವುದಕ್ಕಂತೂ ಕಷ್ಟ. ಹೀಗಿದ್ದರೂ ಈ ಸಲ ಅವರು ಒಂದು ಲಂಡನ್ ಪತ್ರಿಕೆಗೆ ಬರೆದಿರಬಲ್ಲ ಅಲ್ಪ ತಥ್ಯಾಂಶವಿದೆ ಎನ್ನಬೇಕು. 'ಸರಕಾರದ ಪರಮಾಸ್ತರಾಗಿರ ತಕ್ಕವರಲ್ಲಿ ಸಹ ವಿರೋಧವುಂಟು ಮಾಡುವ ಹಾಗೆ ಜನತಾಗದ ಗೌರವ ಹೆಚ್ಚಿನದೆಂದೋ, ಯಾ ಇತರ ಕಾರಣ ಗಳಿಂದಲೋ ಕೆಲವರು ವರ್ತಿಸುತ್ತಾರೆಂದು ಇವರ ನುಡಿ ಜಮಿಸ್ಕಾರರೂ ಶ್ರೀಮಂತರೂ ಭಾರತವರ್ಷಕ್ಕೆ ಸ್ವರಾಜ್ಯ ನಿಸಗಾರದೆನ್ನುವ ಅಭಿಪ್ರಾಯವುಳ್ಳವರೆಂದು ಹರಿಸಿರುವ ಮಾತು ಸುಮ್ಮನೆ.

ಮಿನ್ನೆಯವರ ಹೀನತೆ

ಮೇಯೋಮಾಯೆಯು ತರುವಾಯದಲ್ಲಿ ನಮ್ಮ ದೇಶಕ್ಕೆ ಅವತೀರ್ಣರಾದ ಹಲವರು ಪರದೇಶಿಗಳ ಚಾಯೆಯಿಂದಲೂ ಅವರಾದ ಅಪಸ್ಕಾರಗಳನ್ನು ಅನುಭವಿಸುವುದಷ್ಟೆ ನಮ್ಮ ಗ್ರಹಚಾರ ಫಲವಾಗಿದೆ. ಇವರಲ್ಲಿ ಕೊನೆಯವರಾಗಿ 'ಟೈಮ್ಸ್' (ಲಂಡನ) ಪತ್ರಿಕೆಯ ಬಾತಮೋದಾರರಾದ ಮಿನ್ನೆ ಯೆಂಬವರು ಮೆರೆಯುತ್ತಿದ್ದಾರೆ. ಇಂಡಿಯ ಆಫೀಸಿನ ಹುದ್ದೇ ದಾರರ ಸಹಕಾರದಿಂದಾಗಿ ಇವರ ಹೇಳಿಕೆಗಳಿಗೆ ಮತ್ತಷ್ಟು ಗಿಲಿಟು ಹೆಚ್ಚಿದೆ. ಉಪಕಾರ ಆದರಾಥಿತ್ಯಗಳನ್ನು ಪಡೆದವರೇ ನಮ್ಮನ್ನು ಹಿಯ್ಯಾಳಿಸಿರುವ ಪ್ರಸಂಗಗಳು ಬಹಳವಾಗಿವೆ. ನಮ್ಮ ಹಿಂದೀ ಸಂಸ್ಕೃತಿ ಹಿಂದೂ ದೇವತೆಗಳು ಹಿಂದೂಮತ ಸಂಪ್ರದಾಯಗಳು ಮೊದಲಾದವುಗಳನ್ನು ಗಣನೆಗೇನೇ ತಂದುಕೊಳ್ಳುವುದಕ್ಕೂ ಬೇಕಾದ ಸಂಸ್ಕಾರವೂ ಇಲ್ಲದೆ ಗಳಹುದೊಂದೇ ರೀತಿಯಾಗಿಟ್ಟುಕೊಂಡು ಬಂದವರು ಹೀಗಲ್ಲದೆ ದೇರೆ ಹೇಗೆ ಬರೆವರು? ಇಂತಹವರ ದೆಸೆಯಿಂದ ಭಾರತಕ್ಕೂ, ಇಂಗ್ಲೆಂಡಿಗೂ ವೈಷಮ್ಯವು ಹೆಚ್ಚಲಾರದೆ! ಇರಬೇಕಾಗಿರುವ ಶಾಂತಿಯು ಅಳಿಯುವಂತೆ ಇವರ ಲೇಖನಗಳು ಸಹಾಯಕವೆ! "ಧರ್ಮ ಹರಿಯು ಸಂಸಾರದಲ್ಲಿ ವಿಷಯೋಪಭೋಗಗಳನ್ನು ಪಡೆಯ ಲಾರದೆ ಅಭ್ಯಸ್ತನಾಗಿ, ಕೊನೆಗೆ ಸನ್ಯಾಸಿಯಾದಂತೆ. ಭಾರತ ವಾಸಿಗಳಲ್ಲಿ ಸನ್ಯಾಸವೆಂದರೆ, ಅಭ್ಯಸ್ತ ವಿಷಯಭೋಗದಿಂದಾದ ವೈರಾಗ್ಯ ಹೊಂತು ಬೇರೆ ಇಲ್ಲ" ಎನ್ನುವ ಇದೊಂದು ನುಡಿದು ಟೀಕೆಯಿಂದ ಈ ಪರಮ ನಿಪುಣನ ಅಂತರಂಗ ಬುದ್ಧಿಯು ಪ್ರಕಟವಾಗುವುದು. ಇಂದ್ರಿಯ ಸುಖಗಳೇ ಮುಖ್ಯವೆನ್ನುವ ಹಾಗೆ, ಗೃಹಸ್ಥಾಶ್ರಮದ ರುಚಿ ಹುಟ್ಟುವಂತೆ, ಎಳೇ ಮಕ್ಕಳಿಗೆ ತಾಯಂದಿರು ಉದ್ರೇಕಗೊಳಿಸುವರಂತೆ!

ನೂರೈವತ್ತು ವರ್ಷಗಳಲ್ಲಿ

ಪ್ರಜಾ ಪ್ರೀತ್ಯರ್ಥವಾಗಿ ಶಿಕ್ಷಣವನ್ನು ಒಳ್ಳೇ ರೀತಿಯಿಂದ ಹರಿಸಿಸಬೇಕೆಂದು ಬ್ರಿಟಿಷ ಸರಕಾರವು ಮಾಡಿರುವ ಪ್ರಯತ್ನ ಗಳೆಲ್ಲವೂ ನೀರಲ್ಲಿ ಹೋಮ ಮಾಡಿದಂತಾಗಿವೆ ಎಂದು ಈ ಮಿನ್ನೆಯವರ್ಯಾತ್ಯರ್ಥವಾಗಿದೆ. ಆ ಮಾತು ಹಾಗಿರಲಿ; ಮಿನ್ನೆ ಯಂಥವರನ್ನು ಹತ್ತು ಸಾಕೆ ಶಿಕ್ಷಣ ಕೊಟ್ಟು ಬ್ರಿಟನ್ ಮಾತೆಯು ಈ ಪುತ್ರರತ್ನದಿಂದ ಹೊಟ್ಟೇ ತನಿಸಿಕೊಳ್ಳಂಡಳೆ! ಭಾರತವರ್ಷದ ರಾಜಕೀಯ ಸುಧಾರಣೆಗಳ ವಿಷಯ ಎಂದಾದರೂ ಆಲೋಚನೆಯಾಗುವ ಹೊತ್ತಿಗೆ, ಮಿನ್ನೆ—ಮೇಯೋ ಮೊದಲಾದವರ ಗುಂಪೆ ಎದ್ದು ಕೋಲಾಹಲ ಎಬ್ಬಿಸುತ್ತಿದೆ ಯಲ್ಲ! ಈ ಅದ್ಭುತ ಘಟನೆಗೆ ತಾತ್ಪರ್ಯವೇನಾಗಿರಬಹುದು? "ಭಾರತವರ್ಷದ ಇತಿಹಾಸದಲ್ಲಿ ಈಗ ಇರುವಷ್ಟು ಉತ್ತಮ ವಾದ ಶಿಕ್ಷಣವೇ ಇದ್ದಿಲ್ಲ, ಇದುವರೆಗೆ ಎಂದೂ ಇದ್ದಿಲ್ಲದ ಅನುಕೂಲತೆಗಳನ್ನು ಬ್ರಿಟಿಷರೇ ಉಂಟುಮಾಡಿರುವರು. ಆದರೂ ಇನ್ನೂ ಬರೇ ಸೇಕಡಾ ಲಂಪ್ಪು ಜನವೇನೋ ಓದು ಬರಹ ಬಲ್ಲವರಂತೆ. ಹಿಂದೀಯರಿಗೆ ವಿದ್ಯಾಧ್ಯಾಸವೆಂದರೆ ಅಷ್ಟು ತಾತ್ಸಾರ!" ಹೀಗೂ ಬರೆಯಬಹುದೆ? ಇನ್ನೂ ವರ್ಷಗಳಲ್ಲಿ ಬ್ರಿಟಿಷರು ಇಲ್ಲಿಂದ ಪಡೆದ್ಯೊದ ಧನಲಾಭದ ಬಡಲಾಗಿ ಇಲ್ಲಿ ಬಿಟ್ಟಿರುವ ಶಿಕ್ಷಣದ ಭಾಗವೆಷ್ಟು? ಅಂತೂ, ಇವರ ಅಭಿಪ್ರಾಯ ದಲ್ಲಿ, ಬ್ರಿಟಿಷರೇ ಮೊದಲಾದ ಲೋಕಹಿತೈಷ್ಯಗಳಾದ ಜನತಾಂಗ ಗಳು ದಿವಾಳಿದಾಸರಾಗಿರುವ ಭಾರತೇಯರುಂಥವರ ಬಾಳುಬದು ಕಿನಲ್ಲಿ ಕೈಯಿಕ್ಕದೆ ಇರುವುದು ಉತ್ತಮವೆಂದು ಈ ಮಹಾ ಕಯರ ಗ್ರಂಥವು ಸೂಚಿಸುತ್ತಿದೆ. ಆದರೆ, ಪಾಪ, ಬ್ರಿಟಿಷರು ಹೊತ್ತಿರುವ ಜವಾಬುದಾರಿಯನ್ನು ಕೇಳಿಕ್ಕಿಡುವುದೆ! ಮಿನ್ನೆಯ ವರೂ ಸ್ವಲ್ಪ ಈ ದಾರ ಹೋಗಲಿ.

+++++

ನೋಟಗಳು.

ಮಹಾತ್ಮರು ಉಪವಾಸವ್ರತವನ್ನು ಸಾಂಗವಾಗಿ ಮುಗಿಸಿದರು. ಉಪವಾಸಿಗಳಿಗೆ ಇತರ ಜಗತ್ತಿನುಂಟಾದುದರ ಕ್ಕಿಂತಲೂ ಹೆಚ್ಚಿನ ಆನಂದವು ಇದರಿಂದ ಉಂಟಾಗಿದೆ.

* * * *

ಇನ್ನೇನು ಮಾಡುವರು? ಪುನಃ ಜೈಲಿಗೆ ಹೋಗುವರು ಎಂದೊಬ್ಬರ ಮಾತು. ಕರಿಜನೋದ್ಧಾರ ಮಾಡುವರು ಎಂದು ಮತ್ತೊಂದು ಧನಿಯ ವಾಣಿ. ಇನ್ನೊಂದು ಉಪವಾಸಕ್ಕೆ ಸಿದ್ಧವಾಗುವರು ಎಂದೇ ನಮ್ಮ ತರ್ಕ.

* * * *

ಕೆಲಸಗಾರರಿಗೆಲ್ಲ ಪೆನ್ಷಿಂಟ್ ಫಂಡನ್ನು ವಿಕ್ಟರಿಯ ದೇಕೆಂಬ ಕಾನೂನು ಮದ್ರಾಸು ಸರಕಾರದ ಮುಂದೆ ಬರುವುದು. ಕೆಲಸಗಾರರಿಗೆ ಕೆಲಸ ಕೊಟ್ಟು ಯೋಗ್ಯ ಕೂಲಿಯನ್ನೂ ಕಲಾಲದಲ್ಲಿ ಕೊಡದೇಕೆಂಬುದಕ್ಕೆ ಯಾವಾಗ ಕಾನೂನು ಉಂಟಾಗಬಹುದು?

* * * *

ದಿನ ದಿನದ ಜೀವನಕ್ಕೆ ಕೆಲಸವೂ ಕೂಲಿಯೂ ಸಿಗದವರಿಗೆ ಆಪದ್ಧನವೆಲ್ಲಿಂದೆ? ನಿತ್ಯದ ಅವತ್ತು ನಿವಾರಣೆ ಹೊಂದಲ್ಕೆ, ಮುಂದಲ್ಲವೆ ಧನ?

* * * *

ಹರಿಜನ ಸೇವಾಸಂಘದ ಸೋಮವಾರದ ಸಭೆ ಮೈದಾನ ನಲ್ಲಿ ಸೇರಿದಾಗಲೆ, ರವಿವಾರ ಮಳೆಯೆಂದು ಮುಂದಿಟ್ಟ ಹರಿಜನ ಪ್ರಥಮ ಪದವೀಧರರನ್ನು ಅಭಿನಂದಿಸಿದ್ದರೆ, ಕಾಲೋಚಿತವಾಗು ತ್ತಿರಲಿಲ್ಲವೆ?

* * * *

ಬಿಸಿಲು ಕಾದರೆ ದೂಳು; ಮಳೆ ಸುರಿದರೆ ಜಲ್ಲಿಕಲ್ಲು. ಅತೂ ಇತೂ ದಾರಿಗರಿಗೆ ಕಣ್ಣಿಗೆ ಮಣ್ಣು, ಕಣ್ಣುನೀರು.

* * * *

ದೇವಾಲಯಗಳ ಆಸ್ತಿಗಳ ಮುಂದುವ್ಯಯವಾಗುವುದು ಶೋಚನೀಯವೆಂದು ಎಲ್ಲ ದೇವಾಲಯಗಳನ್ನು ಕುರಿತಾಗಿ ಆಡುವರು. ಇದ್ದೇ ಇದ್ದಾರೆ; ವಿಹಿತ. ಇಂಥ ಧಾರಣಗಳು ಮಾತಿನ ದುಂದುವ್ಯಯವೆನ್ನುವ ಮೊಕ್ಕೇಸರವು ಇದ್ದೇ ಇದ್ದಾರೆ ಇದೂ ವಿಹಿತವೆ?

* * * *

ನುಡಿಗಳ ಸೇವಾಶ್ರಮವಿದೆ; ಹರಿಗೆಯ ವಾರ್ಡು ಇದೆ; ಇನ್ನು ಅನಾಥಾಯಿಲ್ಲವೊಂದು, ಹಸುಗೂಸುಗಳ ಬಗ್ಗೆ ತೊಟ್ಟಿಲ ಕಾಲೆಯೊಂದು ಇವನ್ನು ಮಂಗಳೂರು ಪಡೆಯುವ ಭಾಗ್ಯ ವೆಂದಿಗೆ?

* * * *

ಮದ್ರಾಸಿನ ಕ್ರಿಶ್ಚನ್ ಕೊಲೆಜಿನ ಪ್ರೊಫೆಸರರು ಇಲ್ಲಿಗೆ ಬಂದು ಶ್ರೈಷ್ಟ ಧರ್ಮವನ್ನು ಕುರಿತಾಗಿ ಭಾಷಣ ಕೊಡುತ್ತಾರೆ. ನಮ್ಮ ದೇವಸ್ಥಾನಗಳಿಂದಲಾದರೂ ಧರ್ಮ ವಿಷಯಕ ಭಾಷಣ ಗಳು ಎಂದಿಗೆ ಆರಂಭವಾದಾವು?

* * * *

ಗ್ರಂಥವಾಚನ, ಹರಿಕಥೆ ಮೊದಲಾದ ಹಳೆದಿನಗಳ ಮಳೆ ಗಾಲದ ವಿನೋದಮಯ ಕಾಲಕ್ಷೇಪ ಮಾರ್ಗಗಳು ಈಗ ಮಾಯವಾಗುವಾಗ, ಹಿಂದೂ ದೇವಾಲಯಗಳಾದರೂ ಈ ಕಡೆ ಗಮನ ಕೊಡಬಾರದೆಂದಿದೆಯೇ?

The Kanara Enterprise, Ltd., Puttur.

ದಿ ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್, ಪುತ್ತೂರು.

Established 1920] **[1920ರಲ್ಲಿ ಸ್ಥಾಪಿತವಾದದ್ದು.**

Authorised Capital	Rs	2,00 000—0—0	ಅಧಿಕೃತ ಮೂಲಧನ	ರೂ.	2,00,000—0—0
Issued Capital	Rs.	44,100—0—0	ಚಂದಾ ಹಾಕಿದ ಮೂಲಧನ	ರೂ.	44,100—0—0
Paid up Capital	Rs.	30,182—8—0	ದೊಳ್ಳು ತೆತ್ತ ,,	ರೂ.	30,182—8—0
Reserve and other Funds		15,650—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು		15,650—0—0

All kinds of Banking business undertaken.

Current, Savings and fixed Deposits are received at favourable rates.

Advances are made on bills, pledges of gold and other securities.

Shares are now available

For Further particulars apply to the Secretary

G. N LAKSHMAN PAI,
Ag Secretary

Puttur,
16—2—1933.

For neat and nice Printing

Please call at

THE SHARADA PRESS,

Car Street, MANGALORE.

Seventy Five Years!

Two generations of approved service enables us to pick and choose what is cheap, lasting and good to suit the pockets and the tastes of our longstanding wide circle of

CUSTOMERS

who know our

Premier House for Swadeshi.

Mill Yarns —Handloom Cloths, Dhoties—Saries—Cintzesh etc.

Shrinivas Rang Pai,

Sawkar Mahal,

Car Street, MANGALORE

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ, ದ. ಕ.

ಶೀಘ್ರ, ಫಲದಾಯಕ' **ಶಾಸ್ತ್ರೀಯವಾದ ಅನುಭವಸಿದ್ಧ ಔಷಧಿಗಳು.** ಲಾಭದಾಯಕ'

ಕಸ್ತೂರಿ ಮಿಶ್ರಿತ ರಶ್ಮಿಮೂಲಾವಿಷ್ಟ ೧೫ ಟಾನ್ಸ್ ಬಾಟ್ಲಿ ೧ಕ್ಕೆ ರೂ 1-8-0 ದ್ರಾಕ್ಷಾದಿಷ್ಟ ೧೫ ಟಾನ್ಸ್ ಬಾಟ್ಲಿ 1ಕ್ಕೆ ರೂ 1 ಜಶ್ವಗಂಧಾರಿಷ್ಟ ೧೫ ಟಾನ್ಸ್ ಬಾಟ್ಲಿ ಬೆಲೆಗೆ ರೂ 1—4—0 ಅಬಲಾತ್ಯಾತ ೧೫ ಟಾನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೫ ಟಾನ್ಸ್ ಬಾಟ್ಲಿ ೧ಕ್ಕೆ ರೂ 1-4-0 ಜವನಪ್ರಾಶಲೇಹ ೧ ರಾತ್ತಿಗೆ ರೂ 2-8-0 ಅಭಯಾಮಲಕ ೧ ರಾತ್ತಿಗೆ ರೂ. 2. ಅಮೃತಾರ ರಸಾಯನ ಅರ್ಧ ರಾತ್ತಿಗೆ ರೂ 8 ಜಂತ್ರಮಹ ಕಾಲು ಟಿನ್ನಿಗೆ ರೂ 0-5-0. ಅರ್ಧ ಟಿನ್ನಿಗೆ ರೂ 0-8-0 ಕೃಷ್ಣಾರಿಕ ೧ ಟಿನ್ನಿಗೆ ರೂ 0-6—0. ಚಿತ್ರಕ ತೊಲೆ ೧ಕ್ಕೆ ರೂ. 0-8-0 ಮಹಾಚಿತ್ರ- ತೊಲೆ ೧ಕ್ಕೆ ರೂ. 1 ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ ಡಬ್ಬಿ ೧ಕ್ಕೆ ರೂ 0-4-0 ಧೂವನಾಂಜನ ಪೈನ್‌ಬಾಮ್ ಡಬ್ಬಿ ೧ಕ್ಕೆ ರೂ 0-6-0 ಪಿಂಡ ತೈಲ ೫ ಟಿನ್ಸ್ ಬಾಟ್ಲಿ ೧ಕ್ಕೆ ರೂ 0-10-0 ಬಲಾಶ್ವಗಂಧಾದಿ ತೈಲ ೫ ಟಿನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಟಿನ್ಸ್, ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಟಿನ್ಸ್ ಬಾಟ್ಲಿ ೧ಕ್ಕೆ ರೂ. 1. ಶ್ರೀ ಗೋಪಾಲ ತೈಲ ೫ ಟಿನ್ಸ್ ಬಾಟ್ಲಿ ೧ಕ್ಕೆ ರೂ 3—8 0.

ಇವಲ್ಲದೆ ನಾನಾ ತರದ ಚೂರ್ಣಗಳು, ಮಾತ್ರೆಗಳು, ರಸಗಳು, ಗುಗ್ಗುಲುಗಳು, ಘೃತಗಳು, ಮೋದಕಗಳು, ಪಾಕಗಳು ವಗೈರೆ ಎಲ್ಲಾ ತರದ ಸಿದ್ಧೌಷಧಗಳು ಸುಲಭ ದರದಲ್ಲಿ ವಿಕ್ರಯಿಸಲ್ಪಡುವವು

ಎಲ್ಲೆಲ್ಲಿಯೂ ವಿಜಂಟರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಒರೆದು ತಿಳಿದುಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಷ್ಟು ಕಟಪಾಡಿ, ದ ಕ



ಏಳು ವರ್ಷಗಳಿಗೊಮ್ಮೆ ಇಡೀ ದೇಹವು ಸಂಪೂರ್ಣವಾಗಿ ನವೀನವಾಗುವುದು.
ಮೂರು ಸೆಲ 7 ಎಂದರೆ 777 ಒಂದಾದರೆ ಎಂತಹ ಬಟ್ಟೆಯೂ ನೂತನವಾಗುವುದು.

ಸ್ವಸ್ತಿಕಾ ಗುರುತಿನ **777** ಸಾಬೂನನ್ನೇ ಬಟ್ಟೆ ಒಗೆಯಲು ಉಪಯೋಗಿಸಿರಿ.

ಶುದ್ಧ ಸ್ವದೇಶಿಯವಾಗಿ ಇತರ ಬಟ್ಟೆಗೆ ಹಚ್ಚುವ ಎಂಥ ಸಾಬೂನಿಗೂ ಮಿಗಿಲಾಗಿ ಉತ್ಕೃಷ್ಟವಾದ ಸುಲಭ ಬೆಲೆಯ ಸರ್ವರಿಗೆ ಅನುಕೂಲವಾದ

ಪ್ರತಿ ದಿನವೂ ಪ್ರತಿ ಮನೆಯಲ್ಲಿ **ಸಾಬೂನು** ಪ್ರತಿಯೊಬ್ಬರು ಪ್ರತಿ ಬಟ್ಟೆಗೆ

ಅದನ್ನು ಶುಭ್ರವಾಗಿ ಒಪ್ಪಕೊಟ್ಟು ನವೀನಗೊಳಿಸುವುದು.

ಅತ್ಯುತ್ತಮವಾದ ಪಾನೀಯವಾಗಿ ಉಪಯೋಗಿಸಲು

'ಎಂಬರ್‌ಟಿಪ್ಸ್ ಟೀ'

ದೇಶೀಯ ತೋಟ, ದೇಶೀಯ ಕೂಲಿ, ದೇಶೀಯ ಹಣ, ಜಮಾನಿನಿಂದ ಮೂರಾಟದ ವರೆಗೆ ಎಲ್ಲವೂ ಅಚ್ಚ ದೇಶೀಯವೆ!

ಡಬ್ಬಿಗಳಲ್ಲಿ ಇದೆ, ಬಟ್ಟೆ ಗಳಲ್ಲಿ ಇದೆ; ಅದರ ಸುವಾಸನೆ, ರುಚಿ, ಸರ್ವೋ ತ್ಕೃಷ್ಟವಾಗಿದೆ. ಅದರ ಬೆಲೆ,ಉಪಯೋಗ,ಸರ್ವಾನು ಕೂಲವಾಗಿದೆ

ಇತರ ದೇಶೀಯವಲ್ಲದ ಅಥವಾ ದೇಶೀಯ ಚಾಗಳಿಗಿಂತ **ಎಂಬರ್‌ಟಿಪ್ಸ್** ಚಾವನ್ನೇ ಉಪಯೋಗಿಸಿರಿ.

DISTRIBUTORS: **Sujeer Rayappa Nayak, S. Narashim Venkatesh Nayak & Co.,**
Bunder, **Mangalore**, (S. India).

ವಿಷಯಸೂಚಿ

ಪುಟಗಳು

ಹೊಸಾ ಸಂಘಗಳು ... ೯
ಪತ್ರವ್ಯವಹಾರಗಳು ... ೬
ನೋಟುಗಳು ... ೧೫

ವರ್ತಮಾನ ಸಂಗ್ರಹಗಳು

ಒಳದೇಶ ವರ್ತಮಾನ ವಿವಿಧ ವರ್ತಮಾನ, ೮
ವಿವಿಧ ಸಮಾಚಾರಗಳು ... ೧೧
ಕೃಷಿಕಂಠ ... ೨
ಪತ್ರಿಕಾಪಹಾರ ... ೧೩
ಸ್ಥಳೀಯ ನೋಟುಗಳ ಬಾಬ್ತು ... ೪

ದಕ್ಷಿಣ ಕನ್ನಡ—ಮಂಗಳೂರು, ಸುರತ್ಕಲ್, ಉಡುಪಿ, ಹೊಸದುರ್ಗ,
ಕಾರ್ಕಳ, ಪೆರ್ಡೂರು ... ೯
ಮಹಾತ್ಮರ ರಕ್ಷಣೆಗಾಗಿ ಜಗತ್ಪ್ರಸಿದ್ಧರಾದ ಆನೆಪ! ... ೧೦
ಗಾಂಧಿಯವರು ಉಪವಾಸವನ್ನು ಬಿಟ್ಟರು! ... ೧೫

ಸ್ವದೇಶಾಭಿಮಾನಿ.

ತಾ. ೨೧ನೇ ಶುಕ್ರವಾರ ಜೂನ್ ೧೯೨೬.

ಸಹಕಾರಿ ಸಂಘಗಳು.

ಯಾವತ್ತೂ ಕಡೆಗಳಲ್ಲಿಯೂ ಸಹಕಾರಿ ಸಂಘಗಳು ತೃಪ್ತಿಕರವಾಗಿ ನಡೆಯುವುದಿಲ್ಲವೆಂಬುದು ಎಲ್ಲರಿಗೂ ತಿಳಿದಿದ್ದರೂ, ಅವುಗಳ ಸುಧಾರಣೆಯ ಕಡೆಗೆ ಸರಿಯಾದ ಗಮನವು ಕೊಡಲ್ಪಡದಿರುವುದು ಅತ್ಯಂತ ದುಃಖದ ವಿಷಯ. ಸಹಕಾರಿ ಸಂಘಗಳು ಶೃಷ್ಟಿಕರನ್ನೂ ಜಡವರನ್ನೂ ಸಾಲಗಾರರ ಕೈಯಿಂದ ತಪ್ಪಿಸುವೆವೆಂದು ಹೆಗ್ಗಳಿಸಿಕೊಳ್ಳುವಂತಹವುಗಳು. ಆದರೆ ಕಾರ್ಯದಲ್ಲಿ ಇವು ಜಡವರನ್ನು ಸಾಲಗಾರರಿಂದ ತಪ್ಪಿಸುವ ಬದಲು, ಜಾಮೀನುದಾರರೆಂಬ ಹೊಸ ವರ್ಗದಲ್ಲಿ ಸೇರಿಸಿ, ಎರಡೂ ಕಡೆಗಳಿಂದ ಕಷ್ಟಗಳಿಗೆ ಈಡಾಗಿರುವರು.

ಸಹಕಾರಿ ಸಂಘಗಳ ತತ್ವಗಳನ್ನು ಪುನರಾಲೋಚಿಸುವ ಆವಶ್ಯಕತೆಯನ್ನು ನಾವು ಈ ಮೊದಲೇ ಹಲವು ಬಾರಿ ತಿಳಿಸಿದ್ದೇವೆ. ಪ್ರತಿ ಬೆಳ್ಳೆಯೊಳಗಿನ ಜಡವರ ಪರಿಸ್ಥಿತಿಯನ್ನೂ ಸಹಕಾರಿ ಸಂಘಗಳ ವ್ಯವಸ್ಥಾ ಕ್ರಮವನ್ನೂ ಪರಿಶೀಲಿಸಲು ಸಾರ್ವಜನಿಕ ಸಮಿತಿಯೊಂದು ನಿರ್ಧಾರಾದರೆ ಬಹಳ ಉತ್ತಮ ವಿತ್ತು. ಏಕೆಂದರೆ ನಮ್ಮ ಸಹಕಾರ ಸಂಘಗಳ ಈಗಿನ ಸೂತ್ರಗಳು ಪಾಶ್ಚಾತ್ಯರಿಂದ ಕೊಂಡವುಗಳು. ಪಾಶ್ಚಾತ್ಯ ದೇಶಗಳ ಪರಿಸ್ಥಿತಿಯೇ ಬೇರೆ. ಅಲ್ಲಿ ವಿದ್ಯಾಧ್ಯಾಸದ ಅನುಕೂಲ್ಯ, ಆರ್ಥಿಕಾಸ್ಪದ ಜ್ಞಾನ, ಕೃಷಿಯ ಅಭಿವೃದ್ಧಿ, ಕೈಗಾರಿಕೆಗಳ ಪ್ರಚಾರ, ವ್ಯಕ್ತಿಯ ಉತ್ಪತ್ತಿ, ಇನೆಲ್ಲವೂ ನಮ್ಮ ದೇಶಕ್ಕಿಂತಲೂ ಎಷ್ಟೋ ಬಾರಿ ಮಿಗಿಲಾಗಿರುತ್ತವೆ.

ಸಹಕಾರಿ ಸಂಘಗಳಲ್ಲಿ, ಅಲ್ಲದೆ ಇತರ ಬೇಂಕುಗಳಲ್ಲಿ ಕೂಲಿ ಸಾಲ ಕೊಡುವಾಗ ಸಾಲ ಪಡಕೊಳ್ಳುವವನಿಗಿಂತಲೂ ಅವನ ಜಾಮೀನುದಾರನ ಮೇಲೆ ಕಣ್ಣು ಹೆಚ್ಚು. ಸಾಲ ಕೊಡುವವರು ಸಾಲ ಪಡಕೊಳ್ಳುವವನಿಂದಲೆ ಕೊಟ್ಟ ಏನೇ ಜನ್ನು ವಾಪಾಸು ಪಡೆಯುವ ಉದ್ದೇಶವನ್ನಿಟ್ಟುಕೊಳ್ಳಬೇಕಾ. ಈ ಉದ್ದೇಶವು ಯಾರಲ್ಲಿಯೂ ಇರುವುದಿಲ್ಲ. ಜಾಮೀನುದಾರನು ಗಟ್ಟಿಯೆಂತಾದರೆ ಯಾವಿಗಾದರೂ ನಲಿ, ಸಾಲ ಸಿಕ್ಕುಲು ಕಷ್ಟವಾಗುವುದಿಲ್ಲ. ಸಾಲ ಕೊಡುವ ಸುಸ್ಥೆಗಳ ಈ ತರದ ಸ್ವಾರ್ಥದಿಂದಲೇ ಅನ್ಯಾಯವಾಗಿ, ಎಷ್ಟೋ ಮನೆಗಳು, ಆದರ ಮೌಲಿಕರಿಗೆ ದಸ್ತುತು ಹಾಕಲು ಗೊತ್ತಿದ್ದ ಒಂದೇ ಕಾರಣದಿಂದ ಮಣ್ಣುಪಾಲಾಗಿ ಹೋಗಿದುವು.

ಸಹಕಾರಿಗಳಲ್ಲಿ ಸಾಲ ಕೊಡಲು ನಿರ್ಣಯಿಸುವ ಪಂಚಾಯಿತರ ಕ್ರಮವೂ ಬಹಳ ಕೆಟ್ಟದಕ್ಕೆ ಬಂದಿರುತ್ತದೆ. ಬೇಂಕುಗಳಲ್ಲಿ ಆದರೆ, ಡ್ಯಾರೆಕ್ಟರರನ್ನೂ, ಬೇಂಕಿನ ಇರುವಿಕೆಯನ್ನೇ ಮುಖ್ಯವಾಗಿ ಉದ್ದೇಶಿಸುವ ಶಾಲುದಾರರು ಜುನಾಯಿಸುವರು. ಸಹಕಾರಿ ಸಂಘಗಳ ಪಂಚಾಯ್ತಿನ ಜುನಾವಣೆಯು ಶಾಲುದಾರರಿಂದಲೇ ನಡೆಯುವುದಾದರೂ, ಈ ಶಾಲುದಾರರು ಸಾಲಗಾರರೇ ಆಗಿರುವುದರಿಂದ ಪಂಚಾಯಿತ ಜುನಾವಣೆಯು ದೀರ್ಘ ಉದ್ದೇಶದಿಂದ ನಡೆಸಲ್ಪಡುತ್ತದೆ.

ಸಾಲವನ್ನು ಯಾವ ಯಾವ ಉದ್ದೇಶಗಳಿಗಾಗಿ ಕೊಡ ಬಹುದೆಂಬುದರ ವಿಷಯದಲ್ಲಿ, ಮತ್ತು ಯಾವ ರೀತಿಯಲ್ಲಿ ಕೊಡಬಹುದೆಂಬುದಕ್ಕೆ ಸರಿಯಾದ ಸೂತ್ರಗಳನ್ನು ರಚಿಸಿ ಇಡುವುದು ಒಳ್ಳೆಯದು. ಅಲ್ಲದೆ ಸಾಲಗಳನ್ನು ಕೊಡುವ ಪಂಚಾಯ್ತರ ಮೇಲೆ ಸಾಲವನ್ನು ವಾಪಾಸು ಪಡಕೊಳ್ಳುವ ಜವಾಬ್ದಾರಿಯನ್ನು ಸ್ವಲ್ಪ ಮಟ್ಟಿಗೆ ಹೊರಿಸುವುದೂ ಅವಶ್ಯಕ. ಅಲ್ಲದೆ ಸಂಘಗಳ ಕಾರ್ಯದರ್ಶಿಗಳು ಪ್ರತಿ ಏಟ್ಟರೂ ಸಂಬಳ ಪಡಕೊಳ್ಳುವವರಾಗಿದ್ದು, ಅವರನ್ನು ಸರಕಾರವೇ ನೇಮಕ ಮಾಡಿ, ಕಾರ್ಯದರ್ಶಿಗಳನ್ನು ಪ್ರಾಂತಿಕ ಸರಕಾರಿ ನೌಕರರಾಗಿ ಮಾಡುವುದೂ ಅಗತ್ಯವಿದೆ.

ಸಂಘಗಳು ಸಾಲ ಕೊಡುವ ತೆಲುಸವನ್ನೆಲ್ಲದೆ ಇನ್ನೇನನ್ನೂ ಮಾಡಿದ್ದು ಕಂಡುಬರುವುದಿಲ್ಲ. ಪ್ರತಿ ಬೆಳ್ಳೆಯಲ್ಲಿ ಕೃಷಿ ಇಲಾಖೆಯ ಬಗ್ಗೂ ಕೈಗಾರಿಕೆಯ ಬಗ್ಗೂ ಸರಕಾರಿ ನೌಕರರಿದ್ದಾರೆ. ಇವರನ್ನು ಆಯಾ ಸಂಘಗಳು ಆಯಾ ಕಡೆಗಳಲ್ಲಿ ಜನತೆಯ ಸಂಪರ್ಕದಲ್ಲಿ ತಂದು ಕೃಷಿಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು. ಅಲ್ಲದೆ ಕೃಷಿ ಉತ್ಪತ್ತಿಗಳ ಮಾರಾಟದ ವಿಷಯದಲ್ಲಿಯೂ ಹೆಚ್ಚಿನ ಮೆಹನತ್ತನ್ನು ಪಡಕೊಳ್ಳಬಹುದು. ಮಾರಾಟದಲ್ಲಿ ಹೆಚ್ಚಿನ ಶ್ರಮ ವಹಿಸಿದರೆ ಕೊಟ್ಟ ಸಾಲಗಳನ್ನು ಹಿಂದೆ ಪಡಕೊಳ್ಳಲಿಕ್ಕೂ ಸುಲಭವಾಗುವುದು.

ಇತ್ತೀಚೆಗೆ ಜಮೀನು ಅಡಮಾನದ ಸಂಘಗಳನ್ನು ಸ್ಥಾಪಿಸುವ ಪ್ರಯತ್ನಗಳೂ ನಡೆಯುತ್ತಿವೆ. ಜಮೀನು ಅಡಮಾನಕ್ಕೆ ೧೫—೨೦ ವರ್ಷಗಳಿಗಿಂತ ಕಡಿಮೆಯ ಅವಧಿ ಇರದೆ, ಶೇಕಡಾ ೬ಕ್ಕೊತ ಬಡ್ಡಿಯು ಹೆಚ್ಚು ಇರದೆ ನಡೆಸಲು ಸಾಧ್ಯವಾದರೆ ಹೆಚ್ಚಿನ ಪ್ರಯೋಜನವಿರಬಹುದು. ಇಲ್ಲಿಯೂ ವರ್ಷ ವರ್ಷದ ಅಸಲು ಬಡ್ಡಿಗಳನ್ನು ತಕ್ಕ ಸಮಯದಲ್ಲಿ ವಸೂಲು ಮಾಡಲು ಸ್ಥಿರವಾದ ಯೋಜನೆಯನ್ನು ಮಾಡದಿದ್ದರೆ ಈ ಜಮೀನು ಅಡಮಾನದ ಸಂಘಗಳು ಈಗಿನ ಸಂಘಗಳಂತೆ ಹಾನಿಕರವಾಗಿ ಪರಿಣಮಿಸುವುವು.

+ + + +

Stop-Press.

ಡರ್ಬನಿನ ಕಳಿಯಾವಾಡಿಗಳು ಮಹಾತ್ಮರ ಹೆಸರಿನಲ್ಲಿ ೧೦೦೦ ರೂಪಾಯಿಗಳನ್ನು ಕಳುಹಿಸಿ ಹರಿಜನ ಸೇವೆಗಾಗಿ ಉಪಯೋಗಿಸಿರೆಂದಿರುವರು.

ಜಪಾನಿನಿಂದ ಗಾಂಧಿಜೀಯವರಿಗೆ ಕಂತಿ ಪಿಡುತ್ತಾ ಒರಿಯಂಟಲ್ ಲೈಟ್ ಲೀಗಿನ ಸದಸ್ಯರು "ನಿಮ್ಮ ಆತ್ಮತ್ಯಾಗವನ್ನು ಕಂಡು ಆಶ್ಚರ್ಯ ಚಕಿತರಾಗಿದ್ದೇವೆ. ಬಾಳಿ—ಬಿಡುಕಿ. ಹಿಂದೂ ಮಾತೆ ಪತಿಯನ್ನು ಮೂನವ ಕುಟುಂಬದ ಸಲುವಾಗಿ ಬಳಿದುಂಬಿ" ಎಂದಿರುವರು.

ಮಹಾತ್ಮರು ಆಗ ಪೌಂಡುಗಳಿರುವರು. ೩೧ ದಿನಗಳಲ್ಲಿ ೩೧ ಪೌಂಡುಗಳನ್ನು ಕಳಿಸುಕೊಡಬೇಕೆಂಬ ಲೆಖ್ಖವಿದೆ.

ಕರಾಚಿಯ ಹರಿಜನ ಕೈಗಾರಿಕೆಯ ಶಾಲೆಗಾಗಿ ಸೇಠ್ ರಾಮು ಗೋಪಾಲ ಮೋಹಟ್ಟಾ ಎಂಬವರು ಅರ್ಧ ಲಕ್ಷ ರೂಪಾಯಿಗಳನ್ನೂ ಇದ್ದಲ್ಲದೆ, ವರ್ಷ ವರ್ಷ ಈ ಕೈಗಾರಿಕೆ ಶಾಲೆಗಳಿಗೆ ಇನ್ನೂ ಹೆಚ್ಚಿನ ಸಹಾಯ ಮಾಡುವೆನಾಗಿಯೂ ವಾಗ್ದಾನ ಮಾಡಿರುವರು.

— ಒಂಸ್ಕಾದ ಕುಜಂಗೆ ಎಂಬಲ್ಲಿ ಸುಪ್ರಸಿದ್ಧ ದೇವಸ್ಥಾನವು, ಗಾಂಧಿಯವರ ಉಪವಾಸಾಂತ್ಯದ ದಿನವೇ ಹರಿಜನರಿಗಾಗಿ ತೆರೆಯಲ್ಪಟ್ಟಿರುವುದು.

ಗಾಂಧಿಜೀಯವರು ಕಾಯದೆಳಿಂಗ ಚಳವಳವನ್ನು ನಿಲ್ಲಿಸಿದುದು ಬಹಳ ಶೆಯಸ್ಕರ ವರ್ತನೆಯೆಂದೂ, ಸರಕಾರವು ಈ ಸಂಘರ್ಷವನ್ನು ಕಳೆದುಕೊಳ್ಳಬಾರದೆಂದೂ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಹೇಳಿಕೆ

ಜರ್ಮನಿಯಲ್ಲಿ ತಾವು ಅತಿಶಂತದ ಮತಸ್ಥರೆಂದು ಹೇಳಿಕೊಳ್ಳುವವರ ಮೇಲೆಲ್ಲ ತೆಗೆ ಹೊರಿಸುತ್ತಿರುವರು. ಹಿಂದೂಸ್ಥಾನದಲ್ಲಿ ಆ ರೀತಿ ಮಾಡಿದರೆ ಜಾತಿಭೇದಗಳು ಹೋಗಬಹುದೆಂದು ಒಂದು ಪತ್ರಿಕೆಯೆನ್ನುತ್ತಿದೆ.

—ಜೈಂಟ್ ಸಿಲೆಕ್ಟ್ ಕಮಿಟಿಗೆ ಲಂಡನಿಗೆ ಹೋದ ಸಭ್ಯರುಗಳ ಪರ ಒಂದೀಯರ ಸಮಾವಾವವನ್ನು ಸರಿಯಾಗಿ ಶೇಕರಿಸಲಾರದಾದರೂ ಇಷ್ಟರ ತನಕದ ಸ್ಥಿತಿಗತಿಗಳನ್ನು ಕಾಣುವಾಗ ಅವರ ಬಾದವೆಲ್ಲ ವೀರ ಮೇರಿನ ಹೋಗುವಂತಾಯಿತೆಂದೂ ತೋರುತ್ತದೆ.

—ನಾಗಪುರದ ಭಗುಬಾನ್ ದೇವಸ್ಥಾನವು ೭ ಬಾಗಿಲುಗಳೂ ಹರಿಜನ ಪ್ರವೇಶಕ್ಕೆ ತೆರೆಯಲ್ಪಟ್ಟಿರುವುದು.

+ + + +

ಒಳದೇಶ ವರ್ತಮಾನ

—ಮುಂಬಯಿ ಪ್ರೊವಿನ್ಸಿಯಲ್ ಕಾರ್ಯಸಮಿತಿ ಮುಂದಿನದಲ್ಲಿ ೨೦೦—೩—೨೬ನೇ ಆದಿತ್ಯವಾರ ದೆಳಗ್ಗೆ ೯ ಗಂಟೆಗೆ ಶ್ರೀ ವಿ. ಸತ್ಯಮೂರ್ತಿಯವರ ಸಿಭಾಧ್ಯಕ್ಷತೆಯಲ್ಲಿ ವಿಶೇಷ ಸಭೆಯೊಂದು ನಡೆಯಲಿದೆ. ಈ ಸಭೆಯಲ್ಲಿ ಮುಂಬಯಿ ಪ್ರೊವಿನ್ಸಿಯ ಕಾಂಗ್ರೆಸ್ ಕಮಿಟಿಯ ಸದಸ್ಯರು ಹಾಜರಾಗಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಎಸ್. ಆರ್. ಕಾರ್ಯ ಮತ್ತು ಶ್ರೀ ಎಸ್. ಕೆ. ಪಾಟೀಲರವರು ತಿಳಿಸಿರುವರು.

—ಸರ್ವಾಧಿಕಾರಿಯವರ ಆದೇಶದಂತೆ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ಇಂದು ಸಂಜೆ ೫ ಗಂಟೆಗೆ ಸರಿಯಾಗಿ ಕಾಂಗ್ರೆಸ್ ಕಛೇರಿಯಲ್ಲಿ ಸೇರಲಿದೆ. ಈ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ಹಾಜರಾಗಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಎಸ್. ಕೆ. ಪಾಟೀಲರವರು ತಿಳಿಸಿರುವರು.

—ಗರ್ಜಾಲಿನಲ್ಲಿನ ಧರ್ಮನಾಥ ದೇವಸ್ಥಾನವನ್ನು ೨೫,೦೦೦ ಜನ ಸಮೂಹದ ಸಮಕ್ಷದು ಸಾರ್ವಜನಿಕ ಆರಾಧನೆಗಾಗಿ ತೆರೆಯಲಾಯಿತು.

—ಹಿಂಸಾಚಾರಕ್ಕೆಗಳ ಪ್ರೋತ್ಸಾಹನೆಗೆ ಲೇಖಕ ಮುಖಾಲ ಪ್ರೇಮಚಂದ್ ವಿತ್ತಿತ್ರೆಂಬ ಆಪಾದನೆಗೆ ಒಳಗಾಗಿ ಲಖ್ನೌದ "ವಿದ್ಯಾಪಿತ್ ಪ್ರೇಮ" ಹಿಂದೀ ರಾಷ್ಟ್ರೀಯ ವಾರಪತ್ರಿಕೆಯು ೧೦೦೦ ರೂಪ್ಯಾ ಭದ್ರತಾಹಣವನ್ನು ೧೦೦ ರೂಪ್ಯಾಯು ಸರಕಾರದ ಕೈಯನ್ನು ಸೇರಿತು.

— ಪೂನಾ ನಗರದಲ್ಲಿ ಪೋಲೀಸ ಪಡೆ ನಡೆದು ೧೪ ಮಂದಿ ಬಂಗಾಳೀ ಯುವಕರು ಬೊಂಬು ತಯಾರಿಯು ಬಾಳೆ ಕಲಿಯುತ್ತಿದ್ದ ಕಾರ್ಖಾನೆಯೊಂದು ಗೋಚರವಾಯಿತು.

— ಅನಾವಶ್ಯಕ ಸಂಬಳ ಕಡಿಮೆ ಮಾಡುವ ವಿಚ್ಚಾರಗಳನ್ನು ಕೊಂಗ್ರೆಸ್ಸಿನ ಅಧ್ಯಕ್ಷರು ವಿದೇಶಿಯೆಂದು ಪರಿಗಣಿಸದೇಕೆಂದು ನಾಗ್ಪುರ ಟೆಕ್ಸ್‌ಟೈಲ್ ಯೂನಿಯನಿನಲ್ಲಿ ಅಧ್ಯಕ್ಷತೆಯ ವಹಿಸಿದ ಶ್ರೀ. ಆರ್. ಎಸ್. ರುಯಿಕರರೆಂದರು.

—ನನ್ನ ಚಕ್ರವರ್ತಿಯವರಾದ ಏಡನೇ ಜೋರ್ಜರಿಗೆ ನಾಳೆಯ ದಿನ ೬೦ ವರ್ಷ ಪ್ರಾಯವಾಗುವುದು. ಮಹಾತ್ಮರಿಗೆ ಇದೇ ಬರುವ ಅಕ್ಟೋಬರಲ್ಲಿ ೭೪ ವರ್ಷ ವಯಸ್ಸಾಗುವುದು.

ಮಧುರೆಯಲ್ಲಿ ಲಕ್ಷ್ಮಿ ಎಂಬವರು ಮಗುವನ್ನು ಹೆತ್ತು ತಾವ ಬಾವಿಗೆ ಬಿದ್ದು ಸತ್ತಳು. ರಾತ್ರಿಯಲ್ಲಿ ಇದನ್ನು ಕಂಡ ನಾಯಿಯು ಬೆಳ್ಗೆ ಪಾನಿಯವರನ್ನು ಬಾವಿಯ ಕಡೆ ಬೊಗಳ ಕರೆದು ತೋರಿಸಿದ ಶವವನ್ನು ತೋರಿಸಿತು.

ಲಂಡಿಯಾನಾ ಜಿಲ್ಲೆಯಲ್ಲಿ ಒಬ್ಬ ಪುಣ್ಯಾತ್ಮನನ್ನು ನೆರೆಹಿಡಿದು ನೋಡುತ್ತಾರೇನನ್ನು? ಅವನ ಇಬಾರು ಕಿಶೆಯಲ್ಲಿ ಒಂದು ಉದ್ದದ ರಿವಾಲ್ವರ್! ಇವನನ್ನು ಹಿಡಿಯಬೇಕೆಂದು ಸರಕಾರವು ಆನಾಮು ಪ್ರಕಟಿಸಿತ್ತು. ಈಗ ಇವನೇ ದೊರೆತಂತಾಯಿತು.

ಅಲ್ಲಹಾಬಾದಿನ ಕೋರ್ಟಿನಲ್ಲಿ ಮಹಮ್ಮದ್ ಹುಸೇನ್ ಎಂಬವರು "ಕೋರ್ಟಿನ ಕೋಚಿಯು ಸತ್ತಿದ್ದು, ಗಾಳಿಯಿಲ್ಲ, ಜನ ತುಂಬಿ, ಸೆಕೆ! ಬ್ಲೇಕ್ ಹೋಲ್ ಒಳ್ ಕಲ್ಕತ್ತದ ಹಾಗೆ ಈ ಕೋಚಿ!" ಎಂದೆನ್ನುತ್ತಾ ಕೋರ್ಟಿನ ಹೊರಗೆ ನಡೆದರು.

ಅಲ್ವಾರ್ ಮಹಾರಾಜರು ಸಿಂಹಾಸನದಿಂದ ಕೆಳಗಿಳಿದು ಆಟೂ ಪರ್ವತದ ಮಾರ್ಗವಾಗಿ ಯೂರೋಪಿಗೆ ತೆರಳುವರು. ಎರಡು ವರ್ಷಗಳ ತನಕ ಅವರು ಹಿಂದಿರುಗುವುದಿಲ್ಲ.

ತ್ರಿವೆಂದ್ರಮಿನಲ್ಲಿ ನೆರೆ ಬಂದು ೪೦೦೦ ಮನೆಗಳನ್ನೂ ಅನೇಕ ದನಕರು ಜನರನ್ನೂ ಕೊಚ್ಚಿ ಕೊಂಡು ಹೋಯಿತು.

ಅಂಬಾಲದ ರೈ ಬಹದೂರ್ ಬನಾರಸಿ ದಾಸರೆಂಬವರು ತನ್ನ ೬ ಲಕ್ಷ ರೂಪಾಯಿ ಬೆಲೆ ಭಾಳುವ ಸೊತ್ತನ್ನು ಹಿಂದೂ ಸಮಾಜ ಕಾರ್ಯಕ್ಕೆ ಧಾರೆಯೆರೆದರಾಗಿ ಸಂತೋಷದ ಸುದ್ದಿ.

ಕರ್ನಾಟಕ ಪ್ರಾಂತಿಕ ಸರ್ವಾಧಿಕಾರಿಗಳಿಗೆ ಹುರಂಗವಾಸ ಮತ್ತು ಜುಲ್ಮಾನೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ೧೦ನೇ ಸರ್ವಾಧಿಕಾರಿಗಳಾದ ಶ್ರೀ ಶಿವಬಸಪ್ಪ ಬೆಟಗೇರಿ, B. A., L. L. B., ವಕೀಲರ್ ಧಾರವಾಡ ಇವರನ್ನು ಕಳೆದ ತಿಂಗಳ ೧೫ನೇ ತಾರೀಕಿಗೆ ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಕೆಲವು ಕಾಗದ ಪತ್ರಗಳೊಡನೆ ದಸ್ತಗಿರಿಮಾಡಿ ಒಂದು ವರ್ಷದ ಸಶ್ರಮ ತಿಕ್ಷೆಗೂ ರೂ. ೪೦೦೦ ಜುಲ್ಮಾನೆಗೂ ಒಳಪಡಿಸಿದರು. ಶ್ರೀ ವಕೀಲರು ಶ್ರೀ ತಿಲಕರು ರುದ್ರಪ್ಪ ಕೆಟ್ಟಿ ಬಿ. ಎ. ಜೆ. ಇವರನ್ನು ತನ್ನ ನಂತರ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯ ೧೧ನೇ ಸರ್ವಾಧಿಕಾರಿತ್ವಕ್ಕೆ ನೇಮಿಸಿರುವರೆಂದು ತಿಳಿಯಲಾಗಿದೆ.

ಶುದ್ಧಿ ಸಮಾಚಾರ.

ಮುಮರೆಯಲ್ಲಿ ೧೫೦ ಮಂದಿ ಕ್ರೈಸ್ತರನ್ನು ಶುದ್ಧಿಗೊಳಿಸಲಾಗಿದೆ.

ಆಗ್ರಾ ಜಿಲ್ಲೆಯಲ್ಲಿ ೧೬ ಮಂದಿ ಇದ್ದ ಒಂದು ಮಹಮ್ಮದೀಯ ಕುಟುಂಬವು ಶುದ್ಧಿಗೊಳಿಸಲ್ಪಟ್ಟಿತು.

ಮದ್ರಾಸು ಆರ್ಯ ಸಮಾಜದಲ್ಲಿ ಕ್ರೈಸ್ತ ಮಹಿಳೆ ಮತ್ತು ಒಬ್ಬ ಡಾಕ್ಟರರು ಶುದ್ಧಿಗೊಳಿಸಲ್ಪಟ್ಟರು.

ನೈತಾಮ್ ರಾಜ್ಯದ ದಾಳೂರ ಎಂಬಲ್ಲಿಯ ಆರ್ಯ ಸಮಾಜ ಒಬ್ಬ ಮಹಮ್ಮದೀಯರನ್ನು ಶುದ್ಧಿಗೊಳಿಸಲಾಯಿತು.

ಬರಿಯಾ ತಾಲೂಕಿನ ಆರ್ಯ ಸಮಾಜದವರು ಮಹಮ್ಮದೀಯ ಮುಕ್ಕೆ ಸೇರಿದ ಇಬ್ಬರು ಕ್ರೈಸ್ತರಿಯ ಯುವಕರನ್ನು ಶುದ್ಧಿಗೊಳಿಸಲಾಯಿತು.

+ + + +

ದಕ್ಷಿಣ ಕನ್ನಡ.

ಮಂಗಳೂರು:—ನೀಲಂಬರು ಶಿವಜಿನನ ದಿಷ್ಟಿ ಕಸ್ಟೊ ಪೋರ್ಟರ್ ಲಿಫ್ ಫ್ರೊಸ್ಟ್‌ರಾವ ಮಿ। ಎ. ಸಿ ಸ್ಮಿತಿಕರವರು ಮಿ। ಎಮ್. ಮಿ. ಲೋಬೆರಿಯವರ ಸ್ಥಾನದಲ್ಲಿ ಮಂಗಳೂರು ಸೊರ್ಕ್ ಶಿವಜಿನ ದಿಸ್ಟ್ರಿಕ್ಟ್ ಫೊರೆಸ್ಟ್ ಆಫೀಸರರಾಗಿ ನೇಮಕ ಹೊಂದಿರುವರು.

ಶ್ರೀ ಸಾಲೆತ್ತೂರು ಅನ್ಯತರಾಯರು ಇಲ್ಲಿಯ ಬೆಂಚ್ ಕೋರ್ಟ್ ಸಬ್ ಜಡ್ಜ್ ಸ್ಮಿಕ್ಷರ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಸ್ಥಮ್ಮ ಜಿಲ್ಲೆಯ ಹರಿಜನರಲ್ಲಿ ಮೊದಲನೆಯವರಾಗಿ, ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದ ರಾ। ಟಿ. ಕೃಷ್ಣನವರನ್ನು ಅಭಿನಂದಿಸುವ ಬಗ್ಗೆ ಇಲ್ಲಿಯ ನಾಗರಿಕರ ಮಹಾ ಸಭೆಯೊಂದು ಜಿಲ್ಲಾ ಹರಿಜನ ಸೇವಾ ಸಂಘದ ವತಿಯಿಂದ ಉರ್ವಾಲ ರಘುನಾಥ ಮೆನೋರಿಯಲ್ ಹೋಲಿನಲ್ಲಿ ಕಳೆದ ರವಿವಾರ ಸಾಯಂಕಾಲ ಘಂಟೆ ೬ಕ್ಕೆ ಜರಗಿಸುವುದೆಂಯ ನಿಶ್ಚಯಿಸಿದ್ದು, ಮಳೆಯ ದೆಸೆಯಿಂದ ಬರುವ ತಾ. ೪—೬—೩೩ನೇ ರವಿವಾರಕ್ಕೆ ಮುಂದರಿಸಿದಲಾಗಿದೆಯೆಂದೂ, ಪ್ಲಾಟರೆರ ಲೇನ್‌ನಲ್ಲಿರುವ ತನ್ನ ಮನೆಯಲ್ಲಿ ತೊರಗರ ವರ್ಕ್‌ಶೋಪ್ ಒಂದನ್ನು ತೆರೆಯಲಾಗಿದೆಯಾಗಿಯೂ, ಶೂಸ್ಕೆ, ಬೆತ್ತದ ಸಾಮಾನುಗಳಿಗು ಬೇಕಾದವರು ಕನ್ನೆಡಸಿ ಆರ್ಡರು ಕೊಡ ಬೇಕಾಗಿಯೂ ಹರಿಜನ ಸೇವಾ ಸಂಘದ ಸೆಕ್ರೆಟರಿಯರಾದ ಶ್ರೀ ಎಸ್ ರಾಮಚಂದ್ರ ಐಯ್ಯರರು ತಿಳಿಸುತ್ತಾರೆ.

ಹಾಸು ವಿದ್ಯೆಯಲ್ಲಿ ವಿಖ್ಯಾತರಾದ ಬಂಗಾಳದ ಶ್ರೀಯುತ ಎಸ್ ಅಲ್ಲಿಪಿಯನ್ ಬಾಸುಗಳವರು ಇಲ್ಲಿಗೆ ಬಂದಿದ್ದು, ತಮ್ಮ ವಿದ್ಯಾಪ್ರಾವೀಣ್ಯದ ಅಟಿಗಳ ಪ್ರದರ್ಶನ ನಡೆಸಲಿರುವರು.

ನಮ್ಮ ಜಿಲ್ಲೆಯವರಾದ ದಿವಾನ್ ಬಹದ್ದೂರ್ ಎಸ್. ಎಲ್ ಮಹಾಯಸ್ ಇವರು ಸ್ಟೌಟ್ ಇಂಡಿಯನ್ ಟ್ರೇಸ್ ಕಮಿಟಿಯ ಸದಸ್ಯರಾಗಿ ನೇಮಕಹೊಂದಿರುವರೆಂದು ತಿಳಿದು ಬರುತ್ತದೆ.

ಈಶ್ವರಾನಂದ ಮಹಿಳಾ ಸೇವಾಶ್ರಮದವರು, ಅಶ್ರಮದ ಹಿಂದಿನ ಕಟ್ಟೋಣವನ್ನು ಬಾಡಿಗೆಗೆ ಪಡೆದು, ಅದರಲ್ಲಿ ಹೆರಿಗೆಯ ವಾರ್ಡನ್ನು ಕಳೆದ ರವಿವಾರದಿಂದಾರಂಭಿಸಿರುವರೆಂದು ತಿಳಿದು ಬರುತ್ತದೆ.

ಉಡುಪಿಯ ಬೋರ್ಡು ಹೈಸ್ಕೂಲಿನಲ್ಲಿ ಈಗ್ಗೆ ಎರಡು ವರ್ಷ ಗಳಿಂದ ಮುಚ್ಚಲ್ಪಟ್ಟಿದ್ದ ಕೆಮಿಸ್ಟ್ರಿ ಸೆಕ್ಷನ್ನನ್ನು ಪುನರಾರಂಭಿಸಿರುವರಾಗಿ ತಿಳಿದು ಸಂತೋಷಗೊಳ್ಳುತ್ತೇವೆ.

ಮಹಾತ್ಮರು ಉಪವಾಸ ದೀಕ್ಷೆಯಲ್ಲಿ ಯಶಸ್ವಿಗಳಾದ ಸಂತೋಷ ಕ್ಕಾಗಿ ಕೆಳದ ತಿಂಗಳ ತಾ. ೩೧ನೇ ಸೋಮವಾರ ಸಾಯಂಕಾಲದಲ್ಲಿಯೂ ಮೈದಾನಿನಲ್ಲಿ ಸಾರ್ವಜನಿಕ ಸಭೆಯಾಗಿ ಮಿ। ರಾ। ವಕೀಲ್ ಪಾಧವ ರಾಯರೂ, ಶ್ರೀ ಪುಲೇಚತ್ತಾಯರೂ ಭಾಷಣಮಾಡಿ ಶ್ರೇಯಃ ಪ್ರಾರ್ಥನೆ ಗಳನ್ನು ನಡೆಸಿದರು ಈ ಸಂದರ್ಭದಲ್ಲಿ ಹರಿಜನ ಸಂಘದ ಕಾರ್ಯ ದರ್ಶಿಯಾದ ಸ್ವಾಂ' ಎಲೋಸಿಯಸ್ ಕಾಲೇಜಿನ ಗಣಿತಾಚಾರ್ಯ ಶ್ರೀ ರಾಮಚಂದ್ರ ಅಯ್ಯರವರು ವಹಿಸಿಕೊಂಡ ಪ್ರಮತ್ನವು ಸ್ತುತ್ಯ ವಾಗಿದೆ.

ಬದವರ ಬಂಧುವಿನ ವರ್ಷೋತ್ಸವವು ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಇದೇ ತಾ ೪ ನೇ ಆದಿತ್ಯವಾರ ಜರಗಬೇಕೆಂದು ಬಗೆಯಲ್ಪಟ್ಟ ದ್ದರೂ, ವಿಶೇಷ ಸಂಚಿಕೆಯು ಅಚ್ಚಾಗಲು ಕೆಲವು ಅನಿವಾರ್ಯ ಮುದ್ರಣ ಕಾರಣಗಳು ಬಂದೊದಗಿದುದರಿಂದ ಉತ್ಸವ ದಿನವು ಅಸ್ಥಿತ ದಿನಕ್ಕೆ ಹಿಂದಕ್ಕಿರಿಸಲ್ಪಟ್ಟಿದೆಯಾಗಿ ಸಾಮಾದಕರು ತಿಳಿಸುತ್ತಾರೆ

ಲಂಡನ್ನ ಲೈನ್ಸ್ಂ ವಿಟ್ಟರ್ಸ್, ಎಸೋಸಿಯೇಶನಿನಲ್ಲಿ ಮುಂಬಾ ಯಿಯ ಮಾಜಿ ಗವರ್ನರರಾದ ಲೋರ್ಡ್ ಲೈಮಿಡರು "ಕೆಲವು ವರ್ಷಗಳಿಂದ ಹಿಂದುಸ್ಥಾನದಲ್ಲಿ 'ಆಗ್ಗೆ ದಿನಾಗೆ ಜಾದಿಯನ್ನು ಹಿಂಯಿದ ಮುಸ್ಲಿ ಪಾಲಿಟಿ ಇಲ್ಲ"ನೆಂದು ಹೇಳಿದ್ದಾಗಿ ತಿ—೩—೩೩ರ ಮದ್ರಾಸ್ ಪತ್ರಿಕೆ ಗಳಲ್ಲಿ ಪ್ರಕಟವಾಗಿದೆ ಎಂದು ಹಾಗೆ ಅವರು ಹೇಳಿರುವುದಾದರೆ ಅದು ಬರೀ ಸುಳ್ಳು ಸಂಗತಿಯೆಂದೂ, ಆರ್ಥಿಕ ದುಸ್ಥಿತಿ ಯಿದ್ದರೂ ಹಿಂದೂಸ್ಥಾನದ ಮುಸಲಿಪಾಲಿಟಿಗಳು ಬ್ರಿಟನ್ ಅಮೇರಿಕಾ ಗಳ ಮುಸಲಿಪಾಲಿಟಿಗಳಿಗಿಂತ ಉತ್ತರು ರೀತಿಯಿಂದ ಕೃಷ್ಟಿ ಸಾಹಸ ಜಾಗ್ರತೆಗಳಿಂದ ನಡೆಸಲ್ಪಡುತ್ತಿವೆಂದೂ, ಅಂತಹ ಅಪವಾದವನ್ನು ಹಿಂತೆಗೆ ಯಬೇಕೆಂದೂ ನಮ್ಮ ಮುಸಲಿಪಾಲಿಟಿಯ ಲೀಡರ್‌ಮೆನ್ ಮತ್ತು ನೈಸ್ ಲೀಡರ್‌ಮೆನರವರು ಲೋರ್ಡ್ ಲೈಮಿಡರಿಗೆ, ಲಂಡನ್ನಿಗೆ ಬರೆದುಕೊಂಡಿರು ತ್ತಾರೆ.

ಹೊಸದುರ್ಗ—ಕಳೆದ ತಾ. ೧೪ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೨ ೧೯ಕ್ಕೆ ಇಲ್ಲಿಯ ಸಾಹುಕಾರ ದಾಮೋದರ ಪೈ ಗಳವರ ಮೂಳಿಗೆಯಲ್ಲಿ ಜೋಗಳಕೆರೆಂದ ಬಂದಿದ್ದ ಶ್ರೀಮಾನ್ ಪಂಡಿತ ಧರ್ಮ ದೇವ ವಿದ್ಯಾವಾಚಸ್ಪತಿಗಳ ಮತ್ತು ಲಕ್ಷ್ಮಣ ದೇವ ವಿದ್ಯಾರ್ಥಿ ಗಳ ಪೌರೋಹಿತ್ಯದಲ್ಲಿ ಪವನ ಇತ್ಯಾದಿಗಳು ನೆರವೇರಿ ಇಲ್ಲಿ ಒಂದು ಆರ್ಯ ಸಮಾಜವು ಸ್ಥಾಪಿಸಲ್ಪಟ್ಟಿತು ಆಗಲೇ ೧೫ ಮಂದಿ ಉತ್ಸಾಹೀ ಸದಸ್ಯರು ಸೇರಿದರು ಈ ಸಮಾಜಕ್ಕೆ ಜಾ। ಗುಲ್ಜಾಡಿ ಕೃಷ್ಣ ರಾಯರು ಅಧ್ಯಕ್ಷರಾಗಿಯೂ, ಕೆ. ರಾಮಚಂದ್ರನಾಯ್ಕರು ಮತ್ತು ಪಿ. ಭೀಷ್ಮಾಚಾರ್ಯರು ವಿದ್ಯಾರ್ಥಿಗಳೂ ಜತೆಕಾರ್ಯದರ್ಶಿಗಳಾಗಿಯೂ ಇತರ ಕೆಲವು ಮಂದಿ ಸದಸ್ಯರು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿಯೂ ಸೇರಿರುವರು

ಸುರತಕಲ್—(ಕಬ್ಬುಪಡಿ) ತಾ. ೧೮—೫—೩೩ರಲ್ಲಿ ಇ ವಿ. ಶಾಲೆಯಲ್ಲಿ ಕೂಡಿದ ಹಿಂದೂ ವಿದ್ಯಾರ್ಥಿಯೀ ಸಂಘದ ಆಡಳಿತ ಸಭೆಯ ಪ್ರೊಸಿಡಿಂಗ್ಸ್‌ನ ಸಾರಾಂಶ " ಇದರಲ್ಲಿ "೧೯೩೧"ರ ಬದಲಾಗಿ "೧೯೩೩" ಎಂದೂ, "ಅಧ್ಯಕ್ಷರು ಆವರ ಮಗ" ಎಂಬುದನ್ನು "ಅಧ್ಯಕ್ಷರು ವ ಆವರ ಮಗ" ಎಂದೂ, "ಅವರೆಂಬು" ಎಂಬುದನ್ನು "ಆವರದೆಂದು" ಎಂದೂ, ಓದಿಕೊಳ್ಳತಕ್ಕದ್ದು.

ಪೆರ್ಡಾಲ—ಮಹಾಜನ ಸಂಸ್ಕೃತ ಕಾಲೇಜ್ ತಾ ೨—೬—೩೩ಕ್ಕೆ ಸರಿಯಾಗಿ ರಜೆಯು ಮುಗಿದು ತೆರೆಯಲ್ಪಡುವುದು. ಇಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ "ಸಾಹಿತ್ಯ ಶಿರೋಮಣಿ" A ವಿದ್ವಾನ್ (ಕನ್ನಡ ಮತ್ತು ಸಂಸ್ಕೃತ) ಮತ್ತು B ವಿದ್ವಾನ್ (ಕನ್ನಡ ಪ್ರಧಾನ) ಪರೀಕ್ಷೆಗಳ ತಾಲೀಮು ನಡೆಯುವುದು. ಇಂಗ್ಲಿಷ್, ಗಣಿತ, ಭೂಗೋಳ ಮತ್ತು ಚರಿತ್ರೆ ಈ ವಿಷಯಗಳೂ ಅಭ್ಯಧಾನವಾಗಿ ಕಲಿಸಲ್ಪ ಡುವುವು. ಶಿಕ್ಷಣವು ಧರ್ಮಾರ್ಥ ಎಲ್ಲಾ ಜಾತಿಯವರಿಗೂ ಪ್ರವೇಶ ವಿದೆ. ವಿದ್ಯಾರ್ಥಿಗಳಿಗೆ ವಸತಿಗೆ ಬೇಕಾದ ವ್ಯವಸ್ಥೆಯೂ ಇರುವುದು. ಯೋಗ್ಯ ವಿದ್ಯಾರ್ಥಿಗಳಿಗೆ ಸರಕಾರದಿಂದ ವೇತನವು (Scholarship) ದೊರೆಯುತ್ತದೆ. ಕುಂಬಳೆಯಿಂದ ಪುತ್ತೂರಿಗೆ ಹೋಗುವ ರಸ್ತೆಯ ಬಳಿ ೭ ಮೈಲು ದೂರದಲ್ಲಿ ಆರೋಗ್ಯಕರವಾದ "ಸೀರ್ವಾ" ಎಂಬ ಸ್ಥಳದಲ್ಲಿ ಈ ವಿದ್ಯಾಸಂಸ್ಥೆಯು ಇರುವುದು. ಪುನೇಕವನ್ನು ಅಪೇಕ್ಷಿಸುವವರು "ಪ್ರಿನ್ಸಿಪಾಲ್"ರಿಗೆ ಬರೆದುಕೊಳ್ಳುವುದು, ಎಂದು ಆಲ್ಲಿನ ಅಧಿಕಾರಿಗಳು ತಿಳಿಸುತ್ತಾರೆ

ಉಡುಪಿ—ಇಲ್ಲಿಯ ಗಂಡಿಬೈಲಲ್ಲಿ ಶ್ರೀ ಗಜಾನನ ಯುವಕ ವ್ಯಾಯಾಮ ಮಂದಿರ ಎಂಬ ಶಾರೀರಕ ಶಿಕ್ಷಣ ಸಂಸ್ಥೆಯು ಇಲ್ಲಿಯ ಉತ್ಸಾಹೀ ಯುವಕರಿಂದ ಸ್ಥಾಪಿಸಲ್ಪಟ್ಟು ಕಳೆದ ಒಂದು ವರ್ಷ ದಿಂದ ತೃಪ್ತಿಕರವಾಗಿ ನಡೆಯುಬರುತ್ತಿದೆ. "ಶರೀರ ಮಾದ್ಯಂ ಖಲು ಧರ್ಮ ಸಾಧನಂ' ಎಂಬ ಪರಮತತ್ವವನ್ನು ಅನುಸರಿಸಿ ತೆರೆದಿರುವ ಈ ಸಂಸ್ಥೆಯು ಮತ್ತಷ್ಟು ಯಶಸ್ವಿಯಾಗಿ ತನ್ನ ಕಾರ್ಯಕಲಾಪವನ್ನು ನೆರ ವೇರಿಸುವುದಕ್ಕೆ ಸಾಹಿತ್ಯ ಸಲಕರಣೆಗಳು ಬೇಕಾಗಿವೆ. ಈ ಉದ್ದೇಶಕ್ಕೆ ತಕ್ಕಷ್ಟು ಧನಸಂಗ್ರಹ ಮಾಡಿಕೊಳ್ಳುವುದಕ್ಕಾಗಿ ಸಂಸ್ಥೆಯ ಕೆಲವು ಯುವ ಕರು ಸದ್ಯ ಉಡುಪಿಯಲ್ಲಿ ತಮ್ಮ ನಾಟಕಗಳನ್ನು ಆಡುತ್ತಲಿರುವರು ಕಾರ್ಕಳದ ಶ್ರೀ ಪೆಂಕಟರಮಣ 'ಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ "ಮೆಡಲಿಸ್ಟ್ ಕೊಮಡಿಯನ್ಸ್" ಶ್ರೀಯುತ ಯು. ವಿ. ಭಟ್ ಇವರಿಂದ ವಿರಚಿತವಾದ "ಕಲ್ಯಾಣೀಯ" ಎಂಬ ನಾಟಕವನ್ನು ಆಭಿನಯಿಸಲಿಕ್ಕಿರ ಪರು. ಸಂಚಯವಾಗುವ ದ್ರವ್ಯವು ಸದ್ವಿನಿಯೋಗವಾಗುವಂತೆ ಗುಂಡಿ ಬೈಲಲ್ಲಿರುವ ಈ ಸಂಸ್ಥೆಯ ಕಾರ್ಯದರ್ಶಿಗಳಾದ ಉಡುಪಿ ಶಿವಳ್ಳಿ ಪಟೇಲರು ರಾ. ಯು. ಪಿ. ಪ್ರಭಾಕರ ರಾಯರೇ ನೋಡಿಕೊಳ್ಳುವರು. ಆದುದರಿಂದ ದೇಶಹಿತೈಷಿಗಳಾದ ಸರ್ವರೂ ಉದಾರ ಬುದ್ಧಿಯಿಂದ ನಾಟಕದ ಟಕೇಟುಗಳನ್ನು ಪಡೆದುಕೊಂಡಾಗಲೀ ಯಥಾನುಶಕ್ತಿ ದ್ರವ್ಯ ಸಹಾಯವನ್ನು ಕಾರ್ಯದರ್ಶಿಯರಿಗೆ ಳಕುಟಿಸಿ ಕೊಟ್ಟಾಗಲೀ ಈ ಸೇವೆಗೂ ಪ್ರಥಮ ಸೋಪಾನ ಹಾಗೂ ಸಾಧನವಾದ ಈ ಶಾರೀರಕ ಶಿಕ್ಷಣ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ಮಹಾಜನರಲ್ಲಿ ಸಂಸ್ಥೆಯ ಯುವಕರೆಲ್ಲರ ಸವಿನಯ ಸಂಪ್ರಾರ್ಥನೆ ಇದೆ.

ಕಾರ್ಕಳ—

ಮಹಾತ್ಮಾ ಗಾಂಧಿಯವರು ಉಪವಾಸದ ಕಡೆ ದಿನವನ್ನು ಪೂರ್ತಿ ಗೊಳಿಸಿದ ತಾ. ೨೯ನೇ ಸೋಮವಾರ ದಿನ ಮಧ್ಯಾಹ್ನ ಸುಮಾರು ೪೦೦ ಜನ ಹರಿಜನರ ಸಭೆಯನ್ನು ನೇರಿಸಿ ಗಾಂಧಿಯವರ ಉಪವಾಸದ ಕುರಿತು ಮಾತನಾಡಿ ಹರಿಜನರಿಗೆ ಆವರಲ್ಲಿರುವ ಮಿಥ್ಯನಿವನ್ನು ಬಿಡುವಂತೆ ಭಾಷಣ ಕೊಟ್ಟ ತರುವಾಯ ಮಹಾಜನರ ಪ್ರಾರ್ಥನೆಯನ್ನು ಕೇಳಿ ಮಹಾತ್ಮರನ್ನು ಕಾಪಾಡಿದ್ದಕ್ಕಾಗಿ ದೇವರ ಉಪಕಾರಸ್ಮರಣೆಯನ್ನು ಮಾಡಿ ಶ್ರೀ ದೇವರು ಮಹಾತ್ಮಾ ಗಾಂಧಿಯವರಿಗೆ ದೀರ್ಘಾಯುಷ್ಯವನ್ನು ಕೊಡುವಂತೆ ಪ್ರಾರ್ಥಿಸೋಣವೆಂದು ಸೂಚಿಸಿದರು. ನಂತರ ಶ್ರೀ ಕೆ ರಮಣಾಳ ತಿನಯರ ಪ್ರಯತ್ನದಿಂದ ಮತ್ತು ಧರ್ಮಾಭಿಮಾನಿಗಳಾದ ಊರಿನ ಕೆಲವು ಮಂದಿ ಮಹಾನೀಯರ ಸಹಾಯದಿಂದ ಸುಮಾರು ೪೦೦—೫೦೦ ಹರಿಜನ ರಿಗೆ ಊಟ ಕೊಡಲ್ಪಟ್ಟು ತರುವಾಯ ಹಂಜನರಿಗೆ ಬೋಧಸ್ಪದವಾದ ಕೆಲವು ಮಾತುಗಳನ್ನು ಶ್ರೀಗಳಾದ ಜಾರ್ಕಳ ಸಾಗಣ್ಣ ಹೆಗ್ಗಡೆಯವರು ಮತ್ತು ಕೆ ನಂಕಯೀಶ ಪ್ರಭುಗಳು ಆಡಿದರು.

ನೋ ಟೀ ಸು.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್, ಉಡುಪಿ, ಲಿಮಿಟೆಡ್ ಮಂಗಳೂರು

ಇದೇ 1933ನೇ ಇಸವಿ ಮೇ ತಿಂಗಳ ತಾ 5ನೇ ಶುಕ್ರವಾರದ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಪ್ರಕಟಿಸಿರುವ ರಿಜಿಸ್ಟ್ರಿ ನೋಟೀಸು ದಿಟ್ಟಿ ಪ್ರಕಾರ ಈ ಕೆಳಗೆ ಹೆಸರು ಕಾಣಿಸಿದ ವರು ಅಡವಿಟ್ಟ ನಗದುಗಳನ್ನು 1933ನೇ ಇಸವಿ ಮೇ ತಿಂಗಳ ತಾ 27ನೇ ಶನಿವಾರ ಬ್ಯಾಂಕಿನ ಆಫೀಸಿನಲ್ಲಿ ಘಂಟೆ 10ರಿಂದ 2ರ ವರೆಗೆ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ವಿತ್ಯಾಜ್ಯಗಳನ್ನು ಬ್ಯಾಂಕಿಗೆ ಒಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿ, ಉಳಿದ ಬಿದ್ದಿನವನ್ನು ಸದ್ರಿಯವರ ಲೆಕ್ಕಕ್ಕೆ ಅವ ನತ್ತು ಇಟ್ಟುಬಿಡುವ ತ್ವರ್ಯದಲ್ಲೇ ಕೊಂಡುಹೋಗಬೇಕಾಗಿಯೂ, ಅದಕ್ಕು ಒಡ್ಡಿ ಸಿಕ್ಕಲ್ಲಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

1. ಸಾಲದ ನಂಬ್ರ J. L. 444/30 ಎಂ ಕೃಷ್ಣರಾವ್, S/o ನಾರಾಪ್ಪಯ್ಯ, ಇಂದುಬೆಟ್ಟು ಟಿಫ್ಲಿನ ರಾಮಭಾಗ, ಬೆಳ್ಳಂಗಡಿ ಪೋಸ್ಟು ವಲಂ ಮಾಡಿ ಹುಟ್ಟಿಬಂದ ಹಣ ರೂ 84. ಬೇಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ 52—1—0 ಅವಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ 31-14-4

2. ಸಾಲದ ನಂಬ್ರ J. L. 530/30, ಉಮ್ಮಾರಿ ಬ್ಯಾರಿ, S/o ಹುಸ್ಸನಬ್ಬಾರಿ. ಉಳ್ಳಾಲ, ವಲಂ ಮಾಡಿ ಹುಟ್ಟಿಬಂದ ಹಣ ರೂಪ್ಯಾ 120. ಬೇಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ 71-13-8. ಅವಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ 48—2—4.

3 ಸಾಲದ ನಂಬ್ರ J. L 656/31 ಉಗ್ರಾಣ ಅಡ್ಡಪ್ಪ, S/o ರಾಮಯ್ಯ, ಬಡಕೆರೆ ಗ್ರಾಮದ ಉಗ್ರಾಣ, ಗುರುಪುರ ಪೋಸ್ಟ್, ವಲಂ ಮಾಡಿ ಹುಟ್ಟಿ ಬಂದ ಹಣ ರೂ 108. ಬೇಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು 65—0—11. ಅವಮಾನತು ಲೆಕ್ಕಕ್ಕೆ ಇಟ್ಟ ಉಳಿದ ಹಣ ರೂ. 42—15—1.

Office of the Corporation, Mangalore, 31—5—1933. } K. Vittal Bhandary, Agent

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ)

ಅಖಿಲ ಕರ್ಣಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ಣಾಟಕದ ಗೌರವಕ್ಕೂ ಕರ್ಣಾಟಕಸ್ಥರ ಅಭಿಮಾನಕ್ಕೂ ಕಳ್ಯುದಾದ ಹಾಗೂ, ವಿಶ್ವಾಸನೀಯವಾದ ಅಧೂರಪೂರ್ವ ಸಂಸ್ಥೆ

ನಮ್ಮಲ್ಲಿ ಬ್ರಿಟಿಷ್ ಫಾರ್ಮಾ ಕೋಪಿಯಾ, ಬ್ರಿಟಿಷ್ ಫಾರ್ಮಸ್ಯೂಟಿಕಲ್ ಕೊಡೆಕ್ಸ್, ವ, ಪೊಪ್ಪತ್ರ ಟಿಂ ನಗೈರೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ಯೂಬೆಟ್ ದ್ರವ್ಯಗಳೂ, ಸ್ಪಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬನೆಯೆಯ ಸಾಬೂನುಗಳೂ, ಎಲ್ಲಾ ತರದ ಪೌಂಟಿನ್ ಪೆನ್ ಶಾಯಿಗಳೂ, ಆಯುರ್ವೇದಿಯ ಔಷಧಗಳೂ ಅನುಭವಸ್ಥರಾದ ರಸಾಯನ ಜ್ಞಸ್ಥಜ್ಞರಿಂದ ತಯ್ಯಾರಿಸಲ್ಪಡುವುವು.

ಶಾಸ್ತ್ರೋಕ್ತ ದ್ರವ್ಯಗಳೂ ಎಷ್ಟೊಂದು ಅಮೂಲ್ಯ ವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವು ಗಳನ್ನು ಸಂಗ್ರಹಿಸಿ, ತಾಸ್ತ್ರವಿಧಿಯಂತೆ ಅತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಗಳನ್ನು ತಯಾರಿಸುವೆವು ಆದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸ ಬೇಕಾಗಿ ವಿನಂತಿ ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಪ್ರಾಮುಖ್ಯ ಔಷಧಗಳು.

ಹೃದನಪ್ರಾಪ್ತ ಲೇಹ ಅಮೋಘವಾದ ಟಾನಿಕ್ಕು ಮತ್ತು ಕ್ಷಾಸಕೋಕದ ಎಲ್ಲಾ ವಿಕಾರಗಳಿಗೆ ದಿವ್ಯೌಷಧ. ೧ ಪೌಂಡು ಬಾಟ್ಲಿ ರೂ. 3. ೧೦ ಟ್ಲಿನ್ನು ಬಾಟ್ಲಿ ರೂ 2. ದ್ರಾಕ್ಷಾಸವ ಉತ್ತಮ ಟಾನಿಕ್ಕು, ಎ ಮೆದುಳಿಗೆ ಶಾಂತಿಕಾರಿಯಾಗಿಯೂ ಔಷಧಿ. ೧ ಪೌಂಡು ಬಾಟ್ಲಿಗೆ ರೂ. ೭

ಅಶ್ವಗಂಧಾರಿಷ್ಟ. ಅತ್ಯುತ್ಕೃಷ್ಟವಾದ ನರಗಳ ಹಾಗೂ, ಸಾಮಾನ್ಯ ಟಾನಿಕ್ಕು ೧ ಪೌಂಡ್ ಬಾಟ್ಲಿಗೆ ರೂ 3. ೪ ಟ್ಲಿನ್ನು ಬಾಟ್ಲಿಗೆ ರೂ. ೧—೧೦—೦. ಪ್ರಸೂತಿ ಸಂಜೀವನಿ. ಬಾಣಂತಿ ಯರಿಗೆ ೧೦ ದಿನಗಳ ತನಕ ಕೊಡುವ ಔಷಧ. ೧೦ ಟ್ಲಿನ್ನು ಬಾಟ್ಲಿಗೆ ರೂ. ೧—೮ ೦ ದಶಮೂಲರಿಷ್ಟ (ಕಸ್ತೂರಿ ಮಿಶ್ರಿತ) ಸ್ತ್ರೀಯರಿಗು ಪ್ರಸವಿಸಿದ ತರುವಾಯ ಕೊಡುವ ಪುಷ್ಟಿಕರ ಔಷಧ. ೧ ಪೌಂಡು ಬಾಟ್ಲಿಗೆ ೩—೬—೦, ೪ ಟ್ಲಿನ್ನು ಬಾಟ್ಲಿಗೆ ರೂ. ೧-೧೨—೦.

ಶ್ವಾಸ್ಥಿ ಕೆಮ್ಮಲ. ವಿದ್ಯಾರ್ಥಿಗಳಿಗೂ, ವಕೀಲರಿಗೂ, ಪಾದ್ರಿಗೂ, ಗುರುಪಾತ್ರರಿಗೂ, ಉಪಯುಕ್ತ ವಾದ ಬ್ಲೈನ್ ಬಾಣಾಲಿ ೪ ಟ್ಲಿನ್ನು ಬಾಟ್ಲಿಗೆ ಆಣೆ 14. ಹಿಮಸಾಗರ ತೈಲ ಕಲಿಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ ೪ ಟ್ಲಿನ್ನು ಬಾಟ್ಲಿಗೆ ರೂ 1—8—0 ನಾರಾಯಣ ತೈಲ ವಾತರೋಗಕ್ಕೆ ಪುಸಿದ್ಧವಾದ ತೈಲ. ೪ ಟ್ಲಿನ್ನು ಬಾಟ್ಲಿಗೆ ರೂ 1—6—0 ಕ್ಷೀರಬಲಾ ಪೆಲ್ಲ ವಾತ ಅರ್ದಾಂಗ ವಾ. ತ ಮುಂತಾದ ವಾತ ಕಾಂಬೆಗಳಲ್ಲಿ ಉಪಯೋಗಿಸುವ ದಿವ್ಯೌಷಧ ೩ನೇಯ ಅವರ್ತನೆ ೧ ಟ್ಲಿನ್ನಿಗೆ ರೂ 1 ೧ನೇಯ ಅವರ್ತನೆ ೧ ಟ್ಲಿನ್ನಿಗೆ ರೂ 1—೧೫ ೨ನೇ ಅವರ್ತನೆ ೧ ಟ್ಲಿನ್ನಿಗೆ ರೂ. ೨—8, ೪ನೇಯ ಅವರ್ತನೆ ೧ ಟ್ಲಿನ್ನಿಗೆ ರೂ 4) ೫ನೇ ಅವರ್ತನೆ ರೂ. 4—8 0, ೧೦ನೇ ಅವರ್ತನೆ ರೂ. ೮ ಧನ್ವಂತರಿ ತೈಲ. ಆವ.ವಾತ, ಆವ.ವಾತ ಸರ್ವಾಂಗವಾತಮುಂತಾದ ಕಾಂಬೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವುದೇ ವ ಮೈಗೆ ಹಚ್ಚುವ ದಿವ್ಯೌಷಧ. ೩ನೇಯ ಅವರ್ತನೆ ೧ ಟ್ಲಿನ್ನಿಗೆ ರೂ , ೧೪ನೇ ಅವರ್ತನೆ ೧ ಟ್ಲಿನ್ನಿಗೆ ರೂ. ೧— ೨, ೨೦ನೇ ಅವರ್ತನೆ ೧ ಟ್ಲಿನ್ನಿ

ಮಹಾತ್ಮರ ರಕ್ಷಣೆಗಾಗಿ ಜಗತ್ತಿನೆಲ್ಲೆಲ್ಲಾ ಆನಂದ!

ಪಂಡಿತ ಮಾಲವೀಯರ ಮೇಲೆ ವ್ಯಾಜ್ಯ!

ಸರಕಾರದ ಕರ್ತವ್ಯವೇನು? ಗಾಂಧೀಜಿಯವರ ಕಾರ್ಯಕ್ರಮವೇನು?

"Mahatmaji has the most logical mind in the world"—George Bernard Shaw.

ಮಹಾತ್ಮಾ ಗಾಂಧಿಯವರು ತಾ. ೯ನೇ ಮಧ್ಯಾಹ್ನ ಗಂ. ೨-೦೦ಕ್ಕೆ ತನ್ನ ಉಪವಾಸವನ್ನು ದಿಟ್ಟರೆಂಬ ವಾರ್ತೆಯನ್ನು ಕೇಳಿ ಇಡೀ ಜಗತ್ತಿನ ಅವರ ಮಿತ್ರರು ಅತ್ಯಾನಂದಭರಿತರಾಗಿರುವರು. ಈ ಆನಂದಕ್ಕೆ ಮಹಾತ್ಮರು ಅವರ ಉಪವಾಸದಲ್ಲಿ ಅಪಜಯಗಳಾಗುವರೆಂದೂ, ಅವರು ಮೃತಹೊಂದುವುದು ನಿಶ್ಚಯವೆಂದೂ ಜನತೆಯಲ್ಲಿದ್ದ ಧಾರಣೆಯೇ ಕಾರಣವು. ಮಹಾತ್ಮರು ಬದುಕಿ ಉಳಿದುದಕ್ಕಾಗಿ ದೇಶ ವಿದೇಶಗಳ ಅವರ ಮಿತ್ರರಿಂದ ಸುಮಾರು ೫೦೦ ತಂತಿಗಳು ಬಂದಿವೆ. ಅವುಗಳಲ್ಲಿ ಮುಖ್ಯವಾದುವುಗಳನ್ನು ಮಾತ್ರ ಗಾಂಧೀಜಿಯವರಿಗೆ ಸದ್ದಿಲ್ಲದೆ ಓದಿ ಹೇಳುತ್ತಿರುವರು.

ಸೋಮವಾರ ಮಧ್ಯಾಹ್ನ ೧೨-೨೦ಕ್ಕೆ ಹರಿಜನಸಹುಡುಗನೆ ಕೆತ್ತಳೆ ಹಣ್ಣಿನ ರಸವನ್ನು ಕುಡಿದಾದ ಮೇಲೆ ಮಹಾತ್ಮರು ವಿಶ್ರಾಂತಿ ಪಡೆದು ಮಧ್ಯಾಹ್ನ ೨-೩೦ಕ್ಕೆ ಪುನಃ ಎರಡು ಔನ್ಸ್ ಕೆತ್ತಳೆ ರಸವನ್ನೂ, ಸ್ವಲ್ಪ ಜೇನುತುಪ್ಪವನ್ನೂ, ನೀರನ್ನೂ ಕುಡಿದರು. ೩-೪೫ಕ್ಕೆಯೂ ೪-೧೫ಕ್ಕೆ ಇನ್ನೊಮ್ಮೆ ಹೀಗೆ ಕೆತ್ತಳೆ ರಸವೂ ಜೇನುತುಪ್ಪವೂ ಸೇವಿಸಲ್ಪಟ್ಟಿತು. ಸಂಜೆ ೫-೩೦ಕ್ಕೆ ಡಾ। ಅನ್ಸಾರಿ ಮತ್ತು ಬಿ. ಸಿ. ರೊಯ್‌ರವರು ಗಾಂಧೀಜಿಯವರನ್ನು ಪರೀಕ್ಷಿಸಿ "ಮಹಾತ್ಮರ ಶಾರೀರಿಕ ಶಕ್ತಿಯು ದುರ್ಬಲವಾಗಿದೆ—ಆದರೆ ಭಯಸೂಚಕವಲ್ಲ" ಎಂದು ಬುಲೆಟಿನ್ ಪ್ರಕಟಿಸಿದರು. ಕತ್ತಲಾಗುತ್ತಲೇ ಪುನಃ ಜೇನುತುಪ್ಪ ಮತ್ತು ನೀರನ್ನು ಕುಡಿದರು. ಸಂಧ್ಯಾ ಪ್ರಾರ್ಥನೆಯಾದ ಮೇಲೆ ಅವರು ನಿದ್ರಿಸಿದರು. ಭಜನೆ, ಗಾಯನ, ಸಂಗೀತಗಳು ನಡೆಯುತ್ತಾ ಇದ್ದುವು.

ಮಹಾತ್ಮರಿಗೆ ಬ್ರಿಟನ್, ದಕ್ಷಿಣಾಫ್ರಿಕ, ಪೂರ್ವಾಫ್ರಿಕ ಮತ್ತು ಇನ್ನಿತರ ದೇಶಗಳಿಂದಲೂ ಸಂದೇಶಗಳು ಬಂದಿವೆ.

ಮಹಾತ್ಮರ ಉಪವಾಸವು ಮುಗಿಯುವಾಗ

ಮಹಾತ್ಮರ ಉಪವಾಸವು ಮುಗಿಯುವ ದಿನ ಮಧ್ಯಾಹ್ನ ಗಂ.೩೦ಕ್ಕೆ ಪೂನೆಯ ಲೇಡಿ ಥೆಕರ್ಸಿಯವರ ಬಂಗಲೆಯ ಚಾಗಲಲ್ಲಿ ಪತ್ರಿಕಾ ಪ್ರತಿನಿಧಿಗಳ ಧಾಳಿ ನಡೆಯಿತು. ಅವರೆಲ್ಲರನ್ನು ಒಳಬಿಡಲಾಯಿತು. ಒಂದು 'ಹೋಲ್'ಗೆ ತಗಲ್ದಿರುವ ಒಂದು ಶುದ್ಧಕೋಣೆಯಲ್ಲಿ ಮಹಾತ್ಮರು ಮಲಗಿದ್ದರು. ಕಿತ್ತಿಗೆಯಿಂದ ಪಾದಗಳ ವರೆಗೆ ವಸ್ತ್ರವನ್ನು ಹೊದ್ದಿಕೊಂಡಿದ್ದರು. 'ಹೋಲ್' ತುಂಬಾ ಜನರು ನೆರೆದರು. ಎಲ್ಲೆಲ್ಲೂ ನಿಶ್ಶಬ್ದ. ಮಹಾತ್ಮರು ಧ್ಯಾನಮಗ್ನರಾಗಿ ಮಲಗಿದ್ದುದು ಹೋಲಿಗೆ ತೋರುತ್ತಿತ್ತು. ಎಲ್ಲರೂ ಸಮಾಧಾನದಿಂದ ಕುಳಿತ ಮೇಲೆ ಮಹಾತ್ಮರು ಮಲಗಿದ್ದ ಮಂಚವನ್ನು ಹೋಲಿಗೆ ದೂಡಿತಂದರು. ಮಹಾತ್ಮರು ಮೆಲ್ಲಗೆ ಕಣ್ತೆರೆದರು. ತಲೆಗಿಂಬನ್ನು ಒತ್ತಟ್ಟಿಗಿಟ್ಟು ಎದ್ದುಕೊಂಡರು. ಅವರನ್ನು ಡಾ। ಅನ್ಸಾರಿ ಮತ್ತು ಕಸ್ತೂರಿ ಬಾಯಿಯವರು ಸಹಾಯಕೊಟ್ಟು ಕುಳ್ಳಿರಿಸಿದರು. ಮಹತ್ಕಾರ್ಯ ಬರೇ ಛಾಯೆಯಂತಿದ್ದರು. ಅವರಲ್ಲಿ ಎಲುಬುಗಳು ಮಾತ್ರ ಕಾಣುತ್ತಿದ್ದುವಾದರೂ ಅವರ ಮೋರೆಯಲ್ಲಿ ಅಪೂರ್ವ ತೇಜಸ್ಸಿತ್ತು. ಕಣ್ಣುಗಳು ಮತ್ತಷ್ಟು ತೇಜಸ್ವಿಯಮಾನವಾಗಿದ್ದುವು.

ಪ್ರಾರ್ಥನೆಯು ಪ್ರಾರಂಭವಾಗಲೆಂದು ಮಹಾತ್ಮರು ಮೆಲ್ಲನೆ ಹೇಳಿದರು. ಅರ್ಧ ಗಂಟೆಯ ತನಕ ಭಕ್ತಿಪ್ರೇರಿತ ಪದಗಳನ್ನೂ ಪ್ರಾರ್ಥನೆಗಳನ್ನೂ ಹೇಳಲಾಯಿತು. 'ರಘುಪತಿ ರಾಘವ ರಾಜಾರಾಮ್' ಗೀತವು ಹೃದಯ ಉಬ್ಬುವಂತೆ ನಡೆಯಿತು. ಡಾ। ಅನ್ಸಾರಿಯವರು ಕುರಾನಿನ ಶ್ಲೋಕಗಳನ್ನು ಅದರರ್ಥವನ್ನೂ ಪದ್ಯರೂಪವಾಗಿ ಹೇಳಿದರು. ಬೈಬಲ್‌ನಿಂದ ಕೆಲವು ಹಿತೋಕ್ತಿಗಳನ್ನು ಓದಿ ಹೇಳಲಾಯಿತು. ಭಗವದ್ಗೀತಾ ಶ್ಲೋಕ ವಾಚನಗಳೂ ನಡೆದುವು.

ಆಹಾರ ಸೇವನೆ.

ಮಹಾತ್ಮರು ಬಾಯಿಮುಕ್ಕುಳಿಸಿಕೊಂಡ ನಂತರ ಬಳಿ ನಿಂತಿದ್ದ ಶ್ರೀಮತಿ ಕಸ್ತೂರಿಬಾಯಿಯವರು ಕೆತ್ತಳೆ ಹಣ್ಣಿನ ರಸವನ್ನು ಕೊಟ್ಟರು. ಮಹಾತ್ಮರು ಅದನ್ನು ಕ್ಷುಲ್ಲಸ್ವಲ್ಪವಾಗಿ ಕುಡಿದರು.

ಉಪವಾಸ ದಿಟ್ಟಿಸಿದನೆ ಸರೋಜಿನಿ ದೇವಿಯವರು ಹುಟ್ಟುಗು ಮಾತನಾಡುತ್ತಾ, ಲೇಡಿ ಥೆಕರ್ಸಿಯವರು ಹರಿಜನ ಸೇವೆಗಾಗಿ ಮಹಾತ್ಮರ ಹೆಸರಿನಿಂದ ಇಪ್ಪತ್ತು ೧೦೦೦ ರೂಪಾಯಿಗಳನ್ನು ಕೊಟ್ಟಿರುವರಾಗಿಯೂ, ೫೦೦೦ ರೂಪಾಯಿಗಳನ್ನು ರಾಜಾಧನರಾಜಗಿರಿಯವರು ಕೊಟ್ಟಿರುವರಾಗಿಯೂ ತಿಳಿಸಿದರು. ಶ್ರೀಮತಿಯವರು ಪತ್ರಿಕಾ ಪ್ರತಿನಿಧಿಗಳನ್ನು ಅವರ ಸೇವೆಯನ್ನು ಶ್ಲಾಘಿಸಿ ಮಾತನಾಡಿದರು.

ಸಂತೋಷ ಸಂದೇಶಗಳು ಲಂಡನಿನಲ್ಲಿ

ಬ್ರಿಟಿಷ್ ಇಂಡಿಯಾ ಡೆಲಿಗೇಶನ್:—"ಭಗವಂತನು ನಿಮ್ಮನ್ನು ಉಪವಾಸದಲ್ಲಿ ಕಾದಿರುವನು. ಅನಂತ ವಂದನೆಗಳು-ನಿಮ್ಮ ಅಶಯವೂ, ಆಸ್ಪೃಶ್ಯತೋದ್ಧಾರವೂ ಹಿಂದೀಯ ವಿಕ್ಯವೂ ನೆಲೆವೀಡಲಿ"

ಆತ್ಮಬಲದ ಮಹಶ್ಶಕ್ತಿಯನ್ನು ಜಗತ್ತಿಗೆ ಸಾರಿದ ಹರಿಜನ ಸೇವಕ.

ಮಿ। ಸಿ. ಎಫ್. ಎಂಡ್ರೂಸ್ "ಮಹಾತ್ಮರು ಬದುಕಿ ಉಳಿದರು. ಅವರ ಉಪವಾಸವು ಬೆಳೆದಷ್ಟಕ್ಕೆ ಇಲ್ಲಿಯ ಬಿಡವರೂ ಬಳಲಿದರು. ಮಹಾತ್ಮರು ಧಾರತದೋದ್ಧಾರಕ್ಕಾಗಿ ಬದುಕಲಿ"

ಮಿ। ಪೋಲಕ್ "ಮಹಾತ್ಮರು ಉಪವಾಸವನ್ನು ಜಯಶೀಲರಾಗಿ ಕಳೆದರೆಂಬ ವಾರ್ತೆಯು ಅತ್ಯಂತ ಆನಂದದಾಯಕ. ಅವರ ಜಯಕ್ಕೆ ಇದು ಇನ್ನೊಂದು ಮೆಟ್ಟಿಲು"

ಪ್ರಿಟಿಷ್ ಲೇಬರ್ ಪಕ್ಷದ ಮಿ। ಜೋರ್ಜ್ ಲಾನ್ಸ್‌ಬುರಿ—"ನಿಮ್ಮ ಅತ್ಮಪ್ರೇರಿತ ಉಪವಾಸದಲ್ಲಿ ಜಯಶೀಲರಾದಿರೆಂದು ತಿಳಿದು ಆನಂದತುಂದಿಲನಾಗಿರುವೆನು. ನೀವು ಆರೋಗ್ಯ ಸಂಪಾದಿಸಿ ಮಾನವೀ ಸ್ವತಂತ್ರ್ಯ ಸಂಪಾದನೆಗಾಗಿ ಬಾಳಿ, ಸತ್ಕಾರ್ಯ ಹಾದಿಯನ್ನು ಹುಡುಕಿ ಜಯಿಸುವವರಾಗಿರಿ. ಹಿಂದೂ ದೇಶವು ಈಗಲಾದರೂ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಕೆಲಸಗಳಲ್ಲಿ ನಿಮ್ಮೊಡನಿರುವುದು"

ಶ್ರೀ ರಂಗಸ್ವಾಮ್ಯೆಂಗಾರ್ "ಮಹಾತ್ಮರು ಜಯಗೊಂಡುದು ಮಹಕನಂದಜನಕ ವಿಷಯ. ಸರಕಾರವು ಅವರೊಡನೆ ಒಪ್ಪಂದಕ್ಕೆ ಬಂದು ಕೊಂಗ್ರೆಸ್ಸನ್ನು ಸಮಾಧಾನಗೊಳಿಸುವುದೆಂದು ಧಾವನೆ"

ಸರ್ ಫಿರೋಜ್ ಸೇತ್ನಾ "ಮಹಾತ್ಮರ ಮನಃಶಕ್ತಿಯು ಅಪಾರ ಮಹಿಮೆಯನ್ನುಳ್ಳದು. ಅವರ ಶಕ್ತಿಯು ಇನ್ನು ಇಮ್ಮಡಿಯಾಗಲಿದೆ. ಸರಕಾರವು ಅವರನ್ನು ಒಪ್ಪಂದಕ್ಕೆ ಕರೆದು ಕೊಂಗ್ರೆಸ್ಸನ್ನು ಸಮಾಧಾನಗೊಳಿಸಿದರೆ ರಾಷ್ಟ್ರಕೀಯ ರಥವು ಕಸ್ಪವಿಲ್ಲದೆ ನಡೆಯುತ್ತದು"

ಡಾ। ಸಪ್ರು ಮತ್ತು ಮಿ। ಜಯಕರ್ "ಗಾಂಧಿಯವರು ಉಪವಾಸದಲ್ಲಿ ಜಯಗೊಂಡರೆಂಬುದು ಅತ್ಯಾನಂದದ ವಾರ್ತೆ. ಅವರ ಆದರ್ಶಗಳು ನೆರವೇರಲಿ. ಕಾಯಿದೆ ಭಂಗವನ್ನು ನಿಲ್ಲಿಸಿದುದು ಮಹಾತ್ಮರ ಧೈರ್ಯದ ಗುರುತು. ಹಿಂದೀಯ ಸರಕಾರವು ಅವರನ್ನು ಇನ್ನೂ ಬಗ್ಗಿಸದೆ ತಾನು ಅಜ್ಞಾನವಂತನಾಗಲಿ. ಸಾರ್ವಜನಿಕ ಕೆಲಸದಲ್ಲಿ ಜಯಾಪಜಯಗಳ ಅಳತೆ ಯಾಗಬಾರದು"

ಸರ್ ಪುರುಷೋತ್ತಮದಾಸ್ ಥಾಕೂರ್‌ದಾಸ್; "ಮಹಾತ್ಮರು ದೇಶಕ್ಕಾಗಿ ಉಳಿದರೆಂಬುದು ಮಹದಾನಂದ ಸಂಗತಿ. ಅವರು ಇಳದ ೫೦ ವರ್ಷಗಳಿಂದ ಹಿಂದೂದೇಶವನ್ನು ವಿಶ್ವಪ್ರಭಾ ಸಂಪನ್ನವಾಗಿ ಮಾಡಿದರು. ಅವರು ರಕ್ಷಣೆ ಹೊಂದಿ ದೇಶೋದ್ಧಾರವಾಗಲಿ"

ದಕ್ಷಿಣಾಫ್ರಿಕದಲ್ಲಿ ಅನೇಕ ಮತಸ್ಥರಾದ ಹಿಂದೀಯರ ಪ್ರಚಂಡ ಸಭೆ ಸೇರಿ ಗಾಂಧಿಯವರ ರಕ್ಷಣಾರ್ಥವಾಗಿ ಪ್ರಾರ್ಥನೆಯನ್ನು ನಡೆಸಿದರು.

ಪೂರ್ವಾಫ್ರಿಕದಲ್ಲಿನ ನೈರೋಬಿಯಲ್ಲಿ ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಟ್ಟು, ಗಾಂಧೀಜಿಯವರ ಆಶಯವು ಈಡೇರಲೆಂದು ರಠವಾಯಿತು.

ಪುನೆಯಲ್ಲಿ ಶ್ರೀಮತಿ ಸರೋಜಿನಿ ನಾಯ್ಡುರವರು ತನ್ನ ಮಹದಾನಂದವನ್ನು ಈ ರೀತಿ ಹೇಳಿ ವಿವರಿಸಿದರು.

"ಪ್ರಪಂಚದಲ್ಲಿ ಮಹಾತ್ಮಾಜೀಯವರಿಗೆ ಮಹಾ ಬುದ್ಧಿವಂತರೆಂದು ಜೋರ್ಜ್ ಬರ್ನಾರ್ಡ್ ಷಾರವರು ಮಹಾತ್ಮರ ಕುರಿತು ನನ್ನೊಡನೆ ಹೇಳಿದ್ದರು. ಈ ಚಾರಿತ್ರಿಕ ಉಪವಾಸದಲ್ಲಿ ಮಹಾತ್ಮಾಜೀಯವರು ನಮಸ್ತ ಜಗತ್ತಿನ ಅಶ್ಚರ್ಯವೆದುರು ಕಠೋರನಾಗಿ, ವೀರಾಧಿವೀರನಂತೆ ನಿಂತು ತನ್ನ ಉಜ್ವಲ ಆದರ್ಶಗಳ ವೀರವೇದಿಕೆಗಳ ಮೇಲೆ ನಿಂತು ಮಾನವನ್ನು ಸೇವೆಗಾಗಿ ಆತ್ಮತ್ಯಾಗ ಮಾಡಿ ಹೇಗೆ ಜಯಿಸಿದರೆಂದು ಗೊತ್ತಾಗುವುದು" ಶ್ರೀ ಎಮ್. ಎಸ್. ಆಣೆಯವರು ಮಹಾತ್ಮಾಜೀಯವರ ಉಪವಾಸದ ಕುರಿತು ಹೇಳುತ್ತಾ "ಮಹಾತ್ಮರ ಉಪವಾಸಾಂತ್ಯದ ಸುಖದಿನವು ಹಬ್ಬ ಸುಖದಿನಗಳನ್ನೆನುಧವಿಸುವ ಸಮಯವಲ್ಲ. ಅದರಲ್ಲಿ ಒಂದು ಗೂಢವಾದ ಅರ್ಥವಿದೆ. ಭಗವಂತನ ಸೇವಕನೆಂಬವನು ತನ್ನ ಕಾರೀರಿಕ ಬಂಧವನ್ನು ತೊರೆದು ಸತ್ಯದ ಪ್ರಭೆಯೆನ್ನಿದ್ದಿರೆ ಮಾತ್ರ ಅವನು ನಿಜವಾದ ಸೇವಕನಾಗುತ್ತಾನೆ ಎಂಬುದನ್ನು ಲೋಕಕ್ಕೆ ಸಾರಬೇಕೆಂಬುದೇ ಗಾಂಧೀಜಿಯವರ ಆಶಯ. ಈ ಸಂತನು ನಮ್ಮೊಡನೆ ಚಿರಕಾಲವಿದ್ದು ಮಾನವೀ ಪ್ರಪಂಚವನ್ನೆಚ್ಚರಿಸಲಿ" ಎಂದರು.

ಮಹಾತ್ಮರ ಉಪವಾಸಾಂತ್ಯದ ಸಂತೋಷವನ್ನು ಸೂಚಿಸಲು ಪೂನೆ, ಬೆನಾರೆಸ್, ಲಕ್ನೊ, ಶೀಲ್ಲಾಂಗ್, ಲಾಹೋರ್, ಕಲ್ಕತ್ತಾ, ಅಲ್ಲಾಹಬಾದ್, ಕರಾಚಿ, ಮುಂಬಾಯಿ, ಮದ್ರಾಸು ಮೊದಲಾದ ಪ್ರತಿಯೊಂದು ಪಟ್ಟಣ ಹಳ್ಳಿ ಹಳ್ಳಿಗಳಲ್ಲಿ ಸಭೆ ಜರಗಿ ಹರಿಜನೋದ್ಧಾರ ಕಾರ್ಯ ಸಂಬಂಧವಾದ ಠರಾವು ಗಳಾದುವು.

ಮಹಾತ್ಮರ ಮುಂದಿನ ಕಾರ್ಯಕ್ರಮವೇನೆಂದು ತಿಳಿದು ಬಂದಿಲ್ಲ. ಮಹದೇವ ದೇಸಾಯಿಯವರೆನ್ನುವಂತೆ ಸರಕಾರವು ಅವರ ಬೇಡಿಕೆಗೆ ಮನವೀಯುವುದಿಲ್ಲವಾದರೆ ಅವರು ಪುನಃ ಸೆರೆಯನ್ನು ಹೊಗುವವರಾಗಿ ತಿಳಿದು ಬರುತ್ತದೆ.

ಪಂಡಿತ ಮಾಲವೀಯರು ಸರಕಾರಕ್ಕೆ ಮನವಿ ಮಾಡುತ್ತಾ ಕಲ್ಕತ್ತದಲ್ಲಿ ನಡೆದ ಕೊಂಗ್ರೆಸ್ ಅಧಿವೇಶನದಲ್ಲಿ ಪೋಲೀಸರು ಅತಿರಿಕ್ತ ನಡೆಸಿದರೆಂದ ಮಾತು ಸುಳ್ಳೆಂದು ಸರ್ ಹೋರರೂ ಇಂಡಿಯಾ ಸರಕಾರವೂ ಹೇಳಿರುತ್ತಾರೆ. "ಸುಳ್ಳು ಅಪವಾದ ಹೊತಿದುದಕ್ಕಾಗಿ ವ್ಯಾಜ್ಯ ನಡೆಸಬಹುದಲ್ಲಾ?" ಎಂದು ಸರ್ ಹೋರರನ್ನು ಕೇಳಿದ್ದಕ್ಕೆ "ಅದು ಅಗತ್ಯವಿಲ್ಲ. ಎಲ್ಲಾ ಸುಳ್ಳು ಮಾಲವೀಯರ ನುಡಿಯಲ್ಲಿ ಸತ್ಯಾಂಶವಿಲ್ಲವೇ ಇಲ್ಲ" ಎಂದರು.

ಕಲ್ಕತ್ತದಲ್ಲಿ 200 ಮಂದಿಗಳ ಸರ - ಗುಂಡು!

ಕಲ್ಕತ್ತದಲ್ಲಿ ಕೊರ್ಪರೇಷನಿನ ಕೆಲಸಗಾರರು ಹೆಚ್ಚು ಸಂಬಳವನ್ನು ಕೇಳಿದರು. ಅವರ ಬೆಂಬಲವಾಗಿ ೪೦೦೦ ಗಾಡಿಯಾಳುಗಳು ನಿಂತು ಮುನಿಸಿಪಲ್ ಗುಂಡಿಯೆಯುವ ಸಂಧಿದಬ್ಬೆಯವರಿಗು ಅನೇಕರು ಜಮಾ ಮಾಡಿದ್ದಿರುವರು ೨೦೦ ಜನರನ್ನು ಸೆರೆಹಿಡಿದಿರುವರು.

ಅಜ್ಞೆಯ ಭೂತವು ಸುಮವಿತ್ತಿತು!

ಜೋಹಿನ್ಸ್‌ಬರ್ಗ್ ಎಂಬಲ್ಲಿ ಮಿಸೆಸ ಸೋಫೀ ಕ್ಯಾರ್ಲರ್ ಎಂಬ ೪೯ ವರ್ಷ ಪ್ರಾಯದ ಹೆಂಗಸೊಬ್ಬಳು ಕಳೆದ ೧೨ ತಿಂಗಳುಗಳಿಂದ ಆಸ್ಪತ್ರೆಯಾಗಿ ಹಾಸಿಗೆ ಹಿಡಿದಿದ್ದಳು. ಎಂತೆಂತಹ ಔಷಧಿಗಳು ಕೂಡಾ ಆಕೆಗೆ ಗುಣವಿಲ್ಲ. ಆದರೆ ಕಳೆದ ತಿಂಗಳ ಮೊದಲನೆ ವಾರ ಬೆಳಿಗ್ಗೆ ೬ ೪೦ಕ್ಕೆ ಅವಳಿಗೆ ಸುಖದ ಹಾದಿಯು ದೊರೆಯಿತು! ೨೩ ವರ್ಷಗಳ ಹಿಂದೆ ಮರಣಹೊಂದಿದ್ದ ಅವಳ ಅಜ್ಜಿಯೊಬ್ಬಳ ಭೂತವು ಆ ಸ್ತ್ರೀಯ ಎದುರು ನಿಂತು "ನೀನು ಮಲಗಿದ ಮಂಚವನ್ನು ಸಾಕಿ ಇನ್ನು ಎದ್ದು ನಡೆ" ಎಂದಿತು. ಇದನ್ನು ಕಂಡ ಅವಳು ಒಮ್ಮೆಗೆ ಹೆದರಿ ಕಣ್ಣುಬ್ಬಿಡಲು ಮತ್ತೆ ಪುನಃ ಕಣ್ಮರೆಯುವಾಗ ಆ ಭೂತವು ನಮಸ್ಕಾರಮಾಡುತ್ತಿರುವಂತೆ ಕೈಗಳಾರಂಭಿಸಿದರು. ಇದನ್ನು ಕೇಳಿ ಅವಳ ಮಗನೂ ಸೊಸೆಯೂ ಕೋಣೆಗೆ ಓಡಿಬಂದು ವಿಚಾರಿಸಿದರು. ಗಂಡನ ಮುಖದಲ್ಲಿ ಸಾಮಾನ್ಯ ತೇಜಸ್ಸಿ ಕೈಯಲ್ಲಿ ಪೆನ್ಸಿಲ್ ಸಹಾ ಇದ್ದಿತು ಎಂಬ ವೃತ್ತಾಂತವನ್ನು ಹೇಳಿದಳು. ಅವರು ಸಂತೋಷದಿಂದ ಮಲಗಿಸಿದರು. ಬೆಳಿಗ್ಗೆ ೧೦ ಘಂಟೆಯಾಗುತ್ತಲೇ ಎಲ್ಲರೂ ಕೆಲಸಕ್ಕೆ ಹೊರಟರು. ಅವರು ಹೊರಟುಹೋಗಿ ಸ್ವಲ್ಪ ಸಮಯವಾಗುತ್ತಲೇ ಸೋಫೀಯಾ ಳಿಗೆ ಎದ್ದು ನಡೆಯಲು ಆಶೆಯಾಯಿತು. ತನ್ನ ಮಗಳನ್ನು ಕರೆದು ಪಾದರಕ್ಷೆಯನ್ನು ತರಿಸಿ ಹಾಕಿಕೊಂಡು ಎದ್ದಳು—ನಡೆದಳು—ಯಾವ ರೋಗವೂ ಇದ್ದಿಲ್ಲ—ಯಾವ ನೋವೂ ಕಾಣಲಿಲ್ಲ. ಕತ್ತಲಗುಡ್ಡೆಯೇ ಗಂಡನು ಮನೆಗೆ ಬಂದ ಆ ದಿನ ತನ್ನ ಹೆಂಡತಿಯು ಬಾಗಿಲು ತೆರೆದುದನ್ನು ಕಂಡು ಅವಳಿಗೆ ಆದ್ಭುತವೆನಿಸಿತು. ತಾಯಿಯು ಆಳುತ್ತಿರ ಹಾಗಿ ನುಡಿಗೊಂಡುದನ್ನು ಕಂಡು ಮಗನು ಭಯಗೊಂಡನು.

ಎಲ್ಲಾ ವ್ಯಾಪಾರಿಗಳಿಗೊಂದು ಮಾತು

'ಜನರಲ್ ಡಿಸ್ಕ್ರಿಪ್ಷನ್ ಬ್ಯಾಂಕರ್ ಮಾಂಥ್ಲಿ'ಯಲ್ಲಿ ಒಂದು ಬಾಗಿಲ್ಗೆ ತಕ್ಕುದಾಗಿ ತಗಡು ಇಡೀ ಭೂಮಿಯಲ್ಲಿರುವ ನಮ್ಮಗೊಂದ ಕಂಪೆನಿಯೂ ನಮ್ಮಗೊಳ್ಳದ ಕಂಪೆನಿಯೂ ಪದ ಹೇಳುವುದು ರೋಚಕವಾಗಿರುತ್ತದೆ ಎಷ್ಟೋ ಕಂಪೆನಿಗಳು ಮುಳುಗುವುದು ಎಷ್ಟೋ ಕೂಲಿಗಳು ನಿರ್ನಾಮವಾದರು ಎಷ್ಟೋ ಲಕ್ಷ ನಿರುದ್ಯೋಗಿಗಳು ಹೆಚ್ಚಾದರು ಹೆನ್ರಿ ಫೋರ್ಡರ ಮೋಟರ್ ಕಂಪೆನಿಗಳೊಂದೂ ಸಂಬಳವು ಕಡಿಮೆ ಮಾಡಲ್ಪಟ್ಟಿಲ್ಲ. ವ್ಯಾಪಾರಿಗಳು ತಮ್ಮ ಕೆಲಸಗಾರರಿಗೆ ಹೆಚ್ಚು ಸಂಬಳ ಕೊಟ್ಟರೆ ಲಾಭವೋ ಕಡಿಮೆ ಸಂಬಳ ಕೊಟ್ಟರೆ ಲಾಭವೋ ಎಂದು ಅವರನ್ನು ಒಬ್ಬ ಪತ್ರಿಕಾ ಪ್ರತಿನಿಧಿಗಳು ವಿಚಾರಿಸಿದರು. ಆದಕ್ಕೆ ಹೆನ್ರಿ ಫೋರ್ಡರು ಕೆಲಸಗಾರರಿಗೆ ಯಾವಾಗಲೂ ಹೆಚ್ಚು ಸಂಬಳವನ್ನು ಕೊಡಬೇಕು ಅವರ ಸುಖವು ಎಷ್ಟು ಹೆಚ್ಚಾಯಿತೋ ಅಷ್ಟೇ ಹೆಚ್ಚಾಗಿ ನಮ್ಮ ವ್ಯಾಪಾರವೂ ವೃದ್ಧಿಯಾಗುವುದೆಂದು ನನ್ನ ಅನುಭವ ನಾನು ನಿನ್ನ ಕಂಪೆನಿಗಳ ಕೆಲಸಗಾರರ ಸಂಬಳ ಹನ್ನು ಸದ್ಯಕ್ಕೆ ದುಪ್ಪ ಕಡಿಮೆ ಮಾಡಿಬಿಡುತ್ತೇನೆ ಖಾಲ್ತಿತವಾಗಿ ಅದೇ ಸಂಬಳವು ಅವರಿಗೆ ಸಾಲದು—ಕೆಲಸಗಾರರ ಸಂಬಳದನ್ನು ಬೇಗನೇ ಹೆಚ್ಚಿಸಬೇಕೆಂದಿದೆ ವ್ಯಾಪಾರವಿರುವುದು ಕೆಲಸಗಾರನ್ನು ಹೊಂದಿ ಹಾಗಿರುವಾಗ ಅವರಿಗೆ ಹೆಚ್ಚಿನ ಸಂಬಳವನ್ನು ಕೊಡುವುದು ದರ್ಮಕಾರ್ಯ" ಎಂದು ಹೇಳಿದರು ಬಡತನದಿಂದ ಬಡ ವ್ಯಾಪಾರವೂ, ಐಶ್ವರ್ಯತನದಿಂದ ಸಮೃದ್ಧ ವ್ಯಾಪಾರವೂ ಆಗುವದೆಂದು ಅವರ ಭರವಸೆ.

ಮಹಾತ್ಮರ ಅದ್ಭುತ ಶಕ್ತಿ

ಮಹಾತ್ಮಾ ಗಾಂಧಿಯವರ ಯೋಗ್ಯತ್ವೋಪಯೋಗವನ್ನು ನೋಡುತ್ತ ಸುಪ್ರಸಿದ್ಧ ಡಾಕ್ಟರೊಬ್ಬರು 'ಸೆಕರಲ್ ಕೋಲ್' ಪತ್ರಿಕೆಯಲ್ಲಿ ಮಹಾತ್ಮರ ಅದ್ಭುತ ಶಕ್ತಿಯ ಕುರಿತು ಈ ರೀತಿ ಅಭಿಪ್ರಾಯಪಡುವದು—"ಪ್ರತಿವರ್ಷ ಆರಂಭವಾಗಿ ೧೧ನೇ ದಿನ ಮಹಾತ್ಮರ ರಕ್ತಚಲನ ವೇಗವು ಅತ್ಯಂತ ಕಡಿಮೆಯಾಗುತ್ತಿತು. ನಾಡಿಯು ಸಿಗುತ್ತಿರಲಿಲ್ಲ ಹೃದಯದ ಕೆಲಸವು ನಿಲ್ಲುವುದೋ ಎಂದು ಭಯವಾಗಿತ್ತು ದುರವಸ್ಥೆ ಖಂಡಿತವೆಂದು ಭಾವಿಸಿದ್ದೆನು ಆದರೆ ಮಹಾತ್ಮರು ಭಯಪಡಲಿಲ್ಲ—"ನನಗೆ ಆರು ತಾಸುಗಳ ಸಮಯವನ್ನು ಕೊಡಿರಿ ಮತ್ತು ಬೇಕಾದರೆ ನಿಮ್ಮ ಸ್ವಾಧೀನ" ಎಂದರು. ಆರು ತಾಸುಗಳು ಕಳೆದುವು. ನೋಡುವುದೇನು? ಅವರ ನಾಡಿಯು ಗತಿಯು ಸಮರ್ಪಕವಾಗಿತ್ತು. ಹೃದಯ ಸ್ಥಿತಿಯು ಸರಿಯಾಗಿತ್ತು. ಈ ವಿದ್ಯಮಾನಕ್ಕೆ ನೈದ್ಯಶಾಸ್ತ್ರ ರೀತಿಯಾಗಿ ಸಕಾರಣವನ್ನು ಕೊಡಲು ನನಗೆ ಸಾಧ್ಯವಿಲ್ಲ ಇದಾದ ೬ ದಿನಗಳ ನಂತರ ಅವರಿಗೆ ಉಪವಾಸದ ೧೩ನೆಯ ದಿನ ಮಾಮೂಲಿನ ಪಥ್ಯ ಆಹಾರಗಳು ಕೊಡುಬಂದುವು. ಮಾತ್ಮರಿಗೆ ಮೂಳೆಗಳು ಬರುವುದೆಯಾದು ಖಂಡಿತವಾಯಿತು ಅದರೂ ಅವರು ದಿಗಿಲುಗೊಡೆ "ನಾಳೆ ಪ್ರಾರ್ಥನೆಯ ಪರಿಗೆ ಕರೆಯಿರಿ, ಮತ್ತೆ ನಾನು ನಿಮ್ಮ ಪಥ" ಎಂದರು. ಬೆಳಿಗ್ಗಿನ ಪರಿಗೆ ಬಹುಜನ ಅನೇಕಾಯಿರ ಗಾಂಧೀಜಿಯವರನ್ನು ಬೆಳಿಗ್ಗೆ ಪಂಡ್ಯಿಸಿಕಾಗಿ ಸೇರುತ್ತಿದ್ದರು!—ಕಿಷ್ಟ ಕೈಯಿಗಳು ಒಂದೂ ಇರಲಿಲ್ಲ ಇದೆಲ್ಲ ವಿದ್ಯಮಾನಗಳು ಮಾತ್ಮರ ಅದ್ಭುತಶಕ್ತಿಯ ಪಟ್ಟಿಗಳು"

'ಸಿಟಿ ಒಫ್ ಲಿವರ್‌ಪೂಲ್'

'ಸಿಟಿ ಒಫ್ ಲಿವರ್‌ಪೂಲ್' ಎಂಬುದು ಇಂಗ್ಲೆಂಡ ದೊಡ್ಡ ವಿಮಾನಗಳಲ್ಲಿ ಎರಡನೆಯದು ಒಂದನೆಯದು ದೊಡ್ಡ ವಿಮಾನವಾದ R. 101 ಎಂಬುದು ಎರಡು ವರ್ಷಗಳ ಹಿಂದೆ ನಾಶವಾಯಿತು 'ಸಿಟಿ ಒಫ್ ಲಿವರ್‌ಪೂಲ್' ಕೂಡಾ ಇತ್ತೀಚಿಗೆ ಬಿದ್ದು, ಸುಟ್ಟು ೧೫ ಜನ ದೊಡ್ಡ ದೊಡ್ಡ ವೈಮಾನಿಕರನ್ನು ಸುಟ್ಟಿ ಭಸ್ಮವಾಯಿತು ಈ ವಿಮಾನದ ನಷ್ಟದಿಂದಾಗಿ ವೈಮಾನಿಕ ಪ್ರಕಟಣೆಗೆ ಕಂಗಾಲಾಗಿದೆ ಈ ಘಟನೆಯು ನಡೆದು ಒಂದೆರಡು ತಿಂಗಳುಗಳಾಯಿತು. ಮೊನ್ನೆ ಏಪ್ರಿಲ್ಲಿಯಲ್ಲಿಯೆ ಜರ್ಮನಿಯಲ್ಲಿ ಎರೋ ೯ ಎಂಬ ವಿಮಾನಗಳ ಚಿತ್ರ ಪಟಗಳ ಒಂದು ಸಂಗ್ರಹವನ್ನು ಈಚೆಗೆ ತೆಗೆದು ಅವುಗಳ ಕನ್ನಡಿ ಗಳನ್ನು ಒಡಿಸಲು ತೊಡಗಿದರು ಅನೇಕಾನೇಕ ವಿಮಾನಗಳ ಚಿತ್ರಗಳ ದ್ದುವು ಒಂದೂ ಹಾಳಾಗಿರಲಿಲ್ಲ ಆದರೆ ಅವುಗಳ ನಡುವಿದ್ದ 'ಸಿಟಿ ಒಫ್ ಲಿವರ್‌ಪೂಲ್'ನ ಚಿತ್ರದ ಕನ್ನಡಿಯು ಒಗೆದು ಚೂರಾ ಗಿತ್ತು ಈ ಅಪಶಕುನವಾದುದರಿಂದಾಗಿ ಈ ವಿಮಾನವು ನಾಶವಾಗುತ್ತೋ ತಿಳಿಯದು ಜೋಗೂ ಇರಲಿ, ಈಗ ಈ ವಿದ್ಯಮಾನಕ್ಕೆ ಹೆಚ್ಚಿನ ಪ್ರಾಮುಖ್ಯತೆಯು ಕೊಡಲ್ಪಟ್ಟಿದೆ

ಜಪಾನ ಯುದ್ಧದ ಭೀಕರ ಪರಿಣಾಮ!

ಜಪಾನ ಸೇನೆಯೊಡನೆ ಮಂಚೂರಿಯಾದಲ್ಲಿದ್ದ ಮಿ॥ ಫ್ರೆಡರಿಕ್ ಪಿ ವಿಲಿಂಗ್ ಎಂಬವರು ತಾನು ಕಂಡ ಭೀಕರ ಜಪಾನ ಯುದ್ಧದ ಪರಿಣಾಮವನ್ನು ಹೀಗೆಂದು ಪ್ರಕಟಿಸಿರುತ್ತಾರೆ

ಚೀನಾ ಜಪಾನ ಯುದ್ಧವು ಅನಧಿಕೃತ ಯುದ್ಧವಾದರೂ ಇದರ ಪರಿಣಾಮವು ಮಹಾ ಸಮರದಂತೆ ಭೀಕರವಾಗಿದೆ. ಚೀನಾ ಸೋಲ್ಜರರು ನೂರಾರು ಜೋಳು ನೂರಾರು ತೆರನಾಗಿ ಮಲಗಿದ್ದುವು ಎಲ್ಲಾ ಶವಗಳು ಬತ್ತಲೆಯಾಗಿ ಬಿದ್ದಿದ್ದುವು ಇದರ ಕಾರಣವೇನೆಂದು ನಾನು ಅಲ್ಲಲ್ಲಿ ವಿಚಾರಿಸಿದೆ ಆ ನಗರದಲ್ಲಿನ ಕೆಲವು ಪುಂಡರು ಇದಕ್ಕೆ ಕಾರಣವೆಂದು ತಿಳಿಸಿದರು ಶವಗಳೆಲ್ಲಾ ಕಳ್ಳುಗಾಗಿದ್ದುವು. ಮುರಗುಟ್ಟಿದ್ದುವು ಕೆಲವು ಶವಗಳ ಮುಖ ತಲೆಗಳ ಮೇಲೆ ಯಾರೋ ಜನರು ಹೊಡೆದ ಛಾಯಗುರುತ್ತುವು ಬಹುಮಟ್ಟಿಗೆ ನಾಯಿಗಳು ಈ ಹೇಗೆ ಳನ್ನು ಎಳೆದೆಳು ತಿನ್ನುತ್ತಿದ್ದುವು ಕೆಲವು ನಾಯಿಗಳ ಮೂತಿ ತಲೆ ಕಾಲುಗಳು ರಕ್ತರಯಯವಾಗಿದ್ದು ಅವುಗಳು ವಿಚಿತ್ರ ಪ್ರಾಣಿಗಳಂತೆ ತೋರುತ್ತಿದ್ದುವು. ಈ ಶವಗಳನ್ನು ಹೂಣಿಡುವ ಯೋಜನೆಯಲ್ಲಿ ಯಾರೂ ಇದ್ದಂತೆ ತೋರಲಿಲ್ಲ ಜನರು ಆ ಮಸಣಗಳಲ್ಲಿ ಹಾದು ಹೋಗುತ್ತಿದ್ದರು ಕೆಲವರು ದಾರಿಯಲ್ಲಿ ಸಿಕ್ಕ ಕೋಳಿ ಮದ್ದು ಗುಂಡು, ಕವಚ, ಹಣ ಕಾಸು ಚೀಲಗಳನ್ನು ನಿರ್ಭೀತಿಂದ ಬಿ ಹೊತ್ತು ಸಾಗಿಸುತ್ತಿದ್ದರು. ಈ ದೃಶ್ಯಗಳಲ್ಲಿ ನನ್ನನ್ನು ಭಯಗೊಳಿಸಿಲಿಲ್ಲ. ಈ ಶವಗಳ ಮೇಲೆ ಕರುಣೆಯನ್ನು ಹುಟ್ಟಿಸಿದುವು

ಕಳೆದುಹೋದ ಪ್ರಾಂತ್ಯದ ಹುಡುಕಾಟ.

ಚರಿತ್ರೆಯಿಂದ ತಿಳಿದುಬರುವಂತೆ ಆಫ್ರಿಕ ಮತ್ತು ಹಿಂದೂಸ್ತಾನಗಳ ಮಧ್ಯೆ 'ಲೆಮುರಿಯಾ' ಎಂಬ ಪ್ರಾಂತ್ಯವೊಂದು ಇದ್ದಿತೆಂದೂ, ಅದು ಸಮುದ್ರದಡಿಯಲ್ಲಿರುವುದೆಂದೂ ಗೊತ್ತಾಗಿದೆ. ಈಗ, ಆ ಪ್ರಾಂತ್ಯದನ್ನು ಕಂಡುಹಿಡಿಯುವುದಕ್ಕಾಗಿ ಲಂಡನ್ನಿಂದ ಡೆ ಎಂಬೆಯವರೆಗೆ ಎಂಬವರು ಮುಂದಾಳುತ್ವದಿಂದ ಒಂದು ಸಮಿತಿಯು ಹೊರಡುವುದು ಇವರು ಬರುವ ಅಗೋಸ್ತು ತಿಂಗಳಲ್ಲಿ ಹೊರಡುವರು ಒಂಭತ್ತು ತಿಂಗಳ ಕೆಲಸಕ್ಕೆ ತಕ್ಕಂತೆ ಕೆಲಸಗಾರರು ಯಂತ್ರೋಪಕರಣಗಳು ಸಾಮಗ್ರಿಗಳನ್ನು ಹೊಂದಿರುವರು ಈ ಸಮಿತಿಯ ಸದಸ್ಯರಲ್ಲಿ ಒಬ್ಬರು ಅಮೆರಿಕನ್ ಸಂಶೋಧಕರು ಸಹ ಇರುವರು ಇವರು ಅಮೆರಿಕದ ಸ್ಮಿತ್ಸೋನಿಯನ್ ಸಂಸ್ಥೆಯ ಪರವಾಗಿ ಕೆಲಸ ಮಾಡುವರು ಸಮುದ್ರ ಮಧ್ಯದಲ್ಲಿ ಸಿಕ್ಕ ಕೋಳಿ ಮದ್ದು ಗುಂಡು, ಕವಚ, ಹಣ ಕಾಸು ಚೀಲಗಳನ್ನು ನಿರ್ಭೀತಿಂದ ಬಿ ಹೊತ್ತು ಸಾಗಿಸುತ್ತಿದ್ದರು. ಈ ದೃಶ್ಯಗಳಲ್ಲಿ ನನ್ನನ್ನು ಭಯಗೊಳಿಸಿಲಿಲ್ಲ. ಈ ಶವಗಳ ಮೇಲೆ ಕರುಣೆಯನ್ನು ಹುಟ್ಟಿಸಿದುವು

ಗಾಬರಿನಂತಹ ಮನುಷ್ಯ, ನಿಮಿಷ ನಿಮಿಷ ಬೆಳೆವ ಮರ.

ಚಿಕಾಗೋ ವಸ್ತುಪ್ರದರ್ಶನದಿಂದರೆ ವಿಶೇಷ ಹಬ್ಬ ಈ ಸಲ ಅಲ್ಲಿ A century of Progress Exposition ಎಂಬ ವಸ್ತುಪ್ರದರ್ಶನವು ಜರಗಲಿದುವುದು ಚಿಕಾಗೋ ಪಟ್ಟಣವು ಅಮೆರಿಕಕ್ಕೆ ಬಂದು ನೂರು ವರ್ಷಗಳಾದ ಸಂತೋಷಾರ್ಥವಾಗಿಯೂ, ಈ ನೂರು ವರ್ಷಗಳಲ್ಲಿ ಈ ನಗರವು ಎಷ್ಟು ಪ್ರಗತಿಯಾಯಿತು ಹೊಂದಿತೆಂದು ತಿಳಿಯುವುದಕ್ಕಾಗಿಯೂ ಈ ಮಹಾ ಪ್ರದರ್ಶನವು ಜರಗುವುದು - ಇತ್ಯಾದಿ ತನಕ ಬಂದ ವಿಶೇಷ ವಸ್ತುಗಳಲ್ಲಿ ಗಾಜಿನ ಸ್ತಂಭದ ಮನುಷ್ಯಾಕೃತಿಯೊಂದು ಮತ್ತು ನಿಮಿಷ ನಿಮಿಷಕ್ಕೂ ನಮ್ಮ ಕಣ್ಣೆದುರು ಬೆಳೆಯುವ ಮರ ಇನ್ನೊಂದು. ಗಾಜಿನ ಸ್ತಂಭದ ಮನುಷ್ಯನು ನಿಜರೂಪದ ಮನುಷ್ಯನೇ ಇರುವನು. ಸೆಕೆಯಿಂದಾಗಿ ಮಾತ್ರ ಆ ಆಕೃತಿಯೊಳಗಿರುವ ಸಾಧನಗಳು ಸರಿ, ವಿಲುಜಾಗಳೂ ರಕ್ತ ಧಾರೆಗಳೂ ಮೊದಲಾದ ಎಲ್ಲಾ ಆಗಾಗಲಗಳೂ ಕಾಣುವುವು ಮನುಷ್ಯರ ಶರೀರಾಂಗಗಳ ಚಮತ್ಕಾರಗಳನ್ನು ತಿಳಿಸುವುದಕ್ಕಾಗಿಯೇ ಇಂತಹ ವಿಚಿತ್ರ ವಸ್ತುಗಳನ್ನು ತಯಾರಿಸಿರುವರು. ನಿಮಿಷ ನಿಮಿಷ ಬೆಳೆಯುವ ಮರಕ್ಕೆ ಒಂದು ಯಂತ್ರ ಶಕ್ತಿಯನ್ನು ಕೊಟ್ಟಿರುವನೆ ಗಡಿಯಾರದ ಮುಳ್ಳು ತಿರುಗುವಂತೆ ಆ ಮರದ ಅಂಗಾಂಗಗಳೂ ತಿರುಗುವುವು ಇದನ್ನು ಕಾಣಲು ಸಾವಿರಾರು ಜನರು ಸೇರುತ್ತಿರುವರು. ಈ ಕೋಲೆಯು ಕೃತಿ ಕೈಗಾರಿಕೆಗೆ ಸುಲಭ ಸಾಧನವೆಂದು ತಿಳಿಯಲಾಗಿದೆ.

ಪತ್ರಿಕಾ ವ್ಯಾಪಾರದಿಂದ ಅತುಲೈಶ್ವರ್ಯ ಸಂಪತ್ತಿಗೆ

ಸುಲಭವಾದ ಬೆಲೆಗೆ ಮೋಟಾರುಕಾರುಗಳನ್ನು ತಯಾರಿಸಿ ಅಮೆರಿಕಾದೇಶದ ಕುಬೇರರಾದ ಮಿಃ ಹೆನ್ರಿ ಫೋರ್ಡ್ ಹೇಗೆ ಪ್ರಖ್ಯಾತರಾಗಿದ್ದಾರೆಯೋ ಹಾಗೆಯೇ ರೋಲ್ಸ್ ಮತ್ತು ರಾಯ್ಸ್ ಎಂಬಿಬ್ಬರು ಇಂಗ್ಲೀಯ ವೈಜ್ಞಾನಿಕ ಪಟ್ಟುಗಾರು ಅತ್ಯುತ್ಕೃಷ್ಟವಾದ ಅಪಾರ ಬೆಲೆ ಬಾಳುವ ಮೋಟಾರುಗಳನ್ನು ತಯಾರಿಸಿ ಸುಪ್ರಸಿದ್ಧರಾಗಿದ್ದಾರೆ ಪ್ರಪಂಚದಲ್ಲಿ ಅತ್ಯಂತ ಬೆಲೆಬಾಳುವ ಕಾರುಗಳೆಂದರೆ ರೋಲ್ಸ್ ರಾಯ್ಸ್ ಕಾರುಗಳು. ಆದ್ದರಿಂದ ಈಗಿನ ಕಾಲದಲ್ಲಿ ರೋಲ್ಸ್ ರಾಯ್ಸ್ ಕಾರು ಅತುಲೈಶ್ವರ್ಯ ವೈಭವಕ್ಕೆ ಸಂಕೇತ ಶಬ್ದವಾಗಿದೆ ಆ ಕಾರುಗಳ ಯಜಮಾನನನ್ನು ವಿಶೇಷ ಧನಾಢ್ಯನೆಂದು ಎಲ್ಲರೂ ಭಾವಿಸ ದರು ಅವುಗಳ ಬೆಲೆಯು ೭೫ ಸಾವಿರದಿಂದ ಅನೇಕ ಲಕ್ಷಗಳವರೆಗೆ ಮೈ ಕಾರಿನ ೨೦ಮನುಷ್ಯಾಕಾರಾಜರವರೆಲ್ಲಿ ಇಂತಹ ಕಾರುಗಳು ೫ ಇವೆಯೆಂದು ಶ್ರುತಿ

ಮಹಾ ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆ ಉಂಟಾದ ವಿಮಾನದ ಆನಾಹುತದ ಫಲವಾಗಿ ಮಿಃ ರೋಲ್ಸರು ಮೃತರಾದರು

ಪರಿವಾರಾದಿಗಳು ಕೂಡಿ ಗ್ಯಾರಂ ಮಂದಿ ಈಗ ಉತ್ತ ರಾಧಿಕಾರಿಗಳಾಗಿ ಇರುವರು ಇವರು ತಮ್ಮದೊಂದು ವಿನ್ನಿಸೂರಿಟಿ ಕಮ್ಮೂನಿಟಿ ಎಂದು ಬಗೆದ್ದು, ತಮ್ಮ ಹಕ್ಕು ಸ್ವಾತಂತ್ರ್ಯಗಳನ್ನು ಕ್ರಾಪಾಡಿಕೊಳ್ಳುವುದಕ್ಕೆಂದು ಒಂದು ಪರಿ ಷತ್ತು ಸೇರಿ, ಬ್ರಿಟಿಷರ ಆಶ್ರಿತೆಯ ಶ್ರೇಯಸ್ಸನ್ನು ಬಯಸಿ, ಆ ಆಶ್ರಿತೆಯೆ ಶಾಶ್ವತವಾಗಿರುವಂತೆ ಸಾಧಿಸುವುದಕ್ಕಾಗಿ ಇದೀ ದೇಶದಲ್ಲಿ ಪ್ರತಿನಿಧಿಗಳ ಮೂಲಕ ಪ್ರಜಾರ ಮಾಡಿಸಬೇಕೆಂದು ನಿರ್ಣಯ ಮಾಡಿಕೊಂಡಿರುವರು ಈ ಸಭೆಗೆ ಅಧ್ಯಕ್ಷ ಪಹ ಜಾದಾ ಮಿರ್ಜಾ ಮಹಮ್ಮದ ಸುಲ್ತಾನ್ ಕಾ ಬಹದೂರ್. ಈ ಮಹಾಮುಖಂಡನಿಗೆ ಸರಕಾರದಿಂದ ಪೆನ್ಷನು ಸಿಗುತ್ತಿದೆ. ಇವರಿಗೆಲ್ಲ ನಾನಾ ಕುಂದುಗಳು ಉಂಟಾಗಿವೆ ಎಂದೂ ಅವನ್ನು ದೇಗನೆ ನಿವಾರಿಸಬೇಕೆಂದೂ ಗವರ್ನರ ಜನರಲರಿಗೆ ಇವರ ಮನವಿಯೂ ಹೋಗಿದೆ ಈ ಮನವಿಗೂ ಆ ಪ್ರಜಾರಕಕ್ಕೂ ಸಂಬಂಧವೇನಾದರೂ ಇರಬಹುದೆ?

+++++

ಕೈತರ ಮಾತು. ಇನ್ನು ಹೇಗಾದಿತೋ ತಿಳಿದಿಲ್ಲ. ಚಿತ್ತ ರಂಜನ ನಾಲ್ಕು ಮಂದಿ ಆಫೀಸರರು ಅತ್ತ ಹೋದರಾಗದೆ?

+++++

NOTES.... ನೋಟಗಳು.

ಬ್ರಿಟಿಷರ ರೆಗಳಿಗಳಿಗೆ ಮಿತಿಯಿಲ್ಲ. ತೊಂಗ್ರೆಸ್ಸನ್ನು ನಾಯ ಒಡೆದು, ಒಹಿಷ್ಕಾರ ತಪ್ಪವನ್ನು ಕನ ಗುಡಿಸಿದಂತೆ ಮಾಡಿದರೂ, ಬ್ರಿಟಿಷ ಸಾಮಾನುಗಳಿಗಿಂತ ಇತರ ದೇಶಗಳ ಸಾಮಾನುಗಳೇ ಇಂಡಿಯದಲ್ಲಿ ಒಂದು ರಾತಿಯಾಗುತ್ತಿವೆ ಯಲ್ಲ; ಇಲ್ಲಿನ ಗಿರಣಿದಾರರೂ ಮೊರೆಯಿಡುತ್ತಾರೆ, ಬ್ರಿಟಿಷ ಗಿರಣಿಗಳಂತೂ ನಿಗಿಲು ಊದುತ್ತಿವೆ

* * * *

ಕಾರಣ ಜಾಪಾನು. ಏವತ್ತು ರೂಪಾಯಿ ಕೊಟ್ಟರೆ ನೂರು ರೂಪಾಯಿ ಮೌಲ್ಯದ ಸಾಮಾನು ಅಲ್ಲಿಂದ ಬರುತ್ತದೆ. ಸಾಮಾನಿನ ಬೆಲೆಯಷ್ಟೆ ಸುಂಕ ಹಾಕಲಾಯಿತು. ಆದರೂ, ಬ್ರಿಟಿಷ ನರಕಿಗಿಂತ, ಅದಕ್ಕೆ ಸುಂಕ ಸೇಕಡಾ ೧೧ ಕಡಿಮೆ ಯಾದರೂ, ಜಾಪಾನೀಯರಿಗೆ ಸೇಕಡಾ ೧೦೦ ನಫೆಯೇ ಸಿಗುತ್ತದೆ.

* * * *

ಬೆದರಿಸಿದರೇನು? ಮೊದಲು ಬಟ್ಟೆ ಮಾತ್ರವಿತ್ತು ಈಗ ಎಲ್ಲಾ ಸಾಮಾನು ಎರಡು ವರ್ಷ ಸಾಕಾಗುವಷ್ಟು ಜಾಪಾನಿ ನಂದ ಬಂದೇ ಇದೆಯಂತೆ ಇನ್ನು ಬ್ರಿಟಿಷರೂ ಜಾಪಾನಿ ಯರೂ ಒಂದಾಗಿ ಇಲ್ಲಿಗೆ ಕಳುಹುವ ಸಾಮಾನಿನ ಬೆಲೆ ನಿಮ್ಮ ಪೆರಿಸಿ ಕಳುಹುವ ರಬುಮ್ಮಿನ ದಾಮಾಶಯ ನಿಶ್ಚಯಿಸುವರಂತೆ!

* * * * *

ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸವೆಂಬಂತೆ, ಬ್ರಿಟಿಷರೂ ಜಾಪಾನೀಯರೂ ಕೂಡಿ ಇಂಡಿಯದ ಹುಡಿ ಹಿಂದೀಯರ ಬಹಿಷ್ಕಾರಕ್ಕೆಂತ, ಜಾಪಾನೀಯರ—(ಎಂದರೆ ಜಾ-ಪಾನೀಯರ ಎಂದರ್ಥವೆ!) ಪುರಸ್ಕಾರವೇ ಬಹಳ ಜೋಕೆ, ಹಾವಳಿ, ನಷ್ಟಗಳಿಗೆ ಕಾರಣವಾಗಿದೆ

* * * *

ಕೊಂಗ್ರೆಸ್ಸಿನ ಪ್ರತಿಪಾದನ್ನು ಸದಿಚ್ಛವರಲ್ಲಿ ಕಾಲಾ ಉಪಾಧ್ಯಾಯರೂ ಇಷ್ಟೇ ಇನ್ನಸೆಕ್ಟರರೂ ಒಹಳ ಮೆಹನತು ಮಾಡಿದರೆಂದು ಶಿಫಾರಸಿಗೆ ಪಾತ್ರರಾ ಗಲಿಲ್ಲ. ತಾಜ ಮಹಲು ಅಲ್ಲಿ ಇಲ್ಲದಿದ್ದಲ್ಲಿ, ಈ ಉಪಕಾರ ಸ್ಮರಣೆಗಾಗಿ ಒಂದು ಮಹಾಲನ್ನು ಕಟ್ಟಿಸಬಹುದಾಗಿತ್ತು. ಅದರೆ,—

* * * *

"ಇದು ಸೋತಿದೆ ಮಾತ್ರ, ಸತ್ತಿಲ್ಲ" ಎಂದು ಅಗ್ರಾ ಕಮಿಶನರು ಹೇಳಿ,—'ತಾನನೋಲ್ಲಂಘನೆ ಕೊಂಗ್ರೆಸು ಕೈ ಕೊಳ್ಳುವ ಹಾಗಿಲ್ಲದಿದ್ದರೂ ಮುಂದಿನ ರಾಜ್ಯಶಾಸನ ಕ್ರಮ ವನ್ನು ಮುರಿದಿಕ್ಕಲು ಯತ್ನಿಸಬಹುದು. ಸಭೆಗಳಿಗೆ ಬಹುಮತ ಸಿಗುವಂತೆ ಕೊಂಗ್ರೆಸಿನವರೇ ಜುನಾವಣೆ ಹೊಂದಿ ಬರಬಹುದು' ಎಂದು ಭವಿಷ್ಯ ಭಯವನ್ನು ಸೂಚಿಸಿದರು.

* * * *

ಈ ಭಯನಿವಾರಣೆಗಾಗಿ ಉಪಾಧ್ಯಾಯರುಗಳು ಪ್ರಚಾರ ಕಾರ್ಯವನ್ನು ಪ್ರಯತ್ನಿಸಿದ ಬಳಿಕವೇ, ಮಹಾಲನ್ನು ಕಟ್ಟಿಸು ವರೆ ಪ್ಲೇನಿನ ಅಂದಾಜು ಮಾಡಲು ಸೂಚನೆ ಕೊಡಬಹುದಾಗಿ ಕಮ್ಮಿಶನರರು ಎಚ್ಚರಿಸಿ ಸುಮ್ಮನಾದರು.

* * * *

ಬ್ರಿಟನ್ನಿನಲ್ಲೆ ರೈಲ್ವೆ ಕಂಪೆನಿಯನ್ನು ಇಂಗ್ಲಿಷ ಬೇಸಾಯಿ ಗಳು ಬಹಿಷ್ಕರಿಸಿದರಂತೆ. ಒಬ್ಬ ದೇಸಾಯಿಯು ತೀರ್ವೆ ಕೊಡಿ ಲಿಲ್ಲವೆಂದು ಅವನ ಆಸ್ತಿ ಏಲಂ ಆಯಿತು ಅವನ ಸೊತ್ತನ್ನು ಜಪ್ತಿಮಾಡಿ ಲಂಡನಿಗೆ ಕೊಂಡೊಯ್ದರು. ಈ ಸೊತ್ತನ್ನು ಹಿಯ್ಯ ರೈಲ್ವೆ ಕಂಪೆನಿಯನ್ನು ರೈತರು ಬಹಿಷ್ಕರಿಸಿರುವರು

* * * *

ಪಾರ್ಲಿಮೆಂಟಿನಲ್ಲಿ ಈ ತೀರ್ವೆ (Title) ತೆಗೆದು ಹಾಕಿಯ ಕಾನೂನು ಆಹರೆ ಮಾತ್ರ ನಾವು ಬಹಿಷ್ಕಾರ ಹಿಂತೆಗೆದೆವೆಂದು

The Kanara Enterprise, Ltd., Puttur.

ದಿ ಕೆನರಾ ಎಂಟರ್‌ಪ್ರೈಸ್, ಲಿಮಿಟೆಡ್, ಪುತ್ತೂರು.

Established 1920] **[1930ರಲ್ಲಿ ಸ್ಥಾಪಿತವಾದದ್ದು**

Authorised Capital	Rs	2,00,000—0—0	ಅಧಿಕೃತ ಮೂಲಧನ	ರೂ.	2,00,000—0—0
Issued Capital	Rs.	44,100—0—0	ಚಂದಾ ಹಾಕಿದ ಮೂಲಧನ	ರೂ.	44,100—0—0
Paid up Capital	Rs	30 182—8—0	ಪೂರ್ಣ ತೆತ್ತ ,,	ರೂ.	30,182—8—0
Reserve and other Funds		15 650—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು		15,650—0—0

All kinds of Banking business undertaken.

Current, Savings and fixed Deposits are received at favourable rates.

Advances are made on bills, pledges of gold and other securities.

Shares are now available

For Further particulars apply to the Secretary

Puttur,
16—2—1933

G. N LAKSHMAN PAI,
Ag Secretary

ಎಪ್ಪತ್ತೈದು ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಖ್ಯಾಲುಕತ್ವ ಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಜೊಡಿಕೆಗಳೂ, ಬೆಡ್‌ಶೀಟ್ ಬಾತ್ ಟುವಾಲುಗಳೂ, ಧೋತಿ, ಸೀರೆ—ಬೈರವಾಸು—ಚಿಕ್ಕ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮೂರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
ಸಾಹುಕಾರ ಮಹಾಲ್,
ರಥಬೀದಿ, ಮಂಗಳೂರು

Srinivasa Ranga Pai,
Representatives for South Canara and Malabra
For— **A & F Harvey**
Managers Madura Mills Co Ltd

For neat and nice Printing

Please call at

THE SHARADA PRESS,

Car Street, MANGALORE

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ, ದ. ಕ.

ಶೀಘ್ರ ಫಲದಾಯಕ **ಶಾಸ್ತ್ರೀಯವಾದ ಅನುಭವಸಿದ್ಧ ಔಷಧಿಗಳು.** ಲಾಭದಾಯಕ

ಸಮ್ಮತಿ ವಿಶ್ರಿತ ರಕ್ತಮೂಲಾರಿಷ್ಟ ೧ಲಿ ಔನ್ಸ್ ಬಾಟ್ಲಿ ೧ಕ್ಕೆ ರೂ 1-8-0 ದ್ರಾಕ್ಷಾರಿಷ್ಟ ೧ಲಿ ಔನ್ಸ್ ಬಾಟ್ಲಿ 1ಕ್ಕೆ ರೂ 1 ಅಶ್ವಗಂಧಾರಿಷ್ಟ ೧ಲಿ ಔನ್ಸ್ ಬಾಟ್ಲಿ ಒಂದಕ್ಕೆ ರೂ 1—4—0 ಅಬಲಾತೈಲ ೧ಲಿ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧ಲಿ ಔನ್ಸ್ ಒಬ್ಬಿ ೧ಕ್ಕೆ ರೂ 1-4-0 ಜೀವನಪ್ರಾಶಲೇಹ ೧ ರಾತ್ತಿಗೆ ರೂ 2-8-0 ಅಧ್ಯಯಾಮಲಕಿ ೧ ರಾತ್ತಿಗೆ ರೂ 2 ಅಮೃತಾರ ರಸಾಯನ ಅರ್ಧ ರಾತ್ತಿಗ ರೂ 3 ಚ್ಯವನ್‌ಪ್ರಾಶ್ ಕಾಲು ಔನ್ಸಿಗ ರೂ 0—5—0 ಅರ್ಧ ಔನ್ಸಿಗೆ ರೂ 0-8-0 ಕೃಷ್ಣಾರಿಷ್ಟ ೧ ಔನ್ಸಿಗೆ ರೂ 0-6—0 ಚಿತ್ರಕ ತೊಲೆ ೧ಕ್ಕೆ ರೂ 0-8 0 ವಜ್ರಹಂತ್ರ- ತೊಲೆ ೧ಕ್ಕೆ ರೂ 1 ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕ್ರಿಮಿಘಾತಿನಿ ಡಬ್ಬಿ ೧ಕ್ಕೆ ರೂ 0-4 0 ಭುವನಾಂಜನ ಪೈನ್‌ಬಾಮ್ ಡಬ್ಬಿ ೧ಕ್ಕೆ ರೂ 0-6-0 ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 0-10-0 ಬಲಾಶ್ವಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3—8 0

ಇವಲ್ಲದೆ ನಾನಾ ತರದ ಚೂರ್ಣಗಳು, ಮಾತ್ರೆಗಳು, ರಸಗಳು, ಗುಗ್ಗುಲುಗಳು, ಘೃತಗಳು, ನೋದಕಗಳು, ಪಾನಕಗಳು ವಗೈರೆ ಎಲ್ಲಾ ತರದ ಸಿದ್ಧೌಷಧಗಳು ಸುಲಭ ದರದಲ್ಲಿ ವಿಕ್ರಯಿಸಲ್ಪಡುವವು

ಎಲ್ಲರ್ಜಿಯೂ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿಗೂ ಕರಪತ್ರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ ದ ಕ



ಏಳು ವರ್ಷಗಳಿಗೊಮ್ಮೆ ಇದೀ ದೇಹವು ಸಂಪೂರ್ಣವಾಗಿ ನವೀನವಾಗುವುದು
ಮೂರು ಸಲ 7 ಎಂದರೆ 777 ಒಂದಾದರೆ ಎಂತಹ ಒಬ್ಬಿಯೂ ನೂತನವಾಗುವುದು

ಸ್ವಸ್ತಿಕಾ ಗುರುತಿನ **777** ಸಾಬೂನನ್ನೇ ಒಬ್ಬೆ ಬಗೆಯಲು ಉಪಯೋಗಿಸಿರಿ
ಶುದ್ಧ ಸ್ವದೇಶಿಯವಾಗಿ ಇತರ ಬಬ್ಬಿಗೆ ಹೆಚ್ಚುವ ಎಂಥ ಸಾಬೂನಿಗೂ ಮಿಗಿಲಾಗಿ ಉಕ್ಕುವ್ವೆ
ವಾದ ಸುಲಭ ದೆಲೆಯ ಸರ್ವರಿಗೆ ಅನುಕೂಲವಾದ

ಪ್ರತಿ ದಿನವೂ ಪ್ರತಿ ಮನೆಯಲ್ಲಿ **ಸಾಬೂನು** ಪ್ರತಿಯೊಬ್ಬರು ಪ್ರತಿ ಬಬ್ಬಿಗೆ
ಅದನ್ನು ಶುಭ್ರವಾಗಿ ಒಪ್ಪಕೊಟ್ಟು ನವೀನಗೊಳಿಸುವುದು

ಅತ್ಯುತ್ತಮವಾದ ಪಾನೀಯವಾಗಿ ಉಪಯೋಗಿಸಲು

'ಎಂಬರ್‌ಟಿಪ್ಸ್ ಟೀ'

ದೇಶೀಯ ತೋಟ, ದೇಶೀಯ ಕೂಲಿ, ದೇಶೀಯ ಹಣ, ಜಮಾನಿನಿಂದ ಮೂರಾಟದ ವರೆಗೆ ಎಲ್ಲವೂ ಅಚ್ಚ ದೇಶೀಯವೆ

ಡಬ್ಬಿಗಳಲ್ಲೂ ಇದೆ, ಕಟ್ಟುಗಳಲ್ಲೂ ಇದೆ, ಅದರ ಸುವಾಸನೆ, ರುಚಿ, ಸರ್ವೋತ್ಕೃಷ್ಟವಾಗಿದೆ ಅದರ ಬೆಲೆ,ಉಪಯೋಗ,ಸರ್ವಾನುಕೂಲವಾಗಿದೆ

ಇತರ ದೇಶೀಯವಲ್ಲದ ಅಥವಾ ದೇಶೀಯ ಜಾಗಗಳಿಗಿಂತ **ಎಂಬರ್‌ಟಿಪ್ಸ್** ಚಾವನ್ನೇ ಉಪಯೋಗಿಸಿರಿ

DISTRIBUTORS· **Sujeer Rayappa Nayak, S. Narashim Venkatesh Nayak & Co.,**
Bunder, **Mangalore,** (S. India).

ವಿಷಯಸೂಚಿ.

ಅಭಿಪ್ರಾಯ ... ೨
ಆಯವ್ಯಯ. ೨
ಸ್ಟೀಮಿಷಾರಗಳು ೨
ಸೋಗುಗಳು ,,
ವರ್ತಮಾನ ಸಂಗ್ರಹಗಳು ೩
ಒಳದೇಶ ವರ್ತಮಾನ ವಿದೇಶ ವರ್ತಮಾನ ೪
ಬಿಡಿಗಳು ೫
ಪಕ್ಷಿ ಪೆಟ್ಟಿಗೆ ಹೊಟ್ಟೆಯವರು ೬
ಶಕ್ಕನ್ನವಹಾರ ೧೩
ದಕ್ಷಿಣ ಕನ್ನಡ—ಮಂಗಳೂರು, ಉಡುಪಿ, ಬಂಟ್ವಾಳ, ಹೊಸದುರ್ಗ, ಕಾಸರಗೋಡು, ಪಲಿಮಾರ, ಪುತ್ತೂರು. ೯
ಮಹಾತ್ಮಾ ಗಾಂಧಿಯವರು ಸುಬಹಿಂದಿರುತ್ತಾರೆ. ೧೦
ಕರ್ನಾಟಕ ವರ್ತಮಾನ ಪತ್ರಿಕೆಗಳು ೧೫

ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ಜೂನ್ ೧೯೩೬.

ಆಯವ್ಯಯ.

(ಲೇಖಾಂಕ ೧)

ಆಯವ್ಯಯದ ವಿಚಾರವನ್ನು ಸರಕಾರ ಮತ್ತು ಸಂಸ್ಥೆಗಳ ಸಂಬಂಧದಲ್ಲಿ ಮಾತ್ರವೇ ನಮಗೆ ಕೇಳಿ ಅಭ್ಯಾಸವಲ್ಲದೆ, ವ್ಯಕ್ತಿಗಳ ವಿಷಯದಲ್ಲಿ ಇದಕ್ಕೆ ಪ್ರಾಧಾನ್ಯವನ್ನು ನಾವು ಕಿಟ್ಟಿನ ಮಟ್ಟಿಗೆ ಕಂಡಿಲ್ಲ. ಗವರ್ನಮೆಂಟ್ ಒಫ್ ಇಂಡಿಯಾವು ತನ್ನ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ೧೫೦ ಕೋಟಿ ಆಯವನ್ನೂ ೧೫೫ ಕೋಟಿ ವ್ಯಯವನ್ನೂ ತೋರಿಸಿದರೆ, ಆ ಒಂದು ಕೋಟಿ ವ್ಯಯಾಧಿಕ್ಯಕ್ಕಾಗಿ ಉದ್ದೇಶಿಸಿದ್ದ ಧಾರಣ ಮಾಡುವ ಎಷ್ಟೋ ಎಸೆಂಬ್ಲಿ ಮೆಂಬರರಿದ್ದಾರೆ; ಇವೆಲ್ಲವನ್ನೂ ವರ್ತಮಾನ ಪತ್ರಗಳಲ್ಲಿ ಓದಿ, ದೇಶವನ್ನು ದಿವಾಳಿ ತೆಗೆಯುತ್ತಾರಯ್ಯ ಎಂದು ಯಾತ್ಕಾವ ಕಾಫಿ ಹೌಸ್‌ಗಳಲ್ಲಿ ಕೂತು ತಮ್ಮ ಅರ್ಥ ಶಾಸ್ತ್ರ ಜ್ಞಾನದ ಏರಿವನ್ನು ಎಲ್ಲರಿಗೂ ತೋರಿಸಲು ಉತ್ಸಾಹಿಸುವವರೆಯೋ ಮಂದಿ ಇದ್ದಾರೆ. ಅದರೆ ಈ ಎಸೆಂಬ್ಲಿ ಮೆಂಬರರ, ಅಥವಾ ಈ ಅರ್ಥ ಶಾಸ್ತ್ರ ಜ್ಞಾನಿಗಳ ಬೆಲನ್ಸ್ ಶೀಟ್(Balance Sheet ಅಂದರೆ ಸಾಲಮೂಲಗಳ ತಪ್ಪೆ)ಯನ್ನು ತೆಗೆದಲ್ಲಿ, ಕಿಟ್ಟಿನ ಮಂದಿಯರು Official Liquidatorನಿಂದ ಹಿಂದಿನ್ನು ಬುದ್ಧಿವಾದವನ್ನು ಪಡೆಯುವುದು ಅವಶ್ಯವೆಂದು ತಿಳಿಯದಿರದು.

ತಾನು ಮಾಡಿದ ಆರ್ಜನೆಯು ತನಗೆ ಸಾಕಾಗುವುದಿಲ್ಲವೆಂಬ ಮಾತಿನಲ್ಲಿ ಕಿಟ್ಟಿನ ಅರ್ಥವಿಲ್ಲ. ಏಕೆಂದರೆ, ತನಗೆ ಸಿಕ್ಕುವ ಆರ್ಜನೆಗಿಂತಲೂ ಕಡಿಮೆ ಉತ್ಪನ್ನವಿದ್ದು, ತನ್ನಷ್ಟೇ ಜವಾಬ್ದಾರಿಯಿದ್ದು, ಹಾಗಾದರೂ ಜೀವನ ನಡಸುವವರು ಇರುವರೆಂದಾಗ, ತಾನೇಕ ತನ್ನ ಖರ್ಚನ್ನು ಕಡಿಮೆ ಮಾಡಿ ಸಾಲ ಕಿಟ್ಟದಂತೆ ನೋಡಿಕೊಳ್ಳಬಾರದು? ಉದಾಹರಣಾರ್ಥವಾಗಿ, ೧೦ ರೂಪಾಯಿ ಉತ್ಪನ್ನವಿರುವವನು, ಹಾಗೂ ಹೀಗೂ ಸಾಲ ತೆತ್ತೂ, ಇತರ ಉಪಾಯಗಳಿಂದಲೂ ತನ್ನ ಖರ್ಚನ್ನು ೧೫ ರೂಪಾಯಿಗೆ ನಿಲ್ಲಿಸುವನು; ೧೫ ರೂಪಾಯಿಯವನು ತನ್ನ ಖರ್ಚನ್ನು ಇಪ್ಪತ್ತು ರೂಪಾಯಿಗೆ ನಿಲ್ಲಿಸುವನು ಹತ್ತು ರೂಪಾಯಿಯವನು ಹದಿನೈದು ರೂಪಾಯಿಯೊಳಗೆ ಖರ್ಚನ್ನು ನಿಲ್ಲಿಸಬಲ್ಲನಾದರೆ ಹದಿನೈದು ರೂಪಾಯಿಯವನು ಇಪ್ಪತ್ತಕ್ಕೆ ತನ್ನ ಖರ್ಚನ್ನು ಹೆಚ್ಚಿಸುವ ಅಗತ್ಯವಿರಲಿಲ್ಲ.

ಅತ್ಯಂತ ಕಡಿಮೆ ಉತ್ಪತ್ತಿಯುಳ್ಳವರ ಸಂಗತಿಯಲ್ಲಿ ಆಯಕ್ಕಿಂತ ವ್ಯಯವು ಹೆಚ್ಚಾದರೆ ಅವರ ಮಟ್ಟಿಗೆ ಅವರನ್ನು ನಾವು ನಿಂದಿಸಲಿಕ್ಕಾಗದೆ ಇರಬಹುದು. ಆದರೆ ಹೆಚ್ಚಿನ ಉತ್ಪತ್ತಿಯುಳ್ಳವರು ಸಾಲಗಳಲ್ಲಿ ತುಂಬಿರುವುದೂ, ಉತ್ಪತ್ತಿಗಿಂತ ಹೆಚ್ಚು ಖರ್ಚು ಮಾಡುವುದೂ ಎಷ್ಟು ಮಾತ್ರಕ್ಕೂ ಮರ್ಯಾದಿಸ ತಕ್ಕು ವಿಷಯವಲ್ಲ.

ಎಷ್ಟೋ ದೊಡ್ಡ ದೊಡ್ಡ ವ್ಯಾಪಾರಿಗಳೆದ್ದಾರೆ; ಸಾವಿರ ಗಟ್ಟಲೆಯಲ್ಲಿಯೂ, ಲಕ್ಷಗಟ್ಟಲೆಯಲ್ಲಿಯೂ ರೂಪಾಯಿಯು ಅವರ ಕೈಯೊಳಗಿಂದ ಹರಿಯುತ್ತಾ ಇರುತ್ತದೆ. ಎಲ್ಲಿ ಹೋಯಿತು ಅಷ್ಟೊಂದು ಹಣ ಎಂದು ಕೇಳಿದರೆ ಸರಿಯಾದ ಲೆಕ್ಕ ಹೇಳಲಾರರು. ಅವರ ಖರ್ಚಿನ ಲೆಕ್ಕ ಪತ್ರಗಳನ್ನು ನೋಡಿದರೆ ಅವರು ಮಾಡಿದ ಖರ್ಚಿನಲ್ಲಿ ಕಾಲು ಭಾಗವೂ ಸಿಕ್ಕುವುದಿಲ್ಲ. ಮಿಕ್ಕ ಖರ್ಚಿನ ಕೊಡ ಕಟ್ಟೆಯುಂಟೆ. ಅದರೆ ತಮ್ಮ ಕೈದೊಳಗಿಂದ ಹರಿಯುತ್ತ ಮಿಕ್ಕಿನಲ್ಲಿ ತೆಪ್ಪಗಾದರೂ ಅಷ್ಟೇ ಅಲ್ಲಾವೆ, ಉಳಿದುಬಿಲ್ಲವೂ ಇರಲಾರದು ಎಂದು ಧಾರಾಳ ತಿಳಿಯುವುದಿಲ್ಲ. ತಿಂದಲ್ಲಿ ಅಂತಹ ವ್ಯಾಪಾರಿಯು ದೊಡ್ಡ ದೆಚ್ಚಕ್ಕೆ ತಯಾರನ್ನು ಕಾದಿರಿಕ್ಕೆಲ್ಲ.

ಆದುದರಿಂದ ಪ್ರತಿ ವ್ಯಾಪಾರಿಯೂ ಲಿಮಿಟೆಡ್ ಸಂಸ್ಥೆಗಳಂತೆಯೇ ತನ್ನ ಲೆಕ್ಕವಿಟ್ಟು ವರ್ಷದ ಅಚ್ಚೆಗೆ Balance Sheetನ್ನು, ಲಾಭನಷ್ಟಗಳ ಪಟ್ಟಿಯನ್ನು ತಯಾರಿಸಿದ್ದಲ್ಲಿ ಯಾವ ವಿಶೇಷಕಾಲಿಯಾದ ವ್ಯಾಪಾರಿಯೂ ಹಾಳಾಹೋಗ ಲಾರನು. ಆದರಿಂದ ಅವನ ಖರ್ಚಿನ ಮೇರೆಯು ತಿಳಿಯುವುದು. ಸಾಲದ ಧಾರದ ದಶೆಯೂ ತಿಳಿಯುವುದು; ವ್ಯವಹಾರದಲ್ಲಿ ಮಾಡಿದ ತಪ್ಪುಗಳೂ ತಿಳಿಯುವುವು; ಮತ್ತು ಮುಂದಿನ ವರ್ಷದ ತಿದ್ದುಪಡಿಯು ಹೇಗಾಗಬೇಕೆಂಬ ಅರಿವೂ ಕಾಂಬಾಗುವುದು.

ಒಬ್ಬ ವ್ಯಾಪಾರಸ್ಥನಿಗೆ ವರ್ಷಕ್ಕೆ ೧೫೦೦೦ ರೂಪಾಯಿ ಉತ್ಪನ್ನ ಉಂಟೆನ್ನುವ. ಅವನು ತನ್ನ ಖರ್ಚನ್ನು ಕೆಳಗಿನ ರೀತಿಯಂತೆ ಮಾಡಬಹುದು.

ಲಾಭ	ರೂಪಾಯಿ	೧೫೦೦೦.
ಕ್ಷೇಮನಿಧಿ	ರೂ.	೧೦೦.
೫೦೦೦ದ ವಿಮಾ	,,	೧೦೦.
ಮನೆ ಬಾಡಿಗೆ	,,	೧೫೦.
ಮಕ್ಕಳ ವಿದ್ಯಾಧಿಕ್ಯಾಸಕ್ಕೆ	,,	೫೦೦.
ಮನೆಯ ಏನ್ ಖರ್ಚು	,,	೪೫೦.
		೧೫೦೦.

ಹೆಚ್ಚು ಸಾಲಗಳಿದ್ದ ವ್ಯಾಪಾರಿಯು ಇತರ ಖರ್ಚುಗಳಿಂದ ಉಳಿಸಿ ವರ್ಷಕ್ಕೆ ರೂಪಾಯಿ 100ನ್ನಾದರೂ ಆ ಬಗ್ಗೆ ಪ್ರತ್ಯೇಕ ಕೆಸಬೇಕು.

ಕೆಲವು ವ್ಯಾಪಾರಿಗಳು ಇನ್ವಸ್ಟ್ ಟೆಕ್ಸ್‌ಗೆ ಕೆದರಿ ಲೆಕ್ಕ ಗಳನ್ನು ಸರಿಯಾಗಿ ಇಡುವುದಿಲ್ಲ. ಅದರೆ ಸರಿಯಾದ ಲೆಕ್ಕ ಇಟ್ಟರೆ ಇನ್ವಸ್ಟ್ ಟೆಕ್ಸ್ ಲಾಭದವಾದರೆ ಮಾತ್ರ. ಕೊಡಬೇಕಾಗಾ ವುದಲ್ಲದೆ ನಷ್ಟಕ್ಕೆ ಕೊಡುವ ಅವಶ್ಯವಿರುವುದಿಲ್ಲ. ಹೆಚ್ಚು ಲಾಭವಾದಲ್ಲಿ ಆ ಲಾಭದಲ್ಲಿ ಸ್ವಲಭ್ಯಾಂಶವನ್ನು ಸಂಕಾಂಕ್ಷೆ ಕೊಡಲು ನಾವು ಹಿಂಜರಿಯಬಾರದು. ಸರಕಾರಕ್ಕೆ ಲಾಭ ದೊಳಗಿಂದ ಟೆಕ್ಸ್ ಕೊಡಲಿಕ್ಕೆ ಮುನ ಬಾರದೆ ಲೆಕ್ಕಾವನ್ನು ಸರಿ ಯಾಗಿಡದೆ ನಷ್ಟ ಹೊಂದಿ, ನಷ್ಟದೋಗಿಂದ ಟೆಕ್ಸ್ ಕೊಡುವ ವ್ಯಾಪಾರಸ್ಥರೂ ಹಲವರಿರುವರು.

ವ್ಯಾಪಾರಿಯು ಸ್ವಂತ ಮನೆ ಕಟ್ಟುವ ಉನೋದಿನಲ್ಲಿ ರಬಾರದು. ಹಾಗೆ ಸ್ವಂತ ಮನೆ ಕಟ್ಟಿಸಬೇಕೆಂಬ ಲವಲವಿಕೆ ಇದ್ದರೆ, ಆ ಬಗ್ಗೆ ದುಡುಕದೆ, ಪ್ರತಿ ವರ್ಷ ಕ್ರಮ ಪ್ರಕಾರವಾಗಿ ತನ್ನ ಲಾಭಗಳನ್ನೆಣಿಸಿ, ಅವುಗಳಿಂದ ಮನೆ ಕಟ್ಟುವ ಬಗ್ಗೆ ಏನೇ ಜನ್ನು ಪ್ರತ್ಯೇಕಿಸಿ, ಸಾಕಷ್ಟು ಏನೇಜು ಆದ ನಂತರ ಮನೆ ಕಟ್ಟಿಸಬೇಕು. ಇಲ್ಲವಾದರೆ ಈ ವರೆಗೆ ಹೆಚ್ಚಿನವರು ಮಾಡು ತಂತೆ, ಮನೆ ಕಟ್ಟಿಸಿ, ಆ ಮೇಲೆ ಅದವು ಹಾಕಿ, ಅಡವಿಗೆ, ಮನೆ ಕಟ್ಟಬಿದ್ದರೆ ಬಾಡಿಗೆ ತೆರಬೇಕಾಗಿದ್ದುದಕ್ಕಿಂತಲೂ ಹೆಚ್ಚು ಏನೇಜನ್ನು ಬಡ್ಡಿಯಾಗಿ ಸಲ್ಲಿಸಿ, ಕಡೆಗೆ ಮನೆ ಕಳಕೊಳ್ಳುವ ಪ್ರಸಂಗವು ಒದಗುವುದು.

+ + + +

Stop-Press.

ಬರ್ಲಿನ್‌ನಿಂದ ಬಂದ ವಾರ್ತೆಯಂತಾಗಿ ಅಫಘಾನಿಸ್ಥಾನದ ಅರಸರ ಸಹೋದರ ಮತ್ತು ಅಲ್ಲಿಯ ಮಂತ್ರಿಯಾದ ಸರ್ದಾರ್ ಮಹಮ್ಮದ್ ಅಜೀಜ್‌ಖಾನರನ್ನು ಕೆಮಲ್ ಸಯದ್ ಎಂಬ ೨೨ ವರ್ಷದ ಅಫಘಾನ ವಿದ್ಯಾರ್ಥಿಯೊಬ್ಬನು "ಇನ್ನು ಅಫಘಾನ ರಾಜ್ಯವನ್ನು ಇಂಗ್ಲಾಂಡಿಗೆ ಮಾರಲಿರುತ್ತೀ" ಎಂದು ಅರ್ಥಬರುವಂತ್ತಾ ಐದು ಗುಂಡು ಗಳನ್ನೆಸೆದು ಅವರನ್ನು ಕೆಡಹಿದನು. ಅವರು ಆಸ್ಪತ್ರೆಯಲ್ಲಿ ಮರಿ ದರು. ಸೆರೆ ಹಿಡಿಯಲ್ಪಟ್ಟಿರುವನೆ ಕೆಮಲನು "ನಾನು ಏನು ಮಾಡಿರು ವೆನೆಂದು ನನಗೆ ತಿಳಿದಿದೆ. ದೇಶದಾತ್ಯರ್ಥದಿಂದ ಹೀಗೆ ಮಾಡಿದೆನು" ಎಂದು ತಿಳುಹಿಸಿದನು.

ಲಕ್ನೋದಿನ ಧಡೂಹಿ ಏಂಬಲ್ಲಿ ಶಾ ೬ನೇ ದಿನ ಒಂದು ಬಸ್ಸು ತುಂಬಾ ಮದುವೆಯ ಮಂದಿಗಳು ಕ್ಯಿಲು ಸಂಗಮನ್ನು ದಾಟಿ ಹೋಗಿ ವಾಗ ರೈಲು ಢಕ್ಕೆ ಹೊಡೆದು ಬಸ್ಸಿನಲ್ಲಿದ್ದ ೧೭ ಜನರು ಪ್ರಾಣಕಳ್ಕೊದರು. ಮೂಡಿವವರಲ್ಲಿ ೨೩ ಮಂದಿ ಪುರುಷರು, ಒಬ್ಬಳು ಸ್ತ್ರೀ, ಎರಡು ಮಕ್ಕಳು.

—ಭಾರತದ ಅಭಿವೃದ್ಧಿಯ ಬೇಕಾಬಿಟ್ಟಿಗಾಗಿ ಅಂತಿಮ "ಸ್ಕೀಮ್ ಕಿಕ್ಕೆ" ಕಿಕ್ಕೆಯು ಇದುವರೆಗೆ ಸಾರ್ವಜನಿಕರಾಗಿ ಸರಕಾರದ ಮುಂದೆ ಬಂದಿದೆ.

ಲಿವರ್‌ಪೂಲ್ ಒಬ್ಬರು ೧,೫೯೪ ಜನರು ನಿರುದ್ಯೋಗಿಗಳಾಗಿರು ವರು. ೯೪೦೦೦ ಜನರು ಈ ಧನ ಕೆಲಸ ಮಾಡಿ ನಾಳೆ ಉಪವಾಸ ಬೀಳುವ ಸುದ್ದಿಯು ತರಗತಿಯವರು.

ಪೊಟ್ಟಾಗುವಿಂದ ಬಂದ ಸುದ್ದಿಯಿಂದ ಮುಸ್ಸಿನಿಗೆ ಎಂಬ ಫೋರೀಸ್ ಓರ್ವರಿಯು ಹೂವರು ಸ್ತ್ರೀಯೆಗೆ ಗುಂಡಿಕ್ಕಿ ತೊಂದು, ತಾನೂ ಆದರೊಡನೆ ಸಹವರಿಸಿದು ತೀರ್ಮಾನವಾಗುತ್ತದೆ.

—ಅಲ್ಬಾರ್ ಸೈಂಸ್ಥಾನದಲ್ಲಿ ಅಹಿರಿಗೂ ಮಿಡುಗಿಗೂ ಕಲಹ ವಾಗಿ ನಾಲ್ಕು ಜನರು ಸುಡಿದರು. ೧೨ ಜನರು ಜಖಂಗೊಂಡರು. ಮಹಾರಾಜರು ಊರು ಬಿಡಲು ಹೊರಟರು.

—ಅಲ್ಜಹಾರಾದಿನ ಸಬ್‌ಡಿವಿಜನಿನಲ್ಲಿ ರೈತರ ಸ್ಥಿತಿಯು ಶೋಚ್ಯ ಹೋದುದರಿಂದ ಸರಕಾರವು ೧೨ಲಂಖಂದ ಕಂದಾಯವನ್ನು ಬಿಟ್ಟುಕೊಟ ಸಂತೋಷದ ವಾರ್ತೆ ಇದೆ.

ಮೌಂಟ್ ಎವರೆಸ್ಟ್ ಪರ್ವತದ ತುದಿಗೆ ವಿಮಾನಮೂಲಕ ಹಾರಿ ಅಲ್ಲಿ ಬಿಟಿಷ ಧ್ವಜವನ್ನು ನೆಡುವನೆಂಬ ಧೈರ್ಯದಿಂದ ವಿಲ್ಲಸ್ ಎಂಬವನು ಲಂಡನ್‌ನಿಂದ ಕರಾಚಿಗೆ ಬಂದಿರುವನು.

ಒಳದೇಶ ವರ್ತಮಾನ

ಕಳ್ಳತ್ವಾದಲ್ಲಿ ಕೊಂಗ್ರೆಸ್ ಅಧಿವೇಶನವು ಜರಗಲಿತ್ಕವಾದಾಗ ಪೋಲೀಸರು ಸ್ವಯಂ ಮೇಲು ಬಾಧೆ ನಡಸಿದ್ದುದನ್ನು ತಾನು ಕಣ್ಣಾರೆ ಕಂಡಿದುವೆನಾಗಿ ಮಿ. ಫ್ರೆಂಕ್ ಸಿ. ಬಾನ್‌ಕ್ರೊಫ್ಟ್ ಎಂಬ ಅಮೇರಿಕನ ರೊಬ್ಬರು ಸ್ಟೇಟ್ಸ್ಮ್ಯನ್ ಪತ್ರಿಕೆಗೆ ಬರೆದಿರುವರು. ಸರ್ ಹೋರರು ಇದನ್ನು ನಂಬುವರೋ ತಿಳಿಯದು.

—ಕೊಂಗ್ರೆಸಿನ ಅಧ್ಯಕ್ಷರಾಗಿರುವ ಶ್ರೀ ಎಂ. ಎಸ್. ಅಣಯವ ರಿಗೆ ವಿಶಾಖಪುರ ಜೈಲಲ್ಲಿ ಜೈಲಧಿಕಾರಿಗಳು ಅಪಮಾನಿಸುವ ಬಾಧೆ ಯನ್ನು ಮಾಡಿದರೆಂಬ ಅರೋಪವು ಸುಳ್ಳೆಂದು ಸಿದ್ಧವಾದ ಹೋಮ್ ಮೆಂಬರರ ಮತ

೨ ಅಂದಮಾನ ಜೈಲಿನಲ್ಲಿ ನಿರಶನವ್ರತ ತೊಟ್ಟು ಇಬ್ಬರು ತೀರಿ ಕೊಂಡರು. ಅವರನ್ನು ನಾನು ಸರಿಸಿ ಇನ್ನಿಬ್ಬರನು ಮೊನ್ನೆ ತೀರಿಕೊಂಡನು. ಮುಂಬಾಯಿ ಬಂಗಾಳಗಳಲ್ಲಿ ಈ ಕುರಿತು ಸಭೆಗಳಾಗುತ್ತಿವೆ.

ಜಬ್ಬಲಪುರದಲ್ಲಿ ಜೆ. ಪ್ಲೇಡ್ಸ್ ಎಂಬ ಟೆಲಿಗ್ರಾಫ್ ಅಧಿಕಾರಿ ಯೊಬ್ಬರು ತಿಂಗಳಾಂತ್ಯದ ಸಂಬಳವನ್ನು ಜೇಬಿನಲ್ಲಿಟ್ಟು ಸೈಕಲ ಮೇಲೆ ಸವಾರಿ ಮಾಡುತ್ತಾ ಸಂಜೆ ಸಂತೋಷದಿಂದ ಮನೆಗೆ ಬರುತ್ತಿದ್ದಷ್ಟು ಅಷ್ಟರಲ್ಲಿ ಅವರನ್ನು ಮೂವರು ಡಕಾಯಿತರು ಕತ್ತಿ ತೋರಿಸಿ ಅವಧಿಸು ಕೆಡಸಿ, ಅವರ ಜೇಬು ಬಂದೂಕಾಡಿ, ಅವರನ್ನು ದೂರು ಸಾಗರದಲ್ಲಿ ಮುಳುಗಿಸಿದರು.

—ಮುಂಬಾಯಿಯ ವರ್ತಕರಲ್ಲಿ ಪ್ರಸಿದ್ಧರಾದ ಸುಸ್ಥಾಪಿತ ಮೋಸಾಭಾಯಿ ಬಿಲ್ಲಿಮೋರಿಯ ಎಂಬವರು ಘನೆಯಲ್ಲಿ ಅತ್ಮಹತ್ಯೆ ಮಾಡಿಕೊಂಡರು. ದ್ರವ್ಯಾಭಾವದ ಪರಿಣಾಮವೆಂದು ತಿಳಿದುಬರುತ್ತದೆ.

ರಾಜಕೀಯ ಕೈದಿಗಳನ್ನು ಬಿಡಬೇಕೆಂದು ರವೀಂದ್ರನಾಥ ಠಾಗೂರ್, ಸರ್. ಪಿ. ಎಸ್. ಶಿವ ಸ್ವಾಮಿ ಅಯ್ಯರ್, ಸರ್ ಎಂ. ವಿಶ್ವೇಶ್ವರಯ್ಯ ಮೊದ ಲಾದ ೬೦ ಮಂದಿ ದೇಶಧುರೀಣರು ಮಂತ್ರಿಯವರಿಗೆ ಗೊಂದು ತಂತಿ ಬಿಟ್ಟಿರುವರು.

—ಮುಂಬಾಯಿಯ ಸಾಸ್ಸರ್‌ವಾಂಜಿ ಆರ್ದೇಶಿಯರ್ ಭಟ್ಟ ಎಂಬ ಮೆಟ್ರಿಕ್ ವಿದ್ಯಾರ್ಥಿಯು ಮೂರು ಸಲ ಸರಿಉತ್ತೀರ್ಣನಾಗಿ ಈ ಸಲವೂ ತಾನು ಸರಿಉತ್ತೀರ್ಣನಾದೆನೆಂದು ಒಬ್ಬ ಮಿತ್ರನ ಮಾತಿನಿಂದ ತಿಳಿದು, ಭಟ್ಟನು ತನ್ನ ಮನೆಯಲ್ಲಿ ಪ್ರಾಣಿಕ್ಕೆ ಮಾಡಿದನು. ಸಂಜೆಯ ಪತ್ರಿಕೆಯಲ್ಲಿ ಭಟ್ಟನು ಪಾಸಾಗಿರುವನೆಂದು ವಾರ್ತೆ ಇತ್ತು.

— ಅಸಾಸ್ಸಲ್‌ನಲ್ಲಿ ಇಂಜಿನು ಗಾಡಿಯು ರೈಲಿಗೆ ಢಕ್ಕೆಬಡಿದು ೧೫ ಮಂದಿಗಳು ಜಖಂಗೊಂಡರು.

—ಸಿಂಧಂದಾಬಾದಿನ ಪಂಡಿತಮುಖಿ ಹನುಮಾನ್ ದೇವಸ್ಥಾನಕ್ಕೆ ಸ್ವಚ್ಛರಾಗಿರುವ ಯಾರೂ ಪ್ರವೇಶಿಸಬಹುದೆಂದು ಮೊಕ್ತೇಸರರು ಪ್ರಕಟಿಸಿರುವರು.

೫೬ ಸೇನಾಪ್ರಕರನ್ನು ಕಳ್ಳತ್ತಿಂದ ಕರಚಿಗೆ ಕೊಂಡೊಯ್ದು ಒಂದು ಪ್ರತ್ಯೇಕ ಮನೆಯಲ್ಲಿ ಇಟ್ಟುಂಬು ಸಮೀಪ ಇರಿಸಿರುವರು.

—ಕೊಲೊಂಬೊದಲ್ಲಿ ಒಂದು ಬಸ್ಸು ಒಂದು ಗಾಡಿಗೆ ಹಾಂದೆ ಹೊಡೆದೇಕೆಂದು ಓಡಿ, ಗಾಡಿ ಸಮೇತ ಗದ್ದೆಗೆ ಬಿದ್ದು, ಬಸ್ಸು ನನ್ನು ಪರಶೋಧಿಸುತ್ತಿರುವ ೧೧ ಮಂದಿಗಳನ್ನು ಆಸ್ಪತ್ರೆಗೂ ಕಳುಹಿಸಿದೆ.

—ಮುಂಬಾಯಿಯ ಮಾಧವ ಬಾಗ್ ವಠಾರದಲ್ಲಿ ಪತ್ರಿ ಸುಂಕ ಸಲ್ಲುತ್ತಿದ್ದ ಮತ್ತು ಮೂಲೆ ಕಟ್ಟುತ್ತಿದ್ದ ಭೀಂಕ ಹಿಂದು ಸುಮಾರು ಒಂದು ಲಕ್ಷ ರೂಪಾಯಿ ಸಲ್ಲವಾಗಿದೆ.

+ + + +

ದಕ್ಷಿಣ ಕನ್ನಡ.

ಮಂಗಳೂರು—ಇದೇ ತಾ ೧೦ನೇ ಶನಿವಾರ ಆಪರಾಹ್ನ ೪ಂಟೆ ೪೬ಕ್ಕೆ ಶ್ರೀನರಾ ಹೈಸ್ಕೂಲಿನಲ್ಲಿ ಶ್ರೀ ಜಿ ಎನ್ ಭಿಡೆ 'ರಾಷ್ಟ್ರ ಭಾಷಾ ವಿಚಾರದ' ಇವರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರಾಗ್ದೀಪಿಕಾ ಸಭೆಯು ಜರಗುವುದು "ಜಾತಿಭೇದವು ಸಮಾಜಕ್ಕೆ ಹಾನಿಕರ" ಎಂಬ ವಿಷಯದ ಕುರಿತು ವಾದ ವಿವಾದ ನಡೆಯುವುದು ಇದೇ ಸಂದರ್ಭದಲ್ಲಿ ಪ್ರಾಗ್ದೀಪಿಕಾ ಸಭೆಯ ಸಂಘಟನೆಯ ಬಗ್ಗೆ ಸಯಮನಗಳು ರಚಿಸಲ್ಪಡುವುವು. ಹಿಂದೀ ಪ್ರೇಮಿ ಬಂಧು ಭಗಿನಿಯರೆಲ್ಲಾ ಬರಬೇಕಾಗಿ ಕಾರ್ಯದರ್ಶಿಯವರ ವಿನಂತಿ ಇದೆ

ಹಿಂದುಸ್ತಾನ ಸಿನೆಮಾ ಲಿಮಿಟೆಡ್—ಇದೇ ತಾರೀಕು ೧೦ರಿಂದ ಪೆರಮೌಂಟಿನ ಹಾಸ್ಯರಸಭರಿತವಾದ "ದಿಸ್ ಇಸ್ ದಿ ನ್ಯೂ" ಎಂಬ ಚಿತ್ರವೂ ೧೩ರಿಂದ ಮೆಟ್ರೋ ಗೋಲ್ಡ್‌ವಿನ್ ಮೆಯರರ ಚಿತ್ರವಾದ ಎನ್ನಾ ಕೃಷ್ಣ" ಎಂಬ ಗ್ರಿಟಾ ಗಾರ್ಬೋಳ ಪ್ರಥಮ ಟೋಕಿ ಚಿತ್ರವೂ ನಂತರ ಪೆರಮೌಂಟಿನ 'ಮೇಕ್ ಮಿ ಎ ಸ್ಟಾರ್' ಎಂಬ ಚಿತ್ರವೂ ಪ್ರದರ್ಶಿಸಲ್ಪಡುವುವು.

ಈ ವರುಷ ಕೆನರಾ ಹೈಸ್ಕೂಲಿನಲ್ಲಿ IV ಫೋರ್ಮಿಗೆ ಇಬ್ಬರು ಹರಿಜನ ಬಾಲಕರನ್ನು ಸೇರಿಸಿಕೊಂಡಿರುತ್ತಾರೆ. ಅಲ್ಲದೆ II ಫೋರ್ಮಿಗೆ ೧೩ ಜನ ಬಾಲಕಿಯರು ಬಂದು ಸೇರಿರುವರು ಈ ಹೈಸ್ಕೂಲಿನಲ್ಲಿ ಮೇಲಿನ ತರಗತಿಯಲ್ಲಿ ಬಾಲಕಿಯರ ಸೇರುವಿಕೆಯು ಇದು ಪ್ರಥಮ ಬಾರಿಯಾಗಿರುತ್ತದೆ

ಶ್ರೀ ಕೃಷ್ಣ ಸಿನೆಮಾ ಮುಂದಿರದಲ್ಲಿ ತಾ ೧೫ರಿಂದ ದಿ ವಿಂಗ್ಸ್ ಆಫ್ ಎಡ್ವರ್ಟೈಸ್ ತಾ ೧೭ರಿಂದ "ಡೆವಿಲ್ಸ್ ಟು ಪೆ" ತಾ ೧೩ರಿಂದ "ಸೇತು ಬಂಧನ" ಎಂಬ ಚಲಚಿತ್ರಗಳನ್ನು ಪ್ರದರ್ಶಿಸಲಾಗುವುದು ಬಾಲಕಿಯರ ಅತ್ಯಪೇಕ್ಷಿತವಾದ ಚಿತ್ರವೇ "ಸೇತು ಬಂಧನ" ಹಿಂದೀ ಚಿತ್ರವಾದರೂ ಭೂಲೋಕದಲ್ಲೆಲ್ಲಾ ಇನೇ ಸ್ಥಾನಕ್ಕೆ ಸೇರಿದ ಚಿತ್ರವೆಂದನ್ನಿಸಿಕೊಂಡಿದೆ ಪೊಟೊಗ್ರೆಸಿಯಲ್ಲಿ ಅನೇಕರಿಂದ ಚಲಚಿತ್ರಗಳ ಗಿಂಕಲೂ ಮಿಗಿರಾದುದು ಉತ್ತಮ ವರ್ಗದ ಪ್ರಸಿದ್ಧ ನಾಟಕಗಳನ್ನು ಅಭಿನಯಿಸಿರುವರು. ೧೦,೦೦,೦೦೦ ರೂಪಾಯಿ ವೆಚ್ಚವಾದ ಚಿತ್ರ ಒಂದು ವರುಷ ಕಾಲ ಈ ಚಿತ್ರವನ್ನು ಹೊರ್ನೆಸಲು ಒಡಿಯರು ಪುರಾಣ ಪ್ರಸಿದ್ಧವಾದ, ಭಕ್ತಿರಸಪ್ರದಾಯಕ ಚಿತ್ರ ಬಹು ವಿಶಿಷ್ಟವಾದ ದೃಶ್ಯಾವಳಿಗಳು

ಮಂಗಳೂರು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹೋಲ್ ನಲ್ಲಿ, ಕಳೆದ ರವಿವಾರ ಪೂರ್ಣಾಹ್ನ ಫಾರ್ಟ್ ಕ್ಲಬ್ ಇಂಡಿಯಲ್ ಟೀಂನ ರಿಟಾಯರ್ಡ್ ಸುಪರಿಂಟಿಂಡೆಂಟರಾದ ಮಿ ರಾ ರಾ ಎಸ್ ಅಣ್ಣಾಸ್ವಾಮಿ ಸವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆ ಸೇರಿ ಹರಿಜನರಲ್ಲಿ ಪೊದಲಿಸಿಯವರಾಗಿ ಬಿ ಎಯಲ್ಲಿ ಉತ್ತೀರ್ಣರಾದ ಶ್ರೀ ಟಿ ಕೃಷ್ಣಸ್ವಾಮಿಯವರನ್ನು ಅಭಿನಂದಿಸಲಾಯಿತು. ಮುನಿಸಿಪಲ್ ವೈಸ್ ಚೆಯರ್‌ಮನ್‌ರಾದ ಶ್ರೀ ಎಮ್ ಮಾಧವ ರಾವ್ ವಕೀಲ್ ರಂಗರಾವ್ ಕಲಟೀಕರ್ ಶ್ರೀ ಉಡ್ಡಿ ಗೋವಿಂದ ರಾವ್ ಶ್ರೀ ಎಮ್ ನರ್ಸಪ್ಪ ಇವರೇ ಮೊದಲಾದ ವರು ಭಾಷಣ ಮಾಡಿದರು

ಏಪ್ರಿಲ್ ತಾ ೧೭ರಿಂದ ಇದೇ ಜೂನ್ ತಾ ೭ರ ತನಕ ಒಟ್ಟು ೪೯ ದಿನ ಇಂಟು ಮಳೆಯಾಗಿದೆ.

ಆಶ್ರಮದರ್ಶಿಯವರ ಇನ್ನೂ ದಿನೋತ್ಸವದ ಪಿರುದಾವಳಿಗಳಲ್ಲಿ ನಮ್ಮ ಜಿಲ್ಲೆಯ ಮಿ ಪಿ ಸಿ ಲೋಬೊರವರಿಗೆ 'ದಿವಾನ್ ಬಹದ್ದೂರ್' ಮತ್ತು ಇಲ್ಲಿಯ ಡಿಪ್ಟುಟಿ ಕಲೆಕ್ಟರರಾದ ರಾವ್ ಸಾಹೇಬ್ ಆರ್ ಕೆ ರಾಮನ್ ನಾಯರರಿಗೆ 'ರಾವ್ ಬಹದ್ದೂರ್' ಪಿರುದುಗಳು ದಯಪಾಲಿಸಲ್ಪಟ್ಟಿವೆ.

ಇದೇ ಜೂನ್ ತಾ ೭ನೇ ಶನಿವಾರ ಸಂಜೆ ೫ಕ್ಕೆ ಗಣಪತಿ ಹೈಸ್ಕೂಲಿನ ಎಮರು ಹೊಸತಾಗಿ ಸ್ಥಾಪಿಸಲ್ಪಟ್ಟಿರುವ 'ಹೊಟೆಲ್ ಜ್ಞಾನ್‌ರ್'ನ್ನು ತೆರೆಯುವ ಸಮಾರಂಭವನ್ನು ಮುನಿಸಿಪಲ್ ಚೆಯರ್‌ಮೇನರಾದ ಡಾಕ್ಟರ್ ಕೆ ವಿಠಲ ಶೆಟ್ಟಿರು ನೆರವೇರಿಸಿದರು.

ಉಡುಪಿ—ತಾ ೭ರಿಕ್ಕೆ ಸ್ಥಳೀಯ ತಾಲೂಕು ಬೋರ್ಡಿನ ಸಾಮಾನ್ಯ ಸಭೆಯು ಬ್ರಹ್ಮಾವರದಲ್ಲಿ ಜರಗಿತು.

ಇದೇ ಮೇ ತಿಂಗಳ ಮೊದಲಲ್ಲಿ ಮಧುರೆಯಲ್ಲಿ ಜರಗಿದ ಅಖಿಲ ಭಾರತ ಸ್ವದೇಶೀ ಪ್ರದರ್ಶನದಲ್ಲಿ ಇಲ್ಲಿನ ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್‌ನ ಪ್ರದರ್ಶಿತವಾದ ಬಿ ಪಿ ಪ್ರೊಡಕ್ಟ್ಸ್ ಮತ್ತು ಪ್ರೊಪ್ರೈಟರಿ ಔಷಧಗಳಿಗೂ ನಾನಾ ತರದ ಟ್ರಿಂಕೆಟ್ ದ್ರವಗಳಿಗೂ ಆಯುರ್ವೇದೀಯ ಔಷಧಗಳಿಗೂ ನಾನಾ ಬಗೆಯ ಶಾಯಿಗಳಿಗೂ ಸಾಬೂನುಗಳಿಗೂ ಬಂಗಾರದ ಪದಕವು ದೊರೆ ಕಿರುವುದಾಗಿ ತಿಳಿಸಲು ಬರುತ್ತದೆ ಇಪ್ಪು ತ್ತರ್ಯದಲ್ಲಿ ಸಭ್ರಿ ಅದರ್ಶ ಸಂಸ್ಥೆಗೆ ಬಹುಮಾನ ದೊರಕಿದ್ದುದು ಬಹಳ ಶ್ಲಾಘನೀಯ! ಇದು ದೇವರ ಅನುಗ್ರಹದಿಂದಲೂ ದೇಶಭಿಗಳ ಪ್ರೋತ್ಸಾಹದಿಂದಲೂ ಪರಮಾ ಭಿವೃದ್ಧಿ ಹೊಂದಲೆಂದು ಆಶಿಸಲಾಗುತ್ತದೆ.

ಶ್ರೀ ವಿ ಡಿ ಎಸ್ ನಾಡು, ಡೈರೆಕ್ಟರ್ ಒಫ್ ಫಿಜಿಕಲ್ ಕಲ್ಚರ್ ಮೈಸೂರು ಇವರ ಶಿಷ್ಯರಾದ ಪ್ರೊ ಎಸ್ ಎನ್ ಅಚಾರ್ಯರು ತಾ ೭ರಲ್ಲಿ ತಮ್ಮ ಸಾಮರ್ಥ್ಯದ ಪ್ರದರ್ಶನವನ್ನು ಮಾರುತಿ ನೀಥಿಶಾಲದಲ್ಲಿರುವ ಶ್ರೀ ಲಕ್ಷ್ಮಿ ವಿಲಾಸ್ ಥಿಯೇಟರಿನಲ್ಲಿ ತೋರಿಸಲಿರುವರು.

ತುಳು ನಾಡಿಗೆ ಉಪಟಳವು ಹೆಚ್ಚಾಗುವುದರಿಂದ ಕಂಡಾಬಟ್ಟೆ ತಿರುಗಾಡುತ್ತಿರುವ ಪೇಟೆ ನಾಯಿಗಳನ್ನು ಕೊಲ್ಲುವವರೆಗೆ ಸ್ಥಳೀಯ ಬೋರ್ಡ ನವರು ವಿರಾಮ ಮಾಡಿಯಿತ್ತಾರೆ ಅವರ ಹೊಣ್ಣೆಯಿಂದ ಅವುಗಳನ್ನು ಬಡಿದು ಕೊಲ್ಲುವುದು ಅತ್ಯಂತ ಅಸಹನೀಯವಾಗಿದೆ ದೇಶಾದ ನಿರ್ಧಾನದಲ್ಲೂ ಇದರ ವ್ಯಸನ ಮಾಡಲಾಗದೆ!

ಬಂಟ್ವಾಳ—ಈ ಸೆಂಟರಿನ ಉಷಾಧ್ಯಾಯರ ಸಂಘದ ಸಭೆಯು ಮೇ ತಿಂಗಳ ತಾರೀಕು ೨೭ನೇ ಶನಿವಾರ ಬಂಟ್ವಾಳ ಹಳೇ ಹಿಟೇರಿಗೆ ವರ್ಗಾಯಿಸಲ್ಪಟ್ಟ ಬೋರ್ಡು ಹುಡುಗರ ಶಾಲೆಯಲ್ಲಿ ಜರಗಿತು. ಜಿಲ್ಲಾ ಸಂಘದ ಸಭೆಯಲ್ಲಿಯೂ, ಬೋರ್ಡ್ ಉಷಾಧ್ಯಾಯರ ಸಭೆಯಲ್ಲಿಯೂ ಟೀಚರ ಮನೆಚಾರರ ಸಂಘದ ಸಭೆಯಲ್ಲಿಯೂ ಪಾಸಾದ ನಿರ್ಣಯಗಳು ಓದಿ ಹೇಳಲಾದವು ಆಫೀಸಿಯಲ್ ರೀತಿಯಲ್ಲಿ ಜಿಲ್ಲಾ ಸಂಘದಿಂದ ಬರುವ ತನಕ ಅವುಗಳ ವಿಷಯ ವಿಮರ್ಶೆ ಮಾಡುವುದು ಬೇಡವೆಂದು ನಿರ್ಣಯಿಸಲಾಯಿತು ಮೇ ೩ನೇ ತಾರೀಕಿನಿಂದ ೧ನೇ ತಾರೀಕು ವರೆಗೆ ನಡೆದ ಶಿಕ್ಷಣ ಸಪ್ತಾಹದ ನೋಟೀಸು ೧೫ನೇ ತಾರೀಕಿಗೆ ಬಂದ ಸಂಗತಿಯನ್ನು ಸಭೆಯ ಮುಂದೆ ಇಡಲಾಯಿತು ಈ ಸಂಘದಲ್ಲಿ ೨೫ ವರ್ಷಗಳಿಂದ ಮೆಂಬರರಾಗಿದ್ದು ಸಂಘದ ವಿಳೆಯ ಕುರಿತ ಬಹಳ ಸಾಹಸದಿಂದ ಕೆಲಸ ಮಾಡಿದ ರಾ ಶಂಕರ ನಾರಾಣಪ್ಪಯ್ಯನವರು ಬೋರ್ಡು ಸರ್ವಿಸಿನಿಂದ ಜೂನ ೧೫ನೇ ತಾರೀಕಿನಿಂದ ನಿವೃತ್ತರಾಗುವುದರಿಂದ ಅವರಿಗೆ ವಿದಾಯವನ್ನಿತ್ತು ಬೀಳ್ಕೊಡಲಾಯಿತು

ಅಗ್ರಹಾರ ಚರ್ಚ್ ಹಾಯರ್ ಎಲಿಮೆಂಟರಿ ಶಾಲೆಯ ಮೇನೇ ಜರರಾದ ಫಾದರ್ ಪೀಟರ್ ಆರ್ ಡಿಸೋಜರವರಿಗೆ ಕೊಲೀಜಿಬರಕ್ಕೆ (ಕೊಡೈಲ) ವರ್ಗವಾದ್ದರಿಂದ ಶಾಲೆಯ ಉಷಾಧ್ಯಾಯರೂ ವಿದ್ಯಾರ್ಥಿಗಳೂ ಅವರಿಗೆ ಮಾನಪತ್ರವನ್ನರ್ಪಿಸಿ ಕಳುಹಿಸಿ ಕೊಟ್ಟರು

ಬಂಟ್ವಾಳದ ಎಸ್ ವಿ ಎಸ್ ಶಾಲೆಯ ಹಳೇ ವಿಜ್ಞಾನ ಶಾಲೆಯಲ್ಲಿಯೇ ಬೋರ್ಡ್ ಶಾಲೆಯು ಹಳೇ ಕಚೇರಿಯಲ್ಲಿಯೂ ತೆರೆಯುವ ಸಮಾರಂಭಗಳು ಬಹಳ ವಿಜೃಂಭಣೆಯಿಂದ ಜರಗಿದವು.

ಹೊಸದುರ್ಗ—ಅರ್ಯ ಸಮಾಜದ ಪರವಾಗಿ ಏಲೇಶ್ವರ ಹೊಸದುರ್ಗ ಎಂಬಲ್ಲಿಯ ಸಂತೆಗಳಲ್ಲಿ ಮತ್ತು ಮಡಿಯಂಕುಲ ಎಂಬಲ್ಲಿ ಜರಗಿದ ಜಾತ್ರೆಯಲ್ಲಿ ಒಟ್ಟಿಗೆ ೫ ಸಭೆಗಳನ್ನು ಜರಗಿಸಲಾಯಿತು. ಸಭ್ರಿ ಸಭೆಗಳಲ್ಲಿ ಸಮಾಜದ ಪ್ರಚಾರಕರಾದ ಶ್ರೀಯುತ ಪಿ ಎಮ್ ಕೃಷ್ಣನವರು ಜಾತಿಭೇದ, ವೈದಿಕ ಧರ್ಮದ ಮಹತ್ವ, ಅಸ್ಪೃಶ್ಯತಾ ನಿವಾರಣೆ ಮುಂತಾದ ವಿಷಯಗಳ ಕುರಿತು ಏಪು ಭಾಷಣಗಳನ್ನಿತ್ತರು.

ಕಾಸರಗೋಡು—ಕೆಲವು ಸಮಯದಿಂದ ಇಲ್ಲಿಯ ಸ್ಪೇಷಲ್ ಮೆಜಿಸ್ಟ್ರೇಟರಾಗಿ ಜಪ್ತಿಯರಾದ ಸನ್ಮಾನ್ಯ ಶ್ರೀ ಜಿ ವಿ ವೆಲಿಯತ್ ಆಮರ್ಗಳ್ ಇವರು ಜಿಲ್ಲೆಯಿನ ಇನ್ಸಿಪ್ಷ್ ಜೆಡ್ ಕ್ಲಾರ್ಕರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟರೆಂದು ತಿಳಿಯುತ್ತೇವೆ.

ಪಲಿಮಾರು—ಇಲ್ಲಿಯ ಶ್ರೀ ರಾಮ ಸರ್ವಜನಿಕ ವಾಚನಾಲಯದ ವರ್ಧಂತ್ಯುತ್ಸವವು ಇದೇ ತಿಂಗಳ ತಾರೀಕು ೩ನೇ ಶನಿವಾರ ಆಪರಾಹ್ನ ಮನ್ನ ಉಡುಪಿ ತಾಲೂಕು ತಹಶೀಲ್ದಾರರಾದ ಮೂರ್ಕಿ ಸುಬ್ರಾಯರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಪುತ್ತೂರು—ಎಲ್ಲಾ ಪಂಚಾಯತು ಬೋರ್ಡುಗಳಿಗೆ—ಒಟರರ ಪಟ್ಟಿಗಳ ಪುರಸ್ಕರಿಯ ಕೆಲಸವನ್ನು ಈಗ ತಾನೇ ಪ್ರಾರಂಭಿಸಿ ಆ ಬಗೆ ಒಬ್ಬ ಜಿಲ್ಲಾ ಇಲೆಕ್ಷನ್ ಆಫೀಸರನ್ನು ನೇಮಕ ಮಾಡಿದ್ದಾರೆ. ಈಗ ಇರುವ ವೋಟರರ ಪಟ್ಟಿಯು ಸಮ್ಮ ತಾಲೂಕು. ಬೋರ್ಡಿನ ಆಫೀಸಿನಲ್ಲಿ ಪ್ರಕಟಿಸುವುದು. ಅವುಗಳಲ್ಲಿ ಯಾರ ಹೆಸರಾದರೂ ಬಿಟ್ಟು ಹೋಗಿದ್ದರೆ ಅಂಥ ಮನುಷ್ಯರು ತಮ್ಮ ಹೆಸರನ್ನು ಸೇರಿಸಬೇಕಂತ ಸಬ್ರಿ ಆಫೀಸರರಿಗೆ ತಾ ೧೫—೬—೧೯೩೩ರ ಒಳಗೆ ತಪ್ಪದೆ ತಲುಪುವಂತೆ ಎಪ್ಲಾಗಲೆ ಓಪ್ಪಾಲ ದ್ವಾರ ಆಗಲಿ ಮನವಿ ಮಾಡಿಕೊಳ್ಳಬೇಕು. ಇಲೆಕ್ಷನ್ ಆಫೀಸರ ನಿವಾಸವು ಮಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಆಫೀಸು ಆವರಿತ್ತದೆ ಮನವಿ ವಾಡಲು ಆಗತ್ಯ ಇರುವ ಫೋರ್ಮುಗಳು ಧರ್ಮಾರ್ಥವಾಗಿ ನಮ್ಮ ಆಫೀಸಿನಲ್ಲಿ ಸಿಗುವವು

ಈ ಸಲ ಎಲ್ಲರೂ ತುಂಬಾ ಎಚ್ಚರದಿಂದ ಇದ್ದು ಸಂಬಂಧ ಪಟ್ಟವರು ಸಕಾಲದಲ್ಲಿ ಅರ್ಜಿ ತಲುಪುವಂತೆ ಕಳುಹಿಸುವಂತೆ ಮಾಡಬೇಕು. ನಂತರ ದೂರು ಆಥವಾ ಸೂಚನೆಗಳಿದ್ದಲ್ಲಿ ಪ್ರಯೋಜನವಿಲ್ಲ ಎಂದು ಪುತ್ತೂರು ತಾಲೂಕು ಬೋರ್ಡು ಸೆಕ್ರೆಟರಿಯವರು ತಿಳಿಸುತ್ತಾರೆ.

ನೋಟೀಸು.

ಮಂಗಳೂರು ತಾಲೂಕು ಬಜ್ಪೆನಾಡು ಫಿರ್ಕಾ ಕಾನುಭೂಗಣ ಕೆ ಅಣ್ಣಪ್ಪಯ್ಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ತಂದೆ ಕೃಷ್ಣಯ್ಯ ನನ್ನ ಅಣ್ಣಂದಿರು ಲಕ್ಷ್ಮಿನಾರಾಯಣಯ್ಯ ಮತ್ತು ತಿಮ್ಮಪ್ಪಯ್ಯ ಇವರ ಹೆಸರಲ್ಲಿ ಶ್ರೀಕ್ಷೇತ್ರ ಶ್ರೀಕ್ಷೇತ್ರವಾಗಿ ಬೆಲೆಬೆಳೆ ಕಾಲಗಳಲ್ಲಿ ಆದ ನಮ್ಮ ಬಾಬ್ತು ಯಜ್ಞಗ್ರಾವದ ಅಕ್ಕಿ ಅನುಭವಿಸುವ ಪಕ್ಕ ನಾಯ್ಕ ವರ್ಗದ ಪಕ್ಕಾಗಳ ಮತ್ತು ಸಿಬ್ಬಿ ಗ್ರಾಮದ ತೆಂಪಂಮಾಣಿ ದೇವಡಿಗ ರಾಮ ವರ್ಗದ ಪಕ್ಕಾಗಳ ಚಾಲಗೇಣಿಬಟ್ಟಿಗಳೂ ಮತ್ತು ನಮ್ಮ ಮನೆತನದ ಹಕ್ಕಿನ ತೆಂಪಮ್ಮಾಣಿ ಮುಗ್ರಾ ದೇವಸ್ಥಾನಕ್ಕೆ ಮೂಲಗೇಣಿ ಸಂದಾಯ ಮಾಡಿದ ರಶೀದಿಗಳೂ ಮತ್ತು ಇತರ ಕೆಲವು ಕಿಕಾರ್ಡುಗಳೂ ವ ಪೋಸ್ಟ್ ಕಾರ್ಡಗಳು ಹೊಡಾ ಇರುವ ರಿಕಾರ್ಡುಗಳನ್ನು ತಾ ೨೪ ೫—೧೯೩೩ರಲ್ಲಿ ಪಡುಬಿದ್ರಿ ಕಂಚಿಗ ಲ್ಯಾಸಿನಲ್ಲಿ ಮೋಟಬಿನಲ್ಲಿ ಹೋಗುತ್ತಾ ಗ್ರೈವಲಿಯಲ್ಲಿ ಅವನ್ನು ಸಿಕ್ಕಿದವರು ಈ ನಂತರ ಹದಿನೈದು ದಿವಸದೊಳಗೆ ತಂದುಕೊಟ್ಟಲ್ಲಿ ಕೊಡಲೇ ರೊಕಾಯಿ ಏನು ಬಹುಮಾನವಾಗಿ ಕೊಡುತ್ತೇನೆ

ತಾ ೪—೬—೧೯೩೩ ಕೆ ಅಣ್ಣಿಪ್ಪಯ್ಯ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

ಅಖಿಲ ಕರ್ನಾಟಕ ಹಾಗೂ ಮದ್ರಾಸು ಸಂಸ್ಥಾನದಲ್ಲಿ ಮತ್ತು ಪಶ್ಚಿಮ ಕರಾವಳಿಯಲ್ಲಿ ಮೊದಲನೆಯದಾಗಿ ಸ್ಥಾಪಿತವಾದ, ಕರ್ನಾಟಕದ ಗೌರವಕ್ಕೂ ಕರ್ನಾಟಕಸ್ಥರ ಅಭಿಮಾನಕ್ಕೂ ತಕ್ಕುದಾದ ಹಾಗೂ, ವಿಶ್ವಾಸನೀಯವಾದ ಅಭೂತಪೂರ್ವ ಸಂಸ್ಥೆ

ನಮ್ಮಲ್ಲಿ ಬ್ರಿಟಿಷ್ ಫಾರ್ಮಾ ಕೋಪಿಯಾ ಬ್ರಿಟಿಷ್ ಫಾರ್ಮಾ ಸ್ಯೂಟಿಕಲ್ ಕೊಡೆಕ್ಸ್, ವ ಪ್ರೊಪ್ರೈಟರಿ ಔಷಧಿಗಳಿಗೆ ಎಲ್ಲಾ ವಿಧದ ಔಷಧಗಳೂ, ತರತರದ ಟ್ರಿಂಕೆಟ್ ದ್ರವಗಳೂ ಸ್ನಾನಕ್ಕೂ ವಸ್ತ್ರಗಳಿಗೂ, ಉಪಯೋಗಿಸುವ ಬಗೆಬಗೆಯ ಸಾಬೂನುಗಳೂ ಎಲ್ಲಾ ತರದ ಪೌಂಟನ್ ಪೆನ್ ಶಾಯಿಗಳೂ, ಆಯುರ್ವೇದೀಯ ಔಷಧಗಳೂ ಅನುಭವಸ್ಥರಾದ ರಸಾಯನ ಶಾಸ್ತ್ರಜ್ಞರಿಂದ ತಯ್ಯಾರಿಸಲ್ಪಡುತ್ತವೆ

ಶಾಸ್ತ್ರೀಕೃತ್ತ ಪ್ರಯತ್ನಗಳೂ ಎಷ್ಟೊಂದು ಅಮೂಲ್ಯವ ಶ್ರಮಸಾಧ್ಯವಾಗಿದ್ದರೂ ಕೂಡಾ ಅವುಗಳನ್ನು ಸಂಗ್ರಹಿಸಿ ಶಾಸ್ತ್ರವಿಧಿಯಂತೆ ಆತ್ಯಾಧುನಿಕ ಯಂತ್ರ ಸಹಾಯದಿಂದ ಔಷಧಗಳನ್ನು ತಯಾರಿಸುವೆವು ಅದುದರಿಂದ ಸರ್ವರೂ ಅಭಿಮಾನಪೂರ್ವಕ ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ ನಮ್ಮಲ್ಲಿ ತಯಾರಿಸಲ್ಪಡುವ ಕೆಲವು ಸ್ಪೆಷಾಮಿಟ್ಟು ಔಷಧಗಳು

ಸ್ವವನಪ್ರಾಶ ಲೇಹ. ಅಮೋಘವಾದ ಟಾನಿಕ್ಕು ಮತ್ತು ಶ್ವಾಸಕೋಶ್ಯ ಎಲ್ಲಾ ವಿಕಾರಗಳಿಗೆ ದಿವ್ಯೌಷಧ ೧ ಔಂಡು ಬಾಟ್ಲಿ ರೂ 3 ೦೦ ಡಿನ್ನು ಬಾಟ್ಲಿ ರೂ 2 ಡ್ರಾಕ್ಷಾಸವ ಅತ್ಯುತ್ತಮ ಫಾಸ್ಟ್ ಟಾನಿಕ್ಕು, ವ ಮೆದುಳಿಗೆ ಶಾಂತಿಕೊಟ್ಟುಸ್ಥಿರಯುವ ಔಷಧ ೧ ಪೌಂಡು ಬಾಟ್ಲಿಗೆ ರೂ —೮ ಅಶ್ವಗಂಧಾರಿಷ್ಟ ಅತ್ಯುತ್ತಮವಾದ ನರಗಳ ಹಾಗೂ ಸಾಮಾನ್ಯ ಟಾನಿಕ್ಕು ೧ ಪೌಂಡ್ ಬಾಟ್ಲಿಗೆ ರೂ 3 ೪ ಡಿನ್ನು ಬಾಟ್ಲಿಗೆ ರೂ. 1—10—೦ ಪ್ರಸೂತಿ ಸಂಜೀವನಿ, ಬಾಣಂತಿ ಯರಿಗೆ ೧೦ ದಿನಗಳ ತನಕ ಕೊಡುವ ಔಷಧ ೧೦ ಡಿನ್ನು ಬಾಟ್ಲಿಗೆ ರೂ —೮ ೦ ಪತಪುಲರಿಷ್ಟ (ಕಷ್ಟೂರಿ ಮಿಶ್ರಿತ) ಸ್ತ್ರೀಯರು ಪ್ರಸವಿಸಿದ ಕೆರುವಾಸು ಕೊಡುವ ಪುಷ್ಟಿಕರ ಔಷಧ ೧ ಪೌಂಡು ಬಾಟ್ಲಿಗೆ 3—6—೦, ೪ ಡಿನ್ನು ಬಾಟ್ಲಿಗೆ ರೂ 1—12—೦

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ, ಪತಿವ್ರತರಿಗೂ, ಹಾಗೂ, ಗಾಯಾಸ್ತ್ರರಿಗೂ, ಉಪಯುಕ್ತ ನಾವ ಟ್ರೈನ್ ಬಾಸಿಕ್ಕು ೪ ಡಿನ್ನು ಬಾಟ್ಲಿಗೆ ಆಣೆ 4 ಹಿಮಸಾಗರ ತೈಲ ತಲೆಗೆ ಒಳ್ಳೆ ತಂಪನ್ನೀಯುವ ದಿವ್ಯವಾದ ಔಷಧ ೪ ಡಿನ್ನು ಬಾಟ್ಲಿಗೆ ರೂ 1—8—೦ ನಾರಾಯಣ ತೈಲ ವಾತರೋಗಕ್ಕೆ ಪ್ರಸಿದ್ಧವಾದ ತೈಲ ೪ ಡಿನ್ನು ಬಾಟ್ಲಿಗೆ ರೂ 1 8—೦ ಕ್ಷೀರಬಲಾ ಪಕ್ಷವಾತ ಅರ್ಧಾಂಗ ವಾತ ಮುಂತಾದ ವಾತ ಕಾಹಿಲೆಗಳಲ್ಲಿ ಉಪಯೋಗಿಸುವ ದಿವ್ಯೌಷಧ ೩ನೇಯ ಅವರ್ತನೆ ೧ ಡಿನ್ನಿಗೆ ರೂ 1 ೧ನೇಯ ಅವರ್ತನೆ ೧ ಡಿನ್ನಿಗೆ ರೂ. —1 ೨ನೇ ಅವರ್ತನೆ ೧ ಡಿನ್ನಿಗೆ ರೂ 2—8 ೪ನೇಯ ಅವರ್ತನೆ ೧ ಡಿನ್ನಿಗೆ ರೂ 4 ೫ನೇ ಅವರ್ತನೆ ರೂ 4 ೫ 0 ೧೦ನೇ ಅವರ್ತನೆ ರೂ. ೮ ಧನ್ವಂತರಿ ತೈಲ ಶಕ್ತಿವಾತ ಅವಯವಾತ ಸರ್ವಾಂಗವಾತಮುಂತಾದ ಕಾಹಿಲೆಗಳಲ್ಲಿ ಹೊಟ್ಟೆಯೊಳಗೆ ತೆಗೆದುಕೊಳ್ಳುವಂಥ ವ ಮೈಗೆ ಹಚ್ಚುವ ದಿವ್ಯೌಷಧ ೩ನೇಯ ಅವರ್ತನೆ ೧ ಡಿನ್ನಿಗೆ ರೂ. ೧ನೇ ಅವರ್ತನೆ ೧ ಡಿನ್ನಿಗೆ ರೂ. 1— 2 ೨ನೇ ಅವರ್ತನೆ ೧ ಡಿನ್ನಿಗೆ ರೂ 2—8—

ನಮ್ಮಲ್ಲಿ ಮೇಲೆ ಬರೆದ ಔಷಧಗಳಲ್ಲದೆ ಎಲ್ಲಾ ತರದ ಅಸವ, ಅರಿಷ್ಟಗಳೂ, ಲೇಹಗಳೂ, ತೈಲಗಳೂ, ರಸಾಯನಗಳೂ ಇನ್ನಿತರ ಆಯುರ್ವೇದ ಔಷಧಗಳೂ, ಮಾತಾಪುದರಣಾಮೋಲ್ಬಣ ಲೇಪ ಸುಳುಮಾರಾಮೃತ, ಮಲೇರಿಯಾ ಮಿಕ್ಸ್‌ಚರ್, ವಗೈರೆ ಪ್ರೊಪ್ರೈಟರಿ ಔಷಧಗಳೂ, ಕರ್ನಾಟಕ ಸ್ನೋ, ಪಿಲ್ಲೆಂಟೈನ್ಸ್ ರೋಸ್ ಪೌಡರ್ ಅರೇಕಾ ಶ್ರೀಮಾ, ಬ್ರಸ್ಮಿಕ್ರೀಮ್ ಕ್ರೀಮೆರ್ ಅಮೆಸಾ (Limes & Glycerine) ವಗೈರೆ ಟ್ಯೂಲೆಟ್ ಉಪಕರಣಗಳೂ ನೀಲಿ ಶಾಯಿ (Blue Black) ಕೆಂಪು ಶಾಯಿ, ರಕ್ತಸೀಲ್ ವರ್ಣಗಳ ಕ್ಲಾಂಟಿನ ಪೆನ್ ಖಾಲೀಗಳೂ ಸ್ನಾನಕ್ಕೆ ವ ವಸ್ತ್ರಕ್ಕೆ ಉಪಯೋಗಿಸುವ ಸಾಬೂತಿನುಗಳೂ ತಯಾರಿಸಲ್ಪಡುವವು

ಹೆಚ್ಚಿನ ಮಾಹಿತಿಯ ಬಗ್ಗೆ ಮೆನೆಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳಿರಿ

ಮಹಾತ್ಮಾ ಗಾಂಧಿಯವರು ಸುಖದಿಂದಿರುತ್ತಾರೆ.

ಪೆರಿಸ್‌ನಲ್ಲಿ ರೈಲು ಬಿದ್ದು ಅನೇಕರ ಮರಣ! ಟೋಕಿಯೋದ ಗನಿಯೊಳಗೆ ಸ್ಫೋಟನ!

೪೦ ಜನರ ಮರಣ! ೩೦ ಜನರಿಗೆ ಜಖಂ!

ಮಹಾತ್ಮಾ ಗಾಂಧಿಯವರನ್ನು ವೈದ್ಯರು ದಿನೇ ದಿನೇ ಪರೀಕ್ಷಿಸುತ್ತಾ ಇದ್ದು ಅವರ ದೇಹಸ್ಥಿತಿಗೆ ಅನುಕೂಲವಾಗುವ ಆಹಾರ ಪದಾರ್ಥಗಳನ್ನು ಕೊಟ್ಟು ಜಾಗ್ರತೆಯಿಂದಿರುವರು. ತಾ. ೪ನೇ ದಿನ ಡಾ| ಧುರಂಧರ್‌ರವರು ಪಟೇಲರು ಗಾಂಧೀಜಿಯವರನ್ನು ಪರೀಕ್ಷಿಸಿದ ನಂತರ "ಮಹಾತ್ಮಾಜಿಯವರು ದಿನೇ ದಿನೇ ಸುಖೊಳ್ಳುತ್ತಿರುವರು. ಆದರೂ ಅವರನ್ನು ಇನ್ನೂ ಹೆಚ್ಚಿನ ಜಾಗ್ರತೆಯಿಂದಲೇ ನೋಡಿ ರಕ್ಷಿಸುತ್ತಿರಬೇಕು. ಹೆಣ್ಮಾಗಳನ್ನೂ, ಕಾಯಿಲ್ಮಗಳನ್ನೂ ಸ್ವಲ್ಪ ಸ್ವಲ್ಪ ಹಾಲನ್ನೂ ಅವರು ಈಗ ಸೇವಿಸುತ್ತಿರುವರು ಅವರ ತೂಕವು ದಿನೇ ದಿನೇ ಹೆಚ್ಚುತ್ತಾ ಇದೆ. ಅವರು ಈಗ್‌ಲೇ ೭೫ ಪೌಂಡು ಭಾರ ವಿರುವರು. ಅಂದರೆ ೧೦ ಪೌಂಡುಗಳಷ್ಟು ತೂಕವನ್ನು ಹೊಂದಿದರು" ಎಂದು ಪ್ರಕಟಿಸಿರುವರು. ತನ್ನ ನಿತ್ಯದ ಮೌನವ್ರತವನ್ನು ಮಹಾತ್ಮರು ಅದಿತ್ಯವಾರ ಮಧ್ಯಾಹ್ನ ಪ್ರಾರಂಭಿಸಿದರು. ಮಹಾತ್ಮರು ಈಗಲೂ ಹಾಸಿಗೆಯ ಮೇಲೆಯೇ ಇರುವರು. ಎದ್ದು ನಡೆಯುವಷ್ಟು ತ್ರಾಣವು ಅವರ ಕಾಲಲ್ಲಿಲ್ಲವೆಂದು ವೈದ್ಯರ ಮಾತು. ನ್ಯೂಯೋರ್ಕಿನ ಅಖಿಲ ಪ್ರಕಂಡ ಗಾಂಧೀ ಸಂಘದವರು ಮಹಾತ್ಮರಿಗೊಂದು ತಂತಿ ಕೊಟ್ಟು "ಈ ರಾತ್ರೆ ನಿಮ್ಮ ಸಂಕಷ್ಟಗಳ ಪರಿಹಾರ ಶಮನಾರ್ಥವಾಗಿ ದೊಡ್ಡ ಭೋಜನ ಸಮಾರಂಭ. ಹರಿ ಜನೋದ್ಧಾರವಾಗಲೆಂದು ಹಾರೈಸುವೆವು. ನಿಮ್ಮ ಧುರೀಣ ತೆಯು ಅಪ್ರತಿಹತವಾದುದು" ಎಂದು ತಿಳಿಸಿರುವರು. ದಂಡಿಬಾರ್‌ನಿಂದ ಒಬ್ಬ ಪ್ರಸಿದ್ಧ ಮುಸ್ಲಿಮ ವೈದ್ಯರು ಮಹಾತ್ಮರಿಗೆ ತಂತಿ ಬಿಟ್ಟು "ನಿಮ್ಮ ಉಪವಾಸದ ಪರಿಣಾಮವಾಗಿ ನಿಮ್ಮ ಕಣ್ಣುಗಳು ಸರಿಯಾಗಿವೆ. ಇನ್ನು ನಿಮಗೆ ಕನ್ನಡಕಗಳು ಅಗತ್ಯವಿಲ್ಲ" ಎಂದು ಗಾಂಧೀಜಿಯವರಿಗೆ ತಿಳಿಸಿದರು. ಜೆಂಜಿಬಾರ್‌ನಲ್ಲಿ ಹರಿಜನ ಸಮಿತಿಯೊಂದು ಸ್ಥಾಪಿಸಲ್ಪಟ್ಟಿದೆ. ಡಾ| ಗಿಲ್ಡರ್‌ರವರೂ ಮಹಾತ್ಮರ ಕುರಿತು ಅಭಿಪ್ರಾಯ ಪಡುತ್ತಾ—"ಇನ್ನು ಗಾಂಧೀಜಿಯವರಿಗೆ ದೀರ್ಘಧಯವಿಲ್ಲ; ಆದರೂ ಅವರನ್ನು ಜಾಗ್ರತೆಯಿಂದ ಪೋಷಿಸುತ್ತಿರಬೇಕು. ಯಾವ ಬಗೆಯ ಉದ್ರೇಕ ಅವೇಶಗಳಿಗೂ ಸಡ್ಡಿಕ್ಕಿಯವರು ಚಿತ್ತ ವಿರಸವಾರದು ಎಂದಿರುವರು. ಮಹಾತ್ಮರ ದರ್ಶನವನ್ನು ಕೋರಿ ಬರುವ ಜನಸಂಖ್ಯೆಯು ಈಗ ಕಡಿಮೆಯಾಗಿರುತ್ತದೆ. ಮಹಾತ್ಮರು ತನ್ನ ಉಪವಾಸವನ್ನು ಕೊನೆಗೊಳಿಸಲು ಕಿತ್ತಳೆ ಹಣ್ಣುಗಳನ್ನು ಬದಗಿಸಿಕೊಟ್ಟ ಜಾಫರ್ ಎಂಬ ಹರಿಜನ ಹುಡುಗನು ಗಾಂಧಿಜಿಯವರನ್ನು ಸಂದರ್ಶಿಸಿ ವಿದ್ಯಾವೇತನದ ಕುರಿತು ಮಾತನಾಡಿದನು. ಗಾಂಧಿಜೀಯವರ ಮಹೋಪವಾಸದ ಪರಿಣಾಮವಾಗಿ ಹಿಂದೂದೇಶದ ಹಲವೆಡೆಗಳಲ್ಲಿ ಒಟ್ಟು ೨೦ ದೇವಸ್ಥಾನಗಳು ಹರಿಜನರಿಗಾಗಿ ತೆರೆಯಲ್ಪಟ್ಟುವು. ಮಹಾತ್ಮರ ಉಪವಾಸಾರಂಭವಾಗುವುದರ ೨ ಒಂದೆರಡು ದಿನಗಳ ಮೊದಲು ರವೀಂದ್ರನಾಥ ಠಾಗೂರರು ಮಹಾತ್ಮಾಜೀಯವರಿಗೆ ಈ ರೀತಿ ಬರೆದರು:—"ಪ್ರಿಯ ಮಹಾತ್ಮಾಜೀಯವರೇ, ಕೆಲವು ದಿನಗಳ ಹಿಂದೆ ನಾನು ನಿಮಗೆ ರವಾನಿಸಿದ ತಂತಿಯು ಇಷ್ಟರ ತನಕ ನಿಮಗೆ ತಲಪಲಿಲ್ಲವಂತೆ, ಆದರೆ ಅದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನೀವು ಕಿರಾವಹಿಸಿದ ದೀಕ್ಷೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುವುದಿಲ್ಲವಾದರೆ ನೀವು ನನ್ನನ್ನು ದೂರಬಾರದು. ನಿಮ್ಮ ಉಪವಾಸದ ಕಾರಣವೇನೆಂದು ನನಗೆ ತಿಳಿಸುವ ಯಾವ ಘಟನೆಯೂ ನನ್ನ ಅವಗಾಹನೆಗೆ ಬಂದಿಲ್ಲ. ಸೃಷ್ಟಿಯ ಆದಿಯಿಂದಲೇ ದುಷ್ಟ ಮತ್ತು ಅಸಮಂಜಸ ಸಂಗತಿಗಳು ನೆಲಸಿ ಬೆಳೆಯುತ್ತಿವೆ. ಇವುಗಳು ಪ್ರಾಪ್ತಿಯ ಅಧೀನಗತಿ. ಆದರೆ ಶುತ್ತಮ ಆದರ್ಶಗಳ ಬಾಳ್ವಿಕೆಯಾಗದೇಕಾದರೆ ಸತ್ಯದ ದೂತರು ಅವನ್ನು ಪ್ರಹುರಮಾಡಬೇಕು. ಹೀಗೆ ಜನಾಂಗಿಕ ವಿಷಯಗಳಿಗಾಗಿ ಕೆಲಸ ಮಾಡುವವರು ತಮ್ಮ ಸುತ್ತ ಮುತ್ತಲಿನ ವಾತಾವರಣದ ದೌಷ್ಟ್ಯದಿಂದಾಗಿ ನಿರಾಶೆಗೊಂಡು, ಹತಾಶರಾಗಿ ಕಾರ್ಯರಂಗವನ್ನು ತ್ಯಜಿಸಲು ಹೆಕ್ಕು ಇರುವುದಿಲ್ಲ. ಈ ಕುರಿತು ಒಂದು ಮಾತು—ಉದ್ದಂಡತನವಲ್ಲ—ಅಂದು ಬುದ್ಧ ದೇವನು ಪ್ರಕಂಡರ ಕತ್ಪಗಳ ನಿವಾರಣೆಗಾಗಿ ಯತ್ನಿಸಿ ತಾನು ದೂರ ಸರಿದನು. ಆದರೂ ಅವನು ಅವನ ಜೀವಮಾನದ ಅಂತ್ಯ ದಿನದ ವರೆಗೂ ಪಾಪಪರಿಹಾರಕ್ಕಾಗಿ ಉಪದೇಶವನ್ನು ಕೊಡುತ್ತಿದ್ದನು. ಶರೀರ ಅಥವಾ ಶುದ್ಧ ಚಿತ್ತಗಳನ್ನೂ ಮೀರಿ ಬರುವಂತಹ ಮರಣವನ್ನು ಧೈರ್ಯದಿಂದಲೇ ಎದುರಿಸಬೇಕು. ಅಲ್ಲದೆ ಜೀವನದ ಕೊನೆಯಗ್ಳೇಯವನ್ನು ತೋಕಕ್ಕೆ ತಿಳಿಸಲು ನಮಗೆ ಬೇರೆ ದಾರಿಯಿಲ್ಲದ ವಿನಹ ನಾವು ಮರಣವನ್ನು ತಂದು ಕೊಳ್ಳಲು ಹೆಕ್ಕುಳ್ಳವರಾಗಿಲ್ಲ. ನಿಮ್ಮ ಈ ಸಾರಿಯ ಪ್ರತಿಜ್ಞೆಯಲ್ಲಿ ನೀವು ತಪ್ಪಿಬೀಳಿಲ್ಲವೆಂದು ಹೇಳಲು ಧೈರ್ಯವಿಲ್ಲ. ಅದರಲ್ಲೂ ಉಪವಾಸದ ಪರಿಣಾಮವು ಮಹದಾನಿಕರವಿರುವಾಗ ನಿಮ್ಮ ಈ ಅಸಮಂಜಸ ವರ್ತನೆಯನ್ನು ನೆನಸಿ ನಡುಗಬೇಕಾಗಿದೆ. ಈ ತಪ್ಪನ್ನು ಹಿಂತೆಗೆಯುವುದಕ್ಕೂ ಸಾಧ್ಯವಿಲ್ಲವೆನ್ನುವಾಗ ಮತ್ತೂ ಧಯಭ್ರಾಂತರಾಗುತ್ತೀನೆ. ಭಗವಂತನ ಹೆಸರಿನಲ್ಲಿ ಅಂತಹ ಅಗ್ನಿಕುಂಡಕ್ಕೆ ನೀವು ಹಾರಬಾರದೆಂದು ನನ್ನ ನಿಶೀತ ಪ್ರಾರ್ಥನೆ. ಎಲ್ಲವೂ ಅವನು ಇಚ್ಛೆಂತಾಗುವುದು. ನಿಮ್ಮ ಪ್ರಾಣವು ಕೊನೆಯ ವರೆಗೆ ನಿಲ್ಲಬೇಕಾಗಿದೆ. ಅದರ ಕುದಾ ರಕ್ಷೆ ಇನ್ನೂ ಅನೇಕ ಸಂದರ್ಭಗಳಿವೆ. ಅಪ್ಪರ ತನಕ ಅದು ಮಾನುಷಿಕ ಧರ್ಮಗಳನ್ನು ಮಾಡುತ್ತಾ ಇರಬೇಕಾಗಿದೆ.

ನಿಮ್ಮ ಚಿತ್ತವೆದುರಿರುವ ಆದರ್ಶಗಳನ್ನು ನಾನರಿಯಲಾರೆ. ನಿಮಗೆ ಒಬ್ಬರಿಗೆ ಮಾತ್ರ ಬಂದಿರುವ ಈ ಅಂತರಿಕ ಕರೆಯ ವಿಷಯವೂ ನನಗೆ ತಿಳಿಯಲಾರದು. ಆದುದರಿಂದ ನೀವು ಮಾಡಿದುದೆಲ್ಲ ಸತ್ಯಶೋಧನೆಯ ಹಾದಿಯೆಂದು ತಿಳಿಯಲಿಕ್ಕಿಲ್ಲವೆನು. ಅಲ್ಲದೆ ನನ್ನ ಅಂಜಿಕೆಯು ನನ್ನೊಡಲಿನ ಧಯ ಮತ್ತು ಅಜ್ಞಾನಗಳಿಂದುಸ್ಫವಿಸಿದ ಕಲ್ಪಿತವೆಂದೇ ನನೆಯುವೆನು."

ಮೇ ತಾ. ೧೧ರಲ್ಲಿ ರವೀಂದ್ರನಾಥ ಠಾಗೂರರು ಮಹಾತ್ಮರಿಗೆ ಇನ್ನೊಂದು ಪತ್ರ ಬರೆದರು. ಅದು ಹೀಗಿತ್ತು:—"ಜಗತ್ತಿನೆದುರು ಇರುವ ನಿಮ್ಮ ಈ ಅಂತ್ಯ ಸಂದೇಶದ ಅರ್ಥ ವನ್ನರಿಯಲು ನಾನು ಯತ್ನಿಸುತ್ತಿರುವೆನು. ಬುದ್ಧದೇವನು ತನ್ನ ಜೀವನದ ಪ್ರಕಟಿಯೊಂದು ವಿಶೇಷ ಕಾರ್ಯದಲ್ಲಿ ಸಮಪ್ಪಿಯ ಮೇಲಿನ ಅಗಾಧ ಪ್ರೇಮ ನಿರೂಪಣೆಯನ್ನು ಪ್ರಾಪಿಸಿದನು. ಕ್ರೈಸ್ತನು "ನಿಮ್ಮ ವೈರಿಗಳನ್ನು ಪ್ರೀತಿಸಿರಿ" ಎಂದನು. ಅವನ ಈ ಮಾತಿನ ನಿರೂಪಣವು ಅವನ ಮರಣದ ಮೇಲಾಯಿತು. ತನ್ನನ್ನು ಕೊಂದವರನ್ನು ಅವನು ಕ್ಷಮಿಸಿದನು. ನಿಮ್ಮ ಉಪವಾಸದಲ್ಲಿ ಅಡಕವಾಗಿರುವುದು ದೇಶಿಗರ ಪಾಪಪರಿಹಾರದ ಒಂದು ಧ್ಯೇಯ. ಆದರೆ ದುರದೃಷ್ಟವಂತರೂ ಅಜ್ಞಾನಿಗಳೂ ಆದ ಜನರ ಪಾಪ ಪರಿಹಾರವನ್ನು ನೀವು ನಿಮ್ಮ ದಿನಚರಿಯ ಪವಿತ್ರ ಕೆಲಸಗಳ ಮೂಲಕವೇ ಮಾಡಬೇಕು. ಅನ್ಯಾಯ ಗಾರನ ಅನ್ಯಾಯದ ನಿರ್ಮೂಲವನ್ನು ಮಾಡಲಾರದ ನಿಮ್ಮ ಉಪವಾಸವು ಸಾರ್ವತ್ರಿಕವಾಗಿ ಅನುಮೋದಿತವಾಗಲಾರದು. ಕಾರಣ, ನಿಮ್ಮ ಮಾರ್ಗದರ್ಶಿತ್ವವು ಈಗ ಬೇಕಾಗಿದೆ. ದೇಹಾಪಾಯವನ್ನುಂಟುಮಾಡುವ ನಿಮ್ಮ ಕ್ರಿಯೆಯು ಪ್ರಿಯವಲ್ಲ. ಮಾನವ ಕರ್ತವ್ಯದ ಹೊರೆಯನ್ನೆತ್ತಿಕೊಂಡ ಯಾವ ವ್ಯಕ್ತಿಯೂ ನಿಮ್ಮ ಉಪವಾಸವನ್ನು ಕಂಡು ಮೆಚ್ಚನು. ನಿಮ್ಮಂತೆ ಇನ್ನಿತರ ಉನ್ನತ ಆತ್ಮಗಳೂ ಉಪವಾಸ ಮಾಡಿದರೆ ನಿಮ್ಮ ನಿಮ್ಮ ನೈತಿಕ ಬಲವುಂಟಾದ ಹಾಗಾಗುವುದು. ಆದರೆ ಅಜ್ಞಾನಿಗಳಾದ ಜನತೆಯು ಮಾತ್ರ ದಾರಿತಪ್ಪಿದಂತಾಗುವುದು. ನಿಮ್ಮ ಈ ಉಪವಾಸವು ನಿಮ್ಮ ಮೂಲಕವೇ ಕಾರ್ಯಕ್ಕೆ ಬರುವುದೆಂದು ಹೇಳಲು ನಿಮಗೆ ಅಧಿಕಾರವಿಲ್ಲ. ಇದರಿಂದ ಜನತೆಗೆ ಒಂದು ದಾರಿ ತೋರಿಸಿ ಕೊಟ್ಟಂತಾಗುತ್ತದೆ. ಇದರ ಪ್ರಯೋಜನವನ್ನು ನೀವೊಬ್ಬರೇ ಹೊರಗೆ ತರಬೇಕೆಂದಿರುವುದಾದರೆ ನೀವು ರಹಸ್ಯವಾಗಿಯೇ ಈ ಉಪವಾಸವನ್ನು ಮಾಡಬೇಕಿತ್ತು. ನೀವು ಜನಾಂಗಕ್ಕೆ ಅರಿಕೆ ಮಾಡಿದುದ್ದು ನೀತಿಯನ್ನು ಬಿಡಲೆತ್ನಿಸಿದೆಂದು ಹೇಳುತ್ತೀರಿ. ನೀವು ಮಾತ್ರ ವಿಪರೀತತೆಯ ಯಜ್ಞಕ್ಕೆ ಕೈಕೊಡುತ್ತೀರಿ. ನಿಮಗಿಂತ ಕಳಕಳತರಗತಿಯವರಿಗೆ ನಿಮ್ಮ ಉಪವಾಸವು ಒಂದು ಕತ್ತಲ ಹಾದಿಯಾಗಿದೆ, ಅವರು ನಿಮ್ಮನ್ನನುಸರಿಸುವುದಕ್ಕಾಗಿ ಈ ಹಾದಿಗಿಳಿಯುತ್ತಿರುವರು. ಯಾವ ಸಂದೇಶವೇ ಆಗಲಿ ಅದು ವಿಶ್ವನ್ಯಾಪೀಯಾಗಬೇಕು. ಆಥವಾ ಅಂತರ್ಜ್ಞಾನ್ನು ಕೈಕೊಳ್ಳಲೇ ಕೂಡದು. ನಿಮ್ಮ ಉಪವಾಸ ದೀಕ್ಷೆಯಿಂದ ನನಗೆ ದೊರೆತ ಕಷ್ಟದಿಂದಾಗಿ ನಾನು ನಿಮಗೆ ಈ ರೀತಿ ಬರೆಯಲು ಕಾರಣ ವಾಯಿತು. ಕಾರಣ, ನಿಮ್ಮಂತಹ ಲೋಕವಂದ್ಯರು ಸಮರ್ಪಕ ನ್ಯಾಯರಹಿತ ಹಾದಿಗಿಳಿದುದನ್ನು ಕಂಡು ನನಗೆ ಅಸಹನೀಯ ವ್ಯಥೆಯಾಯಿತು ಆದುದರಿಂದ ನಮ್ಮ ರಾಷ್ಟ್ರದ ಬೆಳೆಗಾಗಿ, ನಿಮ್ಮಲ್ಲಿರುವ ರಾಷ್ಟ್ರೀಯತ್ವಕ್ಕಾಗಿ, ನನ್ನ ದೇಶಿಗರಾದ ಮಿಲಿಯಾವಧಿ ಜನರಿಗಾಗಿ ನೀವು ಈ ಪ್ರತಿಜ್ಞೆಯನ್ನು ಹಿಂತೆಗೆಯ ಬೇಕೆಂದು ಪ್ರಾರ್ಥಿಸುವೆನು."

ಪೆರಿಸ್ ನಗರದ ಬಳಿ ನೆಂಟ್ಸ್ ಎಂಬಲ್ಲಿ ರೈಲುಕಂಬಿಗಳನ್ನು ತಪ್ಪಿದಿದ್ದುದರಿಂದ ೧೪ ಜನರು ಅಲ್ಲೇ ಮೃತರಾದರು. ೬೦ ಮಂದಿಗಳು ಜಖಂಗೊಂಡರು. ಮರಣಹೊಂದಿದವರ ಸಂಖ್ಯೆಗಳು ಹೆಚ್ಚಿಗಿರಬಹುದೆಂದು ಅಂದಾಜಾಗಿದೆ. ಅನೇಕರ ಪತ್ತೆಯಾಗಿಲ್ಲ. ಎರಡು ದಿನಗಳ ನಂತರ ಇನ್ನೊಂದು ರೈಲಿನ ಅವಘಡ ನಡೆಯಿತು. ಪೆರಿಸ್ ನೆಂಟ್ಸ್ ಮಧ್ಯೆ ೬೦ ಮೈಲಿಯು ವೇಗದಿಂದ ಓಡುತ್ತಿದ್ದ ರೈಲು ಬಿದ್ದು ಅನೇಕರು ಮಡಿದರು. ೩೦ ಜನರು ಘಾಯಗೊಂಡರು. ಜನರು ಮೃತರಾಗುವ ದೃಶ್ಯವು ಅಸಹನೀಯವಾಗಿತ್ತು. ಹೆಂಡತಿಯು ಗಂಡನನ್ನೂ, ತಾಯಿಯು ಮಗುವನ್ನೂ ಅಗಲಿದ್ದ ಆ ದೃಶ್ಯವು ಹೃದಯ ವೊಡೆಯುವಂತಿತ್ತು.

ಜಪಾನಿನ ಟೋಕಿಯೋ ನಗರದಲ್ಲಿ ಒಂದು ಗನಿಯೊಳಗೆ ಸ್ಫೋಟನವಾಗಿ ೬೬ ಜನರು ಮೃತಂಕರರು. ೩೦ ಜನರು ಘಾಯಗೊಂಡರು.

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಶುಷ್ಕಿತ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ ಧಾತುಪುಷ್ಟಿಕ ಮತ್ತು ಕಫ್ತವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಏಕ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಿತ (ಗಡಿಬಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಆಘಾತ ಬೀರಿ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೃಶಾಂಗ, ಕಣ್ಣೊಳಗೆ ಉರುವು ಬೀಳೋಣ, ಯಾವಾಗಲೂ ಎದುಬಿನಿಲ್ಲ, ಜ್ವರ ಇರೋಣ, ನಡು ನೋಯೋಣ, ಸಿತ್ತಿಂದ ಕಣ್ಣಿಗೆ ಕತ್ತಲಿ ಬಂದು ಭೋಕರೆ ಬರೋಣ, ಸೌಡಕ್ಕೆ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಶ್ವಾಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಜೀರ್ಣಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ಶರೀರಿಗೆ ವೃಧಿಯಾದರಿಂದ ಅಥವಾ ಬೇರೆ ಕಾರಣದಿಂದ ಲಕ್ಷದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಂಗಿ ಶರೀರ ಉಲವಾಗಿ ಮುಳಿಯ ಪುಕ್ಕಿವಂತ ರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಸ್ಕದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಕಸ್ಮಾತ ಹುಡುಗರು ಬಲ ಹಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

೧ ಬಾಟ್ಲಿ ಬೆಲೆ ೧ – ೪ – ೦, ೩ ಬಾಟ್ಲಿಗೆ ೩ – ೮ ೦, ಡಜನು ಬಾಟ್ಲಿಗಿಂತ ರೊಕ್ಕಾ ಟಪ್ಪಾಲ ಖರ್ಚು ಪೊಚ್ಚೇಜು ಬೇರೆ ಬೇಕುತ್ತದೆ.

ಸ್ವದೇಶಿ ಕೆಮಿಸ್ಟ ಮತ್ತು ಸ್ಟೋರ್ಸ್‌ದೊಳಗೆ ಮತ್ತು ಹಂತಾಗಿ ಅಂಗಡಿಯಲ್ಲಿ ಸಿಗುವುದು.

ಸಿಕ್ಕುವ ಸ್ಥಳ:— ವೆಂಕಾಪೇಶ್ವರ—ದ್ರಾಕ್ಷಾಕ್ಷಾ ಮೃತ ಕಾರ್ಖಾನ್ಹಾಲಿಯ, ಪೋಷ್ಟು ಸಿಪ್ಪಾಣಿ ಬೆಲ್ಗಾಂ, (ಬೆಳಗಾಂವಿ)

ಮಂಗಳೂರು—ಗಣಪಾನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್.

ಕುಂದಾಪುರ—ಕೆ. ಆರ್. ಭಟ್ಟ, ಕೆಮಿಸ್ಟ್ಸ್. ಉಡುಪಿ—ಪೈ ಫಾರ್ಮಸಿ, ತೆಂಕಪೇಟೆ. ಕಾರ್ಕಳ—ವಿ. ವಿ. ಶೆಣೈ, ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಪೈ ಫಾರ್ಮಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟ್ವಾಳ—ದಿ ಕೆನರಾ ಸ್ಟೋರ್ಸ್‌ಲರ್ ಪಾರ್ಮಸಿ.

ಮಹಾತ್ಮಾ ಗಾಂಧಿಯವರ ಮೇಲೆ ಪಟೇಲ ಮತ್ತು ಬೋಸರ ಧಾಳಿ!

ಆಕಾಶಭೂಮಿಗಳ ವಿಮಾನ.

ಇತ್ತೀಚೆಗೆ ವಿಮಾನಗಳು ಆಕಾಶದಲ್ಲಿ ಹಾರಾಡಿ ಕ್ರಿಮ್ಮತ್ತು ಬಾಂಬುಗಳನ್ನು ಅವುಗಳು ಭೂಮಿಯ ಮೇಲೂ ಪಾರಾಚುಟಿನಂತಾಗಿದೆ ಜರ್ಮನಿಯಲ್ಲಿ ಒಂದು ವಿಮಾನವನ್ನು ತಯಾರಿಸಿರುತ್ತಾರೆ ಇದು ಆಕಾಶದಲ್ಲಿ ವಿಮಾನದಂತೆ ಹಾರುತ್ತದೆ ಭೂಮಿಗೆಧುಮಿಕ ತನ್ನ ರೆಕ್ಕೆದಾಟಿ ಬಿಚ್ಚಿಕೊಂಡು ಬಾಹರು ಶಕ್ತಿದ ಮೋಟರ್ ಆಗುತ್ತದೆ ಬೇಕಾದೊಡನೆ ಅದನ್ನು ಕಳಚಿ ಆಕಾಶಕ್ಕೂ ಹಾರಿಸಬಹುದು ನಾಲ್ಕು ಜನರ ಸೀಟುಗಳಿವೆ ಡ್ರೈವರನ ಸ್ಥಳವೂ ಸ್ವತಂತ್ರವಿದೆ

ಬೆತ್ತದ ಒಳಗೆ ರೇಡಿಯೋ

ಜರ್ಮನಿಯ ಆರ್ಟ್ಫ್ರಾಡ್ ಮಿಂಟಸ್ ಎಂಬವನೊಬ್ಬನು ಒಂದು ರೇಡಿಯೋ ಬೆತ್ತವನ್ನು ತಯಾರಿಸಿರುವನು ಅದನ್ನು ಬೆತ್ತದಂತೆಯೂ ಉಪಯೋಗಿಸಬಹುದು. ಆಕೆಯಾದಾಗ ಅದರ ತಲೆಯನ್ನು ತಿರುಗಿಸಿ ಅದರ ಒಂದು ಸೂಜಿಗೆ ರೇಡಿಯೋ ಎಳೆಗಿಯನ್ನಿಟ್ಟು ಪ್ರಸಂಗದಲ್ಲಿ ನಡೆಯುವ ಗಾಯನ ಭಾಷಣಗಳನ್ನೂ ಕೇಳಬಹುದು ಬೀದಿ ಮೇಲೆ ನಡೆಯುತ್ತಿರುವಾಗಲೂ ರೇಡಿಯೋ ಕೇಳಬೇಕೆಂದು ಇವನು ಆಲೋಚಿಸಿ ಈಗ ಅಕ್ಕಂತ ನಾಜೂಕಿಂದ ಒಂದು ರೇಡಿಯೋವನ್ನು ತಯಾರಿಸಿರುವನು

ಕುರುಡುತನ ಹೋಗಲಿದ

ಕುರುಡರಿಗಾಗುವ ಒಂದು ದೃಷ್ಟಿ ಚಕ್ರವು ನ್ಯೂಯೋರ್ಕಿನಲ್ಲಿ ತಯಾರಾಗಿದೆ. ಅಮೇರಿಕನ್ ಎಕೆಡಿಮಿಯವರಿಗೆ ತಿಳಿದುಬರುವಂತೆ ಆಲ್ಲಿ ಹುಟ್ಟಿರು ಕನ್ನಡಿಗಳು ತಯಾರಾಗಿವೆ ಹುಟ್ಟು ಕುರುಡರು ಕೂಡಾ ಈ ಕನ್ನಡಿಯನ್ನು ಧರಿಸಿದೊಡನೆ ಕಣ್ಣು ಬರುತ್ತದೆ ಈ ಕನ್ನಡಿಗಳ ಶಕ್ತಿಯು ಬಹಳವಿದುವುದರಿಂದ ಸಂಪೂರ್ಣ ಕೆಲಸವು ಮುಗಿಯಿಲ್ಲ ಅದರೂ ಕುರುಡರಿಗೆ ಸುರಿನವು ಸಮಾಜವಾಯಿತೆನ್ನ ಬಹುದು

ಪ್ರಾರ್ಥಿಸುವ ಮರ

ಕಲ್ಕತ್ತದ ಬಲಾಸೋರ್ ಜಿಲ್ಲೆಯಲ್ಲಿ ಒಂದ ಪಿರ್ಜಾರದ ಮರವು ಮಧ್ಯಾಹ್ನದ ಹೊತ್ತಿಗೆ ಭೂವಿಯ ಮೇಲೆ ಬಲಿ ಮಧ್ಯೆ ರಾತ್ರೆ ಪುನಃ ಎದ್ದಿಬಿಲ್ಲುತ್ತದೆಂಬ ವಾರ್ತೆಯೊಂದು ಹರಡಿದೆ ಈ ಮರವನ್ನು ನೋಡಲಿಕ್ಕೆ ಸಾವಿರಾರು ಜನರು ದೈಲು ಟ್ರಾಮುಗಳಲ್ಲಿ ಅತ್ತ ತರಳುತ್ತಿರುವರು ಇದಕ್ಕೆ ಕಾರಣವೇನೆಂದು ಸತ್ಯ ಶಾಸ್ತ್ರಜ್ಞರು ಹುಡುಕಿರುತ್ತಾರೆ ಒಂದು ಮರವು ನೆಲಕ್ಕೆ ತಗಲು ರೀತಿಯಲ್ಲಿ ಬಾಗ್ಗಿಕೊಂಡರೆ ಅದು ಪ್ರತಿ ಮಧ್ಯಾಹ್ನಕ್ಕೂ ರಾತ್ರೆಗೂ ವಿಲಿಗಿ ತನ್ನ ಮುಂಚಿನ ಸ್ಥಾನಕ್ಕೆ ಎದ್ದುಕೊಳ್ಳುತ್ತದೆ ಬಿಕ್ಷುಸಾಸ್ಥಿಕದಲ್ಲಿ ಹೀಗೆ ಪ್ರಾರ್ಥಿಸುವ ತೆಂಗಿನ ಸಸಿಗಳ ಒಂದು ದೊಡ್ಡ ತೋಪು ಇದೆಯೆಂದು ತಿಳಿದುಬಂದಿದೆ ಅಲ್ಲಿಯ ಈ ತೆಂಗಿನ ಮರಗಳು ಬೆಳಿಗ್ಗೆ ನೆಟ್ಟಗಿದ್ದು ಸಂಜೆಯಾಗುತ್ತಲೇ ಬಗ್ಗಿಕೊಳ್ಳುತ್ತವೆ ಅವು ಹೀಗೆ ಬಗ್ಗಿಕೊಳ್ಳುವುದರಿಂದ ಕಾಯಿಗಳನ್ನು ತೆಗೆಯಲು ಜನರ ಹಕ್ಕಲ ಅವಶ್ಯವಿಲ್ಲ ಗಣಿಗರಲ್ಲಿ ಮಾಧವಿತವಾದ ಲಿವರ ಪೂಲ ಪತ್ರಿಕೆಯಲ್ಲಿ ಕೂಡಾ ಇಂತಹ ವಾರವೊಂದರ ಕುರಿತು ಉಲ್ಲೇಖವಿದೆ ಸಣ್ಣ ಸಣ್ಣ ಸಸಿಗಳು ಹಗಲಲ್ಲಿ ಎಚ್ಚರವಿದ್ದು ರಾತ್ರಿ ಮಲಗುವಂತೆ ಈ ದೊಡ್ಡ ಮರಗಳೂ ಈ ಸ್ವಭಾವದ್ದಾಗಿದೆಯೆಂದು ಅವರ ನಾದ

ಲಂಡನ್, ಮುಂಬಾಯಿ, ಪುನಾ, ಮದ್ರಾಸ್‌ಗಳನ್ನು ಟಲಿಫೋನಿನಿಂದ ಕಟ್ಟಿದರು

ಮೇ ತಾರೀಕು ೩೦ನೇ ದಿನ ವಿಶೇಷ ವಿದ್ಯಮಾನವು ನಡೆಯಿತು ಫೋನಿನ ಕರ್ತೃ ಬೇಮನ್ ಪರ್ಯಲೆಸ್ ಸ್ಟೇಷನ್ನಿನವರು ಮದ್ರಾಸಿನ ಸೆಂಟ್ರಲ್ ಟೆಲಿಗ್ರಾಫ್ ಆಫೀಸಿನ ಅಧಿಕಾರಿಗಳೊಡನೆ ಟೆಲಿಫೋನಿನ ಮೂಲಕ ಮಾತಾಡಿದರು ಲಂಡನ್ ಪೂನಾಗಳಲ್ಲಿ ಟೆಲಿಫೋನ್ ಸ್ಥಾಪನೆಯು ಮೊನ್ನೆ ನಡೆದಿತ್ತು. ಈಗ ಪೂನಾ ಮದ್ರಾಸ್ ಮುಂಬಾಯಿ ಗಳನ್ನೂ ಅದರೊಡನೆ ಸೇರಿಸಿದರು ಇನ್ನು ಲಂಡನ್ ಅಧಿಕಾರಿಗಳೂ ಭಾರತದ ಅಧಿಕಾರಿಗಳೂ ದಿನೇ ದಿನೇ ಮಾತಾಡುತ್ತಿರಬಹುದು ಟ್ರಂಕ್ ಎಕ್ಸ್‌ಚೇಂಜಿನಲ್ಲಿ ನಡಿಯುವ ಮೊದಲನುಡಿಗೆ ಡಿಫೋಜಿಟು ಇಲ್ಲ ಆ ಮೇಲೆ ಆ ಪಕ್ಷವನೊಡನೆ ನುಡಿಯುವುದಾದರೆ ಒಮ್ಮಿಗೆ ಆರು ರೂಪ್ಯಾಗಳನ್ನು ಕಟ್ಟಬೇಕು ಮದ್ರಾಸಿನವರು ಮುಂಬಾಯಿಯ ಸೆಂಟ್ರಲ್ ಟ್ರಂಕ್ ಎಕ್ಸ್‌ಚೇಂಜ್ ಆಫೀಸಿನ dial 2991 ಕರೆದೊಡನೆ ಉತ್ತರ ಸಿಗುತ್ತದೆ

ಅಂದಮಾನದಲ್ಲಿ ಕೈದಿಗಳ ಉಪವಾಸ—ಇಬ್ಬರ ಮರಣ!

ಅಂದಮಾನ ಕೈದಿಗೆ ಕಳುಹಿಸಲ್ಪಟ್ಟ ರಾಜಕೀಯ ಕೈದಿಗಳು ಉಪವಾಸವನ್ನು ಕೈಕೊಂಡಿರುವರು ೨೧ ದಿವಸ ಉಪವಾಸ ಮಾಡಿ ಇಬ್ಬರು ಆದರಲ್ಲೇ ಮೃತರಾದರು. ಉಳಿದ ೫೭ ಮಂದಿಗಳು ತನ್ನ ಸ್ವತವನ್ನು ಪಡಿಬೇಕೆಂದು ಯಾಚಿಸಲಾಗುತ್ತದೆ ಕಲ್ಕತ್ತದ ಅಲ್ಬರ್ಟ್ ಹೋಲ್‌ನಲ್ಲಿ ಮೇಯರರಾದ ಶ್ರೀ ನಂತೋಷಕುಮಾರ ಬಾಸುರವರ ಅಧ್ಯಕ್ಷತೆಯಲ್ಲಿ ಒಂದು ಪ್ರಚಂಡ ಸಭೆಯು ಜರಿಗಿ ಈ ರಾಜಕೀಯ ಕೈದಿಗಳನ್ನು ಅಂದಮಾನದಿಂದ ತಾತಿಗೆ ಕರಪೇಕೆಂದೂ, ಸರಕಾರವು ಹೊಕ್ಕೆ ತೀರುಕೊಂಡ ಇಬ್ಬರ ಮರಣಕ್ಕೆ ಕಾರಣವೇನೆಂಬ ನಿಜಾರಣ ಪ್ರಕಟಿಸಬೇಕೆಂದೂ, ಅವರಿಬ್ಬರ ಸ್ಮಾರಕ ಕೈಲಸವನ್ನು ಕೆರಿಸಿಕೊಡುವು ಉಪೋಗ್ಯವೆಂದು ನಿರ್ಣಯಿಸಲಾಯಿತು

ಮಹಾತ್ಮರ ಮೇಲೆ ಪಟೇಲ ಮತ್ತು ಬೋಸರ ಧಾಳಿ!

ಮಹಾತ್ಮಾ ಗಾಂಧಿಯವರು ಉಪವಾಸಾರಂಭವಾಗುವಾಗ ಕಾಯದೆ ಭಂಗ ಚಳವಳವನ್ನು ೩ ವಾರಗಳ ತನಕ ನಿಲ್ಲಿಸಲಪ್ಪಡ ಕೊಟ್ಟರಷ್ಟೆ, ಆ ವಾರ್ತೆಯನ್ನು ಯೂರೋಪಿನಲ್ಲಿರುವ ಶ್ರೀ ಸುಭಾಷ್‌ಚಂದ್ರ ಬೋಸರೂ ಶ್ರೀ ವಿ ಜೆ ಪಟೇಲರೂ ಕೇಳಿ ಮಿಯನ್ನಾದಿಂದ ಹೀಗೆ ಪ್ರಕಟಿಸಿರುವರು

"ಮಹಾತ್ಮಾ ಗಾಂಧಿಯವರು ಇತ್ತಲಾಗೆ ಚಳವಳವನ್ನು ನಿಲ್ಲಿಸಿದ ಪ್ರಯತ್ನದಿಂದಾಗಿ ಕೊಂಗ್ರೆಸ್ಸಿನ ಈಗಿನ ರೀತಿನೀತಿಗಳ ಬಗ್ಗೆ ನಮ್ಮಿಷ್ಟಾ ಅದು ಸೋತಿತೆಂದೇ ಹೇಳಬೇಕಾಗುತ್ತದೆ ರಾಜಕೀಯ ಧುರೀಣತೆಯಲ್ಲಿ ಮಹಾತ್ಮಾ ಗಾಂಧಿಯವರು ಅಸಜಯಗಳೇ ಅದರೆಂದು ನಮ್ಮ ಸ್ಪಷ್ಟ ಮತ ಆದರಿಂದ ಕೊಂಗ್ರೆಸ್ಸನ್ನು ಪುನರ್‌ಸಂಘಟಿಸುವ ಮತ್ತು ಬೇರೆ ಸೂತ್ರ ನೀತಿಗಳನ್ನು ಪ್ರಚಾರಂಥಿಸುವ ಕಾಲವು ಸನ್ನಿಹಿತವಾದಿ ಈ ಪುನರ್‌ಸಂಘಟನೆಯಾಗಬೇಕಾದರೆ ಮುಂದಾಳುತ್ವವು ಬೇರೆಯಾಗಬೇಕು ಮಹಾತ್ಮಾ ಗಾಂಧಿಯವರು ತನ್ನ ಜೀವನವಿಡೀ ಅವರ ಸೂತ್ರಗಳನ್ನೇ ಬೆನ್ನು ಹತ್ತಿ ನಡೆಯುತ್ತಿರುವುದರಿಂದ ಅವುಗಳನ್ನು ಬಿಡಿರೆಂದು ಕೇಳಿಕೊಳ್ಳುವುದು ಯುಕ್ತವಲ್ಲ ಕೊಂಗ್ರೆಸ್ಸು ತನ್ನ ದರ್ತನೆಯನ್ನು ಪರಿವರ್ತಿಸಿಕೊಂಡರೆ ಶ್ರೇಯಸ್ಕರ ಹೀಗೆ ಅದೂ ಮಾಡುವುದಿಲ್ಲವಾದರೆ ಕೊಂಗ್ರೆಸ್ಸಿನೊಳಗೆ ನೂತನ ಪಕ್ಷವೊಂದು ಸ್ಥಾಪನೆಯಾಗಿ ಯೋಗ್ಯ ಕಾರ್ಯಕ್ರಮಗಳನ್ನು ಮುಂದೆ ತರಬೇಕು ಅಸಜಕಂಠತೆಯನ್ನು ಬಿಡಲಾಗದು ಅದರೆ ಅವರ ರೂಪವನ್ನು ಬದಲಾಯಿಸ ಬೇಕು ಅದರ ಮೂಲಕ ಸೇನಾಶಕ್ತಿಯಿಂದ ಜಕುರ್ದಿಕ್ಕುಗಳಿಂದಲೂ ಸ್ವಾತಂತ್ರ್ಯಕ್ಕಾಗಿ ಹೋರಾಟವಾಗಬೇಕು"

ಹಿಂದೀಯ ರಾಜಕೀಯ ಕೈದಿಗಳ ಕಷ್ಟ

ದಿ ತಿಯೊಫಿಸ್ಟ್ ಪತ್ರಿಕೆಯಲ್ಲಿ 'Twice in goal' ಎಂಬ ಅನಾಮಧೇಯರೊಬ್ಬರು ಸಿ ಕ್ಲಾಸ್ ಕೈದಿಗಳ ಕಷ್ಟಗಳ ಕುರಿತು ಒಂದು ಲೇಖನವನ್ನು ಬರೆದಿರುತ್ತಾರೆ ಅವರು ಹೇಳುವುದು "ಕಾಂಗ್ರೆಸ್ಸಿನ ಕೋಣೆಯಲ್ಲಿ ಸ್ಥಳವಿರುವುದಕ್ಕಿಂತಲೂ ಹೆಚ್ಚು ಕೈದಿಗಳನ್ನು ತುಂಬಿಸುತ್ತಾರೆ ಕೆಲವು ಸಮಯದಲ್ಲಿ ಒಂದು ಸಾರ್ದಿನಲ್ಲಿ ಪುಲಾ ಸಂಖ್ಯೆಯ ಕೈದಿಗಳನ್ನು ತುಂಬಿಸುತ್ತಾರೆ ಇದರಿಂದಾಗಿ ಕೈದಿಗಳಿಗೆ ಬಹಳ ಆನಾನುಕೂಲತೆಯು ಉಂಟಾಗುತ್ತದೆ ಕೇಂಪ್ ಜೈಲುಗಳ ಗತಿಯನ್ನು ಹೇಳದಿರುವುದು ಉತ್ತಮ ಹಿಂದೀಯರು ಅವರ (ಅಂದರೆ ಅಧಿಕಾರಿಗಳ) ಇಚ್ಛೆಯಂತೆಯೇ ನಡೆಯಬೇಕು. ಹಿಂದೀಯರ ಜೀವನ ಅಂಕುಸ ಮೊದಲೇ ಅಧಮ ರೀತಿದ್ದು ಈ ಕೇಂಪ್ ಜೈಲುಗಳಲ್ಲಿ ಅದನ್ನು ಪುಕ್ತಾ ಪಿಪನ್ನಾನೈಗೆಸುತ್ತಾರೆ ಸಾಮಾನ್ಯವಾಗಿ ಕೈದಿಗಳಿಗೆ ಎರಡೂ ಜೊತೆ ಅರ್ಧ ಇಜಾರು, ಕೈಗಳಿಲ್ಲದ ಒಂದು ಕರ್ಟಾ ಒಂದು ಟೊಪ್ಪಿ ೩ ಬ್ಲಾಂಕೆಟುಗಳನ್ನು ಕೊಡುತ್ತಾರೆ ಇವುಗಳು ಅರು ತಿಂಗಳುಗಳ ತನಕ ಬಾಳಿಕೆ ಬರಬೇಕು ಚಳಿಗಾಲದಲ್ಲಿ ಒಂದು ಕರ್ಟಾನ್ನೂ ಇನ್ನೊಂದು ಬ್ಲಾಂಕೆಟ್ಟನ್ನೂ ಕೊಡುತ್ತಾರೆ ಪಂದರ್ಕಲ್ಲುಗಳನ್ನು ಕೊಡುವುದಿಲ್ಲ ಈ ಉದಿಗ್ತೆತಿದಿಗಳು ಎಷ್ಟಕ್ಕೂ ಸಾಲದಾಗುತ್ತವೆ ಮೂರು ಬ್ಲಾಂಕೆಟುಗಳು ಬಹಳ ಸಡಿಲಾಗಿ ನೇಯಲ್ಪಟ್ಟಿವುಗಳು ಇವುಗಳನ್ನು ಹಾಸಿಗೆ ತಲೆಗಿಂಬುಗಳಾಗಿ ಉಪಯೋಗಿಸಲು ಕೇವು ದಿನಗಳೊಳಗೆ ಇವುಗಳಿಂದ ಕೂದಲುರೂಪದ ದೋಮ್ಮಗಳು ಉದುರಿ ಕೆಟ್ಟಿಹೆ ವಾರ್ತಗಳಲ್ಲಿ ಹಾಗಾಡತ್ತದೆ ಉಣ್ಣುವಿಗಳೂ ಕುಡಿಯುವಾಗಲೂ ಈ ಹಾಸಿಗೆ ದೋಮ್ಮಗಳನ್ನು ಕೂದಾ ನುಂಗದೆ ನರ್ವಾಹವಿರುವುದಿಲ್ಲ ಪ್ರತಿಯೊಬ್ಬ ಕೈದಿಗೆ ಎರಡು ಕಬ್ಬಿಣದ ಪಾತ್ರೆಗಳು ಒದಗಿಸಲ್ಪಡುತ್ತವೆ ಒಂದರಲ್ಲಿ ಕುಡಿಯುವುದು ಇನ್ನೊಂದರಲ್ಲಿ ಉಣ್ಣುವುದು ಈ ಪಾತ್ರೆಗಳು ಅರ್ಧ ಇಂಚಿನಲ್ಲಿ ವಣ್ಣುಹಿಡಿಯಲ್ಪಟ್ಟ ಶೌಚಕ್ಕೆ ತೆರಳಿದೆ ಎ ಮತ್ತು ಬಿ ತರಗತಿಯವರಿಗೆ ಎಲುಮಿನಿಯಂ ಸಾಮಾನುಗಳು ಕೊಡಲ್ಪಡುತ್ತವೆ ಜೈಲಿನಲ್ಲಿ ಸಾಯದಂತೆ ಮಾತ್ರ ಮದ್ದು ಸಿಗುತ್ತದೆ ರೋಗ ಗುಣಪಡಿಸುವುದಕ್ಕಲ್ಲ ಕೇಂಪ್ ಜೈಲುಗಳ ಪಿಚಿತ್ಸೆಯ ಬಹಳ ಅಸಹ್ಯಕರವಿದೆ ಹೆಚ್ಚಿನ ರಾಜಕೀಯ ಕೈದಿಗಳು ಈ ಆಹುಚಿತ್ಯದಿಂದಾಗಿ ರೋಗಕ್ಕೆ ಬಲಿಯಾಗುತ್ತಾರೆ ಸಿ ಕ್ಲಾಸ್ ತರಗತಿಯವರು ಮೂರು ತಿಂಗಳಿಗೊಮ್ಮೆ ಒಂದು ಕಾಗದವನ್ನು ಬರೆಯಲೂ ಸ್ವೀಕರಿಸಲೂ ಹಕ್ಕುಳ್ಳವರು ಹೊರಗಿನವರ ಭೇಟಿಯು ಸರಳುಗಳ ಹಿಂದಿನಿಂದಲೇ ನಡೆಯುತ್ತದೆ ವಿನಹ ನಿಜವಾದ ಭೇಟಿ ಸಿರುವುದಿಲ್ಲ ಈ ಕುಂದುಕೊರತೆಗಳನ್ನು ಹೋಗಲಾಡಿಸಬಹುದು"

Co-operative Movements—Handicaps

South Kanara District

1. When the S K Central Co operative Bank was started in 1914, organised credit facilities could hardly be said to be either extensive or easy or even cheap So the Co operative movement could grow up for some length of time

2 Of late, however, several indigenous joint stock banks have sprung up fostered and founded more or less on communal basis e g we have now Jayalakshmi Bank Karnataka Bank Catholic Bank Vijaya Bank Pangal Nayak Bank The only two credit institutions which were in existence at the date of organisation of the Co operative Bank aforesaid viz the Canara Bank at Mangalore and the Banking Corporation of Udipi had altogether not more than 4 lakhs of working Capital

3 Today we have got figures that almost stagger an on looker Over 90 lakhs is the working capital of these Joint Stock Banks alone All the Taluka Headquarters and even several still farther off places in village areas cater credit

4 The latest step of some of these Banks to advance even small loans of Rs 10 and above on pledge of gold leaves nothing more to be desired in the way of supply of credit

5 The question then is how can the co operative movement advance ahead in the face of these glaring facts? Long term loans are as advised by the Department opposed to sound principles of bank with short term money

It looks as if credit is to be set aside and non credit activities of joint purchase joint sale etc are to be organised on a sound basis But how and by whom?

6 I would invite discussion in your paper as to the ways and means thereof

Kundapur
2—6 33

K L Bhandary,
Secretary Co op Union

Notice

I beg to notify to the Public that East & West Insurance Co Ltd has opened its Chief Organising Office for West Coast at Bunder and has named its premises has Harbour View since November 1932 (previously occupied by General Trading Company and has vacated later) this Office is entirely owned by the Head Office and they are the sole occupants in the abovesaid premises belonging to Messrs P N S Kamath & Bros of Mangalore

H S. Nayak
Organising Secretary

ಡಕ್ ಬೇಕ್ ವಾಟರ್ ಪ್ರೂಫ್

ಇದು ಹಿಂದೀಯ ಮಳೆಗಾಲವನ್ನು ತಡೆಯುವುದಕ್ಕಾಗಿ ವಿಶೇಷ ರೀತಿಯಿಂದ ತಯಾರಿಸಲ್ಪಟ್ಟಿದೆ

1932ರ ಮೈಸೂರು ದಸರಾ ಪ್ರದರ್ಶನದಲ್ಲಿ ಭಂಗಾರದ ಪಾರಿತೋಷಕವು ದೊರೆತಿದೆ

ಹಿಂದೂಸ್ಥಾನದಲ್ಲಿ ಇದೇ ಒಂದು ರಬ್ಬರ್ ಪ್ರೂಫ್ ಮಾಡುವ ಕಂಪೆನಿ

ಹಳೆ ವಸ್ತ್ರವನ್ನು ಮಾರುವ ವ್ಯಾಪಾರಿಸ್ಥರನ್ನೂ, ಹಳೆ ವಾಟರ್ ಪ್ರೂಫ್ ವಸ್ತ್ರವನ್ನು ಹೊಸದೆಂದು ಮಾರುವ ಅಂಗಡಿಗಾರರನ್ನೂ ಜಾಗ್ರತೆ ತೆಗೆದುಕೊಳ್ಳಿ!

ಧರ್ಮಾರ್ಥವಾಗಿ ಕೆಟಲಾಗ ಕಳುಹಿಸುತ್ತೇವೆ

Bengal Waterproofs Works Ltd
Branch, Hornby Road, Fort Bombay

ಬಂಗಾಳ ವಾಟರ್ ಪ್ರೂಫ್ಸ್ ವರ್ಕ್ಸ್ ಲಿಮಿಟೆಡ್.
ಬ್ರಾಂಚ್, ಹೋರ್ನ್‌ಬಿ ರೋಡ್, ಫೋರ್ಟ್ ಮುಂಬಾಯಿ

ಮಂಗಳೂರಿನಲ್ಲಿ ಸಾಯಂಕಾಲ ಶ್ರೀ(ನುಪ) ಸೂರಿನ ಪ್ರಕಟಣೆ ಶು ೬ ಶನಿವಾರದಿಂದ ಶ್ರೀ(ನುಪ) ಸಂಜೆ ಪ್ರಕಟಣೆ ಶು ೯ ಶುಕ್ರವಾರದ ವರೆಗಿನ ಪಂಚಾಂಗ

(ಗಾಣಿಸೆಯ ಶ್ರೀಪತಿ – ದೇ)

ತಾರೀಖು	ವಾರ	ತಿಥಿ	ಶುಭ ಸಮಯ	ನಕ್ಷತ್ರ	ಶುಭ ಸಮಯ	ನಕ್ಷತ್ರ	ಸೂರ್ಯೋ. ಗ	ಅ
10	ಶನಿ	೩	೧೪	ಪೂ. ಪಾ.	೨೧	೨೬	6. 5	6 54
11	ರವಿ	೪	೬೭	ಉ. ಪಾ.	೧೫	೨೮	6. 5	6.54
12	ಸೋಮ	೫	೬೧	ಶ್ರವಣಾ	೧೧	೨೯	6. 6	6 55
13	ಮಂಜ	೬	೨೮	ಧನಿಷ್ಠಾ	೪೫	೩೦	6. 5	6.55
14	ಬುಧ	೭	೨೭	ಶತಭಿಷ	೪೫	೩೦	6 5	6 55
15	ಗುರು	೮	೨೭	ಪೂ.ಭಾ.	೧೦೫	೦	6. 5	6 55
16	ಶುಕ್ರ	೯	೪೦	ಉ. ಭಾ.	೧೪	೨	6 5	6.55

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕವಾದದ್ದು	Minimum ಅಲ್ಪವಾದದ್ದು	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
1	82 — 5	74 — 3	2—88	—
2	85 — 1	74 - 8	3—25	—
3	84 — 5	75— 3	1 - 87	—
4	85 — 7	75— 2	0 — 98	—
5	80 — 8	72 — 9	5 - 10	—
6	81— 3	73-- 4	0—70	—
7	84 — 6	75 — 3	0 - 35	36-64

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಕಂದ ರೂ.	ಆ.	ವರೆಗೆ ರೂ.	ಆ.
ಹೊಸ ರಾಶಿ ಅಕ್ಕಿ	...	3—	8	3 —15	
ಸುಕ್ಕುತಿ	...	3 -	12	4—	10
ಗುಡ್ಡು	...	3-	12	4 —	2
ಸುಗ್ಗಿ	...	3	8	3 —15	
ಊರೆ ಅವ್ವಲ್ ಬೆಲ್ಲಗೆ	...	4	6	5 —	0
ರಂಗೂನು ಬೆಲ್ಲಗೆ ಗೋಣಿ ೧ಕ್ಕೆ	...	5	12	6 -	4
ಎಲ್ಲಾರು ಬೆಲ್ಲಗೆ ಮುಡಿ ೧ಕ್ಕೆ	...	3	12	4—	0
ಗೋದಿ ಗೋಣಿ ೧ಕ್ಕೆ	...	10 —	8	12 —	8
ತೊಗರಿ ಗೋಣಿ ೧ಕ್ಕೆ	...	9	8	12 —	0
ಹುರುಳಿ ಗೋಣಿ ೧ಕ್ಕೆ	...	6—	0	6 —	2
ಕಡಲೆ ಗೋಣಿ ೧ಕ್ಕೆ	...	9-	0	10—	4
ತೊಗರಿದೇಳೆ ಗೋಣಿ ೧ಕ್ಕೆ	...	9 —	0	16 —	0
ಉಪ್ಪು ಗೋಣಿ ೧ಕ್ಕೆ	...	8	8	9 —	8
ಹೆಸರು ಗೋಣಿ ೧ಕ್ಕೆ	...	8 —	0	9 —	0
ಊಟಬೆಲ್ಲ ಖಂಡಿ ೧ಕ್ಕೆ	...	47 —	8	52—	8
ಉಪ್ಪು ಗೋಣಿ ೧ಕ್ಕೆ	...	5	12	6—	0
ಬೊಂಬ್ರಿ ಖಂಡಿ ೧ಕ್ಕೆ	...	55 —	0	60—	0
ಬೊಂಬ್ರಿ ಹಿಂಡಿ ಖಂಡಿ ೧ಕ್ಕೆ	...	23—	0	23—	8
ಎಳ್ಳಿಂಡಿ ಖಂಡಿ ೧ಕ್ಕೆ	...	25—	0	26—	4
ಬೊಂಬ್ರಿ ಎಳ್ಳೆ ಮಣ ೧ಕ್ಕೆ	...	4—	4	5—	4
ಎಳ್ಳೆಣ್ಣೆ ಮಣ ೧ಕ್ಕೆ	...	6—	12	7—	0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	4—	7	8—	12
ಸೋಂಪು ಸಕ್ಕರೆ ಮಣ ೧ಕ್ಕೆ	...	4—	1	4—	2
ಹೊಸ ಮೆಣಸು	...	4—	4	5—	4
ಸಾಸಿವೆ ಮುಡಿ ೧ಕ್ಕೆ	...	4—	12	5—	0
ಕಾಳುಮೆಣಸು ಖಂಡಿ ೧ಕ್ಕೆ	...	170—	0	18	0
ಯೇಲಕ್ಕಿ ಮಣ ೧ಕ್ಕೆ	...	19	0	22	8
ಗೇರುಬೀಜ ಮುಡಿ ೧ಕ್ಕೆ	...	3	0	3—	4
ಕೆಲ್ಲಿಣ ಖಂಡಿ ೧ಕ್ಕೆ	...	25—	0	25—	8
ತಾಂಪ್ರು ತಗಡು ಮಣ ೧ಕ್ಕೆ	...	11—	0	11-4	8
ತಾಮ್ರು ಪಾತ್ರೆಗಳು ಮಣ ೧ಕ್ಕೆ	...	15—	0	16—	0
ಟೀನಿಬೆಕ್ಕೆ ಸೇರು ೧ಕ್ಕೆ	...	14—	12	15—	0
ಹಿತ್ತಾಳೆ ತಗಡು ಮಣ ೧ಕ್ಕೆ	...	9—	0	9—	8
ಕನಸು ೧ಕ್ಕೆ	...	19—	8	19—	10
ಹುಣಸೆ ಹುಳಿ ಖಂಡಿ ೧ಕ್ಕೆ	...	35—	0	42—	8
ನೇಟಿವ್ ಕಾಫಿ ಖಂಡಿ ೧ಕ್ಕೆ	...	200—	0	225—	0
ಪೀಬೇರಿ ಕಾಫಿ ಖಂಡಿ ೧ಕ್ಕೆ	...	265—	0	270—	0
ಹಳೆ ಅಡಿಕೆ	...	110—	0	130—	0
ಹೊಸ ಅಡಿಕೆ	...	110—	0	120—	0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಿಗೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಕೊರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಡುಪಿಗೆ ಪ್ರಯಾಣ ಕೈಗೊಳ್ಳಿರಿ. ಒಂದೇ ಶಿಲೆಯಲ್ಲಿ ಸುಂದರವಾಗಿ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಕ್ಷೇತ್ರವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಸುಹಾರಾನ್ಪ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವುದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗಾಗಿ, ಮೈಸೂರಿಗೆ 12 ಗಂಟೆಗಳೊಳಗೂ, ಶಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

(ಸ್ವತಂತ್ರವಾದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡಬೇಕಾಗುವುದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸ್ಪಷ್ಟಾಕ್ಷರ ಟೀಕಾಟ್ಟೂಪಣಿಗಳಿಂದೊಡಗೂಡದೆ ಸುಲಭ ಶೈಲಿಯಲ್ಲಿರಬೇಕಾಗುವುದು (ಸಂ. ಸ್ವ.)

ಹಿಂದೂ ವಿದ್ಯಾದಾಯಿನೀ ಸಂಘದೊಳಗಿನ ವಿವಾದೆಗಳ ವಿಚಾರ.

ಯು 'ಸ್ವದೇಶಾಭಿಮಾನಿ'ಯೇ,

ಇಲ್ಲಿಯ 'ಹಿಂದೂ ವಿದ್ಯಾದಾಯಿನೀ ಸಂಘ'ದ ಮತ್ತು 'ಇತ್ಯಾ ವಿದ್ಯಾದಾಯಿನೀ ಶಾಲೆಯ ಅಧ್ಯಕ್ಷರು ಕಾರ್ಯದರ್ಶಿಯರು, ಆಡಳಿತ ಸಭೆ, ಮುಖ್ಯೋಪಾಧ್ಯಾಯರು ಮತ್ತು ಸಂಘದ ಸದಸ್ಯರು ಪರ್ಸ್ಪರೆಯವರೊಳಗೆ ಕಳೆದ ಏರಡು ವರ್ಷಗಳಿಂದ ಕಾರಣಾಂತರ ಗಳಿಂದ ವಿವೇಚಿಸಲಾಗದೆ ಭಾವನೆಗಳುಂಟಾಗಿ, ಅದರ ಫಲವಾಗಿ, ಪಕ್ಷಪ್ರತಿಪಕ್ಷ ಗಳೆದ್ದು, ತತ್ಫಲವಾಗಿ ಅವುಗಳು ಪ್ರಚುರಪಡಿಸಿ, ವಾದವಿವಾದಗಳೂ ಸಭೆ ಏರುದ್ಧ ಸಭೆಗಳೂ ಜರಗುತ್ತಿದ್ದ ವಿಷಯಗಳ ಕುರಿತು ಆಯಾಯ ಪಕ್ಷದವರ ಲೇಖನಗಳು ಜಿಲ್ಲೆಯ ಪ್ರಮುಖ ಪತ್ರಿಕೆಗಳಲ್ಲಾ ಪ್ರಸಿದ್ಧ ವಾಗಿರುವುದನ್ನು ನಿನ್ನ ವಾಚಕರು ಓದಿರಬಹುದು. ಈ ಪಕ್ಷಗಳೊಳ ಗಣ ಕಾದಾಟವು ಶಾಂತವಾಗಿ ಸಂಘದ ಮ ಶಾಲೆಯ ಅಭ್ಯುದಯವಾಗ ಲೆಂದು ಇದೇ ತಿಂಗಳ ೧೫ನೇ ಆದಿತ್ಯವಾರ ಮಂಗಳೂರಿನ ದಿವಾನ್ ಬಹದ್ದೂರ್ ಸುಬ್ರಾಯ ಶೆಟ್ಟಿಯವರ ಬಂಗಲೆಯಲ್ಲಿ ಮಂಗಳೂರಿನ ದಿವಾನ್ ಬಹದ್ದೂರ್ ಸುಬ್ರಾಯ ಶೆಟ್ಟಿ ಸಂಬಂಧಿಗಳಾದ ಶ್ರೀಯುತರಾದ ಕೆ ಆರ್ ಆಚಾರ್, ಯು ಗೋಪಾಲಕೃಷ್ಣ ರಾವ್, ಇವರುಗಳಿಂದಲೂ ಇದೇ ತಿಂಗಳ ಏಪ್ರಿಲ್ ೪ರಂದು ಶ್ರೀ ಕೆ ಆರ್ ಕಾರಂತರಿಂದಲೂ ಉಭಯಪಕ್ಷದವರಿಗೆ ಒಪ್ಪಿಗೆಯಾದ ಪಂಚಾರಾಂತಿಗಳಾಗಿ ವಿವಾದಾಂಶ ಗಳಲ್ಲಿ ಅನೇಕ ವಿಷಯಗಳ ತೀರ್ಮಾನವಾಗಿದ್ದರೂ, ದುರ್ದೈವವಶಾತ್ ಅಂತಿಮಘಟ್ಟದಲ್ಲಿ ಸಮಾಧಾನವಾಗದೆ ಹೋದವೆನ್ನಲು ಅತಿ ವಿಷಾದ ವೆನಿಸುತ್ತದೆ ಆದರೂ ಇದೇ ತಾ ೩ ೬—೧೯೩೭ನೇ ಶನಿವಾರ ದಿನ ಮಂಗಳೂರಿನ ಮಣ್ಣಗುಡ್ಡೆಯಲ್ಲಿರುವ ಶ್ರೀ ಡಾಕ್ಟರ್ ಪಿ ವೆಂಕಟ್ರಾವ್ ಇವರ ನೇತೃತ್ವದಲ್ಲಿ ಅವರ ಸ್ವಂತ ಮನೆಯಲ್ಲಿ ಉಭಯಪಕ್ಷಗಳ ಪ್ರತಿನಿಧಿಗಳಾದ ನಾವೆಲ್ಲರೂ, ಶ್ರೀಗಳಾದ ಇತ್ಯ ವಾಸುದೇವಯ್ಯ ಏ ನಾರಾಯಣ ರಾವ್ ಪಸ್ಕೆರೆ ಯವರೂ ಇದ್ದು ವಿವಾದಗಳಿಗೆ ಸಂಬಂಧಿಸಿದ ಸಕಲ ಸಂಗತಿಗಳನ್ನು ಸ್ವಚ್ಛ ಮನಸ್ಸಿನಿಂದಲೂ ಸ್ನಮ್ಮೋಕ್ತಿಗಳಿಂದಲೂ ಚರ್ಚಿಸಿ ಉಭಯ ತರೂ ಸಂತೃಪ್ತಿ ಹೊಂದುವಂತೆ ತಮ್ಮ ಪ್ರಧಾನಪ್ರೇಮಯವಾಗಿಟ್ಟುಕೊಂಡು, ಈ ಮೊದಲು ತೀರ್ಮಾನಿಸಲ್ಪಟ್ಟ ಮುಖ್ಯಾಂಶಗಳು ಪರಸ್ಪರ ಅಂಗೀಕೃತ ವಾದವುಗಳೆಂದೆನಿಸಿ ಈ ಕೆಳಗಿನ ಇತ್ಯರ್ಥಕ್ಕೆ ಸಂಪೂರ್ಣ ಸಮ್ಮತಿಸಿದು ತ್ತೇವೆ

೧ ಈ ಸಂಘದ ಸ್ಥಾಪನಾ ಕಾಲದಿಂದ ಅಧ್ಯಕ್ಷ ಉಪಾಧ್ಯಕ್ಷ ಮತ್ತು ಕಾರ್ಯದರ್ಶಿ ಈ ೩ ಸ್ಥಾನಗಳನ್ನು ಹೊಂದಿಕೊಂಡಿದ್ದ ಶ್ರೀಗಳಾದ ಇತ್ಯ ಕೃಷ್ಣಯ್ಯ, ಏ ಕಾಮಯ್ಯಾವ್ ಮತ್ತು ಯುಪ್ ರಾಮರಾವ್ ಈ ಮಹನೀಯರುಗಳನ್ನು ಆಯಾಯ ಸ್ಥಾನಗಳಲ್ಲಿನೇ ಮಹಾಸಭೆಯು ನೇಮಕಮಾಡಿಸುವುದು.

೨ "ಗವರ್ನಿಂಗ್ ಬೋಡಿ"ಗೆ ಮೇಲೆ ಹೇಳಿದ ಮೂವರನ್ನು ಮತ್ತು ಶಾಲಾ ಮುಖ್ಯೋಪಾಧ್ಯಾಯರನ್ನಲ್ಲದೆ ಇತರ ೫ ಜನರ ಸ್ಥಾನ ಗಳಿಗೆ ಶ್ರೀಯುತರುಗಳಾದ ೧ ಡಾ ಪಿ ವೆಂಕಟರಾವ್ ೨ ಕೆ ಆರ್ ಆಚಾರ್, ೩ ಇತ್ಯ ವಾಸುದೇವಯ್ಯ, ೪ ಇತ್ಯ ಪದ್ಮನಾಭಯ್ಯ ೫ ಯುಪ್ ಶಿವರಾಮಯ್ಯ ಇವರುಗಳನ್ನು ಆರಿಸುವುದು.

೩ ಇನ್ನು ಮುಂದೆ ಸಂಘದ ರಿಜಿಸ್ಟ್ರಿಯಾದ ನಿಯಮ, ನಿಬಂಧನೆ ಗಳಿಗನುಸಾರವಾಗಿ ಸುವ್ಯವಸ್ಥಿತವಾಗಿ ಸಂಸ್ಥೆಯು ನಡೆಯಲನುಕೂಲ ವಾಗುವಂತೆ ಈ ವಿರ್ಣಯವನ್ನು ಮಾಡಿದ್ದಾಗಿದೆ ಇದೇ ಬರುವ ತಾ ೨೪—೬—೧೯೩೭ನೇ ಶನಿವಾರ ಅಪರಾಹ್ನ ಘಂಟೆ ೩½ ಕ್ಕೆ ಈ ಪಾಠಶಾಲೆಯಲ್ಲಿ ಸಂಘದ ಎಲ್ಲಾ ಸದಸ್ಯರ ಮಹಾಸಭೆಯನ್ನು ಜರಗಿಸಿ ಈ ನಿರ್ಣಯಗಳನ್ನು ಸರ್ವಾನುಮತದಿಂದ ಮಂಜೂರು ಮಾಡಿಸುವು ದೆಂದು ಕೂಡಾ ನಿರ್ಧರಿಸಲಾಗಿದೆ

ಆದುದರಿಂದ ಸಂಘದ ಸದಸ್ಯರೆಲ್ಲರೂ ಬರುವ ಮಹಾಸಭೆ ಯಲ್ಲಿ ಭಾಗಿಗಳಾಗಿ ಮೇಲಿನ ನಿರ್ಧಾರಗಳು ಅಂಗೀಕೃತವಾಗುವಂತೆ ನನ್ನೊತ್ತಡನೆ ಸಹಕರಿಸಬೇಕಾಗಿ ವಿನಂತಿ ಮೇಲೆ ಹೇಳಿದ ಇತ್ಯರ್ಥಗಳಾ ಗುವಂತೆ ನಮಗೆ ಸಲಹೆ ಸೂಚನೆಗಳನ್ನು ಕೊಟ್ಟು ತಮ್ಮ ಅಮೂಲ್ಯ ಕಾಲ ಸಹಾಯವನ್ನು ಈ ವಿಷಯವಾರದ ಕೆಲಸಕ್ಕಾಗಿ ವ್ಯಯಿಸಿದ ಶಾಲೆಯ ಹಿತಚಿಂತಕರೆಲ್ಲರಿಗೆ ನಮ್ಮ ಸಂತೋಷದ ವಂದನೆಗಳನ್ನರ್ಪಿಸು ವೆವು ಸಂಘದೊಳಗೆ, ದುರದೃಷ್ಟವಶಾತ್ ಒದಗಿದ ಭಿನ್ನತೆಯು ಅಳಿದು ಪರಸ್ಪರ ಮೈತ್ರಿಯೂ, ಅನ್ಯೋನ್ಯ ಸೌಹಾರ್ದ್ರಭಾವವೂ ನೆಲೆ ನಿಂತು ಸಂಘವೂ ಶಾಲೆಯೂ ಚಿರಕಾಲ ಉಳಿದು, ಇನ್ನಷ್ಟು ಬೆಳೆಯು ವಂತೆ ಮೇಲಿನ ನಿರ್ಣಯಗಳಿಗೆ ಸಹಾಯಕವೂ ಪ್ರೇರಕವೂ ಆಗಿರು "ಶ್ರೀ ವಿದ್ಯಾದಾಯಿನೀ"ಯು ಪರಸರಿಂದೇ ನಮ್ಮ ಹೃತ್ಪೂರ್ವಕ ಹಾರೈಕೆ.

ಇತಿ,

ಸುರತ್ಕಲ್, ಯೆಜ್ ದಾಮೋದರ ರಾವ್,
ಮುಖ್ಯೋಪಾಧ್ಯಾಯ
೪—೬—೧೯೩೭ ಇತ್ಯ ಪದ್ಮನಾಭಯ್ಯ.
ಅಕ್ಷರಲಕ್ಷ

ಮಾನ್ಯ ಸಂಪಾದಕರೇ,

ಮಹಾಜನರ ಅಪಗಾಹನೆಗಾಗಿಯೂ, ಮಂಗಳೂರು, ಮಂಜೇ ಶ್ವರ, ಮೂಲ್ಕಿಯಲ್ಲಿರುವ ಸೌತ ಸಾರಸ್ವತ ಬ್ರಾಹ್ಮಣರ ದೇವಾಲಯ ಗಳಿಗೆ ಸಂಬಂಧ ಪಟ್ಟ ಅಧಿಕಾರಿಗಳ ತಿಳುವಳಿಕೆಗಾಗಿಯೂ ಈ ಕೆಳಗಿನ ಮಾತುಗಳನ್ನು ಬರೆಯಲು ನನಗೆ ತುಂಬಾ ಸಂತೋಷವೆನ್ನಿಸುತ್ತದೆ –

ಬಂಟವಾಳದಲ್ಲಿರುವ ಶ್ರೀ ವೆಂಕಟರಮಣ ದೇವಾಲಯದಲ್ಲಿ ತಿರುಪತಿಯ ಭಂಡಾರಕ್ಕೆ ಸಲ್ಲದೇಕಾದ ಸಾಕಷ್ಟು ಧನವಿದ್ದಿತು, ಆದರೆ ಮೊನ್ನೆ ತಾನೆ ಅಲ್ಲಿಯ ಮೊಕ್ತೇಸರರು ನಮ್ಮ ಬಡ ಬಾಲಕರ ವಿದ್ಯಾರ್ಜನೆಗಾಗಿ ಆ ಹಣವನ್ನು ತೆಗೆಯುವ ಸಾಹಸವನ್ನು ಮಾಡಿ, ಇಷ್ಟರ ತನಕ ಒಂದು ಮುರುಳು ಪೂಳಿಗೆಯು ಮೇಲ ಇದ್ದ ಆದರ ಎಲಿ ಮೆಂಟರಿ ಶಾಲೆಯನ್ನು ವರ್ಗಾಯಿಸಲು ಒಂದು ಒಳ್ಳೆ ಕಟ್ಟಿಡೋಣ ವನ್ನು ಪಡಕೊಳ್ಳಲು ಉಪದೇಶಗಿಸಿರುವರು ಪ್ರಿಯ ವಾಚಕರೆ, ಬಂಟವಾಳ ದೇವಸ್ಥಾನದವರ ಕಾರ್ಯವು ಪರಿಂದ ಅನುಕರಣೀಯ ವಾದ ವಿಷಯವೆಂದು ನಿಮಗೆನ್ನಿಸುವುದಿಲ್ಲವೆ? ಪ್ರಸ್ತುತ ಮಂಗಳೂರಿ ನೆಲ್ಲಿರುವ ಕೆನರಾ ಹೈಸ್ಕೂಲೂ, ಬಂಟವಾಳದ ಶ್ರೀ ವೆಂಕಟರಮಣ ಹೆಂಪಲ್ ಹೈಸ್ಕೂಲೂ ಸರಕಾರದವರು ನಿರ್ದಯಾತ್ಮಕರಾಗಿ ಇದ್ದ ಗ್ರೇಂಟುಗಳನ್ನು ಕಮ್ಮಿ ಮಾಡುತ್ತ ಬರುತ್ತಿರಲು, ಹಣದ ಕುಟ್ಟುವಿಂದ ಕಷ್ಟ ಪಡುತ್ತಿರುವ ಕಾಲದಲ್ಲಿ ಮೇಲೆ ಹೇಳಿದ ಮೂರು ದೇವಸ್ಥಾನ ದವರು ಹೆಚ್ಚಿನ ವಿಳಂಬವಿಲ್ಲದೆ ಮುಕ್ತಹಸ್ತರಾಗಿ ಸಹಾಯ ಮಾಡಿ ಯಾರೆಂದು ತೋರಿದರೆ ತಪ್ಪಾಗದು

ಈ ಸಂದರ್ಭದಲ್ಲಿ ಮೂಲ್ಕಿಯ ದೇವಸ್ಥಾನದ ಕುರಿತು ಎಂದೆ ರಡು ಮಾತುಗಳು ಅನುಚಿತವಾಗಲಾರವು ಹಿಂದೆ ಸ್ವಲ್ಪ ಸಮಯ ದಿಂದ ಅವರು ಎಂದು ಹಾಯರ್ ಎಲಿಮೆಂಟರಿ ಸ್ಕೂಲನ್ನು ನಡೆಸು ತ್ತಿದ್ದವಲ್ಲದೆ ಅದನ್ನು ಹ್ಯಾಸ್ಕೂಲಾಗಿ ಮಾರ್ಪಡಿಸುವ ಆಲೋಚನೆಯೂ ಅವರಲ್ಲಿದ್ದಿತು ಆದರೆ ದುರ್ದೈವವಶಾತ್ ಅವರು ಹ್ಯಾಸ್ಕೂಲು ಮಾಡುವ ಆಲೋಚನೆಯನ್ನು ಬಿಟ್ಟು ಬಿಟ್ಟಿದಲ್ಲದೆ ಇದ್ದ ಎಲಿಮೆಂಟರಿ ಶಾಲೆಯನ್ನೂ ತೆಗೆದುಹಾಕರುವರು. ಡಿಸ್ಟ್ರಿಕ್ಟ್ ಬೋರ್ಡಿನವರು ಶಿಕ್ಷಣದಲ್ಲಿಯೇ ಅಲ್ಪಾಂಶ ಹ್ಯಾಸ್ಕೂಲನ್ನು ತೆರೆಯಲಿರುವರೆಂಬ ವಾದವೇ ಇದಕ್ಕೆ ಸಾಕ್ಷಿಯಾಗಿದೆ

ತಿರುಪತಿ ದೇವರಿಗೆ ಸಲ್ಲಬೇಕಾದ ಯಥೇಷ್ಟ ಹಣವು ಮೂಲ್ಕಿ ಯಲ್ಲಿ ಜಮೆಯಾಗಿರುವುದೆಂದು ಎಲ್ಲರಿಗೂ ಗೊತ್ತಿದ್ದ ವಿಷಯ ಈಗ ಬಂಟವಾಳ ದೇವಸ್ಥಾನದವರ ಉದಾರ ಆದರ್ಶನೀಯ ಮಾದ ರಿಯು ನಮ್ಮ ಕಣ್ಣಮುಂದೆ ಮೆರೆಯುತ್ತಿರುವಾಗ, ಮೂಲ್ಕಿಯವ ರಾದರೂ ಅವರನ್ನು ಅನುಕರಿಸಿ ಮೇಲೆ ಹೇಳಿದ ಎರಡೂ ಹ್ಯಾಸ್ಕೂಲು ಗಳಿಗೆ ಉದಾರಾಶ್ರಯವನ್ನು ಕೊಡಬಾರದೆ?

ಹೀಗೆ ಮಾಡುವುದರಿಂದ ದೇವಸ್ಥಾನದ ಸ್ವಂತ ಭಂಡಾರಕ್ಕೆ ವಿನೊಂದೂ ತೊಂದರೆ ಬರುವಂತಿಲ್ಲ ಶಾಲೆಯ ಅಧಿಕಾರಿಗಳೂ ಅದನ್ನು ಸ್ವೀಕರಿಸಲು ಹಿಂಜರಿಯ ಬಹುದೆಂದು ಅವರು ಹೆದರುವ ಅಗತ್ಯವೂ ಇಲ್ಲ ಸಾರ್ವಜನಿಕ ಸಂಘಗಳಿಗೆ ಕೆಲಸ ಮಾಡುವವರು ಹಿಂಜರಿಯಲಾರದೂ ಇಲ್ಲಿ ಅಸ್ಪದವಿದೆಯೆ?

ಆದಕಾರಣ ಮಹಾಜನರು ಸರ್ವತೋಮುಖವಿಧಿಯಿಂದ ಆ ಹಣವು ಪರದೇಶಗಳಿಗೆ ಹೋಗದಂತೆ ಮಾಡಿ ನಮ್ಮ ಜಿಲ್ಲೆಯಲ್ಲಿಯೇ ಉಳಿಸಿ ಅದರಿಂದ ಸಾರ್ವಜನಿಕ ಸಂಘಗಳಿಗೆ ಸಹಾಯ ಮಾಡುವಂತೆ ಕೇಳಿ ಕೊಂಡರೆ ಅದು ಅನುಚಿತವಾಗಬಹುದೆ? ಪ್ರಾಮಾಣಿಕನಾಗಿ ನಮ್ಮ ಜಾತಿಯ ದರಿದ್ರ ಬಾಲಕರ ವಿದ್ಯಾಭ್ಯಾಸಕ್ಕಾಗಿ—ಅದರಲ್ಲೂ ನಮ್ಮ ಬಡ ಜಿಲ್ಲೆಯಲ್ಲಿಯೇ ಆದನ್ನು ಸಾರ್ಥಕಗೊಳಿಸಬಾರದೆ?

ಓರ್ವ ಗೌಡಸಾರಸ್ವತ ಬ್ರಾಹ್ಮಣ.

ಅಯ್ಯಾ! ಸಂಪಾದಕರೇ,

ಈ ಮೊದಲು 'ರಾಷ್ಟ್ರ ಬಂಧು'ವಿನ ಸಂಚಿಕೆಯಲ್ಲಿ ಹಿಂದೂ ದೇವಾಲಯಗಳಲ್ಲಿ ಜೈನ ಮೊಕ್ತೇಸರರು ಎಂಬ 'ವಿಚಾರ'ದಿಂದ ಲೇಖ ನವು ಸಾರ್ವಜನಿಕ ದೃಷ್ಟಿಯಿಂದ ಬರೆದಿದ್ದಿರಬೇಕು. ಈ ಲೇಖನದ ಮೇಲೆ ಆದೇ ಪತ್ರಿಕೆಯಲ್ಲಿ "ಜನಮತ" ಎಂಬ ಶಿರೋಲೇಖನದಲ್ಲಿ 'ವಿಚಾರ'ವು ಮಾಡಿದ ವಿಪ್ಲವ ಕೂಡಾ ಸರ್ವಮಾನ್ಯವಾದುದೇ ಆಗಿದೆ

On Bills & D P Notes	42 000—0 —0	On Deposits with Bankers	,,	90,000— 0— 0.
Bills for Collection	6 036—2 —2	Bills for collection (per contra)	,,	6,036— 2—2.
Sundries	,, 74 025—7 —1	Sundries	,,	58,117—15— 3.
		Cash in hand & with Bankers	,,	18,037—14— 4
Total Rs	11,37,131—7 —1	Total Rs.		11,37,131— 7— 1

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 9—6—1933

P. A. Pai Bros., *Managing Agents.*

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage.
   FOR
4. Only 20 per cent extra Money

A TIRE UN-IMITATED & EXCLUSIVE.

Dealers Earn Profits. ***Users Save Money.***

The Canara Public Conveyance Co., Ltd.

MANGALORE.

ಸ್ಫುಟವಿಚಾರಗಳು.

ಜಾಪಾನಿಯರ ಪ್ರಾಬಲ್ಯ

ಸಹಸಂತಾಪ ಸೂಚಕವಾಗಿ ಚೀನಿಯರಿಗೆ ತಿಳಿದುಬರುವುದಕ್ಕೆಂದು ಜಪಾನಿನ ಸೈನ್ಯಗಳ ಪರವಾಗಿ ಒಬ್ಬ ಅಧೀನರನು ವಿಮಾನ ಹತ್ತಿ ಶಂಘಾಯಿ ಬಂದರಕ್ಕೆ ಬಂದಿಳಿದು, (ಬಹುಶಃ ಗೋಳೋ ಎಂದು ಅತ್ತಿರಬಹುದು) ಚೀನಿಯರನ್ನು ಬಹಳವಾಗಿ ಕೊಂದುದಕ್ಕೆ ಬೇಕಾದುದನ್ನು ಹೇಳಿಕೊಂಡನೆಂದು ಪ್ರಕಟವಾಗಿದೆ ಈ ವರ್ತಮಾನವು ನಿಜವಾದರೆ, ಅಧಿಕಾರಿಗಳು ಹಿಂದೆ ನಡೆದ ಅತ್ಯಾಚಾರಗಳಿಗಾಗಿ ಫಕ್ಕನೆ ಇದೇ ಜಗೆಯಾಗಿ ಗೋಳಾಡುವುದು ವಿಚಿತ್ರವೆಂದು ಯಾರೂ ಹೇಳ ಹಾಗಿಲ್ಲ ಅಂದಮಾನದಲ್ಲಿ ಕೈದಿಗಳು ಉಪವಾಸ ಹಿಡಿದು ಮಡಿದುದ ಕ್ಕಾಗಿ, ಇಂಡಿಯಾ ಸರಕಾರದ ಹೋಮ್ ಮೆಂಬರರೇ ವಿಮಾನ ವೇರಿ, ಆ ಮೃತರ ತಾಯ್ತಂದೆಗಳಿಗೆ ಸಹಸಂತಾಪ ಸೂಚಿಸಲೂ ಬರಬಹುದು ಪೂರ್ವ ಬಂಗಾಳದಲ್ಲಿ (ಚಿತ್ತಗಾಂಗಿನಲ್ಲಿ) ನಡೆದ ನಾನಾ ಪೀಡೆಗಳ ಸಮಾಧಾನಕ್ಕಾಗಿ ಅಕ್ಕುದಾರ ಬುದ್ಧಿಯ ಒಂಗಾಳ ಗವರ್ನರರೇ ಅತ್ತ ತೆರಳಿ ಅವರನ್ನು ಸಹಾನುಭೂತಿಯಿಂದ ವಂದಿಸಬಹುದು ಬೊಂಬಾಯಿಯಲ್ಲಿ ಲಾಭಿ ಉಪಚಾರಗಳನ್ನು ನಡೆಯಿಸಿದಾಗ ನೊಂದವರಿಗೆ ಸಂತವಿಡಲು ವಿಲ್ಲನ ಸಾಹೇಬರೇ ಮರುಳಬಹುದು ಹೆಚ್ಚೇಕೆ? ಅಮೃತಸರಕ್ಕೆ ಒಂದು ಪಂಜಾಬಿನಲ್ಲಿ ಹಿಂದೆ ಅತ್ಯಾಚಾರ ನಡಿಸಿದುದಕ್ಕಾಗಿ ಸರ್ ಮಾಯಕೇಲ ಒಡ್ವಾಯರರೇ ಹೊಟ್ಟಿಯಿಂದಲೇ ಹರಿದಾಡಿ ಮಡಿಸ್ತನ ಸೇವೆ ಮಾಡಿ ಸಂತವಿಸಬಹುದು ಎಂದು ಒಂದು ಪತ್ರಿಕೆ ಹುಟ್ಟುಹಾಕಿ ಬರೆದಿದೆ ಈ ಯುಗದಲ್ಲಿ ವೈಚಿತ್ರ್ಯಗಳೇ ಕಡಿಮೆ ಎನ್ನುವವರಾರು?

ಶಾಸನಭಂಗವು

ಇನ್ನು ಪುನಃ ಕಾಂಗ್ರೆಸಿನ ಧೋರಣೆಯಾಗುವ ಹಾಗಿಲ್ಲ ವೆಂದೇ ಟೀಕಿಸಿ ಪತ್ರಿಕೆಗಳಲ್ಲಿ ಬಲ್ಲವುಗಳು ಬರೆದಿವೆ ಆದರೆ, ಕೋಂಗ್ರೆಸಿನವರ ಮತ್ತೊಂದು ಕಾರ್ಯಕ್ರಮವನ್ನು ಜಯಿಗೆ ತಾರದಿದ್ದರೆ, ಇನ್ನೊಂದು ಚಳವಳಿ ಹೊರ ಡೋರದಿದ್ದರೆ, ಶಾಸನವಾಯುವು ಸಂಚರಿಸದೆ ಕೊಂಗ್ರೆಸು ಮರಣೋನ್ಮುಖವಾಗುವುದಂಗಿ ಬೆದರಿಕೆಯಿದೆ ಇತ್ತೀಚೆಗೆ ಸ್ವರಾಜ್ಯವಾದಿಗಳು ಚೇತನಗೆಟ್ಟಿರುವ ಲಕ್ಷಣಗಳು ತೋರಬಂದಿವೆ ಸ್ವಗೇತರ ಪ್ರಚಾರ ಕಾರ್ಯವು ಸಹ ಅಮ್ಮೊಂದು ಜೋರುಕಾರಿ ಸಾಗುವುದಿಲ್ಲ ಹರಿಜನಸೇವೆಯಾಗಲಿ ಉದ್ಧಾರವಾಗಲಿ ಸಾಕಷ್ಟು ಜನ್ಯವಾಗಿ ಸಾಗಿಲ್ಲ ಆದರೂ ಎಲ್ಲಕ್ಕೂ ಮೊದಲಾಗಿ, ಸಾಮಾಜಿಕ ಪಕ್ಷಗಳಲ್ಲಿ ವೈಮತ್ರಿಯು ಇನ್ನೂ ಉಂಟಾಗಿಲ್ಲದಿಂದ, ಈ ಒಂದು ವಿಷಯದ ಕಡೆಗೆ ಕೊಂಗ್ರೆಸಿನ ಗಮನವಿದ್ದರೆ ಸದ್ಯಕ್ಕೆ ಚೆನ್ನಾಗುತಿದ್ದಿತೆಂದೂ ಸಮಾಜಗಳೊಳಗಣ ಪರಸ್ಪರ ವೈಮತ್ರಿಯೊಂದು ಸಿದ್ಧವಾದರೆ, ಅದರಿಂದ ತಾನೆ ಮುಂದೆ ಬಹುಮುಖ್ಯ ಅಮೂಲ್ಯ ಪರಿಣಾಮ ಪ್ರಯೋಜನಗಳು ಉಂಟಾಗುವುವೆಂದೂ ನಂಬಿ ಈ ವಿಷಯ ಸ್ವಪ್ನಧೋರಣೆಯನ್ನು ತಿಳಿಸಿ ಇದನ್ನೆ ಸದ್ಯದ ಕಾರ್ಯಕ್ರಮವಾಗಿಟ್ಟು, ನಿರ್ವಹಿಸುವುದೇ ಕೊಂಗ್ರೆಸಿನವರಿಗೆ ಉತ್ತಮವೆಂದೂ ಒಹಳವಾಗಿ ಅನುಮೋದಿಸಿ ಪತ್ರಿಕೆಗಳಲ್ಲಿ ಸೂಚನೆಗಳಿವೆ

ಮಹಿಳಾ ಸಮಾಜಗಳು

ಈ ಭಾಗದಲ್ಲಿ ಅತ್ಯುಪಯುಕ್ತ ವಿಚಾರಗಳನ್ನು ಹೊರ ಗೆಡವಿ ಉಪಕಾರ ಮಾಡಿವೆ ಜೆಮ್ಶೆಟ್ ಜಿಲೆಕ್ಟೋರೇಟುಗಳೇ ದೇಕು ಸಮಾಜಗಳ ಬಗೆಗೆ ಬೇರೆ ಬೇರೆ ಪ್ರಾತಿನಿಧ್ಯ ಹುನಾವಣೆ ಕ್ರಮಗಳು ದೇಶ ಮಹಿಳೆಯರೆಲ್ಲ ಇದೀ ಇಂಡಿಯದಲ್ಲಿ ಒಂದೇ ಕೂಟವಾಗಿದ್ದಾರೆ ಸಮಾಜಗಳಂತೆ ಇವರನ್ನು ಸಹ ವಿಂಗಡಿಸಿ, ವೈಮನ್ಯದ ವಿಷ ಬೀಜಗಳನ್ನು ಬಿತ್ತಬಾರದು ಎಂದೇ ಮಹಿಳೆಯರು ವಿಶೇಷಾನತೆಯಿಂದ ಹಾಡಿರುವರು ಗಂಡು ರಂತೂ ಹಿಂದೂ, ಮುಸ್ಲಮ, ಸಿಖ್ಖ ಮೊದಲಾದ ಮತಭೇದ ಗಳಿಂದ ಒಡೆದು ಹೋಗಿ, ವಿರುದ್ಧಧಾವಿಂದಲೆ, ದೇಶದ ಒಳ್ಳೆ ಟ್ಟಿಗೂ ಪ್ರಗತಿಗೂ ಅತಂಕ ಮಾಡುತ್ತಿರುವಾಗ, ಈ ಕಾರಣ ದಿಂದಲೇ ಪಾರ್ಲಿಮೆಂಟಿನ ಮುಂದೆ ಈಗ ರುಜುವಾತು ಕೊಡಲು ಪ್ರತಿನಿಧಿಗಳೆಂದು ಅಮಂತ್ರಿತರಾದವರೊಳಗೆ ನಾನಾ ಬಿಕ್ಕಟ್ಟು ಗಳು ತೋರಿ ಬರುತ್ತಿರುವಾಗ, ಮಹಿಳೆಯರಾದರೂ ಈ ರೀತಿ ಯಾಗಿ ವಿವೇಕದಿಂದ ವರ್ತಿಸಿರುವುದು ನಮ್ಮ ದೇಶದ ಭಾವೀ ಭಾಗ್ಯಕ್ಕೆ ಪೂರ್ವ ಸೂಚನೆಯಂತೆ ತೋರುತ್ತಲಿದೆ

ಮದ್ರಾಸು ಸರಕಾರದ ಒಂದೆಷ್ಟ

ಬೋಕಲ್ ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು ತಮ್ಮ 'ಪಬ್ಲಿಕ್' ಫಂಡುಗಳಿಂದ ದಿನ್ನವತ್ತಳಿಗಳನ್ನು ಒಪ್ಪಿಸಲು ಮಾಡುವ ಖರ್ಚನ್ನು ಸರಕಾರವು ಸಾಮಾನ್ಯವಾಗಿ ಒಪ್ಪ ಲಾರದು, ಮಂಜೂರು ಮಾಡಲಾರದು; ಆದರೆ, ವೈಸರಾಯರು ಗವರ್ನರರು, ವೈಸರಾಯರ ಮತ್ತು ಗವರ್ನರರ ಕೌನ್ಸಿಲು ಮೆಂಬರರು, ಮಂತ್ರಿಗಳು ಮೊದಲಾದವರಿಗೆ ಅಭಿನಂದನೆಯೆ ಪತ್ರಗಳನ್ನೊಪ್ಪಿಸಿದರೆ ಅಂತಹ ಖರ್ಚನ್ನು ಮಂಜೂರು ಮಾಡುವ ರಂತೆ ಯೋಗ್ಯರನ್ನು ಅಭಿನಂದಿಸುವುದು ಸ್ಥಳೀಯ ಸಂಸ್ಥೆ ಗಳಿಗೆ ಒಪ್ಪುವ ಹಾಗೂ ಯೋಚ್ಯವಲ್ಲ ಕರ್ತವ್ಯವೆಂದು ತಿಳಿದು ಕೊಂಡರೆ, ಸರಕಾರವು ನಡುವೆ ಬಂದು, ಹಾಗೆ ಯೋಗ್ಯರಾದ ವರು ಯಾರೆಂದು ಹೇಳಿ ಕೊಡುವುದು ಸರಿಯೆಂದು ತಿಳಿಯು ವುದು ಸುಲಭವಾಗಿಲ್ಲ, ಮಾತ್ರವಲ್ಲ; ಸರಕಾರದ ಮೇಲಧಿಕಾರಿ ಗಳಿಗೆ ಮಾತ್ರ ದಿನ್ನವತ್ತಳಿ ಕೊಡುವುದು ಸಮ್ಮತವೂ ಸಮಂಜ ಸವೂ ಎಂದು ಪ್ರಜಾ ಪ್ರತಿನಿಧಿಗಳಿಗೆ ತಿಳಿಯ ಹೇಳುವುದು ಸ್ವಲ್ಪ ಹೆಚ್ಚಿನ ಆಕ್ಷೇಪಗಳಿಗೆ ಕಾರಣವಾಗಬಹುದೋ ಎಂದೂ ಅಂಜಿಕೆ ತೋರುತ್ತದೆ

ರಾಜಕೀಯ ಸಭೆಯಲ್ಲಿ

ಸೇರಿದ್ದುದಕ್ಕಾಗಿ ೧೫ ವರ್ಷ ಶ್ರಾಯದ ಒಬ್ಬ ಬಾಲಕನಿಗೆ ಬೊಂಬಾಯಿಯ ಮೆಜಿಸ್ಟ್ರೇಟರು ಅರು ತಿಂಗಳ ಸಶ್ರಮ ಸಜೆ ವಿಧಿಸಿದರ ಆಮ್ಮು ವಯಸ್ಸಿನ ಹುಡುಗರನ್ನು ಜೈಲಿಗೆ ಕಳುಹಬಹುದೇ ಎಂಬ ತರ್ಕವನ್ನೇನೂ ಮಾಡಲು ಮೆಜಿಸ್ಟ್ರೇಟರಿಗೆ ಅವಕಾಶ ದೊರೆಯಲಿಲ್ಲ, ಅಥವಾ ಆ ವಿಷಯದಲ್ಲಿ ಕಾನೂನಿನ ವಿಧಿ ಹೇಗಿದೆಯೆಂದು ಮರೆತೇ ಇರಬೇಕು "ಅಂಥವನು ರಿಫೋರ್ಮೆಟರಿ ತಾಲೆಗೆ ಕಳುಹಿಸಲ್ಪಡಲಾರದಷ್ಟು ದುಷ್ಟ ಅಥವಾ ಮನೇ ಎಂದು ನಾವೆಯೆನ್ನುವುದಿಲ್ಲ ಎಂದು ಬೊಂಬಯಿಯ ಹೈ ಕೋರ್ಟಿನ ಇಬ್ಬರು ಇಂಗ್ಲಿಷ ಜಡ್ಜರುಗಳು ಅಭಿಪ್ರಾಯ ಪಟ್ಟಿರುವರು ಜಾತಿ ಕೇಡಿಗಳೊಡನೆ ಇಂಥ ಬಾಲಕರನ್ನು ಸಶ್ರಮ ಸಜೆ ವಿಧಿಸಿ ಬದುಕುವಂತೆ ಮಾಡುವುದು ಅತಿ ಆಕ್ಷೇಪಣೀಯ ವೆಂದು ಕಾನೂನಿಗೆ ತಿಳಿದೇ ಇದೆ ಕೊಂಗ್ರೆಸ್ಸಿನ ಸತ್ಯಾಗ್ರಹಿ ಗಳು ಒಂದ ಸಂಕಟವನ್ನು ಮೊರೆಯಿಡದೆ ಅನುಭವಿಸುತ್ತಿರುವ ಕಾರಣದಿಂದ, ಕಾನೂನಿನ ಹದ ವಿಲಿ ಅಧಿಕಾರಿಗಳು ದಂಡಿಸಿ ದರೂ ಅವರು ಸಹಿಸಿ ಮೌನವಾಗಿರುವರು ಅದರಿಂದ, ಕೈ ತಪ್ಪಿ ದಂಡನೆಗಳು ಅಯೋಗ್ಯ ರೀತಿಯಲ್ಲಿ ನಡೆದರೂ ಸಹ ವಿಧಿಸಿ ದವರ ಗೋಚರಕ್ಕೆ ದರುವುದಿಲ್ಲ, ಅದರಿಂದ ಇನ್ನಷ್ಟು ತಪ್ಪು ದಂಡನೆಗಳು ಸಾಗಿಯೇ ಹೋಗುತ್ತಿವೆ,—ಎಂಬುದು ಹಲವು ಹೈಕೋರ್ಟುಗಳ ತೀಮಾನಗಳಿಂದ ವಿದಿತವಾಗಿದೆ ಮೂರ್ಖರ ರೋಗದಿಂದ ಪೀಡಿತನಾಗಿರುವ ಈ ಬಾಲಕನ ವಿಷಯವಾಗಿ, ಬಾಲಕರ ಸಂಕಟ ನಿವಾರಣೇ ಸಧೆಯವರು ಹೈಕೋರ್ಟಿಗೆ ಅಪ್ಪೀಲು ಮಾಡಿದ್ದಲ್ಲಿ, ಇವನೂ ಜೈಲಿನಿಂದ ಹೊರಬೀಳುವುದ ರೊಳಗಾಗಿ ತಾಜಾ ಕೇಡಿಯಾಗಿಯೇ ಹೋಗುತ್ತಿದ್ದನೆಂದು ಆ ಸಂಘದವರ ಕೀಕ

ರೈತರ ಆಯವು

ಈಗ ಇಡಿಮೆಯಾಗುತ್ತ ಬಂದಿದೆ ಗಿರಣಿಲಿಂದ ಹುಟ್ಟು ವಳೆಯಲ್ಲಿ ಇಳಿಮುಖವಾಗಿದೆ ವೈರಿನ ಬೆಲೆ ಇಳಿದೇ ಬರುತ್ತಿದೆ ಅನ್ನವಸ್ತ್ರಕ್ಕೆ ಸಾಕಾಗುವಷ್ಟು ಹಣವು ರೈಯಲ್ಲಿರದೆ ರೈತರು ಬೇರೆ ಸಾಮಾನುಗಳನ್ನು ಕೊಡ್ಡುಕೊಳ್ಳಲೂ ಶಕ್ತಿಯಲ್ಲದಿದ್ದಾರೆ ಇದರಿಂದ ಜಗತ್ತಿನಲ್ಲಿ ಪ್ರತಿಯೊಂದೂ ಕಡೆ ಸರಕು ವರ್ತಮಾನಾಯವಾಗಿ ಬಿದ್ದಿದೆ ಗಿರಾಕಿಗಳಿಲ್ಲ, ಬೆಲೆ ಇಳಿದಿದೆ ವ್ಯಾಪಾರವು ಕುಂದಿ ಸರಕಾರದ ಆಯವೂ ಕಡಿಮೆ ಕಂದಾಯ ಕೊಡಲೂ ರೈತನು ಹಣ ಕಾಣದಂತಿದೆ ಹೀಗಾಗಿ ನೆನ್ನನು ಮೊದಲಾದುವುಗಳನ್ನು ತೆರುವುದು ಸಹ ಅಸಾಧ್ಯ ಅಥವಾ ಕಷ್ಟ ಸಾಧ್ಯವಾಗಿದೆ ಹೀಗಿದ್ದರೂ ಕಂದಾಯವನ್ನು ಕಡಿಮೆಮಾಡಲು ಸರಕಾರವು ಒಪ್ಪುವುದಿಲ್ಲ, ಜಗತ್ತಿನಲ್ಲಿ ಉಂಟಾಗಿರುವ ವಿದ್ಯಮಾನಗಳಿಂದ ಇಳಿಯಬಹುದಾದ ವೈರಿನ ಬೆಲೆಗಿಂತ, ಈ ಕಂದಾಯ ತೆರಲು ಹಣಕ್ಕಾಗಿ ವೈರನ್ನು ಇನ್ನಷ್ಟು ಇಡಿಮೆ ಬೆಲೆಗೆ ರೈತನು ಮಾರಬೇಕಾಗಿ ಬಂದಿದೆ ರೂಪಾಯಿಯನ್ನು ಗಲ ಪೌನ್ಡಿಗೆ ಸಮಾನವಾಗಿಟ್ಟಿದುದಿಂದ ಸೇಕಡಾ ೧೫ರಿಂತೆ ವೈರಿನ ಬೆಲೆ ತಾನಾಗಿ ಇಳಿಯುವಂತಾಗಿದೆ, ಕೊಡುಕೊಳ್ಳುವ ಸರಕಿನ ಬೆಲೆ ಸೇಕಡಾ ೧೫ರಿಂತೆ ಹೆಚ್ಚಾಗಿದೆ ಇದನ್ನು ತಿದ್ದುವವ ರ್ಯಾರು? ಪ್ರಸಂಚದ ಆರ್ಥಿಕ ಪರಿಸ್ಥಿತ್ತಿನಲ್ಲಿ ಈ ವಿಷಯ ಪ್ರಸ್ತಾಪವನ್ನೆತ್ತುವವರೇ ಇಲ್ಲ ನಮ್ಮ ಸರಕಾರದ ಪ್ರತಿನಿಧಿ ಗಳು ಇದ್ದಾರೆ, ಅವರು ಮೌನವಾಗಿರುವುದು ದೇಶದ ಕ್ಷಾತಿ ನಿಧ್ಯವನ್ನು ಸೂಚಿಸಬಹುದೆ?

++ + ++

NOTES
ನೋಟಗಳು.

ಒಂದು ಕಡೆ ರಾಜಸೂಯ, ಮತ್ತೊಂದು ಕಡೆ ಅಶ್ವ ಮೇಧ ಹೀಗೆ ವಿಕಲಾಲದಲ್ಲಿ ಎರಡು ಮಹಾಯಜ್ಞಗಳನ್ನು ಇಂಗ್ಲೆಂಡಿನ ಸರಕಾರವು ಕೈಗೊಂಡಿದೆ ಹಿಂದೆ ಇತಿಹಾಸದಲ್ಲಿ ಇದೆಂದೂ ನಡೆದುದು ಪುರಾಣಗಳಲ್ಲಿಲ್ಲ

* * * *

ಹಲವು ಸರಕಾರಗಳ ಪ್ರತಿನಿಧಿಗಳು ಸೇರಿ, ಆರ್ಥಿಕ ಸಂಕಟಗಳ ನಿವಾರಣೆ ಮಾಡುವುದಕ್ಕೆ ವಿಚಾರ ನೋಡುತ್ತಿರುವ ಈ ರಾಜಸೂಯದಲ್ಲಿ ಆರ್ಥಿಕ ಅಡಚಣೆಯೆ ಬಹಳವಾಗಿದೆ. ಯುದ್ಧಸಾಲಗಳ ಪಾವತಿ, ವ್ಯಾಪಾರದ ಮುಗ್ಗಟ್ಟು, ಹೆಣದ ತುಟ್ಟಿ ಇತ್ಯಾದಿಗಳಿಂದ ರಾಜಸೂಯವು ಸಾಗುವುದಿಲ್ಲವಲ್ಲ

* * * *

ಆದರೂ, ನಾವು ರಾಜಭಕ್ತಿಯಿಂದ ಯಾರಿಗೂ ತಿಳಿಸದೆ ಹಿಂದೆ ಕೊಟ್ಟು (ಆತಂಕವೇನೂ ಇಲ್ಲದೆ) ಚಿನ್ನದ ಜಿಗೆ ಉ (ಯಾರಿಗೂ ತಿಳಿಯದಂತೆ) ಬೆಳ್ಳಿಯನ್ನೂ ಕೊಟ್ಟು ಉದ್ಧಾರ ಸಹಾಯವಾಗಿದ್ದೇವೆ ಬ್ರಿಟಿಷರು ನಮ್ಮ ಭಕ್ತಿಪ್ರದರ್ಶನವಾದ ಚಿನ್ನಬೆಳ್ಳಿ ಮಾರಾಟಗಳಿಗೆ ಉತ್ತಿಮಾಡದೆ ಇದ್ದುದು ಧಾರತ ವರ್ಷದ ಸೌಭಾಗ್ಯವಲ್ಲವೆ? ಅಶ್ವಮೇಧವೂ ಆಗುತ್ತಿದೆ ಫಲ್ಗುನ್ನ ರಾಜ್ಯಗಳಲ್ಲಿ ಹಿಂದೆ ಸೈಮನ್ ಕಮಿಶನು ಸಂಚರಿಸಿ ಹಿಂತಿರು ಗಿತು ಅವರ ರಿಪೋರ್ಟಿಂ ಕ ರೆಯನ್ನು ಯಜ್ಞಮಾಡುವ ದಿಂತಾಯಿತು ಆದರೆ, ಅದಂಗಲ್ಲ

* * * *

ನಂತರ ಮೂರು ಕಮಿಟಿಗಳು ಬೇರ ಬೇರೆ ಕುದುರೆ ಗಳನ್ನು ದಿಟ್ಟುವು ಅವುಗಳ ವರದಿಗಳನ್ನು ಒಂದು ಮಾಡಿ, ಅದನ್ನು ಪಾರ್ಲಿಮೆಂಟಿನ ಮುಂದೆ ನಿಲ್ಲಿಸಿ, ಅವರ ಯಜ್ಞ ಮಾಡೋಣ ಎಂದು ನಿರ್ಧಾರವಾಯಿತು ಬಳಿಕ ಅದನ್ನು ಒಂದುಕೂಡಿ ಸಲು ಮೂರು ರೌಂಡ್‌ಟೇಬಲ್‌ಗಳಾದುವು

* * * *

ಡಾಯ್‌ಹಾರ್ಡರು ಈ ಕುದುರೆಗೆ ಮೂರೇ ಕಾಲಾಗ ಬೇಕೆಂದು ವಾದಿಸಿದ ಕಾರಣ ಕುದ ರೆಯು ಯಜ್ಞಕಾಲಕ್ಕೆ ನಿಲ್ಲುವ ಹಾಗಿಲ್ಲ ಚರ್ಚಿಲ್ಲರ ಕೋರಿಯ ಸರ್ವಿಸುಗಳು ಸಾಲದುದಕ್ಕೆ ಪತ್ರಿಕೆಗಳು ಈ ಮೂರು ಕಾಲುಗಳಾದರೂ ಕುಂಟಾಗಿರಬೇಕೆಂದೇ ಸಾಧಿಸ ತ್ತಿರೆ

* * * *

ಎಂತೂ ಕುದುರೆ ಎಬ್ಬಿ ನಿಟ್ಟಿಗೆ ನಿಂತರೆ, ಲಗಾಮು ತಪ್ಪಿಸಿಕೊಂಡು ಪಲಾಯನ ಮಾಡಬಹುದಲ್ಲ ಎಂದೇ ಇವರಿಗೆ ಭಯ

* * * *

ರಾಜರುಗಳಂತೂ ಈ ವ್ಯವಸ್ಥೆಗೆ ಒಪ್ಪುವುದೇ ಇಲ್ಲವಂತೆ, ಸರ್ವಿಸುಗಳಿಗೆ ಬೇಕಾದಂತೆ ಕುದುರೆ ನಿಲ್ಲದು, ಡಾಯ್‌ಹಾರ್ಡುಗಳೇ ಮೊದಲಾದವರಿಗೆ ಕುದುರೆ ನಿಂತರೆ ಸಾಕಾಗದೆ, ಪ್ರಭುತ್ವ ದವರಿಗೆ ಕುದುರೆಯ ಆಗಾಮು ಮಾತ್ರ ಕೈಯಲ್ಲಿ ದೊರೆತರೆ ಸಾಕಾಗಿದೆ, ಹಿಂದೀಯಂಲ್ಲಿ ಎಲ್ಲರೂ ಈ ಕುದುರೆಯೇನೂ ಲಕ್ಷಣಯುಕ್ತವಲ್ಲ ಎನ್ನುವರು

* * * *

ಯಜ್ಞಕ್ಕೆಂದು ತಂದ ಕುದುರೆ, ಯಜ್ಞದ ಮೊದಲೇ ಸಾಯುವುದೆಂದು ತೋರುವುದಲ್ಲ! ಆ ಮೇಲೆ? ಹೆಣದ ಬಲಿಯೇ? ಅಥವಾ ಬೇರೊಂದ ಕುದುರೆ ಸಿದ್ಧವಾಗಬೇಕೆ?

* * * *

ಉತ್ತರ ಹೇಳುವವರು ಕೊಂಗ್ರೆಸ್ಸಿನವರು ಅವರು ಆ ಇಲ್ಲಿ ಬೇಗದೊಳಿಗೆ ಧಕ್ಕ ಹೋಂಡಿಗೆ ಅವರ ಬದಲು ಬೇಕಾದಷ್ಟು ಪ್ರತಿನಿಧಿಗಳು ಸಿಗುವರು ನಿಜ, ಆದರೆ, ಸ್ವತಃ ಜನ ಹೇಗೆ? ಅದರ ಪ್ರತಿನಿಧಿ ಹೇಗೆ? ಹಾಗಂದು ಒಂದು ಪ್ರತಿನಿಧಿ ಕುದುರೆಯನ್ನು ಯಜ್ಞ ಮಾಡಿದರೆ ಅಶ್ವಮೇಧವಾದೀತೆ!

* * * *

ಅಂತೂ ವಿಕಲಾಲದಲ್ಲಾಗುವ ಎರಡು ಯಜ್ಞಗಳೂ ಸಕಾಲದಲ್ಲಿ ಸಾಗಿ ಮು ಗಿವ ವಿಷಯ ಅಂಜಿಕೆ ತೋರುತ್ತಿದೆ.

* * * *

ಅಂದೂ ಊಟ ಉಪಚಾರಗಳು ಅತಿಥ್ಯ ಆಡಂಬರಗಳು ಅತಿಥಿ ಶ್ರೇಷ್ಠರು ಚೆನ್ನಾಗಿನೆ ಕೆಲವರಿಗೆ ಊಟ—ಹಾಸ್ಯಿಗೆ ಇಷ್ಟರಲ್ಲೇ ಆಯುಷ್ಯ ಕಾಲವು ಮುಗಿವಂತಿದೆ

* * * *

ಬಾಯಿ ತೆರೆದಾಗಲೆಲ್ಲ ಅಕಳಿಕೆ ಅಥವಾ ಅನ್ನದ ತುತ್ತು, ಇನ್ನೇ ಈ ಯಜ್ಞಕ್ಕೆಂದು ತೆರಳಿದವರಿಗೆ ದೊರೆವ ಪ್ರಯೋಜನ. ಅಲ್ಲಿಂದ ಬರುವಾಗ, ಅನ್ನದ ತುತ್ತು ಅಲ್ಲೇ, ಅಕಳಿಕೆ ಮಾತ್ರ ಉಂದು ಮನೆಗೆ ಬಂದರು!

++ ++

The Kanara Enterprise, Ltd., Puttur.

ದಿ ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್, ಪುತ್ತೂರು.

Established 1920] **[1920ರಲ್ಲಿ ಸ್ಥಾಪಿತವಾದದ್ದು.**

Authorised Capital	Rs	2,00,000—0—0	ಅಧಿಕೃತ ಮೂಲಧನ	ರೂ 2 00 000—0—0
Issued Capital	Rs	44,100—0—0	ಚಂದಾ ಹಾಕಿದ ಮೂಲಧನ	ರೂ. 44,100—0—0
Paid up Capital	Rs	30,182—8—0	ಪೂರ್ಣ ಶೇರು	ರೂ 30,182—8—0
Reserve and other Funds		13,650—0—0	ರಿಸರ್ವು ನಿಧಿ ಇತರ ಫಂಡುಗಳು	13,650—0—0

All kinds of Banking business undertaken.

Current, Savings and fixed Deposits are received at favourable rates

Advances are made on bills, pledges of gold and other securities

Shares are now available

For Further particulars apply to the Secretary

Puttur,
16—2—1933

G N LAKSHMAN PAI,
Ag Secretary

For neat and nice Printing

Please call at

THE SHARADA PRESS,

Car Street, MANGALORE

Seventy Five Years!

Two generations of approved service enables us to pick and choose what is cheap, last ng and good to suit the pockets and the tastes of our longstanding wide circle of

CUSTOMERS

who know our

Premier House for Swadeshi

Mill Yarns —Handloom Cloths,

Dhotics—Sarees—Cintzesheto

Shrinivas Rang Pai,

Sawkar Mahal,

Car Street, MANGALORE

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ ಕ

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1-8-0 ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ 1 ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ 1—4—0 ಅಬಲಾವೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 1-4-0' ಚವನಪ್ರಾಶಲೇಹ ೧ ರತ್ತಿಗೆ ರೂ 2-8-0 ಅಭಯಾಮಲಕಿ ೧ ರತ್ತಿಗೆ ರೂ 2 ಇಂದ್ರಮನ್ (ವಿಶೂಚಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ 0—5—0 ದಂತಧಾವನ ಚೂರ್ಣ ತೊಲ ೧ಕ್ಕೆ 0-1-0 ಕ್ರಿಮಿಘ್ನಂತಿನಿ (ದದ್ರು ಸ್ಫೋಟಕ್ಕೆ) ಡಬ್ಬಿ ೧ಕ್ಕೆ ರೂ 0-6-0 ಕೃಷ್ಣಾರ್ಕ ೧ ಔನ್ಸಿಗೆ ರೂ 0-6-0 ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ 0-8-0 ಮಹಾ ಚಿತ್ರಕ ತೊಲ ೧ಕ್ಕೆ ರೂ 1-0-0 ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 0-10-0 ಒಲಕ್ಷಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-8 0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1—0—0 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 3—8 0

ನಮ್ಮ ಔಷಧಗಳು ದೊರೆಯುವ ಸ್ಥಳ — ಬೈಂದೂರ್—ಕೆ ಪುಕ್ಕ ಕಾನ ಭಂಗ ಗಂಗೊಳ್ಳಿ—ಜಿ ಸುರೇಂದ್ರ ನಾಯಕ್ ಕುಂದಾಪುರ—ಕೆ ರಾಮ ಭಟ್ ಡಾಕ್ಟರ್ ಕೆ ಆರ್ ಕಾಮತ್ ಉಡುಪಿ—ಡಾಕ್ಟರ್ ಎ ಎಸ್ ಆರ್ ಪೈ, ಆರ್ ಎಸ್ ಪೈ, ರಥಬೀದಿ ಕಾರ್ಕಳ—ವಿ ವಿ ಪೈ ಕಾಪು—ಡಾಕ್ಟರ್ ಬಿ ಕೆ ಜೋಷಿ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ ಹಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಒರೆದು ತಿಳಿಕೊಳ್ಳಬಹುದು

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ ದ ಕ



ಏಳು ವರ್ಷಗಳಿಗೊಮ್ಮೆ ಇಡೀ ದೇಹವು ಸಂಪೂರ್ಣವಾಗಿ ನವೀನವಾಗುವುದು
ಮೂರು ಸಲ 7 ಎಂದರೆ 777 ಎಂದಾದರೆ ಎಂತಹ ಬಟ್ಟೆಯೂ ನೂತನವಾಗುವುದು
ಸ್ವಸ್ತಿಕ್ ಗುರುತಿನ **777** ಸಾಬೂನನ್ನೇ ಒಬ್ಬೆ ಬಳಸಲು ಉಪಯೋಗಿಸಿರಿ
ಶುದ್ಧ ಸ್ವದೇಶಿಯನಾಗಿ ಇತರ ಬಟ್ಟೆಗೆ ಹೆಚ್ಚುವ ಎಂಥ ಸಾಬೂನಿಗೂ ಮಿಗಿಲಾಗಿ ಕಾತ್ಯುಷ್ಣವಾದ ಸುಲಭ ದೆರೆಯು ಸರ್ವರಿಗೆ ಅನುಕೂಲವಾದ

ಪ್ರತಿ ದಿನವೂ ಪ್ರತಿ ಮನೆಯಲ್ಲಿ **ಸಾಬೂನು** ಪ್ರತಿಯೊಬ್ಬರು ಪ್ರತಿ ಬಟ್ಟೆಗೆ

ಅದನ್ನು ಶುಭ್ರವಾಗಿ ಒಪ್ಪಕೊಟ್ಟು ನವೀನಗೊಳಿಸುವುದು

ಅತ್ಯುತ್ತಮವಾದ ಶಾಶ್ವತೀಯವಾಗಿ ಉಪಯೋಗಿಸಲು

'ಎಂಬರ್‌ಟಿಪ್ಸ್ ಟೀ'

ದೇಶೀಯ ತೋಟ, ದೇಶೀಯ ಕೂಲಿ, ದೇಶೀಯ ಹಣ, ಜಪಾನಿನಿಂದ ಮೂರಾಟದ ನರೆಗೆ ಎಲ್ಲವೂ ಆಚ್ಚ ದೇಶೀಯವೆ!

ಡಬ್ಬಿಗಳಲ್ಲೂ ಇದೆ, ಕಟ್ಟು ಗಳಲ್ಲೂ ಇದೆ, ಅದರ ಸುವಾಸನೆ, ರುಚ್ಚಿ ಸರ್ವೋತ್ಕೃಷ್ಟವಾಗಿದೆ ಅದರ ಬೆಲೆ, ಉಪಯೋಗ, ಸರ್ವಾನುಕೂಲವಾಗಿದೆ

ಇತರ ದೇಶೀಯವಲ್ಲದ ಅಥವಾ ದೇಶೀಯ ಜಾಗಳಿಗಿಂತ **ಎಂಬರ್‌ಟಿಪ್ಸ್** ಚಾವನ್ನೇ ಉಪಯೋಗಿಸಿರಿ

DISTRIBUTORS **Sujeer Rayappa Nayak, S. Narashim Venkatesh Nayak & Co.,**
Bunder, **Mangalore**, (S India).

ವಿಷಯ ಸೂಚಿ

ವಿಷಯ ಪುಟ

ಸಂಪಾದಕೀಯ ಬರಹಗಳು ... ೨

ಸ್ವದೇಶ ಸಮಾಚಾರ ... ೩

ಪರಮೋಚ್ಚ ಸಂಗ್ರಹಗಳು:

ಒಳನಾಡ ಪತ್ರಿಕೆಗಳ ವಿವಿಧ ವಿಚಾರಗಳು, ... ೪

ವಿದೇಶ ಸಮಾಚಾರಗಳು ... ೫೧

ಗುಜ್ಜ ಸೋಜಾರಂಗ್ ಕಾಗ್ತಗಳು ... ೩

ಸ್ವದೇಶ ಸೋಜಗಳ ಮಾಲಿ ... ೪

ಸಾಹಿತ್ಯವಿಚಾರ ... ೦೩

ಪೆಟ್ಟಿಗೆ ಪತ್ರ—ಮಾಹಿತಿಗಳು, ಉಪಾಯ, ಸೂಚನೆಗಳು, ಬಂಬಾಕ, ಮೊದಲಾದ ಸಾಹಿತ್ಯಾಂಗಗಳು ... ೪

ಜಾಹಿರಾತ್ಮಿಯಿಂದ ಸಹಿಯಲು ತಕ್ಕದಾದುದು! ... ೧೦

ಜಾಹಿರಾತುಗಳಲ್ಲಿ ದೇವಸ್ಥಾನ ಪ್ರವೇಶ? ... ೧೫

ಸ್ವದೇಶಾಭಿಮಾನಿ.

ಶಾ. ೫೦ನೇ ಶುಕ್ರವಾರ ಜೂನ್ ೧೯೩೫.

ಬ್ರಿಟಿಷರೂ ಹಿಂದೂಸ್ಥಾನವೂ

ಬ್ರಿಟಿಷ ದರ್ಪವು ಕಡಿಮೆಯಾಗುವ ಜಿಹ್ವೆಗಳು ಹೆಚ್ಚಾಗುತ್ತ ಗುತ್ತ ಬಂದಿವೆ. ಈ ಶತಮಾನದ ಆದಿಯಲ್ಲಿ ಬ್ರಿಟಿಷರು ಇಡೀ ಭೂಲೋಕವನ್ನು ಅಧಿಕರಿಸಿದ್ದರು; ಎಲ್ಲರ ಮನ್ನಣೆಗೂ ಪಾತ್ರವಾಗಿದ್ದರು; ಎಲ್ಲರ ಭೀತಿಗೂಡಾರಾಣರಾಗಿದ್ದರು; ಕೈ ಗಾರಿಕೆ ಮತ್ತು ವ್ಯಾಪಾರಗಳಲ್ಲಿ ಅದಕ್ಕೆ ಸರಿಯಾದ ಜನಾಂಗವೆ ಇನ್ನೊಂದಿರಕಿಲ್ಲ. ತನ್ನ ಸ್ವಾರ್ಥಕ್ಕಾಗಿ ಇತರ ದೇಶಗಳನ್ನು ಹೆದರಿಸುವುದು, ಹೆದರಿದ್ದರೆ ಹುಡ್ಡ ಮಾಡಿ ವಶಮಾಡುವುದು; ಈ ರೀತಿಯಲ್ಲಿ ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಕಟ್ಟಿ ಬಂದರು. ಆದರೆ ಈಗಿನ ಪರಿಸ್ಥಿತಿಯು ಬದಲಾಗಿದೆ. ಯಾವ ದೊಂದು ಸಾಮ್ರಾಜ್ಯವು ಜಿರಾಯುವಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗೆಯೇ ಬ್ರಿಟಿಷ ಸಾಮ್ರಾಜ್ಯವೂ ತನ್ನ ಉಪಯುಕ್ತತೆಯ ಸೀಮೆಯನ್ನು ಮುಟ್ಟಿ ಹಿಂಜರಿಯಲಾರಂಭಿಸಿಯಯದೆಂದೂ ಹೇಳಬಹುದು.

ಅದರ ಶ್ರಮುಖಾಂಗಗಳಾಗಿರುವ ಕೆನಡಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ದೇಶಗಳು ಸಾಧಾರಣ ಅದನ್ನು ಬಿಟ್ಟುಬಿಡಿಯೆ ಸರಿ. ಅವರು ತಕ್ಷ ಮಟ್ಟಿಗೆ ಸ್ವತಂತ್ರರಾಗಿಯೇ ವರ್ತಿಸುತ್ತಾರೆ. ಹಾಗೂ ಆಯರ್ಲಾಂಡು ದೇಶವು ಅದರಿಂದ ಸಂಪೂರ್ಣ ಬೇರೆಯಾಗಿಯೇ ಹೋಗಿದೆ. ಆಯರ್ಲಾಂಡು ಒಪ್ಪಂದಕ್ಕೆ ವಿರೋಧವಾಗಿ ನಡೆದರೂ ಅದನ್ನು ಬಗ್ಗಿಸುವ ಧೈರ್ಯವು ತತ್ಕಾಲಕ್ಕೆ ಇಂಗ್ಲೆಂಡಿನೊಳಗಿಲ್ಲ. ಕೆನಡಾ ದೇಶವು ತನ್ನ ಹಿತಗಳನ್ನು ಇಂಗ್ಲೆಂಡಿನ ಹಿತಗಳಿಗೆ ಅಧೀನವಿರಿಸಲೆಬೆಬುವ ದಿಲ್ಲ. ಸಾಮ್ರಾಜ್ಯ ಪರಿಷತ್ತುಗಳು ಸಾಮ್ರಾಜ್ಯದ ದೇರೆ ದೇರೆ ಅಂಗಗಳನ್ನು ಪತ್ತಿರಗೊಳಿಸುವುದಕ್ಕಿಂತಲೂ ಅವುಗಳ ವ್ಯಕ್ತಿತ್ವ ವನ್ನು ದೃಢಗೊಳಿಸುತ್ತಿವೆ.

ಇಂಗ್ಲೆಂಡಿನ ಶಾಶ್ವಬಲ್ಯವು ಅದಕ್ಕೂ ಪರ್ಸಿಯಕ್ಕೂ ನಡೆದ ಎಣ್ಣೆ ಗನಿಗಳ ಮೇಲಿನ ವಿವಾದದಿಂದ ಎಷ್ಟು ತಗ್ಗಿಯದೆಂದು ಕಂಡುಬರುತ್ತದೆ. ಇಷ್ಟು ಸಣ್ಣ ರಾಜ್ಯವನ್ನು ಹೆದರಿಸಿ ತಮ್ಮ ಇಚ್ಛಾನುಸಾರ ಎಣ್ಣೆ ಗನಿಗಳನ್ನು ತಮ್ಮ ದೇಶದ ಕಂಪೆನಿಯ ಅಧೀನ ಮಾಡುವೆನೆಂದು ಇಂಗ್ಲೆಂಡು ನೆನಸಿದ್ದಿತು; ಪರ್ಸಿಯದ ದೂರದರ್ಶಿಯಾದ ತ್ಯಾಗರಾಜನು ಇದಕ್ಕೆ ಹೆದರಲಿಲ್ಲ. ತನ್ನೊಡನೆ ಮಾತನಾಡಲಿಕ್ಕೆ ಬ್ರಿಟಿಷ ಸರಕಾರವಲ್ಲ; ಸಂಬಂಧಪಟ್ಟ ಕಂಪೆನಿಯೇ ಬಂದು ಮಾತನಾಡಲಿ ಎಂದು ಪರ್ಸಿಯದ ರಾಜನು ಖಲವಾಗಿ ಹೇಳಿದ ಕೂಡಲೆ ಇಂಗ್ಲೆಂಡು ಮುಲ್ಲನೆ ಹಿಂದೆಗಿದುಸಿತು; ಮತ್ತು ಎಂಗ್ಲೊ ಪರ್ಸಿಯನ್ ಓಯಿಲ್ ಕಂಪೆನಿಯವರೇ ತ್ಯಾನೊಡನೆ ಮಾತುಕತಿ ಆವನ ಶರ್ತಗಳಿಗೆ ಒಪ್ಪಿಕೊಂಡರು.

ಈಚೆಗೆ ರಷ್ಯಾದೇಶವನ್ನೆ ಹೆದರಿಸಲು ಪ್ರಯತ್ನಮಾಡಿದರು; ರಷ್ಯಾದೇಶದ ಸಾಮಾನುಗಳು ಇಂಗ್ಲೆಂಡಿಗೆ ಬಾರದಂತೆ ಮಾಡಿ ಧರು. ರಷ್ಯದೇಶವು ಇದಕ್ಕೆ ಬಗ್ಗುವ ಬದಲು ಬ್ರಿಟಿಷ ವಸ್ತು ಗಳಿಗೆ ರಷ್ಯಾದೇಶದಲ್ಲಿ ಬಹಿಷ್ಕಾರ ಹಾಕಿತು. ಇಂಗ್ಲೆಂಡಿನ ಕೈಗಾರಿಕೆಯವರು ಕೂಗಾಡಿದರು. ಕೊನೆಗೆ ಬ್ರಿಟಿಷ ಸರಕಾರವೇ ರಷ್ಯಾದೊಡನೆ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳಲು ಕಾರಂಭಿಸಿಯಾಗಿದೆ.

ಹಿಂದೂಸ್ಥಾನವು ಬಲವಾದ ಮತ್ತು ದೋಗ್ಯವಾದ ರೀತಿ ಯಲ್ಲಿ ತನ್ನವಕಾಶವನ್ನು ಹೊಡೆಯಕ್ಕೆ ಇದು ಒಳ್ಳೆಯ ಸಮಯ ವೆಂದು ಕಾಣುತ್ತದೆ. ಕಳ್ಳಬ್ರಿಟಿಷ್ ಪಕ್ಷವು ಹಿಂದೆ ಪಡೆದು ರ್ಗಳನ್ನು ನಿರೋಧಿಸುತ್ತದೆ. ನಿಜ, ಅದು ಹಿಂದಿನ ಮಾಜಿಸರ ಸರಕಾರದ ವಿಚಾರ್ಯನಗಳನ್ನೆ ಬಹುಮಟ್ಟಿಗೆ ಮುರಿದಿದೆ; ಇತ್ತ ಕಡೆಗೆ ಸಾಮ್ರಾಜ್ಯದ ಹಿಂದೂಸ್ಥಾನಕ್ಕೆ ಯಾವ ತರದ ಸುಧಾ ರಣೆಯನ್ನೂ ಕೊಡಬೇಕೂಡದಾಗಿ ಪಡಪಡಿಸುತ್ತಾರೆ. ಆದರೆ, ನಿಜವಾಗಿಯೂ ಹಿಂದೀಯರು ತಮ್ಮ ಬಲಗಳನ್ನೆ ಯೋಗ್ಯತೆ ಯನ್ನೂ ಪ್ರಕಟಮಾಡಿದರೆ ಬ್ರಿಟಿಷರು ಹಿಂದೀಯರ ಕೇಳಿಕೆ ಯನ್ನು ಮನ್ನಿಸದೆ ಇರುವುದಿಲ್ಲ. ಆದುದರಿಂದ ಇದೀ ದೇಶವು ಒಂದಾಗಿ, ತನ್ನ ಆಶಯವನ್ನು ಬಲಪಡಿಸಿದರೆ ಇಂಗ್ಲೆಂಡಿನಲ್ಲಿ ಹಿಂದೂಸ್ಥಾನದ ವಿಷಯದ ಮೇಲಿನ ವಿಚಾರಗಳು ಕ್ರಾಂತಿ ಹೊಂದಲು ಹೆಚ್ಚು ಸಮಯ ಹೋಗದು.

++++

Stop-Press.

—ಶ್ರೀ ಸರ್ವಂದ್ರಬೋಸರು ಅಸ್ವಸ್ಥದಿಂದಿರುವ ತನ್ನ ತಂದೆ ಯನ್ನು ನೋಡಲು ಕಲ್ಕತ್ತಾ ನಿರೆಯಿಂದ ಪುರಿಗೆ ಹೋಗಿರುವರು.

—ಮಹಾತ್ಮರು ಇಂದು ೯೫ ಪೌಂಡು ತೂಕವಿದ್ದಾರೆ. ಹೀಗೆಯೇ ದೇಹವು ವೃದ್ಧಿಗೊಂಡರೆ ಅವರು ಮುಂದಿನ ಸಭೆಯಲ್ಲಿ ಭಾಗವಹಿಸಲು ಅರ್ಹರಾಗುವರು.

—ಕೊಂಗ್ರೆಸ್ಸಿನ ಮುಂದಿನ ಧೋರಣೆಯನ್ನು ನಿರ್ಧರಿಸುವುದಕ್ಕಾಗಿ ಜುಲ್ಯಾ ೧೫ರೊಳಗೆ ಪುನೆಯಲ್ಲಿ ಒಂದು ಪ್ರಮುಖಸಭೆಯು ಸೇರುವುದೆಂದು ಇಂದಿನ ವಾರ್ತೆ.

—ಲಂಡನಿನ ಜ್ಯೊಂಟ್ ಸಿಲೆಕ್ಟ್ ಕಮಿಟಿಯು ಜುಲಾಯಿ ಆಂತ್ಯದ ವರೆಗೂ ನಡೆದು, ಆಗೋಸ್ಟು ತಿಂಗಳಿನ ವರೆಗೂ ಮುಂದಾಗಿ ಹೋಗುವು ದೆಂದು ತಿಳಿದುಬಂದಿದೆ.

—ದಿಲ್ಲಿಯಲ್ಲಿ ಏಳು ದಿನಗಳ ವಿಮಾನೀಕ ಮಳೆಯು ಸುರಿದು ಹಳ್ಳಿ ಪಳ್ಳಿಗಳು ಜುರ್ಗತಿಗೀಡಾದುವು. ಪಟ್ಟಣ ತುಂಬಾ ನೆರೆ ಬಂದು ಜೇರಳ ನಷ್ಟವಾಗಿರುತ್ತದೆ.

—ಅಜ್ಮೀರದಲ್ಲಿ ನೆರೆ ಬಂದು, ಹಿಂದು ಮನೆಯು ಬಿದ್ದು, ಒಳಗಿದ್ದ ಒಬ್ಬ ಗಂಡಾನು, ಒಬ್ಬ ಹೆಂಗಸು, ೪ ಮಂದಿ ಮಕ್ಕಳು ಮೃತರಾದರು. ಒಂದು ಎತ್ತಿನ ಗಾಡಿಯೂ ಎತ್ತೂ ನೆರೆಯಾಂದ ಕೊಡೊಯ್ಯಲ್ಪಟ್ಟಿತು.

ಆಮೊಹಾ ಜಿಲ್ಲೆಯಲ್ಲಿ ಹತ್ತು ಹಳ್ಳಿಗಳು ನೆರೆಯಿಂದಾಗಿ ಸಂಪೂರ್ಣ ನಾಶವಾದುವು. ೬೯೪ನಿಲ್ಲದಷ್ಟು ಪಶುಕರುಗಳು ಕಾಣೆಯಾಗಿವೆ. ನಿರ್ಗತಿಕ ಜನರು ರೈಲ್ವೆ ಲೈನುಗಳಲ್ಲಿ ಕುಳಿತಿರುವರು.

—ಮುಂಬಾಯಿಯಲ್ಲಿ ೧೯೩ ಕೇಂದಿ ಆಂಗಡಿಗಳು ೭,೬೭,೯೧೯ ರೂಪ್ಯಾಗಳಿಗೆ ಏಲಂ ಆಯುವುವು!!! ಕಳೆದ ವರ್ಷಕ್ಕಿಂತ ಒಟ್ಟು ೨ ಲಕ್ಷ ರೂಪ್ಯಾ ಸರಕಾರಕ್ಕೆ ನಷ್ಟ! ಕಳೆದ ವರ್ಷ ೪೩೦ ರೂಪ್ಯಾಗಳಿಗೆ ಏಲಂ ಆಗಿದ್ದ ಹಿಂದು ಕೇಂದಿ ಆಂಗಡಿಯು ಈ ವರ್ಷ ೧೧,೨೧೦ಕ್ಕೆ ಏಲಂ ಆಗಿರುತ್ತದೆ!!!

—ಕಲ್ಕತ್ತದಲ್ಲಿ ಅಬ್ದುಲ್ ಖಾದರ್ ಎಂಬವನು ಲೈಸೆನ್ಸ್ ಇಲ್ಲದ ವಿಷಾಲ್ಕರು ಹಿಡಿದುದಕ್ಕಾಗಿ ೬ ವರ್ಷಗಳ ಕಠಿಣ ಸಜೆಯನ್ನು ಜಸ್ಟಿಸ್ ಕೊಸ್ಟೆಲ್ಲೊ ಎಂಬವರು ಕೊಟ್ಟರು.

—ಆಂಜ ಮಾನೆಜಲ್ಲಿ ಸತ್ತ ಮೂವರು ಉಪವಾಸ ಮಾಡಿ ಕಾಲ ವಾದವಲ್ಲ—ಅವರು ಜ್ವರದಿಂದಾಗಿ ಕಾಲವಾದುದು ಎಂದು ಲಂಡನಿಲ್ಲಿ ಪೋರರು ಹೇಳಿದರು.

—ಪೂನೆಯಲ್ಲಿ ೬ ಮಂದಿ ಕೊಂಗ್ರೆಸ್ ನಾಲರನ್ನು ಮೆಜಿಸ್ಟ್ರೇಟರು ಕರೆದು ಅವರು ಇನ್ನು ಚಳವಳಿಕ್ಕೆ ಕೈಯಿಕ್ಕುವುದಿಲ್ಲವೆಂಬ ಪತ್ರಕ್ಕೆ ಸಹಿ ಹಾಕಲೇಕೆಂದರು. ಆದರೆ ಅವರು ಅದಕ್ಕೆ ಸಮ್ಮತಿಸಲಿಲ್ಲ. ಅವರನ್ನು ಹೋಗಬಿಟ್ಟರು.

—ಮಹಾತ್ಮಾಜೀಯವರ ತೂಕವು ದಿನೇ ದಿನೇ ಹೆಚ್ಚುತ್ತಿದೆ ಯೆಂತೊ, ಅವರು ತಗ ಸಂಪೂರ್ಣ ಆರೋಗ್ಯದಲ್ಲಿರುವರೆಂದೂ ಇಂದಿನ ವಾರ್ತೆ.

—ಬಿಹಾರ್ ಜಿಲ್ಲೆಯಲ್ಲಿ ಪೊರಾರು ಮನೆಗಳು ನೆರೆಯ ಪಾಲಾ ದುವು.

—ಗೋಯಾಜಾದ್ ಬಳಿ ಪೌಲಪುರ ಎಂಬ ಹಳ್ಳಿಯು ನೆರೆಯಿಂದಾಗಿ ಸಂಪೂರ್ಣ ಜಲಮಯವಾಗಿದೆ.

ಒಳದೇಶ ವರ್ತಮಾನ

—ಮುಂಬಾಯಿಯ ಬೆಲ್ಲೆ ಬಾರಿಯೆಲ್ಲಿ ಒಬ್ಬ ಪಾರ್ಸಿ ಪಾರಸಿ ಮುಂಜಾನೆ ಒಂದು ಮನೆಗೆ ಹೋಗಿ ಬಾಗಿಲು ಬಡಿದಾಗ ಒಡನೆ ಅಲ್ಲೇ ಮೃತನಾದನು. ಕಾರಣವೇನೆಂದು ವಿಚಾರಿಸಲು ಅಲ್ಲಿಗೆ ಬಾಗಿಲು ಬಿದ್ದುಕ್ಕಿಯುತ್ತಿದ್ದಾಗಿತ್ತು. ಒಂದು ಪಿಸ್ತೂಲ್ ಸಹಿತವಾದ ಆಯು ಬಾಗಿಲಿಗೆ ತಗಲಿದ್ದುದರಿಂದ ಹೀಗಾಯಿತು.

—ಕಲ್ಕತ್ತದಲ್ಲಿ ವಿಶೇಷ ಮಳೆಯು ಬಂದು ಬಬ್ಬಾದ ದೊಳ್ಳಿಗಳಲ್ಲಿ ಮೊಣಕಾಲೆತ್ತರದ ನೀರು ನಿಂತಿತ್ತು. ಜೆಟ್ಟಿಗಳ ನಷ್ಟವೂ ಸಂಭವಿಸಿರು ತ್ತದೆ.

—ಮಹಾತ್ಮರ ಉಪವಾಸದ ಪರಿಣಾಮವಾಗಿ ಅವರಿಗೆ ಒಟ್ಟು ರೂ. ೨೬೫೬೦ ದಾನವಾಗಿ ಬಂದಿದೆ.

—ಆಗ್ರಾ ಜೈಲಿನಲ್ಲಿರುವ ಸ್ತ್ರೀ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ.

—ಕಹಜಾನ್‌ಪುರದಲ್ಲಿ ಜಂ ವರ್ಷ ಪ್ರಾಯದ ಹೆಂಗಸೊಬ್ಬಳು ೦೯ ವರ್ಷ ಪ್ರಾಯದ ಹುಡುಗನನ್ನು ವಿವಾಹವಾಗಿರುವಳು. ಇವಳು ಈ ಮುಂಚೆ ಮೂರು ಸಲ ವಿವಾಹವಾದವಳು.

—ಕರಾಚಿ ಮತ್ತು ಕಲ್ಕತ್ತಾನಡುವೆ ವಿಮಾನವು ತ್ರಾ ವರಿಂದ ಪ್ರಾರಂಭವಾಗಲಿದೆ.

—ನೈನಾಡಿನ ಶ್ರೀ ಟಿ. ವಿ. ಸುಬ್ಬಯ್ಯ ಗೌಂಡರ್ ಎಂಬೊಬ್ಬ ಕೊಂಗ್ರೆಸ್ ಪಕ್ಷೀಯರು ತಾನು ಸಾಯುವಾಗ ೮೦,೦೦೦ ಸಾವಿರ ರೂಪ್ಯಾ ಗಳನ್ನು ಹರಿಜನರಿಗಾಗಿ ದೇವರ್ಪಡಿಸಿ ವೀಲು ಮಾಡಿರುವರು.

—ಮುರಬಾಯಿಯ ಸಾಂತಾಕ್ರೂಜ್‌ನಲ್ಲಿ ವಾರ್ತಾಪ ಒಬ್ಬ ಮನುಷ್ಯನು ತನ್ನ ಹೆಂಡತಿ ಮಕ್ಕಳನ್ನು ಕೊಂದು ಮನೆಗೆ ಬೆಂಕಿ ಕೊಟ್ಟನ್ನು ಪೋಲೀಸರು ಬೆಂಕಿ ನಂದಿಸಿ ಬಂದಾಗ ಒಳಗೆ ಕವಗಳ್ಳವು.

ಭವಾಲ್‌ಪುರದ ನವಾಬರು ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ಎಲ್ಲರೊಡನೆಯೂ ಹಸ್ತಲಾಘವ ನಡೆಸಿದರು. ಬಿಸಿಲಿಗಾಗಿ ಅವರು ಕೊಡೆ ಹಿಡಿಯಬೇಕೆಂದು ಒಬ್ಬರು ಹೇಳಿದ್ದಕ್ಕೆ "ನನ್ನ ಜನರ ಬಿಸಿಲಲ್ಲಿದ್ದಾರೆ, ನಾನು ಕೊಡೆ ಹಿಡಿಯಲಾರೆ" ಎಂದರು. ಇವರ ಈ ರೀತಿಯ ಔದಾರ್ಯವು ಊರಲ್ಲೆಲ್ಲಾ ಮಹದಾನಂದವನಕ್ಕೆ ವಿಷಯ ವಾಗಿದೆ.

—ಸಯ್ಯಾಮಿನಲ್ಲಿ ಕಳೆದ ವರ್ಷ ನಡೆದ ಶಾಂತಮಯ ಕ್ರಾಂತಿಯಿಂ ಈ ಸಲವೂ ಒಂದು ಕ್ರಾಂತಿ ನಡೆದು ಕ್ರಾಂತಿಕಾರರು ಗೆದ್ದರು. ಪ್ರಜಾ ಪೋಕರು ಕ್ರಾಂತಿಕಾರರ ಮಂಬಡನ್ನು ಅಧಿಕಾರವರ್ಗಕ್ಕೆ ಸೇರಿಸಿದರು.

—ನೇಪಾಳ ತಿಂಗಳ ತನಕ ಹಿಂದೂದೇಶದ ಜೈಲುಗಳಲ್ಲಿ ಬಿದ್ದಿರುವ ೧೦೪ ರಾಜಕೀಯ ಕೈದಿಗಳನ್ನು ಬಿಡುಗಡೆಯಾಗಿ ಪ್ರಕಟವಾಗಿರುತ್ತದೆ.

ದೇಶಬಂಧು ಚಿತ್ತರಂಜನ ದಾಸರವರ ಸ್ಮರಣಾ ದಿನಾಚರಣೆಯ ದಿನ ಕೋಲ್ಕತ್ತೆಯಲ್ಲಿನ ಮಾಡಿಸಿ ನೀಲಿ ರಾಷ್ಟ್ರಧ್ವಜವನ್ನು ಏರಿಸಬೇಕೆಂ ನಿರ್ಧಾರವಾಯಿತು. ಆದು ಕೂಡದೆಂದು ಪೋಲೀಸರು ಮೇಜಸ್ಟ್ರೇಟರಿಂ ಬರೆದರು. ಮೇಜಸ್ಟ್ರೇಟರು "ರಾಷ್ಟ್ರಧ್ವಜಾರೋಹಣವು ತಪ್ಪಲ್ಲ" ಎಂದರ

—ಮದ್ರಾಸಿನ 'ಪ್ರಜಾಮತ'ದ ಸಂಪಾದಕರಾದ ಶ್ರೀ ಬಿ. ಎಸ್ ಗುಂಡ್ಕರವರ ಸಂಪಾದಕತ್ವದಿಂದ 'ಜನವಾಣಿ' ಎಂಬ ಉಜ್ವಲ ದಿನಪ ಕನ್ನಡ ಪತ್ರಿಕೆಯು ಪ್ರಕಟವಾಗುವುದೆಂದೂ, ೩೦,೦೦೦ ರೂಪ್ಯಾಯ ಧಾ ವಾಲವುಳ್ಳ "ದಿ ಕರ್ನಾಟಕ ಪ್ರೆಸ್ ಪಬ್ಲಿಶಿಂಗ್ ಕಂಪೆನಿ ಲಿಮಿಟೆಡ ಎಂಬ ಜ್ಯೊಂಟ್ ಸ್ಟಾಕ್ ಕಂಪೆನಿಯು ಸ್ಥಾಪಿತವಾಗಿದೆಯೆಂದೂ ತಿಳಿ ಬಂದಿದೆ. ಅಚ್ಚು ದೋಷವು ಕಡಿಮೆಯಾಗಿ, ಈ ಪೈಸಿಕವು ಸರ್ ಕನ್ನಡಿಗರ ಆದರ್ಶಪ್ರಾಯ ಪತ್ರವಾಗಲೆಂದು ತೋರುತ್ತೇವೆ.

ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಮ್ಮೇಳನ ಸಮಿತಿಯ ಕಾರ್ಯದರ್ಶಿಯರಾದ ಶ್ರೀ ಎಂ. ಬಿ. ಜಂಬುನಾಥಹೆಗಡರು ಬೆಂಗಳೂರಿ ಬರೆಯುತ್ತಾರೆ: ಕರ್ನಾಟಕದಲ್ಲಿ ೮—೧೦ ವರ್ಷಗಳಿಂದ ನಡೆಯುತ್ತಿರು ಹಿಂದೀ ಪ್ರಚಾರ ಕಾರ್ಯದಲ್ಲಿ ಕಂಡುಬರುವ ಕುಂಠಿತೋದತಿಗಳ ಹೋಗಲಾಡಿಸಿ ಹೊಸ ಕಾರ್ಯೋತ್ಸಾಹವನ್ನು ಪರ್ಪಡಿಸುವ ಸಲುವ ಸಾರ್ವಜನಿಕ ಮುಖಂಡರ ಅಪೇಕ್ಷಿಸೋಣಗೆಯ್ದರು. ಹಿಂದಿ ಪ್ರಚ ಬಂಧು ಭಗಿಸಾಮರು ೧೯೩೬ನೇ ಜುಲಾಯಿ ತಾ. ೧೦ರಂದಿಗೆ ಈ ಕೆಲ ವಿಷಯಗಳಿಗೆ ಒಳಗೊಂಡಿರುವ ತಮ್ಮ ಸ್ವಸ್ಥವಾದ ಸಲಹೆ ಸೂಚ ಗಳನ್ನು ನನ್ನ ಕಡೆಗೆ ಕಳುಹಿಸಲೇಕಾಗಿ ವಿನಂತಿ.

೧. ದಕ್ಷಿಣ ಭಾರತದಲ್ಲಿ ಹಿಂದಿಯ ಘಾಸ್ಯ ಸಂಸ್ಥೆಯ ಮದ್ರಾಸ್ ಹಿಂದೀ ಪ್ರಚಾರ ಸಭೆಯ ಧೋರಣೆ ಹಾಗು ಸಂಭಳಿ ೨. ಸಭೆಯು ನಡೆಸುತ್ತಿರುವ ಪರೀಕ್ಷೆ, ಪುಸ್ತಕ ಪ್ರಕಾಶನ ಮತ್ತು ಪ್ರಚ ಪದ್ಧತಿ. ೩. ದಕ್ಷಿಣ ಭಾರತದಲ್ಲಿ ಪ್ರಮುಖ ಭಾಷಾ ಪುನರ್ವಿಂಗ ಚಳವಳಿದಲ್ಲಿ ಹಿಂದಿಯನ್ನು ಸರ್ವಮಾನ್ಯಗೊಳಿಸುವ ವಿಧಿವಿಧಾನಗ ೪. ಸ್ತ್ರೀಯರೂ ಹಿಂದೀ ಚಳವಳಿಯೂ. ೫. ಪ್ರಚಾರಕರು—ಸಾ ಯೋಗ್ಯತೆ, ನಷ್ಟತೆ ಹಾಗು ಅವರ ಸಂಬಂಧವಾಗಿ ಅಭಿಮತ. ೬. ಸ್ಥಳೀಯ ಹಿಂದೀ ಸಂಸ್ಥೆ, ಮದ್ರಾಸ್ ಹಿಂದೀ ಪ್ರಚಾರ ಸಭೆಯು ಸ್ಥಾಂತರ ಕಾರ್ಯಾದರ್ಶಿ ಮತ್ತು ಪ್ರಾಂತೀಯ ಸಮ್ಮೇಳನಗಳಿಗೆ ಸಂಬಂಧ.

೫. ಸಹಾ ಸಲಹೆ ಸೂಚನೆಗಳನ್ನು ವ್ಯಕ್ತಪಡಿಸಿ ಅಭಿಮತವನ್ನು ಗುರಿಯಾಗಿಸದೆ ಹಿಂದೀ ಪ್ರಚಾರದ ಉನ್ನತಿಗಾಗಿ ಉಚಿತವೆನಿಸಿ ಪುದೆಂದು ನಂಬಿಕೆಯು ಕೊದಲಾಗುವುದು.

ದಕ್ಷಿಣ ಕನ್ನಡ

ಮಂಗಳೂರು:—ಹಿಂದೀ ವಾಗ್ವರ್ಧಿನೀ ಸಭಾ, ಮಂಗಳೂರು ಇವರು ಇದರ ನಾಲ್ಕನೆಯ ಕೂಟವು ಇದೇ ಕಳೆದ ಆದಿತ್ಯವಾರ ತಾ. ೨೯-೬-೩೫ರಲ್ಲಿ ಶ್ರೀ ಪಿ. ಡಿ ಮೊಧವ ಬಾಳಿಗರ ಅಧ್ಯಕ್ಷತೆಯ ಮೇಲೆ ಜರಗಿತು. "ಭಾರತಕ್ಕೆ ಸಚಿತ್ರೆಯು ಬೇಕೇ?" ಎಂಬ ವಿಷಯದಲ್ಲಿ ತರ್ಕವಿತರ್ಕಗಳು ನಡೆದು, 'ಅಮ್ಮ ಆಧುನಿಕ ಭಾರತಕ್ಕೆ ಅಷ್ಟೇಕೆ ಮಂಜೂರಾಯಿತು ಅಧ್ಯಕ್ಷರು ವಿಚಾರಪೂರ್ಣ ವಿಷಯಗಳನ್ನು ಸರಳವಾದ ಶೈಲಿಯಲ್ಲಿ ಹೇಳುತ್ತ ಸಚಿತ್ರೆಯ ಉಪಯುಕ್ತತೆಗಳನ್ನು ವಿವರಿಸಿದರು. ಧನ್ಯವಾದ ಸಮರ್ಪಣೆಯಾದ ಬಳಿಕ ಸಭೆಯು ವಿಸರ್ಜನವಾಯಿತು.

ದೆನಾರೆಸ್ ಹಿಂದೂ ಯುನಿವರ್ಸಿಟಿಯ ಇಂಟರ್‌ಮಿಡಿಯೇಟ್ ಪರೀಕ್ಷೆಯಲ್ಲಿ ಇಲ್ಲಿಯ ಶ್ರೀ ಮುಡೇಶ್ವರ ಶಾಂತಾಬಾಯಿಯವರು ಪ್ರಥಮಶ್ರೇಣಿಯನ್ನು ಮುಖ್ಯಭಾಷೆಯಾಗಿ ತೆಗೆದು ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಹಿಂದಿಯ ಉಚ್ಚಶಿಕ್ಷಣಕ್ಕಾಗಿ ಮದ್ರಾಸ್ ಹಿಂದೀಪ್ರಚಾರ ಯಂತ್ರಿ ಮಂಡಳಿಯಿಂದ ಉತ್ತರ ಹಿಂದೂಸ್ಥಾನಕ್ಕೆ ಕಳುಹಿಸಲ್ಪಡುವ ಸ್ತ್ರೀಯರ ತಂಡಕ್ಕೆ ಇಲ್ಲಿಯ ಶ್ರೀಮತಿ ಗೆಲ್ಲಾಡಿ ಶಾಂತಾಬಾಯಿಯವರು ಆರಿಸಲ್ಪಟ್ಟಿದ್ದಾರೆಂದು ಸದ್ರಿ ದಳವು ಜುಲಾಯಿ ತಾ ೬ಕ್ಕೆ ಮದ್ರಾಸಿನಿಂದ ಹೊರಡುವುದು.

ಇದೇ ತಾ ೭ನೇ ಶುಕ್ರವಾರ ಸಂಜೆ ೫ ೪೦ಕ್ಕೆ ಮುನಿಸಿಪಾಲಿಟಿಯ ಒಂದು ಸಭೆಯು ಅದರ ಕಛೇರಿಸಭಾಗೃಹದಲ್ಲಿ ಜರಗಲಿರುವುದು.

ಈ ಮೊದಲು ಪ್ರಕಟಿಸಿದಂತೆ ಆರ್ಯ ವಿದ್ಯಾವಿಜಯ ನಾಟಕ ಮಂಡಳಿಯವರು ಬರುವ ತಿಂಗಳಲ್ಲಿ, ಅನುಕೂಲ ದಿನದಲ್ಲಿ, ಗಣಪತಿ ಶಾಲೆಯ ತಾರದಾ ಸದನದಲ್ಲಿ 'ವನಂತ ಲತಾ' ಎಂಬ ಸಾಮಾಜಿಕ ನಾಟಕವನ್ನು ಆಡಲಿರುವರೆಂದೂ, ಇದಾದ ನಂತರ ಇವರು ಥೂಲ್ಯಯಲ್ಲಿ ಶಾರದಲೀಲೆ ನಾಟಕವನ್ನು ಅಭಿನಯಿಸಲಿರುವರೆಂದೂ ತಿಳಿದು ಬಂದಿದೆ. ಇದು ಜನರ ಅಪೇಕ್ಷೆ ಮೇರೆಗೆ 'ನಾರದ ಲೀಲೆ'ಯನ್ನು ಮುಂಗಳೂರಿನಲ್ಲಿ 'ಬಡವರ ಬಂಧು' ಮಾಸಿಕ ಪತ್ರಿಕೆಯ ಸಹಾಯಾರ್ಥವಾಗಿ ಆಡಲಿರುವರೆಂದೂ ತಿಳಿದು ಬರುತ್ತದೆ ವನಂತನ ಪಾತ್ರವನ್ನು ಶ್ರೀ ಮಂಜುನಾಥ ಶಾಲಿನಾಚನರೂ ಲತೆಯ ಪಾತ್ರವನ್ನು ಶ್ರೀ ಶ್ರೀಧರ ರಾವ್, ಇವರೂ ವಹಿಸಲಿರುವುದರಿಂದ ಈ ದ್ವಿತೀಯ ನಾಟಕವು ಪ್ರಶಸ್ತ ರಾಗುವುದೆಂದು ಊಹಿಸಲಾಗಿದೆ. ಇನೆರಡು ನಾಟಕಗಳು ತಕ್ಕ ಪ್ರೋತ್ಸಾಹಕೊಟ್ಟಿಗಾಗುವುದೆಂದು ತಿಳಿಯಲಾಯಿತಂದರಿಂದ, "ವಿಮಲಾ ಬಾಯಿ" ಎಂಬ ಪೌರಾಣಿಕ ನಾಟಕವನ್ನೂ ಆಡಲಿರುವರೆಂದು ಗೊತ್ತಾಗಿದೆ.

ಇಲ್ಲಿಯ ಶ್ರೀಕೃಷ್ಣ ಸಿನಿಮಾ ಮಂದಿರದಲ್ಲಿ ಇದೇ ತಾ ೨೯ರಿಂದ ಮುದಸ್ ಕಂಪೆನಿಯವರ "ಅಂಖ್ ಕಾ ತಾರಾ" ಎಂಬ ಮೂಕಾಡುವ ಚಿತ್ರವನ್ನು ಪ್ರದರ್ಶಿಸಲಿರುವುದು. ಈ ಚಿತ್ರದಲ್ಲಿ ಮಿಸ್ ಇಂದುಬಾಲ (ಗ್ರೆಮೋಫೋನ್ ಮೃತಿವಂಶಳು) ಕಜ್ಜನ್ ಲಕ್ಷ್ಮಿ, ಅಬ್ದುಲ್ ರಹಿಮಾನ್ ಕಾಬೂರಿ, ಚಂದಲಾಲ್, ಚಮನ್‌ಲಾಲ್ ನಬೀದಿ ಶಂಕರ್ ಮೊದಲಾದವರು ಅಭಿನಯಿಸಿರುವರು ಅನಂತರ "ಹಿರೊಸ್ ಆಫ್ ದಿ ಫ್ಲೇಮ್" (ಪೀರಿಯಲ್)

ಉಡುಪಿ—ಮಿಶನ ಹೈಸ್ಕೂಲಿನಲ್ಲಿ ಶ್ರೀ ಊರ್ವಿ ಶ್ರೀ ನಿವಾಸರಾವ್ ನಿವೃತ್ತರಾದ ಸೀನಿಯರ್ ಮೆಥಮೆಟಿಕ್ಸ್ ಅಸಿಸ್ಟಾಂಟ್ ಸ್ಥಾನಕ್ಕೆ ಆಯ್ಕೆಯಾಗಿದ್ದ ಶ್ರೀ ಯು ಪುಂಡಲೀಕ ಶೆಣೈ ಬಿ. ಎ ಎಲ್ ಟಿ ಯವರನ್ನು ಬದ್ರಿ ಮಾಡಿರುತ್ತಾರೆ. ಬಾಕಿಯಾದ ಹೂಗಿಯಂ ಸ್ಥಾನಕ್ಕೆ ಒಬ್ಬ ಕ್ರೈಸ್ತ ಗ್ರೆಜುವೇಟರು ನೇಮಕ ಹೊಂದಿರುತ್ತಾರೆ ಶ್ರೀ ಕೆ ವೆಂಕಟ್ರಾಮಾಚಾರ್ಯರಿಗೆ ವಿಜ್ಞಾನ ಮಾಡಿದಂತೆ ಹಿಂದಿನ ತಿಂಗಳುಗಳ ಸಮೇತ ಮಾಹೆಯಾನ ರೂ ೩೦ ಬದ್ರಿ ಸಿಕ್ಕಿರುವುದಾ ಗ್ಗಿಯೂ ಶ್ರೀ ಎಮ್ ಎಸ್ ಕಾಶ್ತಿಗೇಗೂ ರೂ ೩೦ರಂತೆ ಬದ್ರಿಯಾಂದ ಇನ್ನೊಂದು ದರ್ಜದ ಕೆಲಸ ದೊರಕಿರುವುದಾಗಿಯೂ ತಿಳಿದು ಬರುತ್ತದೆ

ಮೂಲ್ಕಿ—ಶ್ರೀಲ ಜಗದ್ಗುರು ಶ್ರೀಮದ್ ಶಂಕರ ಭಗವತ್ಪಾದಾಚಾರ್ಯ ಪ್ರತಿಷ್ಠಾಪಿತವಾದ ಶ್ರೀಮದ್ ಶೃಂಗೇರಿ ಶಾರದಾ ಪೀಠದ ಪೂರ್ವಾಮ್ನಾಯ ಶ್ರೀಮದ್ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರ ಪಟ್ಟಾಭಿಷೇಕ ಸುವರ್ಣ ಮಹೋತ್ಸವ ಕಾರ್ಯಕ್ರಮವು ಇದೇ ಕಳೆದ ತಾ. ೧೩-೬-೩೫ ನೇ ಶುಕ್ರವಾರ ಅಪರಾಹ್ನ ೫ಗಂಟೆ ೫೪ ನಿಮಿಷದಿಂದ ಆರಂಭವಾಗಲಿದೆ. ಸಭಾ ಸದನಗಳು ಫಲೋ ರೀತಿ ಶೃಂಗಾರಿಸಲ್ಪಟ್ಟಿದ್ದವು. ನಿಯಮಿತ ಸಮಯಕ್ಕೆ ಸಭಾಕಾರ್ಯಗಳು ಪ್ರಾರಂಭವಾದವು ಮಂಗಳೂರು ಕೆನರಾ ಹೈಸ್ಕೂಲಿನ ಸಹಾಯಕ ಅಧ್ಯಾಪಕರೂ, ಕನ್ನಡ ವಾಙ್ಮಯ ಧುರೀಣರೂ ಆಗಿರುವ ಮ. ರಾ. ರಾ ಯು ಎನ್ ಕಾಮತ್, ಅವರಿಗೆ ಶ್ರೀಮದ್ಗುರುಗಳಾಜ್ಞೆಯಂತೆ ಸಭಾಧ್ಯಕ್ಷತೆಯನ್ನು ವಹಿಸಿ ಕೊಡಲಿಗೆ ಪೂರ್ವಾಹ್ನ ಸಭಾಧ್ಯಕ್ಷರಾಗಿದ್ದರು ಸೂಚೀ ಪತ್ರದಂತೆ ಅಧ್ಯಕ್ಷರ ಜೀವನಚರಿತೆಯು ನಡೆದು, ಸದ್ರಿ ಮಹಾಶಯರು ಅಸ್ಮಾನವನ್ನು ಅಲಂಕರಿಸಲು, ಕ್ಷಣ್ಣನ ಉಪಾಧ್ಯಕ್ಷ ಡಾಕ್ಟರ್ ಯು ಆರ್ ಕಾಮತ್ ರವರು ಸಭಾಧ್ಯಕ್ಷರ ಕೊರಳಿಗೆ ಹೂಮಿನ ಹಾರ ಹಾಕಿ ಸಶ್ಮಾನಿಸಿದರು ಸನ್ಮಾನ್ಯ ಅಧ್ಯಕ್ಷರ ಪೂರ್ವಾರ್ಧ ಭಾಷಣವು ಯಥಾ ರೀತಿ ನೆಡೆದುಮದ ನಂತರ, ಶ್ರೀ ಯು ಗೋವಿಂದರಾಯರು ದಿವಂಗತ ಡಾ.ಕೃರ್ ಭೋಳ ಶ್ಯಾಮರಾಯರ ಜನ್ಮಕತೆಯನ್ನು ಸಾದ್ಯಂತವಾಗಿ ಓದಿ ಹೇಳಿದರು. ಇದನ್ನು ಸಮರ್ಥಿಸಿ ಕ್ಷಣ್ಣಿನ ಗೌ ಕಾರ್ಯದರ್ಶಿ ರಾ. ಬಿ ಭೋಜ ರಾಯರು ಕೆಲ ಪ್ರಮಿಖ ಮಾತಾಡಿ ಸಂಸ್ಥೆಯ ವರ್ಧಂತಿಗೂ ದಿವಂಗತ ಡಾಕ್ಟರರ ಜನ್ಮದಿನಾಚರಣೆಗೂ ಸರಸ್ವರ ಹೋಡಿಕೆಯಾದ ಸಂದರ್ಭ ವನ್ನು ವಿವರೀಕರಿಸಿ ಸದ್ರಿ ದಿವಂಗತರಲ್ಲಿ ಆಡಕವಾಗಿದ್ದ ಉತ್ಕೃಷ್ಟ ಗುಣ ಗಳನ್ನು ಪ್ರಶಂಸಿಸಿದರು ನಂತರ ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕ ರಾ ಯು ಕೇಶವ ರಾವ್, ಬಿ ಎ ಎಲ್ ಟಿ ರವರು ಸಂಸ್ಥೆಯ ದ್ವದ್ಧಿಂಗತವಾದ ಬೆಳವಣಿಗೆಯನ್ನು ಸಂಕ್ಷೇಪವಾಗಿ ವಿವರಿಸಿ ಸಂಸ್ಥೆಗೆ ಮುಂದೆಯೂ ಕ್ರೀಯೋಧ್ಧವೃದ್ಧಿಯನ್ನು ಕೋರಿ ಸಂಸ್ಥೆಯ ಅಧಿವಂದನೆಯನ್ನು ಸೂಚಿಸಿದರು ಆ ಮೇಲೆ ಕ್ಷಣ್ಣಿನ ಗೌ ಕಾರ್ಯದರ್ಶಿಯವರು ಸಂಸ್ಥೆಯ ಗತ ವರ್ಷದ (ತಾ ೭-೬-೩೪ರಿಂದ ೨೪ನೆ ಅಂಕ್ಯವಾದ) ವರದಿಯನ್ನು ಓದಿ ಹೇಳಿ ಸಭಿಕರಿಗೆ ಆರ್ಪಿಸಿದರು ವರದಿಯು ಸರ್ವ ಕಮ್ಮತದಿಂದ ಅಂಗೀಕೃತವಾಯಿತು ಅನಂತರ ಬಾಲ್ಕಿ ವರ್ಷದ ಬಜೆಟು ಸಭಿಕರ ಮುಂದಿಟ್ಟಲ್ಲಿ ಅದೂ ಒಪ್ಪಿಕೊಳ್ಳೋ ಗಾಯಿತು ಇದಾಗಲು ಒಳ್ಳಿ ವರ್ಷದ ಕಾರ್ಯಕಾರಿ ಮಂಡಲದ ಸದಸ್ಯರ ಹಾಗು ಗೌರವ ಲೆಖ್ಖ ಪರಿಶೋಧಕರ ಚುನಾವಣೆಯು ಸರ್ವ ಸಮ್ಮತ್ಯಿಯಿಂದ ನಡೆಯಲ್ಪಟ್ಟು ಪರವೂರಿಂದ ಬಂದ ಕೆಲವೊಂದು ಸ್ವಸ್ಥಿ ವಾಚನಾ ಪತ್ರಗಳು ಓದಿ ಹೇಳಲ್ಪಟ್ಟಿವೆ ಅದರ ಮೇಲೆ ಸಭಾಧ್ಯಕ್ಷ ಮಹಾಶಯರ ಅಮೂಲ್ಯ ಸಾಗೂ ಬೋಧಕರ ಭಾಷಣವು ನಡೆಯಿತು ಇವರು ತಮ್ಮ ಅರ್ಥ ಗರ್ಭಿತವಾದ ಭಾಷಣದಲ್ಲಿ ಸಂಸ್ಥೆಯು ಮಾಡುತ್ತಿರುವ ಯಥಾರ್ಥ ಸೇವೆಯನ್ನು ಕ ರಿತು ಶ್ಲಾಘನೆ ಮಾಡಿ ಮುಂದೆ ಅದು ಕೈಕೊಳ್ಳತಕ್ಕ ಉತ್ಕೃಷ್ಟ ಕಾರ್ಯ ಭಾಗವನ್ನು ಸೂಚಿಸಿ ಕರ್ತಾರಿಕ ಸಂಪತ್ತಿಕ್ಕೆ, ಈ ಸಂಸ್ಥೆಯು ಯೋಗ್ಯ ಪುರಸ್ಕಾರ ಕೊಡುವಂತಾಗಬೇಕೆಂದು ಕೋರಿ ತವಗೆ ಇಂದು ಈ ರೀತಿ ಗೌರವಿಸಿ ದ್ದಕ್ಕಾಗಿ ಅಭಾರವನ್ನೂ ಸೂಚಿಸಿ ಸಂಸ್ಥೆಗೆ ಉತ್ಕರೋತ್ಕರವನ್ನು ಕೋರಿ ಸಭಾ ಕಾರ್ಯವನ್ನು ಅಂತ್ಯಗೊಳಿಸಿದರು.

ಸುರತಕಲ್—ಈ ಮೊದಲೇ ಪ್ರಕಟವಾದಂತೆ ಇಲ್ಲಿಯ ಹಿಂದೂ ವಿದ್ಯಾರ್ಥಿಯಿಗೀ ಸಂಘದ ಮಹಾ ಸಭೆಯು ಇದೇ ಕಳೆದ ತಾ ೨೪-೬-೧೯೩೫ನೇ ಭಾನುವಾರ ಅಪರಾಹ್ನ ೫ಗಂಟೆ ೩ಕ್ಕೆ ಇಷ್ಟ ವಿದ್ಯಾದಾಯಿನೀ ಶಾಲೆಯಲ್ಲಿ ಜರಗಿ ಶ್ರೀಗಳಾದ ಇಷ್ಟ ಕೃಷ್ಣಯ್ಯ ಪಿ ಶ್ಯಾಮರಾವ್, ಎಬ್ ರಾಮರಾವ್ ಮತ್ತು ಇಷ್ಟ ವಾಸುದೇವಯ್ಯ ನವರುಗಳನ್ನು ಕ್ರಮಪ್ರಾಣಿ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಕಾರ್ಯ ದರ್ಶಿ ಮತ್ತು ಖಜಾನ್ದಿಯವನ್ನಾಗಿ ಸರ್ವಾನುಮತದಿಂದ ಆರಿಸ ಲಾಯಿತು

ಸಂಘದ ಅಧ್ಯಕ್ಷ ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಯರು ಗಳಲ್ಲದೆ ೨೨ ಮಂದಿ ಮಾಜನೀಯರುಗಳನ್ನು ಸಂಘದ ಕೌನ್ಸಿಲ್ ಸಭೆಯ ಸದಸ್ಯರನ್ನಾಗಿ ಸರ್ವ ಸಮ್ಮತಿಯಿಂದ ಚುನಾಯಿಸಿರುತ್ತಿದೆ.

ಬಂಟ್ವಾಳ—ಈ ಸಲದಿನ ಉಪಾಧ್ಯಾಯರ ಸಂಘದ ಸಭೆಯು ಬಂಟ್ವಾಳ ಹೋರ್ಡ್ ಮಾಧ್ಯಮದ ಶಾಲೆಯಲ್ಲಿ ತಾ. ೨೪ರಲ್ಲಿ ಜರಗಿತು ಉಪಾಧ್ಯಾಯರ ಕರ್ತವ್ಯಗಳ ಕುರಿತು ರಾ ವಾಸುದೇವ ನೋದಯಾಜಯವರು ಒಂದು ಭಾಷಣ ಕೊಟ್ಟರು.

ಇಲ್ಲಿಯ ಪಂಚಾಯತ್ ಕೋರ್ಟಿನ ಹಾಲ್ ಹಿದ್ದ ಎರಡು ಮೆಂಬರಿಕೆ ಸ್ಥಾನಕ್ಕೆ ತಾಲೂಕು ಬೋರ್ಡು ಮೆಂಬರರಾದ ರಾ. ಜಿ ಗಣಪತಿ ಕಟ್ಟಿಯವರೂ, ರಾ ವಿಟ್ಲ ಜಾತಿಗರವರೂ ಜಯನಾಯಿಸಲ್ಪಟ್ಟಿರುವರು

ಪಾಣೆಮಂಗಳೂರು—ಇಲ್ಲಿಯ ನೆರೆ ಗ್ರಾಮದ ಒಬ್ಬ ಕೃಷಿ ಪರ್ಯವೀಕ್ಷರಲ್ಲಿ ಶ್ಯಾನುಭೋಗರಾಗಿದ್ದ ಕೃಷ್ಣ ಹೆಗಡೆಯವರು ಬೋಟು ಮಗ್ಗದ ಬಳಿ ಇರುವ ಭುಟೆಲಿರುವಿಂದ ಮುನ್ಸೆಂಜೆಯಲ್ಲಿ ಬಂಟವಾಳಕ್ಕೆ ಬರುತ್ತಿರುವಾಗ ಕಂಬಿಗಾರಕಟ್ಟಿನ ಮೂರು ಮಾರ್ಗ ಕೂಡಿದ್ದಲ್ಲಿ ಯಾರೋ ದುಷ್ಕಾರರು ಕತ್ತಿಯಿಂದ ತಲೆ, ಕುತ್ತಿಗೆಗೆ ಹೊಡೆದು ಕಾಣಿ ಗಾಯ ಪಡಿಸಿರುವರು ಇವರು ಆಸ್ಪತ್ರೆಯಲ್ಲಿರುವರು ಪ್ರಾಣಾಪಾಯವಾಗಿಲ್ಲ

ವಿಮರ್ಶೆ

ಶ್ರೀ ಪಿ ಲಕ್ಷ್ಮೀದೇವಿ ವಿದ್ಯಾರ್ಥಿಯವರ ಸಂಪಾದಕತ್ವದಿಂದ ಹೊರಡುವ ಸದ್ಯದ ೯ ಪ್ರಚಾರಕ ಗ್ರಂಥಮಾಲೆಯ ೧೧ನೆಯ ಪುಸ್ತಕವಾಗಿ ಶ್ರೀ ಲ ಬಾಬುಶೆಟ್ಟಿ, ಮುಂಬಾಯಿ ಇವರಿಂದ ಬರೆಯಲ್ಪಟ್ಟ "ಪಾದ್ರಿ ಸಾಹೇಬರ ಬಲೆ ವನಂತನ ಕತ್ತರಿ" ಎಂಬ ಆರು ಪೈ ಬೆಲೆಯ ೧೪ ಪುಟಗಳ ಸುಂದರ ಚಿಕ್ಕ ಪುಸ್ತಿಕೆಯು ಪ್ರಕಟವಾಗಿದೆ ಆರಂಭದಿಂದ ಕಡೆಯ ವರೆಗೆ ಭಾವಗರ್ಭಿತ ಸಂವಾದಗಳಿವೆ. ಹಿಂದೂ ಮತೋದ್ಧಾರ ಸಂಬಂಧವಾದ ಭಾವಸ್ಫೂರ್ತಿಯಿಂದಿದೆ ಈ ಪುಸ್ತಕವು ಮಂಗಳೂರಿನ ಮೇಲಿನ ಗ್ರಂಥ ಮಾಲೆಯಲ್ಲಿ, ಮುಂಬಾಯಿಯಲ್ಲಿ ಎಂ ಡಂಡ್ಯೇಶ್ವರ—ಶಹಾ ಕಂಪನಿ ಜರ್ಚ್‌ಗೇಟ್ ಸ್ಟ್ರೀಟ್ ಇವರಲ್ಲೂ ಕಾರ್ಕಳದಲ್ಲಿ ನಾರಾಯಣ ಗಣೇಶ ಕಾಮತರಲ್ಲೂ ಸಿಗುತ್ತದೆ

ನೋಟೀನು.

ಮೂಲ್ಕಿ ಗೌಡ ಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿ ಸಹಾಯಕ ಸಂಘದ ನೂತನ ವ್ಯವಸ್ಥೆಯನ್ನು ಮುಂದೆ ಹೇಗೆ ಮಾಡಬಹುದೆಂಬುದನ್ನು ಆಲೋಚಿಸಿ ಇತ್ಯರ್ಥಿಸುವರೆ ಇದೇ ಬರುವ ಜುಲ್ಯಾ ತಾ. ೧೬ನೇ ಆದಿತ್ಯವಾರ ಶ್ಯಾಮ ಗಂಟೆ ಳಕ್ಕೆ ಮೂಲ್ಕಿ ಮಹೋದಯ ಭವನದಲ್ಲಿ ಸದರಿ ಸಂಸ್ಥೆಗೆ ಮೆಂಬರರಾಗಿದ್ದ ಎಲ್ಲಾ ಜನರ ಸಭೆ ಸೇರಬೇಕಾಗಿ ನಿರ್ಣಯಿಸಿರುವುದರಿಂದ ಸದರಿ ಸಭೆಗೆ ಸಂಬಂಧಪಟ್ಟ ಎಲ್ಲಾ ಜನರು ಬರಬೇಕಾಗಿ ಈ ಮೂಲಕ ಆಪೇಕ್ಷಿಸೋಣಾಗುತ್ತದೆ

ಮೂಲ್ಕಿ,
27-6-35

M Rama Rau Kamath
Hon Secretary

FOR SALE!

One A J S Motor Cycle in good runn ing order Price Rs 430/ or near offer Please inquire at —

Messrs Kochikar Bros.,
Car Street Mangalore
or
Ideal Photo House,
Hampankatta Mangalore

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲೆಂಟೈನ್, ಇಂಕ್,
ಚ್ಯವನಪ್ರಾಶ, ಸ್ನೋ, ಸೋಪ್,

ಇವುಗಳನ್ನೇ ಉಪಯೋಗಿಸಿರಿ.

ಪಟ್ಟಿಗೆ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರುಗಳು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director—**Venkatraya Annappa Baliga**

ಮಹಾತ್ಮಾಜೀಯವರು ನಡೆಯಲು ಶಕ್ತರಾದರು!

ಲಂಡನ್ನಿನಲ್ಲಿ ಸ್ವಾರ್ಥದ ಪರಮಾವಧಿ!!!

"ಭಾಷೆಯನ್ನಿತ್ತರೂ ಅದನ್ನು ಪೂರೈಸಲಾರವು!!!"

ಈ ವಾರ ತಲುಪಿರುವ ಪೂರ್ಣ ವಾರ್ತೆಯಿಂದಾಗಿ,—ಮಹಾತ್ಮಾಜೀಯವರು ಕಾಯಿಲೆಯ ಮತ್ತು ಹಾಲಿನ ಮಿತ್ರಾಹಾರದಿಂದಾಗಿ ದೇಹಬಲವನ್ನು ಹೊಂದಿದ್ದುದರಿಂದೂ, ದಿನೇ ದಿನೇ ಅವರ ತೂಕವು ವೃದ್ಧಿ ಹೊಂದುತ್ತಿದೆಯೆಂದೂ, ಅದೂ ಅಲ್ಲದೆ ಕೆಲವು ದಿನಗಳಿಂದ ಅವರು ಹಾಸಿಗೆಯಿಂದ ತಾನೇ ಎದ್ದು ಸುಖ್ರು ಸಂಚರಿಸುವಷ್ಟು ಶಕ್ತರಾಗಿರುವರೆಂದೂ ತಿಳಿಸಲು ಸಂತೋಷ ವೆನ್ನಿಸುತ್ತದೆ. ಇನ್ನು ಎರಡು ವಾರಗಳ ವಿಶ್ರಾಂತಿಯು ಸಾಕೆಂದು ವೈದ್ಯರು ಮತವಿದೆ. ವೈದ್ಯಕೀಯ ಪರೀಕ್ಷೆಯು ಆಗಾಗ್ಗೆ ನಡೆಯುತ್ತಲೇ ಇದೆ. ಅವರಾಯಿಳರ ಸ್ಥಿತಿಯು ತಪ್ಪಿ ತೆಂದು ಡಾಕ್ಟರರು ಸಂತುಷ್ಟರಾಗಿರುವರು.

ಮುಂದಿನ ರಾಜಕೀಯ ಕಾರ್ಯಕ್ರಮವನ್ನು ವಿವೇಚಿಸುವುದಕ್ಕಾಗಿ ಪ್ರಮುಖರ ಸಭೆಯೊಂದು ಬೇಗನೇ ಜರಗಲಿರುವುದು. ಹೆಚ್ಚಿನ ವಾರ್ತೆಗಳನ್ನು ನಂಬುವುದಾದರೆ, ಆ ಸಭೆಯು ಜುಲಾಯಿ ಮಧ್ಯೆ ಜರಗುವುದೆಂದು ಊಹಿಸಬಹುದು. ಕಾಯಿದೆ ಭಂಗ ಚಳವಳಿಯನ್ನು ದೂರಕ್ಕಿಟ್ಟು, ಲಿಬರಲರ ಮಾತು ಮತ್ತು ಅಕಯಿಗಳೊಡನೆ ಸಹಕರಿಸಿ ನಡೆದು ಒಂದು ಪರೀಕ್ಷೆಯನ್ನು ಕೂಡಾ ಕೊಂಗ್ರೆಸ್ಸು ಮಾಡಲು ಹಿಂಜರಿಯುವ ಚಿಹ್ನೆಯು ಕಾಣುವುದಿಲ್ಲವೆಂದು ಗೊತ್ತಾಗಿದೆ. ಮಹಾತ್ಮರನ್ನು ಪುನಃ ಲಂಡನಿಗೆ ಕರೆಯುವರೆಂದೂ ಒಂದು ವಾರ್ತೆಯಿದೆ. ಅದರೆ ಇಷ್ಟರ ತನಕ ಈ ವಾರ್ತೆಯ ಸತ್ಯತೆಯ ಸಮರ್ಥನೆಗಾಗಿ ಬೇರಾಗುವ ವಾತಾವರಣವು ಇಂಗ್ಲಾಂಡಿನಲ್ಲಿ ಉಂಟಾಗಿರುವುದಿಲ್ಲ.

ಜೈಂಟ್ ಸಿಲೆಕ್ಟ್ ಕಮಿಟಿಯ ಸಭಾ ಕಾರ್ಯಗಳು ಸಾರಂಭವಾಗಿವೆ. ಹಿಂದೀಯ ಪ್ರತಿನಿಧಿಗಳೂ ಬ್ರಿಟಿಷ ಪ್ರತಿನಿಧಿಗಳೂ, ಆಶ್ರಿತ ರಾಜರುಗಳೂ ತಮ್ಮ ತಮ್ಮ ಸಾಕ್ಷ್ಯವನ್ನು ಕೊಟ್ಟು, ತಮ್ಮ ತಮ್ಮ ದೇಶಗಳ ಅಭಿಪ್ರೈಗಳನ್ನು ಜಯಲಿಗೆ ತರುತ್ತಿರುವರು. ಹಿಂದೀಯ ಪ್ರತಿನಿಧಿಗಳಾದ ಸರ್ ತೇಜ ಬಹದ್ದೂರ್ ಸಪ್ರೂರವರು ತನ್ನ ಸಾಕ್ಷ್ಯವನ್ನು ಕೊಡುತ್ತಾ—"ಆ ಸಲವೂ ಹಿಂದೂದೇಶವನ್ನು ತೃಪ್ತಿಪಡಿಸುವ ಯಾವ ಅಕಾದಾಯಕ ವಿಶ್ಚಾರಣೆಯೂ ಆಗುವುದಿಲ್ಲವಾದರೆ ತಾನು, ಮತ್ತೆ ಸಹಕಾರವನ್ನು ಮಾಡಿತು, ಮರೆಯಲ್ಲಿರುವೆ" ನೆಂದು ಎಚ್ಚರವನ್ನು ಕೊಟ್ಟಿರುವರು. ಬ್ರಿಟಿಷ ಮುತ್ಸದ್ದಿಗಳು "ನಾವು ಹಿಂದೂದೇಶದ ಗತಿಯನ್ನು ಚೆನ್ನಾಗಿರಿಸುವೆವೆಂದಿದ್ದರೂ ಆ ನಮ್ಮ ವಾಗ್ದಾನದ ಹುಟ್ಟನ್ನೇ ನೀವು ಹಿಡಿದು ನೇತಾಡುವುದೇಕೆ? ನಾವು ವಾಗ್ದಾನವಿತ್ತರೇನು? ಅದು ಅಲ್ಲೇ ಮುಗಿಯಿತೆ? ಅದನ್ನು ಕಾರ್ಯಕ್ಕೆ ತರಲು ಹಿಂದೂದೇಶದ ವಾತಾವರಣವೂ ಸ್ಥಿತಿಯೂ ಸುಧಾರಿತವಾಗಬೇಡವೇ? ನಮ್ಮುಗಾರರೂ "ವಾಗ್ದಾನ ವಾಗ್ದಾನ" ವೆಂದು ಚಡಪಡಿಸದಿರಿ! ಅನುಕೂಲವಿದರೆ ನಾವು ನಮ್ಮ ಭಾಷೆಯನ್ನು ಈಡೇರಿಸುವೆವು' ಎಂಬ ರಾಜ ನೀತಿಜ್ಞತೆಯ ಯುಕ್ತೆಯುಕ್ತ ನುಡಿಗಳನ್ನಾಡುತ್ತಿರುವರು. ಲೋರ್ಡ್ ಸೆಲಿಸ್‌ಬುರಿಯೆಂಬ ಮಹಾ ಪ್ರತಿಭಾಸಂಪನ್ನರು ಧೈರ್ಯವಾಗಿ ನುಡಿಯುತ್ತಾ—"Don't bother yourselves too much with pledges. You have to consider the subject on its merits" ("ವಾಗ್ದಾನಗಳ ಕುರಿತು ಸುಮ್ಮಗೆ ತಲೆ ಕೆರದು ಮಾಡಿಕೊಳ್ಳಬೇಡಿ, ಆ ವಿಷಯ ವನ್ನು ಅದರ ಹಾರ್ದಕ ಬಾಧಕತೆಗಳ ಮೇಲೆ ವಿವೇಚಿಸಿ ಕೊಳ್ಳಬೇಕು") ಎಂದು ಹೆಂಗಿನಿ ಮಾತನಾಡುತ್ತಿರುವರು. ಆದರೆ ಕನ್ಸರ್‌ವೇಟಿವ್ ದೊರೆಗಳೆಲ್ಲಾ, ದೈವವಶಾತ್ ಆ ಅಭಿಪ್ರಾಯವುಳ್ಳವರಾಗಿಲ್ಲ. ಕೆಲವರು "ನಾವು ಆ ದಿನ ದಿಂದ ಆ ದಿನದ ವರೆಗೆ ಭಾಷೆಯನ್ನಿಯುತ್ತಾ ಇದ್ದೇವೆ. ಅದನ್ನು ನೆರವೇರಿಸಿ ನಮ್ಮ ಗೌರವವನ್ನೂ ಸ್ಥೈರ್ಯಶಕ್ತಿಯನ್ನೂ ಉಳಿಸಿಕೊಳ್ಳುವುದು ಉತ್ತಮವು" ಎಂದು ಪ್ರತಿಪಾದಿಸುತ್ತಿರುವರು. "ದಿ ಸ್ಪೆಕ್ಟೇಟರ್" ಎಂಬ ಪತ್ರಿಕೆಯಲ್ಲಿ ಮಿ! ಜೆ. ಎಲ್. ಗಾರ್ವಿನ್ ಎಂಬವರು ಸ್ಪಷ್ಟವಾಗಿ ಬರೆಯುತ್ತಾ—"ಗಾಬರಿಯಲ್ಲಿ ನಾವು ಹಿಂದೂದೇಶಕ್ಕೆ ಸ್ವತಂತ್ರಸರಕಾರವನ್ನು ಕೊಡುವೆನೆಂದು ಏನಾ ಗ್ಯಾನವಿತ್ತಿರುವೆವು. ಕೊಟ್ಟ ಮೇಲೆ ಪೂರೈಸುವುದು ಕರ್ತವ್ಯವು; ಅವರಿಗೆ ಭಾಷೆಯನ್ನೀಯುತ್ತಾ, ಅವರಿಂದ ಪ್ರಯೋಜನವನ್ನು ಹೊಂದುತ್ತಾ ನಾವು ಆ ರಾಜಕೀಯ ಭಾವೋದ್ರೇಕರ ನದಿಯನ್ನು ಹರಿಯನುಕೂಲಿಸುತ್ತಾ ಇದ್ದೆವು. ಈಗ ಅದನ್ನು ತಡೆಯಲು ಸಾಧ್ಯವಿಲ್ಲ. ಹೆರಿಯ ತೊಡಗಿದ ಮಹಾ ಪ್ರವಾಹವನ್ನು ಹಿಂದೆ ದೂಡುವುದೆಂತು? ಆ ಪ್ರವಾಹವನ್ನು ಗುಡ್ಡ ಹತ್ತುವಂತೆ ಮಾಡಲು ಎಂದೂ ಸಾಧ್ಯವಿಲ್ಲ! ಲೋರ್ಡ್ ಆರ್ವಿನರು ಅಂದು "ಡೊಮಿನಿಯನ್ ಸ್ಟೇಟಸ್" ಸ್ವತಂತ್ರವನ್ನು ಹಿಂದೂಸ್ಥಾನಕ್ಕೆ ಕೊಡುವೆನೆಂದರು. ಆ ನಾಗ್ಯಾನವ ನಮಗೆ ಹಾನಿಕರವೆಂದು ತೋರಿರುವುದಾದರೂ, ಹಿಂದೀಯರಿಗೆ ಬಾಧಕರವಾಗಿ ಪರಿಣಮಿಸಿ, ಅವರು ಅದನ್ನು ಹೊಂದಲು ಹಾತೊರೆಯುವಂತಹ 'ಸಂಧವರ್ಷೋ'ಗಿರುತ್ತದೆ. ಭಾಷೆಕೊಟ್ಟು ಮುಂದೂಡಿ, ಬೆನ್ನಿನಿಂದೆಳದು ಹಿಂದೆ ನಿಲ್ಲಲು ಆ ಲೋಕದಲ್ಲಿ ಸಾಧ್ಯವಿಲ್ಲ" ಎಂದು ಖಚಿತೋದ್ಗಾರವನ್ನೆತ್ತಿರುವರು. ಇವರ ಮಾತುಗಳು ಹೆಚ್ಚಿನ ವಿಶ್ವಾಸಾರ್ಹ

ಸುಮಾತ್ರಾ ದ್ವೀಪದಲ್ಲಿ ಭಯಂಕರ ಭೂಕಂಪ! 16 ಜನರ ಮರಣ!!

ಸುಮಾತ್ರಾ ದ್ವೀಪದ ದಕ್ಷಿಣ ಬೆಂಕೂಲಿನ್ ಎಂಬಲ್ಲಿ ಭಯಂಕರ ಭೂಕಂಪವಾಗಿ ತಿಳಿಯಬಂದಿದೆ. ಆ ಜನರು ಮೃತರಾದರೆಂದು ತಿಳಿಯಬರುತ್ತದೆ.

ನಮ್ಮ ಮಾನಿನ ಹಣ್ಣುಗಳು ಹೋದುವು.

ನಮ್ಮ ದೇಶದ ಭಂಗಿರವೂ ಬೆಳ್ಳಿಯೂ ಇಂಗ್ಲಾಂಡನ್ನು ಎಂದೊ ಕೊಂಡುಹೋದವು ಈಗ ಇಲ್ಲಿಯ ಜನರಿಗೆ ಹಣ್ಣು-ಕೂ ಆತ್ಮ ತೆರಳ್ಕೆ ಪ್ರಾಣಕಂಟಕವಾಗಿದೆ. ಸಾಮಿರಗಟ್ಟಲೆ ರೂಪಾಯಿಯ ಹಣ್ಣುಗಳು ಇತ್ತ ರಫ್ತೇ ಹರಾಜಾಯಾಯುವುದು ನಾನು ಮುಂದು ತಾನು ಮುಂದು ಎಂದು ಬಿಸಿಗಳು ಉಸಿರುಗಟ್ಟಿ ಕಟ್ಟಿಗೆ ಕಟ್ಟಿ ಮಾನಿನ ಹಣ್ಣುಗಳನ್ನು ಇಂಗ್ಲಾಂಡಿಗೆ ಕಳುಹಿಸುವುದರಲ್ಲಿ ತೊಡಗಿದರು. ಅಲ್ಲಿಯೂ ಅನೇಕಾನೇಕ ಮ್ಯಾಂಗೊ ವಿಜಿಂಟರು ಹುಟ್ಟಿ ಹಾಯುತ್ತಿದ್ದಾರೆ. ಮಾನಿನ ಹಣ್ಣುಗಳ ಪ್ರಯೋಜನವು ಇನ್ನೂ ಹೆಚ್ಚಿನ ಅಂಗ್ಲೇಯರಿಗೆ ತಿಳಿದಿಲ್ಲವಂತೆ ಆದ ಕಾರಣ ಗ್ರೇಟ್ ಬ್ರಿಟನಿನ ಆಸ್ಥಾದಿಕಾರಿಗಳಲ್ಲಿ "ಹೆಚ್ಚಿಷ್ಟು ಮಾನಿನ ಹಣ್ಣುಗಳನ್ನು ತಿನ್ನಿರಿ" ಎಂಬ ಪ್ರಿಂಟಿಗಳನ್ನು ಬರೆದ ಜಾಹೀರು ನೋಟೀಸುಗಳು ಹೊರಟಿವೆ ಮಾನಿನ ಹಣ್ಣಿನ ಚರ್ಮವನ್ನು ಶುಚಿಕೊಳ್ಳುವುದಾಗಿ ನಡೆಸಬೇಕೆಂದು ಆಲ್ಬರ್ಟ್ ಮಹಾರಾಣಿಯವರು ಬಿಗೆದಿರುವರು. ಲಂಡನಿನಲ್ಲಿ ಇತ್ಯರ್ಲ್ಲೇ ಸುಮಾರು ೩೦೦ ಟನ್ ಮಾಮಿಯಾಯ್ ಮಾನಿನ ಹಣ್ಣುಗಳು ತಲುಪಿಸಿಯಂದು ತಿಳಿದ ಬಂದಿದೆ. ಕೆಲವು ಸ್ತ್ರೀಯರುಗಳಲ್ಲಿ ಬಂದ ಹಣ್ಣುಗಳು ಪಾಳಾಗಿದ್ದುವು ಒಂದಿನ ಎಲ್ಲಾ ಹಣ್ಣಿನಂಗಡಿಗಳಲ್ಲಿ ಮಾನಿನ ಹಣ್ಣನ್ನು ಮಾರುತ್ತಾರಾದರೂ ತೆಂಡರಗಳ್ಲಿದೆ ಹೆಚ್ಚಿನವರಿಗೆ ಆದರೆ ಗುರುತೇ ಇರುವುದಿಲ್ಲ ಒಳ್ಳೇ ಮಾನಿನ ಹಣ್ಣನ್ನು ಅಲ್ಲಿ ಮೂರೆ ಮುಖ್ಯಾಲ ಗಳಿಗೆ ಮಾರುತ್ತಿರುವರು. ಈ ಬೆಲೆಯನ್ನು ನಾಲ್ಕು ಪೈಯಲ್ಲಿ ನಿಲ್ಲಿಸಬೇಕೆಂದು ಆಲೋಚನೆಯಾಗಿದೆ. ಸರ್ಕಾರೀಯರು ಜಾಹೀರಾತು ನಡೆಸಿ ನೋಲೆ ಎಷ್ಟು ಹಣ್ಣುಗಳು ಇಲ್ಲ ಉಳಿಯುವುದೋ ತಿಳಿಯದು ಬಿಳಿಯವರು ಈ ಹಣ್ಣನ್ನು ತಿಂದು ಇಲ್ಲಿಯ ಕಪ್ಪು ಜನರಿಗೆ ಮಾನಿನ ಹಣ್ಣಿದರೆ ಪತ್ಥ್ಯ ಹೊವಿನಂತಾಗದಿದ್ದರೆ ಸಾಕೆಂದು ಜನರು ಬೇಡಲೇ ಬೇಕು.

ಗ್ರಹಚಾರವೋ ಅಭ್ಯಾಸ ದೋಷವೋ?

ಲಂಡನಿನಲ್ಲಿ 'ಬೇಂಕ್ ಆಫ್ ಇಂಗ್ಲೆಂಡ್" ಮತ್ತು "ಯೂನಿಯನ್ ಬೇಂಕ್"ಗಳೆಂದರೆ ಲಿಟಿನಿನ ವಿಜಾನೆ-ಲಂತಹುಗಳು ಬೇಂಕ್ ಆಫ್ ಇಂಗ್ಲೆಂಡಿನಲ್ಲಿ ಸಡೆದ ವೃದಹಾರಗಳಿಗೂ ಯೂನಿಯನ್ ಬೇಂಕಿನಲ್ಲಿ ನಡೆದ ವ್ಯವಹಾರಗಳಿಗೂ ಸಂಬಂಧವಿದ್ದಿತು ಈ ಯೂನಿಯನ್ ಬೇಂಕಿನಲ್ಲಿ ಹೋರ್ಜ್ ಪೊಲ್ಲಂಗರ್ ಎಂಬ ಮುಹ್ಯಾಧಿಕಾರಿಯಿದ್ದನು ಮೊದಲು ಬಡವನಾಗಿದ್ದರೂ ಕ್ರಮೇಣ ಪದವಿಗೇರಿ ಬೇಂಕಿನ ಎಲ್ಲಾ ಜವಾಬು ಆಧಿಪತ್ಯದಲ್ಲಿ ಬಿದಂತಾಯಿತು ಪೊಲ್ಲಂಗರ್ ಹೊರೆಯೆಂದರೆ ಜನರಿಗೆ ಅಷ್ಟು ಗೌರವ ಪೂಜ್ಯ ಅವನ ದಾನ ಮಾನ ಮರ್ಯಾದೆ ಇರು ಪಿಯ ಕೃಮಗಳಲ್ಲಿ ಪದೇಗೆ ಆರ್ಥಪ್ರಾಯವಾಗಿದ್ದುವು ಆಟಾಲ ಸ್ಪಧ್ಧ ಸ್ತ್ರೀಯರೂ ಕೂಡಾ ಅವನನ್ನು ಮದುತೆಯಂದ ಕಾಣುತ್ತಿದ್ದನು ೧೩ ವರ್ಷಗಳ ತನಕ ಯೂನಿಯನ್ ಬೇಂಕಿನ ಚೀಫ್ ಕೇಷಿಯರ್ ಸ್ಥಾನದಲ್ಲಿ ಪೊಲ್ಲಂಗರಿದ್ದನು ಅಷ್ಟರ ವರೆಗೂ ಒಂದೇ ಒಂದು ಚಿಕ್ಕಾಸಿನಷ್ಟು ದೃಷ್ಟಾಪದನು ಅವನ ರಕ್ಷಪತ್ರಗಳಲ್ಲಿ ಕಾಣಲರಲಿಲ್ಲ ಆದರೆ ಕೆಲವು ಸಮಯ ದಾಟಿದೊಡನೆ ಅವನು ಯಾರಿಂದಲೂ ಹುರಿಯಾಲಾರದಷ್ಟು ಕೇಡಿಯಾದನು-ಅರ್ಧ ಮಿಲಿಯ ಪೌಂಡುಗಳನ್ನು ರಣಾಯಟ್ಟಿನು ಅದರ ಕತೆ ಹೀಗಿದೆ- ಜೋರ್ಜನು ತನ್ನ ಕೈಗೆ ಇಂದು ೧೫,೦೦೦ ಪೌಂಡುಗಳು ಬಂದುವೆಂದರೆ ಬಂಂಧನ್ನು ವಿಜಾನೆಯಲ್ಲಿಟ್ಟು ೨೦೦೦ವನ್ನು ಬೇಕಿನಲ್ಲಿರಿಸುತ್ತಿದ್ದನು ರಶೀದಿ ಪುಸ್ತಕ, ಲೆಕ್ಕ ಪುಸ್ತಕಗಳಲ್ಲೆಲ್ಲ ಹತ್ತು ಸಾವಿರವೆಂದೇ ಬರೆದು ಅವುಗಳಿಗೆ ಸಂಬಂಧಪಟ್ಟ ರಶೀದಿಗಳನ್ನು ತಿದ್ದಿಪಡಿಗೊಸುತ್ತಿದ್ದನು. ಹೀಗೆಯೇ ಅವನ ಮೋಸಕಾರ್ಯಂಭವಾಯಿತು. ಸಂಜೆ ಆಫೀಸು ಮುಚ್ಚಿದೊಡನೆ ಎಲ್ಲಿಯೂ ನಿಲ್ಲದೆ, ಕೆಲವು ಸಮಯ ಆಫೀಸಿಗೆ ಬಾರದೆ ಇದುರೆ ತಿಳಿಗೆ ಹೋಗಿ ಅಲ್ಲಿ ಜೂಜಾಡುತ್ತಿದ್ದನು ಒಂದೊಂದು ಸಲಕ್ಕೆ ತೀರಾ ೧೦೦೦ ಪೌಂಡುಗಳನ್ನು ಕಳ್ಕುದ ಅವನು ಜುಗಾರಾಡುತ್ತಿದ್ದಿಲ್ಲ ಮನೆಗೆ ಬರುವಾಗ ಬರೀ ದೇಟು! ಇದೇ ರೀತಿಯಿಂದ ಇವನು ಅರ್ಧ ಮಿಲಿಯ ಪೌಂಡುಗಳನ್ನು ಸುಟ್ಟಿಗೆಮಾಡಿದನು ಇವನ ಜುಗಾರಾಟದ ಸುದ್ದಿಯು ಮೆಲ್ಲಗೆ ಒಬ್ಬ ಸ್ನೇ ಕ್ಲಾರ್ಕನಿಗೆ ತಿಳಿಯಿತು ಅವನಿಗೆ ಜೋರ್ಜನ ವರ್ತನೆಯು ಮೇಲೆ ಸಂದೇಹವು ಹುಟ್ಟಿ, ಒಂದು ದಿನ ಅವನು ಹೊಂಮತ್ತಿರುವ ಹೇರಳ ಹಣದ ದಾರಿಯನ್ನುವುದೆಂದು ಕಂಡು ಹಿಡಿದು ಸುಮ್ಮಾದ್ದನು ಒಂದು ದಿನ ಬೇಂಕಿನ ಲೆಕ್ಕಪತ್ರದಲ್ಲಿ ೭೫೦ ಪೌಂಡುಗಳ ಕೃತ್ಯಾಸವು ಬಂದಿತು ಇವನ್ಸರಿಕೊಡಗೆಯೇ ಜೋರ್ಜನು ಬೇನೇನೋ ಜೇಬ ಮಾಧ್ಯಾಹ್ನವಾಗುತ್ತಲೇ ಮನೆಗೆ ತೆರಳಿದನು. ಅವನಿಗೆ ತನ್ನ ಗ್ರಹಚಾರವು ತಿರುಗಿ ನಿಂತಿತೆಂದು ಭಾಸವಾಯಿತು ಇತ್ಯರಲ್ಲಿ ಆ ಸುದ್ದಿ ಕ್ಲಾರ್ಕನು ಎಲ್ಲರಿಗೂ ಬಯಲುಗೊಳಿಸಿದನು ರಾತಿ ರಾತಿ ಕೆಟ್ಟುಕೆಲಸಗಳೂ ತೆಲಸಗಾರರ ಗುಂಪೂ ಕೂಡಿ ಕೆಟ್ಟು ಪರಿತೋಧನೆ ಮಾಗುವಾಗ ನೋಡುತ್ತಿದೇನು? ನಲುಗೆಯ ಮಂಗನು ಮರೆದನ್ನೇ ತಿಂದಿತು! ಅರ್ಧ ಮಿಲಿಯಕ್ಕೆ ಜೋಜ್ಞ ಬಂದಿದೆ! ಜೋರ್ಜನನ್ನು ಬಂಧಿಸಿ ಕೈದು ಮಾಡಲಾಯಿತು—೨೦ ವರ್ಷಗಳ ಕಾರಾಗೃಹವಾಯಿತು ಅರ್ಧ ಮಿಲಿಯನ್ನು ಬೇಂಕಿನಿಂದ ಬಿಟ್ಟಾಲ್ಲಿಸಿದನಾದರೂ, ಅವನ ಮನೆಯಲ್ಲಿ ತೆಲವು ಬೆಳ್ಳಿಯ ಸಾಮಾನುಗಳಿದ್ದುವು! ಸಾಲಗಾರರು ತುಂಬಾ ಇದ್ದರು! "ಅಷ್ಟು ಹಣವನ್ನು ನೀನು ಹೂಡಿದೆ" ಎಂದು ಕೇಳಿದ್ದಕ್ಕೆ "ಇದು ನನ್ನ ಗೃಹಚಾರ ದೋಷ! ಅಭ್ಯಾಸದೋಷ! ಎಲ್ಲಾ ಕಾದುರೆ ಹೂಡಿಕೆ ನೀರಾಯಿತು" ಎಂದನು ಜೋರ್ಜನು ಸಂಪೂರ್ಣ ಬಂಧನ ವನ್ನು ಪಡೆಯುವ ಮೊದಲೇ ಮೃತರಾದನು

ಹೋವ್ ವಜ್ರದ ಚರಿತ್ರೆ

ಹೋಪ್ ವಜ್ರಕ್ಕೆ ಶಾಪ್ತಾಂಶಕ ಯಹಜಾನನಾಗಿರುವ ಅಮೇರಿಕದ ವಾಷಿಂಗ್ಟನ್ ನಗರದಲ್ಲಿರುವ ಮೆಕ್ಲೀನ್ ಎಂಬ ಸ್ತ್ರೀಯು ತಾ ಇತ್ತೀಚೆಗೆ ವಜ್ರವನ್ನು ಸುಮಾರು ೫ ಲಕ್ಷ್ಯ ರೂಪಾಯಿಗಳಿಗೆ ಅವನ್ನು ತಂದುಕೊಂಡಿರುವುದಾಗಿ ಪತ್ರಿಕೆಯಲ್ಲಿ ಪ್ರಕಟಿಸಿದ್ದುದಳು. ಈ ಪಡ್ಡದ ವಜ್ರವಿಲಿಯ ದುರ್ದಾರಿಣ ಅಕ್ಕಸಕ್ಕೆ ಬಂಧುಬಳಗದವರ ವಿಯೋಗ ಮುಂತಾದ ಕಷ್ಟನಷ್ಟಗಳಿಗೆ ಗುರಿಯಾ ಗುತ್ತಿರುವರೆಂಬ ಹೆಸರಿದೆ. ಇತ್ತೀಚೆಗೆ ಇವನಿಯಂದಲೂ ಇದರ ಚರಿತ್ರೆಯಲ್ಲಿ ಇಂತಹ ಅಕಸ್ಮಿಕ ತೊಂದರೆಗಳೇ ಕಂಡುಬಂದಿರುವುದು ಆದರೂ ಇದು ನಿಜವಾ ಕ್ಕಾರೆಟ್ ತೂಕವಿದ್ದುದರಿಂದಲೂ ಬಹು ಸುಂದರವಾಗಿರುವುದರಿಂದಲೂ ಪಡ್ಡಕ್ಕೆ ಗಿರಾಕಿಗಳಿಗಾಗಲೀ ಮೋಸಕ್ಕೆ ಗಾಗಲೀ ಕೊರತೆ ಇರುವುದಿಲ್ಲ ಫ್ರಾನ್ಸಿಯರ್ ಎಂಬ ಫ್ರೆಂಚ್ ಪ್ರಯಾಣಿಕನು ಇಂದಿಯಕ್ಕೆ ಬಂದಿದ್ದಾಗ ಒಂದಾನೊಂದು ದೇವತಾ ವಿಗ್ರಹವನ್ನು ಅಲಂಕರಿಸಿದ್ದ ಈ ವಜ್ರವನ್ನು ಮೋಸಿಸಿ, ಅರ್ಚಕನಿಂದ ಇದನ್ನು ಅಲ್ಪ ಬೆಲೆಗೆ ಪಡೆದು ಸ್ವದೇಶಕ್ಕೆ ತಲಪಿದ ಮೇಲೆ ಇದನ್ನು ೨೫ ಲಕ್ಷ ಫ್ರಾಂಕುಗಳಿಗೂ ಬ್ಲಾಬೊನೆಟ್ಟು ಎಂಬ ವಂಶಪಾರಂಪರ್ಯ ವಾದ ಬಿರುದಿಗೂ ಅಲ್ಲಿನ ದೊರೆಯಾದ ನಪೋಲಿಯನ್ ಎರಬಾತನಿಗೆ ಮಾರಿಕೊಂಡನು ಇದಾದ ಸ್ವಲ್ಪ ದಿವಸಗಳಲ್ಲಿಯೇ ಬೇಟೆಗೆ ಹೋಗಿದ್ದಾಗ ಹಾವನ್ನಿಯನು ಕಾಡುಮನುಷ್ಯಗಳಿಗೆ ಹುತ್ತಾದನು. ಲಂಡನ್ ಜೊರೆಯು ಎಂಸ್ಟರ್ಡಾಂ ನಗರದಲ್ಲಿ ವಜ್ರವನ್ನು ಪುನಃ ಸಾಣೆಗೆ ಕೊಡಿಸಿ ಅದನ್ನು ೬೭ ಕ್ಕಾರೆಟ್ ತೂಕಕ್ಕೆ ಇಳಿಸಿದನು ಅನಂತರ ಅದನ್ನು ಧರಿಸಿಕೊಳ್ಳುತ್ತಿದ್ದ ದೊರೆಗೆ ಅಪ್ಪಣೆಯಾದ ಮೊಂಟೆ ಬಾನ್ ಎಂಬ ಸುಂದರಿಗೆ ಸ್ನೇಹಪ್ರೇಷ್ಠತೆಯುಂಟಾಯಿತು ವಜ್ರವನ್ನು ಎರವಾಗಿ ತೆಗೆದುಕೊಂಡು ಹೋಗಿದ್ದ ನಿಕೋಲಸ್‌ಪೋಲೆ ಎಂಬುವನು ಮರಣ ದಂಡನೆಗೆಳಗಾದನು ಮೇರಿ ಅಂಟಾಯ್ನೆಟ್ ಎಂಬ ಪ್ರಖ್ಯಾತ ರೂಪವತಿಯು ಆ ದೇಶದ ರಾಣಿಗೆ ಶಿರಚ್ಛೇದನವಾದುದೂ ಕಡೆಯಲ್ಲಿ ರಾಜ್ಯದಲ್ಲಿ ಕ್ರಾಂತಿಯುಂಟಾದಾಗ ಗಲಭೆಯ ಬುದ್ಧಿಯಂಯ ಗೆಲ್ಲಿಸೇರಿಸಲ್ಪಟ್ಟನು ಅನಂತರ ಗಾರ್ಡಮೂಬಲ್ ಎಂಬಲ್ಲಿಂದ ಈ ವಜ್ರವು ಚೋರಿಯಾಯಿತು ತೆಲವು ವರ್ಷಗಳ ನಂತರ ಹಾಲೆಂಡ್ ವರ್ತಕನೊಬ್ಬನಲ್ಲಿ ಪುನಃ ಕಾಣಿಸಿಕೊಂಡು ತಿರಿ ಎಷ್ಟೆಗೆ ಕೊಡಲ್ಪಟ್ಟು ೪೪ ಕ್ಕಾರೆಟ್ ತೂಕಕ್ಕೆ ಇಳಿಯಿತು ವರ್ತಕನ ಮಗನು ಅದನ್ನು ಕದ್ದುಕೊಂಡು ಹೋಗಿ ಲಂಡನ್ ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡನು. ವರ್ತಕನು ಪರಿವ್ರನಾಗಿ ದಿಕ್ಕಿಲ್ಲದೆ ಮೃತಪಟ್ಟನು

೧೯೧೧ನೆಯ ಶತಮಾನದಲ್ಲಿ ಹೊಪ್ ಟೀಮಂತರ ಮನೆಯನ್ನು ಸೇರಿತು ಶ್ರೀಮಂತರು ನಾಟಕದಲ್ಲಿ ಖಾತ್ರಿವಹಿಸುತ್ತಿದ್ದವಳೊಬ್ಬ ರನ್ನು ಮದುವೆಯಾಗಿ ತೆಲವು ದಿನಗಳಲ್ಲಿಯೇ ಆಕೆಯಿಂದ ತೊರೆಯಲ್ಪಟ್ಟರು ಮತ್ತೊಬ್ಬನನ್ನು ಹಿಂಬಾಲಿಸಿ ಹೋದ ಆಕೆಗೂ ಅದೇ ಗತಿ ಯಾಯಿತು ಶ್ರೀಮಂತರು ಕಡೆಗೆ ವಜ್ರವನ್ನು ಅಮೆರಿಕನ್ ವರ್ತಕ ನಿಗೆ ಮಾರಿದರು. ವರ್ತಕನು ಬಡತನಕ್ಕಳಿದು ಫ್ರೆಂಚ್ ದೇಶೀಯ ನೊಬ್ಬನಿಗೆ ಮಾರಿಕೊಂಡನು ಅವನು ತೆಲವು ದಿವಸಗಳಲ್ಲಿಯೇ ಕಾರಣಾಂತರದಿಂದ ಆತ್ಮಹತ್ಯೆ ಮಾಡಿಕೊಂಡನು ಅನಂತರ ಆ ವಜ್ರವನ್ನು ಪಡೆದ ಏವಾನ್‌ಹಾಪ್ ಟೊಸ್ಕ ಎಂಬ ರಷ್ಯನ್ ರಾಜ್ಯಪುತ್ರನು ದೋಲ್ಕೆವಿಕ್ ಜನರಿಂದ ಹತನಾದನು ವಜ್ರವನ್ನು ಆ ರಾಜಪುತ್ರನಿಂದ ಎರವಾಗಿ ಪಡೆದಿದ್ದ ಸ್ತ್ರೀಯಳೂ ಬಿಡಾಗಿಹೋದಳು ಸೈಮನ್ ಮಲಿಕ್ ರೈಡಿಸ್ ಎಂಬುವನು ಇದನ್ನು ತುರ್ಕಿಯ ಸುಲ್ತಾನ ಹಮೀದನಿಗೆ ಮಾರಿದ ಸ್ವಲ್ಪ ಕಾಲದಲ್ಲಿಯೇ ಪರ್ಷಿಯ ರಿಬಂದಿದ ಬಿಪ್ಲವ ಸಕ್ಷನು ನಾಲ್ಕು ಲಕ್ಷ ಡಾಲರುಗಳಿಗೆ ಈ ವಜ್ರವನ್ನು ಕೊಂಡ ಸುಲ್ತಾನ ಹಮೀದನು ರಾಜ್ಯಭ್ರಷ್ಟನಾದನು

೧೯೧೧ರಲ್ಲಿ ಹೋಪ್ ವಜ್ರವು ಮೆಕ್ಲೀನ್ ಸ್ತ್ರೀಗೆ ಸಿಕ್ಕಿತು ಇದಕ್ಕಾಗಿ ನ್ಯೂಯಾರ್ಕಿನ ರತ್ನ ವ್ಯಾಪಾರಿಗಳು ೧೫೦,೦೦೦ ಡಾಲರ್ ಗಳಿಗೆ ಕೋಟಿಗಳಿನಲ್ಲಿ ದಾವೆ ಹೂಡಿದ್ದರು ಮೆಕ್ಲೀನಳ ಗಾನಸೌಜನ್ಯವನ್ನು ಮೋಟಾರು ಗಾಡಿಗೆ ಸಿಕ್ಕಿ ಹತನಾದನು ಗಂಡನು ವರ್ನಿಂಗ್ ಪೋಸ್ಟ್ ಎಂಬ ಪರ್ಷದೂನ ಪತ್ರಿಕೆಯ ಸಂಪಾದಕಕೃವನ್ನೂ ಹೊಂದಿ ಯನ್ನು ಕಳೆದುಕೊಂಡು ಈಗ ದೇಶಾಂತರ ಆಲೆಯುತ್ತಿರುವರು ಮೆಕ್ಲೀನಳು ಗ್ರಂಥಕರ್ತಳೂನೊಬ್ಬಳಿಗೆ ಸಹಾಯ ಮಾಡಿ ಪ್ರೆಸಿಡೆಂಟ್ ಹಾರ್ಡಿಂಗರಿಗೆ ಅಪಮಾನಕರವಾದ ಭಿತ್ತಕವೊಂದನ್ನು ಬರೆಸಿದ್ದರಿಂದ ಆ ಗ್ರಂಥಕರ್ತಳು ಈಗ ಬಂದೀಖಾನೆಯಲ್ಲಿರುವಳು ಇದಲ್ಲವೇ ಹೋಪ್‌ಲೆಸ್‌ವಜ್ರ!

ಗೃಹಚಾರ ದೋಷವಲ್ಲ—ಮಹಾ ಮೋಸ!

ಲಂಡನಿನಲ್ಲಿ ರೋಯಲ್ ಬ್ರಿಟಿಷ್ ಬೇಂಕ್ ಎಂಬುದು ಸ್ಥಾಪನೆ ಯಾಯಿತು ಮೆನೆಜಿಂಗ್ ಡೈರೆಕ್ಟರನಾಗಿ ಹಂಪ್ರಿ ಬ್ರೌನ್, ಎಂ ಪಿ (ಮೆಂಬರ್ ಆಫ್ ಪಾರ್ಲಿಮೆಂಟ್) ಎಂಬವನು ಪಾರ್ಲಿಮೆಂಟ್ ಮೆಂಬರನು ಸ್ಥಾಪಿಸಿದ ಬೇಂಕಲ್ಲವೇ?—ದಿವಿಜೆಟುಗಳು ಬಂದು ಧಾರಾಳವಾಗಿ ನೋಡಿಕೊಂಡುವು ಈ ಬೇಂಕಿನ ಅಭ್ಯುದ್ಧದ ಕುರಿತು ಉತ್ಪ್ರೇಕ್ಷರ ವರ್ತಮಾನವನ್ನು ಜಾಹೀರುಗೊಳಿಸಲಾಯಿತು ಜನರ ವಿಶ್ವಾಸ ಲಾಭವನ್ನು ಮಾಡಿಕೊಳ್ಳುವುದಕ್ಕಾಗಿ "ಒಬ್ಬನು ೧೦೦ಪೌಂಡ್ ದಿವೆಜಿಟ್ ಇಟ್ಟರೆ ಅವನು ಈ ಜಾಡ ವರ್ಷದ ಸಾಲಕ್ಕೆ ಅರ್ಜಿ ಹಾಕಲಬಹುದು ಎಂದು ಪ್ರಕಟಿಸಲಾಯಿತು ದಿವೆಜಿಟುಗಳು ಸಾವಿರಗಟ್ಟಲೆಯಾಗಿ ಬಂದುವು ಸಣ್ಣ ಸಣ್ಣ ಅಂಗಡಿಗಳವರೂ, ವರ್ತಕರೂ ರೋಯಲ್ ಬ್ರಿಟಿಷ್ ಬೇಂಕಿನ ಬಾಗಿಲು ತೆರೆಯುವ ಸಮಯ ಬಾವುದೆಂದು ಕಾದು ಕೂತರು ಈ ಬೇಂಕಿನ ಡೈರೆಕ್ಟರನಾದ ಬ್ರೌನನೂ ಅವನ ಸಂಗಾತಿ ಗಳೂ ಮಹದಾನಂದಗೊಂಡರು ತಾವು ಜನರನ್ನು ಮೋಸಗೊಳಿಸುವ ದಕ್ಕಾಗಿ ಸ್ಥಾಪಿಸಿದ ಈ ಬೇಂಕ್ ಜಯಶೀಲವಾಯಿತೆಂದು ಭಾವಿಸಿದರು ತೆಲವು ದಿನಗಳು ದಾಟುತ್ತಿರೆ ಇವರು ದಿವೆಜಿಟು ಇಟ್ಟ ಹಣದ ನಾಲ್ಕನೆಯ ಸಾಲವನ್ನು ಕೊಡುವುದಿಲ್ಲವೆಂದು ಗೊತ್ತಾ ಯಿತು ತೆಲವರು ಡೈರೆಕ್ಟರರಿಗೆ ಬರೆದರು ಉತ್ತರವಾಗಿ "ನೀವು ಅರ್ಜಿ ಮಾಡಿರಿ" ಎಂಬ ಉತ್ತರವು ಬಂತು ಈ "ಅರ್ಜಿ ಮಾಡಿ ಬಹುದು" ಎಂಬ ಜಾಹೀರು ಶಬ್ದದಲ್ಲಿ ಈ ಬೇಂಕಿನವರ ಮೋಸದ ಕತ್ತಿಯು ಅಡಗಿತ್ತು ಬೇಂಕಿನ ಆಫೀಸರುಗಳು ಬಹಳ ಮೋಜಿನಿಂದಿತ್ತು ಕೆರೆಗೇರು ಒಳ್ಳೇ ಕೃಮದಲ್ಲಿದ್ದರು ಒಂದು ದಿನ ಈ ಬೇಂಕು ಪಳ್ಕಾ ಮೋಸದ ಬಲೆಯೆಂಬ ವಾರ್ತೆಯು ಹರಡಿತು ರಾತ್ರಿ ಬೆಳಿಗ್ಗೆ ಯಾಗುವಾಗ ಸಾವಿರಗಟ್ಟಲೆ ಜನರು ಬೇಂಕನ್ನು ಮುತ್ತಿದರು ಪೋಲೀಸರು ಬಿಜಾಯಿಸಿದರು ಕಟ್ಟಡದೊಳಗೆ ನೆಡೆದು ಬಿಜಾನೆಯನ್ನು ತೆರೆದರು ಆದರಲ್ಲೇನಿರಲಿಲ್ಲ! ಭರೇ ಕಾಗದ ಹೂದುಗಳದ್ದುವು! ಇಂತಹ ಮೋಸವು ಲಂಡನಿನಲ್ಲಿ ಇತ್ತೀಚೆ ವರೆಗೆ ನಡೆಯಲಿಲ್ಲ

ಬಿಡುವುದಿಲ್ಲ!

ಲಂಡನ್ ೫ ನೇ ಜೂನ್

ಕೊಮನ್ಸ್ ಸಭೆಯಲ್ಲಿ ನಿಮ್ಬ್ಲಾರು ಕೊರ್ನೆಸ್ ಧುರೀಣರಲ್ಲ ದವರು ಕಳುಹಿಸಿದ ತಂತಿಯು ತಲಪಿದೆಯೆಂದರು. ಆ ತಂತಿಯಲ್ಲಿ ಅರಾಜಕ ಕೃದಿಗಳನ್ನು ಏಷ್ಟಬೇಕೆಂದೂ ಭಾವೀ ರಾಜ್ಯಾಂಗ ರಚನಾ ಕೆಲಸದಲ್ಲಿ ಕೊರ್ನೆಸ್ಸಿನವರ ಸಹಕಾರವನ್ನು ಸ್ವೀಕರಿಬೇಕೆಂದೂ ಕೇಳಿದ್ದಕೆಂದು ಹೇಳಿದರು ಆದರೆ ಬಟ್ಲರರು ಈ ವಿಷಯವಾಗಿ ತನ್ನ ಅಧಿಕಾರ್ಯವನ್ನು ಕೊಡುತ್ತಾ ಸರ್ ಸ್ಯಮುಯೇಲ್ ಹೋರರು ಫೆಬ್ರವರಿ ತಿಂಗಳಲ್ಲಿ ಹೇಳಿದ್ದಕ್ಕಿಂತ ಹೆಚ್ಚಿನ ಕೇಳಲಾರೆನೆಂದರು. ಅಂದು ಹೋರರಾ ಹೇಳಿದ್ದೇನೆಂದರೆ "ಕೊರ್ನೆಸ್ಸಿನವರು ಎಷ್ಟರ ತನಕ ಕಾಯ್ದೆಭಂಗ ಚಳವಳಿಗಳನ್ನು ಮುಂದಕ್ಕೂ ಸಂಪೂರ್ಣವಾಗಿ ಬಿಟ್ಟೆವೆಂದು ವಾಗ್ದಾನ ಮಾಡಿದ ಏನಹ ಗಾಂಧಿಯವರನ್ನಾಗಲೀ, ಕೊರ್ನೆಸ್ಸಾನ್ಸ್‌ಲರ್ ಬಿಡುಗಡೆ ವಾಡೋಣಾಗಿರಿಕ್ಕಿಲ್ಲ" ತೋಮಸ್ ವಿಲ್ಲಿಯಮ್ಸ್ ಇವರು ಬಟ್ಲರರಿಗೆ ಪ್ರಶ್ನೆ ಹಾಕಿ "ಹಿಂದೀಯರ ನಿಜವಾದ ಪ್ರತಿನಿಧಿಗಳು ಸೆರೆಯ ಧ್ವರುವಾಗ ನಿಮ್ಮ ರೌಂಡ್‌ಟೇಬಲ್ ಯಕಸ್ಮಿಯಾಧಿಕಾರಿಯು ನಿಮ್ಮ ಭರವಸೆಯೇ?", ಎಂದು ಕೇಳಿದರು ಇದಕ್ಕೆ ಉತ್ತರವಾಗಿ ಹೋರರು "ಹಿಂದೀಯರ ಪ್ರತಿನಿಧಿಗಳಾಗಿ ಇಲ್ಲಿ ಅನೇಕ ಇತರ ಪ್ರತಿನಿಧಿಗಳಿರುವರು ಮುಂದಿನ ಪರಿಷತ್ತುಗಳಲ್ಲಿಯೂ ಅವರಿರುವರು" ಎಂದರು

ಡಕ್ ಬೇಕ್ ವಾಟರ್ ಪ್ರೂಫ್.

ಇದು ಹಿಂದೀಯ ಮಳೆಗಾಲವನ್ನು ತಡೆಯುವುದಕ್ಕಾಗಿಯೆ ವಿಶೇಷ ರೀತಿಯಿಂದ ತಯಾರಿಸಲ್ಪಟ್ಟಿದೆ

1932ರ ಪೈಸೂರು ದಸರಾ ಪ್ರದರ್ಶನದಲ್ಲಿ ಭಂಗಾರದ ಶಾಶ್ವತೋತ್ಸವವು ದೊರೆತಿದೆ

ಹಿಂದುಸ್ಥಾನದಲ್ಲಿ ಇದೇ ಒಂದು ರಬ್ಬರ್ ಪ್ರೂಫ್ ಮಾಡುವ ಕಂಪೆನಿ

ಹಳೆ ವಸ್ತ್ರವನ್ನು ಮಾರುವ ವ್ಯಾಪಾರಸ್ಥರನ್ನೂ, ಹಳೆ ವಾಟರ್ ಪ್ರೂಫ್ ವಸ್ತ್ರವನ್ನು ಹೊಸದೆಂದು ಮಾರುವ ಅಂಗಡಿಗಾರರನ್ನೂ ಜಾಗ್ರತೆ ತೆಗೆದುಕೊಳ್ಳಿರಿ!

ಧರ್ಮಾರ್ಥವಾಗಿ ಕೆಟಲಾಗು ಕಳುಹಿಸುತ್ತೇವೆ

Bengal Waterproofs Works Ltd
Branch, Hornby Road, Fort Bombay

ಬಂಗಾಳ ವಾಟರ್ ಪ್ರೂಫ್ಸ ವರ್ಕ್ಸ್ ಲಿಮಿಟೆಡ್
ಬ್ರಾಂಚ್, ಹೋರ್ನ್‌ಬೀ ರೋಡ್, ಫೋರ್ಟ್ ಮುಂಬಾಯಿ [9-6]

ಅನಾದಿ ಶ್ರೀ ೪ ಶನಿವಾರದಿಂದ ಶ್ರೀಮುಖ ಸಂವತ್ಸರ
ಆಷಾಢ ಶು. ೧೫ ಶುಕ್ರವಾರದ ವರೆಗಿನ ಪಂಚಾಂಗ.
(ಗಣನೆಯು ಮಿಥುನ – ಕಾರ್ತಿಲ್)

ತಾರೀಕು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ತೊರ್ಯ. ಗಂ	ತೊರ್ಯ. ಅಸ್ತ
1	ಸೂ	೪	೨೦೧೫	ಹಸ್ತಾ	೨೬	6. 9	6 59
2	ಸೋ	೯	೧೨೫೦	ಚಿತ್ತಾ	೨೪೫	6. 9	6,59
3	ಮಂ	೧೦	೧೧	ಸ್ವಾತೀ	೧೯೫೫	6 9	6 59
4	ಬುಧ	೧೧	೪೫	ವಿಶಾಖಾ	೧೪.	೨೦ 6 1	6,59
5	ಗುರು	೧೩	೪೫೫	ಅನುರಾಧಾ	೪	೨೦ 6 1	6 59
6	ಶುಕ್ರ	೧೪	೬೭೫	ಜ್ಯೇಷ್ಠಾ	೧	೨೨ 6 1	6 59
7	ಶನಿ	೧೫	೨೮	ಪೂ ಷಾ.	೪೫೫೫	೨೩ 6 10	6.೨೨

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣತೆ (ಕಾವು) Maximum ಹೆಚ್ಚಿನದು	Minimum ಕಡಿಮೆ ಇದ್ದದ್ದು	Rainfall. ಮಳೆ ದಿನದ ಮಳೆ	ಇಮೂಲ ಮಳೆ.
22	86— 7	77— 9	0—22	—
23	86— 9	78— 4	0— 6	—
24	87— 2	79— 1	0 — 5	—
25	85— 7	77— 7	0 –22	—
26	87— 0	73 – 9	0 – 23	—
27	86— 7	74 9	0—44	—
28	85— 7	75 – 2	0—18	47-81

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ	ವರೆಗೆ ರೂ. ಆ
ಹೊಸ ರಾಶಿ ಅಕ್ಕಿ	3— 8	4— 0
ಮುಳ್ಳಿತ	3—12	4—10
ಗುಡ್ಡು	3 14	4— 4
ಸುಗ್ಗಿ	3—10	4— 0
ಉತ್ತರ ಆವ್ಲಲ್ ಬೆಲ್ಲಿಗೆ	4— 6	5— 0
ರಂಗೂನು ಬೆಲ್ಲಿಗೆ ಗೋಣಿ ೧ಕ್ಕೆ	5—12	6— 4
ಎಲ್ಲೂರು ಬೆಲ್ಲಿಗೆ ಮುಡಿ ೧ಕ್ಕೆ	೨—12	4— 0
ಗೋದಿ ಗೋಣಿ ೧ಕ್ಕೆ	10— 8	12— 8
ತೊಗರಿ ಗೋಣಿ ೧ಕ್ಕೆ	9— 8	12— 0
ಹುರುಳಿ ಗೋಣಿ ೧ಕ್ಕೆ	5—14	6— 4
ಕಡಲೆ ಗೋಣಿ ೧ಕ್ಕೆ	9— 0	10— 4
ತೊಗರಿಬೇಳೆ ಗೋಣಿ ೧ಕ್ಕೆ	11— 8	18— 0
ಉದ್ದು ಗೋಣಿ ೧ಕ್ಕೆ	9 0	9— 8
ಹೆಸರು ಗೋಣಿ ೧ಕ್ಕೆ	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	50— 0	60— 0
ಉಪ್ಪು ಗೋಣಿ ೧ಕ್ಕೆ	5— 8	6— 0
ಹೊಳ್ಳಿ ಖಂಡಿ ೧ಕ್ಕೆ	55— 0	60— 0
ಹೊಳ್ಳಿ ಹಿಂಡಿ ಖಂಡಿ ೧ಕ್ಕೆ	22— 8	23— 0
ಎಳ್ಳಿಂಡಿ ಖಂಡಿ ೧ಕ್ಕೆ	23—12	25— 0
ಹೊಳ್ಳಿ ಎಣ್ಣೆ ಮಣ ೧ಕ್ಕೆ	4— 2	5— 4
ಎಳ್ಳೆಣ್ಣೆ ಮಣ ೧ಕ್ಕೆ	6—12	7— 0
ಟಿಪಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	4— 7	8—12
ಮೋದಕ ಸಕ್ಕರೆ ಮಣ ೧ಕ್ಕೆ	4— 1	4— 2
ಹೊಸ ಮೆಣಸು	4—10	6— 4
ಸಾಸಿವೆ ಮುಡಿ ೧ಕ್ಕೆ	4—12	೨— 0
ಇಕಾಲುಮೆಣಸು ಖಂಡಿ ೧ಕ್ಕೆ	140— 0	150— 0
ಯೇಲಕ್ಕಿ ಮಣ ೧ಕ್ಕೆ	19— 0	22 — 8
ಗೇರುಬೀಜ ಮುಡಿ ೧ಕ್ಕೆ	3— 6	3— 8
ಕಚ್ಚಿಣ ಖಂಡಿ ೧ಕ್ಕೆ	25— 0	25— 8
ತಾಂಪ್ರು ತಗಡು ಮಣ ೧ಕ್ಕೆ	11— 0	11·4 8
ತಾಂಪ್ರು ಪಾತ್ರೆಗಳು ಮಣ ೧ಕ್ಕೆ ..	15— 0	16— 0
ಟೀಗುಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ	9— 0	9— 8
ಪನಸು ೧ಕ್ಕೆ	19— 8	19—10
ಹುಣಸೆ ಹುಳಿ ಖಂಡಿ ೧ಕ್ಕೆ	35— 0	42— 8
ನೇಪಿಸ್ ಶಾಖು ಖಂಡಿ ೧ಕ್ಕೆ . .	200— 0	225— 0
ಫಿಡೇರಿ ಶಾಖು ಖಂಡಿ ೧ಕ್ಕೆ	270— 0	280— 0
ಹಳೆ ಅಡಿಕೆ ..	130— 0	140— 0
ಹೊಸ ಅಡಿಕೆ ...	120— 0	130— 0

THE CANARA PUBLIC CONVEYANCE CO., LTD, MANGALORE
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್.

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಮುಖ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಾರವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಡುಪಿ ನಾಲ್ಕೇ ತಾಸುಗಳಲ್ಲಿ ಇಡುಪಿಗೆ ತಲುಪಿರಿ. ಒಂದೇ ಶಿಲೆಯಲ್ಲಿ ನಿಂದ ರಜತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ದೇಗುರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ದೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವುದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary.
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಈ ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ

ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇತಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

(ಪತ್ರಿಕಾಧಿಕಾರಿಗಳ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡಕ್ಕಾಗುದು. ರಿಸರ್ವ್ ಲೇಖನಗಳಿಗೆ ಎಡ ಕೊಡಲಾಗುವುದಿಲ್ಲ. ಲೇಖನಗಳು ಕೈಫುಲ್ಕ್ಕಿಕ ಟೀಕಾಟಿಪ್ಪಣಿಗಳಿಂದೊಡಗೂಡದೆ ಸಾಲಧ ಕೈರಿಯಲ್ಲಿರತಕ್ಕುದು. (ಸಂ ಸ್ವ)

"ವಿಚಾರಿ" ಮಹಾಶಯರಲ್ಲಿ ನನ್ನ ಕೆಲವು ಪ್ರಶ್ನೆಗಳು.

ಆರ್ಯ ವಿಚಾರವರ್ಯರೇ,

ನಾವು ಈ ಮೊದಲು ರಾಷ್ಟ್ರಬಂಧು ಪತ್ರಿಕೆಯಲ್ಲಿ ಪ್ರಕಟಿಸಿರುವ "ಹಿಂದೂ ದೇವಸ್ಥಾನಗಳಿಗೆ ಜೈನ ಮೊಕ್ತೇಸರರು" ಎಂಬ ಶಿರೋನಾಮೆಯ ಲೇಖನವನ್ನು ಸಂಪೂರ್ಣ ಓದಿ ನೋಡಿರುತ್ತೀರೆ ಅಲ್ಲದೆ ಅದಕ್ಕೆ ಬರೆದಿರುವ ಉತ್ತರಗಳನ್ನು ಕೂಡ ಓದಿರುತ್ತೀರ ಇಷ್ಟೇ ಅಲ್ಲ "ಮಧ್ವಸ್ಥ" ಮತ್ತು "ಹಿತವಾದಿ" ಎಂಬವರು ಬರೆದಿರುವ ಪ್ರತಿಪ್ರತ್ಯುತ್ತರ ಲೇಖನವನ್ನೂ ಸಹ ಓದಿದಿನ

ನಾವು ಹಿಂದೂ ದೇವಸ್ಥಾನಗಳ ಆಸ್ತಿವಸ್ತೆಯನ್ನು ತಿದ್ದಿ ಸರಿಪಡಿಸಬೇಕೆಂದು ಹೊರಟಿರುವ ಉದ್ದೇಶವು ಸ್ವಾತ್ಮಾರ್ಥವಾದುದಾಗಿದೆ. ಈ ಹಿಂದೂಗಳು ತಮ್ಮ ಕೂಡಿ ಸಹಕರಿಸಬೇಕಾದುದು ಅಗತ್ಯ ವಿಷಯಗಳಲ್ಲಿ ಎಂಬುದಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೀರೆ ಅದರೆ ತಮ್ಮ ಅಭಿಪ್ರಾಯವಿರತೆ ದೊಂದುವಿಷಯವೆಂಬಾದರೆ ತಮ್ಮಿಂದ ತಿಳಿದುಕೊಳ್ಳ ಬೇಕಾದ ವಿಚಾರಗಳು ಕೆಲವಿವೆ. ಆದುದರಿಂದ ದಯ ಮಾಡಿ ವಿಚಾರ ಮಾಡಿ ಈ ಕೆಳಗಿನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೂಡ ಬೇಗಾಗಿ ಅಪೇಕ್ಷಿಸುತ್ತೀನೆ.

೧. ತಾವು ಈ ಮೊದಲು ಹಿಂದೂ ಸಮಾಜದ ವಿಶೆಗೆಗಾಗಿ ಎಲ್ಲಿ ಏನೇನು ಕಾರ್ಯಗಳನ್ನು ಪಹಿಸಿ ಸಮಾಜಸೇವೆ ಮಾಡಿರುವಿರಿ?

೨ ತಮ್ಮ ಯೋಗ್ಯತೆಯೇನು? B. A. ಯವರೇ? M A ಯವರೇ? ಯಾ ಪಂಡಿತರೇ? ಶಾಸ್ತ್ರಿಗಳೇ?

೩. ತಾವು ಬ್ರಾಹ್ಮಣರೋ? ಅಬ್ರಾಹ್ಮಣರೋ? ಬ್ರಾಹ್ಮಣರಾದರೆ ದೈವಿಕರೋ? ಅಜ್ಞೆತಿಗರೋ? ವಿಶಿಷ್ಟಾದ್ವೈತಿಗರೋ? ಆರ್ಯ ಸಮಾಜದವರೋ ಇಲ್ಲವೆ ಎಲ್ಲಾ ಮತ ತತ್ವಗಳಿಂದಲೂ ಇಷ್ಟಿಷ್ಟು ತೆಗೆದು ಮಾಡಿಕೊಂಡಿರುವ "ಸಂಜ ಕಜ್ಜಾಯ ಮತ್ತೆ"ದವರೋ? ಅಥವಾ ಬೇರೆ ಯಾವ ಪಂಗಡಗಳಿಗೆ ಸೇರಿದವರು?

೪. ಬ್ರಾಹ್ಮಣರೇ ಅಹುದಾದರೆ ತಮ್ಮ ಬ್ರಾಹ್ಮಣ ಸಮಾಜದ ಉದ್ಧಾರಕ್ಕಾದರೂ ಪ್ರಯತ್ನಪಟ್ಟಿರಬೇಕು. ಪಟ್ಟಿದ್ದರೆ ಅದು ಯಾವುದು? ಈ ಗೊಂದಲದಲ್ಲಿ ಅಬ್ರಾಹ್ಮಣರನ್ನು ಮರೆತಿಲ್ಲವಷ್ಟೆ?

೫. ತಾವು ಅಬ್ರಾಹ್ಮಣರೇ? ಹಾಗಿದ್ದರೆ ಯಾವ ಮತಕ್ಕೆ ಸೇರಿದವರು? ತಾವು ಹಿಂದೂ ದೇವಸ್ಥಾನಗಳಲ್ಲಿ ಅಬ್ರಾಹ್ಮಣರಿಗೆಂದು ಯಾವ ಅನುಕೂಲತೆ ಮತ್ತು ಪ್ರಯೋಜನವನ್ನು ಕಲ್ಪಿಸಿ ಕೊಟ್ಟಿರುವಿರಿ? ಮತ್ತು ಬ್ರಾಹ್ಮಣರನ್ನೇ ದೇವರೆಂದು ತಿಳಿದು ತಮ್ಮ ಕಸ್ಟಾರ್ಜಿತ ದ್ರವ್ಯವನ್ನು ದಾನ ದಕ್ಷಿಣೆ-ಸಮಾರಾಧನೆಗಳಲ ಮೂಲಕ ಅವರ ಹೊಟ್ಟೆಯನ್ನು ತುಂಬಿಸುವಂಥ ಕೆಲಸಗಳಲ್ಲಿ ಅಂಧ ಶ್ರದ್ಧೆಯಿಂದ ಖರಿನಂತೆ ವೆಚ್ಚ ಮಾಡುತ್ತಿರುವ ಅಜ್ಞ ಹಿಂದುಗಳಲ್ಲಿ ಯಾವ ಸುಧಾರಣೆಯನ್ನು ಕಂಡಿರುವಿರಿ? ಅಥವಾ ದೇವಾಲಯಗಳಲ್ಲಿ ಅಜ್ಞಾನ ವಶವರ್ತಿಗಳಾಗಿ ಹರಕೆ ತಾಣಕೆ, ಪ್ರಾಣಿಬಲಿ ಮುಂತಾದ್ದನ್ನು ಅರಿಸಿ ಬರುತ್ತಿರುವ ಮೂಢ ಹಿಂದೂಗಳಿಗೆ ವಿವೇಕವನ್ನು ಬೋಧಿಸಿ ಏನು ಸುಧಾರಣೆ ಗೈದಿರುವಿರಿ?

೬ ಈಗಿನ ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ಏನಾದರೂ ಪ್ರಯತ್ನಪಟ್ಟಿದ್ದುಂಟೋ? ಇದ್ದರೆ ನಿರೂಪಿಸೋಣಾಗಲಿ!

೭. ಜೈನ ಮೊಕ್ತೇಸರರು ಹಿಂದೂ ದೇವಾಲಯಗಳಲ್ಲಿ ಅಡಕತೆ ನಡೆಸುವಾಗ ಹಿಂದೂ ಮತ ಸಂಪ್ರದಾಯಕ್ಕೇನಾದರೂ ಹಾನಿಯಾಯ ನ್ಸುಂಟು ಮಾಡಿದ್ದರೋ? ತಾವು ಎಲ್ಲಾದರೂ ಕಂಡಿದ್ದರೆ ಅದನ್ನಾದರೂ ತಿಳಿಸೋಣಾಗಲಿ!

೮. ಜೈನ ಮೊಕ್ತೇಸರರ ಅಡಕತೆ ಕ್ರಮಕ್ಕೂ ಹಿಂದೂ ಮೊಕ್ತೇಸರೇ ಇರುವ ದೇವಸ್ಥಾನಗಳ ಕಾರ್ಯ ಕ್ರಮಕ್ಕೂ ಏನಾದರೂ ವ್ಯತ್ಯಾಸವು ಕಾಣಬರುವುದೇ?

೯. ಜೈನ ಮೊಕ್ತೇಸರರಿಗೆ ಹಿಂದೂ ದೇವಸ್ಥಾನಗಳಲ್ಲಿ ಶ್ರದ್ಧೆ ಇಲ್ಲ ನೆಂಬುದೂ ಅಂಥವರು ಆ ದೇವಸ್ಥಾನಗಳ ಸಂಬಂಧವನ್ನಿಟ್ಟುಕೊಳ್ಳುವುದು ಅಹೋಕ್ಕ ಕೆಲಸವೆಂದೂ ಬರೆದುದು ಹಿಂದೂ ಮತ ದೇವಸ್ಥಾನಗಳು ಅನ್ಯಹಸ್ತಕ್ಕೆಯಿಂದ ತಪ್ಪಿ ಹೋಗುವುದೆಂಬ ಭಯದಿಂದಲೋ? ಯಾ ಅಂಥಾ ಸಂಬಂಧದಿಂದ ಜೈನ ಧರ್ಮಕ್ಕೆ ಹಾನಿ ತಪ್ಪಬಹುದೆಂಬ ಭಯದಿಂದಲೋ? ತಿಳಿಸಿರಿ! ಯಾವುದೊಂದು ಸಂಸ್ಥೆಯ ಕಾರ್ಯ ಳಲ್ಲಿಗೂ ಅಧಿಕಾರಿಯ ಮತಕ್ಕೂ ಏನು ಗಂಟು?

೧೦. ಈ ಮೊದಲು "ಹಿತವಾದಿ"ಯೆಂಬವರು ಪತ್ರಿಕೆಯಲ್ಲಿ ಪ್ರಕಟಿಸಿದಂತೆ ಹಿಂದೂ ದೇವಸ್ಥಾನಗಳಲ್ಲಿಯ ಅಡಕತೆ ಕ್ರಮವನ್ನು ಪರಿಶೀಲಿಸಿ ಇನ್ನು ಮುಂದೆ ಸಂತೋಷಣ ವರದಿಯನ್ನು ಕೊಡಲಿನ ತೊಡಿಸುವಂತೆ ಒಂದು ಪರಿಶೋಧಕ ಕಮಿಟಿಯು ಜರಗುವುದು ಪ್ರಸ್ತಕ್ಕೆ ಬೇಕಾದ ಕಾರ್ಯ! ಒಂದು ನೇಕ ಕಮಿಟಿಯು ನರ್ವಹಿಸಿದ್ದರೆ ಸದ್ದು ಮುಂಚಳೆಯಲ್ಲಿ ತಮಗೆ ಹಿತವೆಂದು ಕಂಡರೆ ನಾವು ಆ ಕಾರ್ಯ ದಲ್ಲಿ ಇನ್ನೆ ಮುಂದಾಳುಗಳಾಗಲೂಡಬಹುದು? ಕಾರ್ಯರೂಪದಲ್ಲಿ ಮಾರ್ಗ ದರ್ಶಕರಾಗುವುದು ತಮ್ಮಂಥವರಿಗೆ ಯೋಗ್ಯವಲ್ಲವೋ ಸ್ವಾಮಿ!

ತಮ್ಮ ದೊಂಚಲಿನ ಲೇಖನವು ಮತ್ತೆಯ ಪ್ರಾರಾಗಿದೆ ಎಂದು ತಿಂಡಿತು. ಆದರೆ ಎರಡನೆ ಲೇಖನದಲ್ಲಿ ಮತ್ತೆಯಲ್ಲವು ತನಗೆ ಎಂದು ತಾವು ಬರೆದಿರುವುದಾದರೂ ಲೇಖನ ಶ್ರಮವು ನಷ್ಟವಾದ ರಿಗೂ ಮತ ದ್ವೇಷಮತ್ಸರವನ್ನುಂಟು ಮಾಡುವಂತಿದೆ. ಕಾರಣ ಇಂಥ ಸಂದಿಗ್ಧ ವಿಷಯಗಳನ್ನು ಸ್ಪಷ್ಟಿಮಾಡಲೆಳಸಿ ಈ ಮೇಲೆ ಪ್ರಶ್ನಿಸಿರುವ ಹತ್ತು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಮರುಪತ್ರಿಕೆಗೆ ಬರೆಯ ಬೇಕಾಗಿ ವಿನಂತಿ ಇತಿ ಉತ್ತರಾಪೇಕ್ಷಿಗಳು,

ಕಾಸರಗೋಡು ಕೃಷ್ಣ.

ಮಂಚಿ — ಈರ ಪಂಚಾಯತ ಬೋರ್ಡು.

ತಾರೀಖು ೧೩-೩-೧೯೨೩ನೇ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪಂಚಾಯತ ಬೋರ್ಡಿನ ಕುರಿತು ಈರ ಗ್ರಾಮಸ್ಥನು ಬರೆದ ಪತ್ರ ಓದಿ ನೋಡಿದೆ —

ಆರ್ಯ ವಾಚಕ ಮಹಾಶಯರೇ,

ನಮ್ಮ ಪಂಚಾತ ಬೋರ್ಡಿನ ವಿಷಯವಾಗಿ ಪತ್ರ ಬರೆದಿರುವ ಬಾತಮಿದಾರನು ಈರ ಗ್ರಾಮದಲ್ಲಿ ಮುಂಚೆ ಇರಲಿಲ್ಲವೆಂದು ಭಾವಿಸ ಬೇಕಾಗುತ್ತದೆ ಯಾಕೆಂದರೆ ಈ ಎರಡು ಗ್ರಾಮಗಳಲ್ಲಿ ಕಳೆದ ಎರಡು ವರ್ಷಗಳಿಂದ ಪಂಚಾಯತ ಬೋರ್ಡು ಅಗಬೇಕೆಂದು ಸಂಬಂಧಪಟ್ಟ ಅಧಿಕಾರಿಗಳೊಡನೆ ಪತ್ರವ್ಯವಹಾರಗಳು ನಡೆಯುತ್ತಲೇ ಇತ್ತು. ಪ್ರಥಮ ಬೋರ್ಡು ಇನ್ಸ್‌ಪೆಕ್ಟರರಿಗೆ ಪಂಚಾಯತ ಬೋರ್ಡು ಆಗಬೇಕೆಂದು ಮಂಚಿ, ಈರ ಈ ಎರಡು ಗ್ರಾಮಸ್ಥರು ಗಣಸೇ ಇಸವಿಯಲ್ಲಿ ಮನವಿ ಬರಕೊಂಡಿದ್ದರು. ಆ ಮೇಲೆ ಅದಕ್ಕೆ ಆಗತ್ಯವುಳ್ಳ ಫೋರ್ಮು ಸದ್ರಿ ಆಫೀಸರಿಂದ ನನಗೆ ತಲ್ಪಿ ,ಸದ್ರಿ ಫೋರ್ಮು ಬಂದಮೆಸಿ ಕರುಹಿಸೋಣಾಗಿತು ಆ ಮೇಲೆ ಮಂಚಿ, ಈರ ಎರಡು ಗ್ರಾಮಗಳಿಗೆ ಒಂದೇ ಬೋರ್ಡು ಆಗಬೇಕೋ ಯಾ ಬೇರೆ ಬೇರೆ ಆದರೆ ಒಳ್ಳೆದೋ ಎಂಬ ಸಂಗತಿ ಗ್ರಾಮಸ್ಥರ ಸಭೆ ಕೂಡಿಸಿ ಅಭಿಪ್ರಾಯ ಬರಕೊಳ್ಳಬೇಕಾಗಿ ಈ ಫಿರ್ಕಾ ಶಿಸ್ತೆನಿಗಾರರಿಗೆ ಹುಕುಂ ಬಂದಿತ್ತು. ಸದ್ರಿ ಹುಕುಂ ಗೆ ವ್ಯತಿರಿಕ್ತವಾಗಿ ಸದ್ರಿ ಮಹನೀಯರು ಬರೆದರೂ ನಾನು ಈ ಬಗ್ಗೆ ಲೋಕಲ್ ಬೋರ್ಡು ಇನ್ಸ್‌ಪೆಕ್ಟರವರಿಗೆ ಅಲಾಹಿದೆ ಬರೆಕೊಂಡಿದ್ದರಿಂದ ಪುನಃ ಮಂಚಿ ಗ್ರಾಮದ ಪಶೇಲರು ಎರಡು ಗ್ರಾಮಸ್ಥರ ಸಭೆ ಕೂಡಿಸಿ ಬರಕೊಳ್ಳಬೇಕಾಗಿ ಆದ ಹುಕುಂ ಮೇರೆಗೆ-ಗ್ರಾಮಸ್ಥರ ಮಿಟಿಂಗ್ ಆಗಿ ಬಹು ಪಕ್ಕದವರ ಸಮ್ಮತಿದ ಮೇರೆಗೆ ಮಂಚಿ ಈರಕ್ಕೆ ಹಿಂದೇ ಪಂಚಾತ ಬೋರ್ಡು ಆಗ ಬೇಕೆಂದು ಪ್ರೆಸಿಡಿಂಗ್ಸ್ ಮಾಡಲಾಯಿತು ಇಷ್ಟೆಲ್ಲಾ ಪತ್ರವ್ಯವಹಾರ ಗಳು ನಡೆಯುತಲಿದ್ದ ಸುಮಾರು ಆರು ತಿಂಗಳುಗಳ ಕಾಲ ಈ ಬಾತಮಿ ದಾರನು ಈ ಚರ್ಚೆ ಬಂದಿಯು ಒಳಗೆ ಇರುತ್ತಿದ್ದರೆ ಇಲ್ಲಿ ಪಂಚಾಯತ ಬೋರ್ಡು ನಡೆಸುವ ಬಾಲಕರು ಇಲ್ಲವಾದರಿಂದ ಈ ಸಂಸ್ಥೆ ಇಲ್ಲಿ ಬೇಡವೆಂದು ಸೂಚನೆ ಕೊಡದೆ ಇರಲಿಕ್ಕಿಲ್ಲವಾಗಿತ್ತು.

ಇದಾದ ತರುವಾಯ ಇಲ್ಲಿ ಪಂಚಾಯತ ಬೋರ್ಡು ಆಗಿ ಒಂದು ವರುಷ ಸ್ಪೆಶಲ್ ಆಫೀಸರರಿಂದ ಕಾರ್ಯಕ್ರಮಗಳು ಜರಗುತ್ತಲೇ ಇತ್ತವು ಈ ಸಮಯ ಅದಿದ್ಯಾವಿದರ ರಿಜರ್ವ್‌ಸ್ಥಾನ ಮತ್ತು ಇತರ ಜೈನ ತಾರೀಕು ವರ್ಗಿರ ಗ್ರಾಮಗಳಲ್ಲಿ ಅಲ್ಲಲ್ಲಿ ಬಹಿರಂಗವಾದ ಸ್ಥಳ ಗಳಲ್ಲಿ ನೋಟೀಸು ಪ್ರಕಟಿಯಾಗಿತ್ತು. ಆಗಲಾದರೂ ಈ ಬಾತಮಿ ದಾರನು ಎಚ್ಚರಿಸಿರುವಹಾಗುತ್ತಿಜ್ಜರ್ಕೆ ತಿಂಗಿನ ಸೂಚನೆ ಮುಂದೆ ಬರು ತ್ತಿತ್ತು. ಈಗ ಮಾತ್ರ ಈ ಎರಡು ಗ್ರಾಮಗಳಲ್ಲಿಯೂ ಪಂಚಾಯತ ಬೋರ್ಡು ನಡೆಸುವ ಯೋಗ್ಯ ಚಾಲಕರ್ತರು ಇರುವುದಿಲ್ಲವೆಂದು ರಿಮಾರ್ಕು ಮಾಡುವುದು ನೋಡಿದರೆ ಈ ಬಾತಮಿದಾರನಿಗೆ ಪಂಚಾಯತ ಬೋರ್ಡಿನಲ್ಲಿ ಸ್ಥಾನ ಸಿಕ್ಕದಿರುವ ಕಾರಣವೆಂದೇ — ಭಾವಿಸ ಬೇಕಾಗುತ್ತದೆ. ಹೇಗೇಪದೆ. — ಪಂಚಾಯತ ಬೋರ್ಡು ಯೋಗ್ಯ ಸಂಸ್ಥೆಯೆಂದೂ ಅದನ್ನು ನಡೆಸುವವರು ಯೋಗ್ಯರಾದರೆ ಧ್ಯೇಯವು ಒಳ್ಳೆಯದೆಂದೂ ತಿಗಿನ ಚಾಲಕರು ತಮ್ಮ ಅಧಿಕಾರವನ್ನು ಸದುಪ ಯೋಗ ಮಾಡುವುದಿಲ್ಲವೆಂದೂ ಹೇಳುವ ಮಹನೀಯರಿಗೆ ಈ ಸಂಸ್ಥೆಯ ಎಲ್ಲಾ ಸಂಗತಿ ಗೊತ್ತಿದ್ದು ಇದರಲ್ಲಿ ಸುರಿತಕಾರಿರಬೇಕು. ಅವರಿಗೆ ಇದರ ಪ್ರೆಸಿಡೆಂಟ್ ಸ್ಥಾನ ಸಿಕ್ಕುತ್ತಿದ್ದರೆ ಯೋಗ್ಯ ಕೆಲಸ ನಡೆಯಬಹುದಿತ್ತು ಆದು ಏನೋ ತಪ್ಪಿ ಹೋಪ ಹಾಗೆ ತೋರುತ್ತದೆ ಅದರೆ ಆಂಥ ಯೋಗ್ಯ ಮಹನೀಯರು ಇರುವುದಾದರೆ ಅವರನ್ನು ಮುಂದೆ ತಂದು ಗ್ರಾಮಾಭಿವೃದ್ಧಿಯನ್ನು ಬಯಸುವುದೇ ನನ್ನ ಮುಖ್ಯೋ ದ್ದೇಶವಾಗಿರುವುದರಿಂದ ಈ ಮಹನೀಯರು ದಯ ಮಾಡಿ ತಮ್ಮ ಜೀವ ರನ್ನು ನನಗೆ ತಿಳಿಸಬೇಕಾಗಿ ಹಾರ್ದಿಸುತ್ತೇನೆ

ವೃತ್ತಿ ತೆರಿಗೆ ಹಾಕುವ ನಮ್ಮ ಅಧಿಕಾರವನ್ನು ನಾವು ಒಳ್ಳೇ ರೀತಿಯಲ್ಲಿ ಉಪಯೋಗಿಸಿರುತ್ತೇವೆ ಸದ್ರಿ ತೆರಿಗೆಯ ಪಟ್ಟೆ ತಯಾ ರಿಸುವ ಅಧಿಕಾರವನ್ನು ಪಂಚಾಯತ ಬೋರ್ಡಿನವರು ನನಗೆ ಕೊಟ್ಟ ದ್ದರು ನಾನು ಕೂಡಾ ಈರ ಗ್ರಾಮಸ್ಥನೇ. ಕೋಕಲ್ ಬೋರ್ಡು ಆಕ್ಟಿನ ವೃತ್ತಿ ತೆರಿಗೆ ಹೊರಿಸುವ ರೂಲ್ ಪ್ರಕಾರ ಆದಾಯವನ್ನು ಕ್ರಮ ದಂತೆ ಆಂಶಾಜು ಎಣಿಸಿ ತೆರಿಗೆ ಹೊರಪಡಲಾಗಿಯಿದೆ. ಇದರಲ್ಲಿ ನನ್ನ ಸ್ವಾರ್ಥಕ್ಕಾಗಿ ನಾನು ಕೆಲಸ ಮಾಡಿದ್ದಲ್ಲ ಮತ್ತು ಸ್ವಾರ್ಥದಿಂದ ಇದರಲ್ಲಿ ಯಾವ ಕರದ ಲಾಭವೂ ನನಾಗಲೀ ಇತರ ಮೆಂಬರರಾಗಲೀ ಹೊಂದಿದವರಲ್ಲ ಆಕ್ಟ್ ಪ್ರಕಾರ ತಿಗಿನ ವೃತ್ತಿ ತೆರಿಗೆ ಸರಿಯಲ್ಲ ವಾದರೆ ಅದಕ್ಕೆ ಕ್ರಮವಾದ ಆಕ್ಷೇಪ ಮಾಡಬಹುದು. ಪಂಚಾಯತ ಬೋರ್ಡಿನ ಆಕ್ಷೇಪ ಕಮಿಟಿಯಲ್ಲಿ ಇದನ್ನು ಇತ್ಯರ್ಥಪಡಿಸಬಹುದು ರೂಲ್ ಗೊತ್ತಿರುವ ಬಾತಮಿದಾರನು ಈ ಕುರಿತು ನ್ಯಾಯಗೊಳಿಸು ವುದು ಯೋಗ್ಯವೇ. ಈ ಸರಿಯಾದ ದಾರಿಯನ್ನು ಬಿಟ್ಟು ವಿದ್ಯಾಸ್ ಆರ್ಜ (ಡಿಫ್ಯಾಕ್ಟೋ ದೊಡಿರಿಗೆ) ಪತ್ರಿಕೆಗೆ ಪ್ರಕಟಣೆ ಇದೆಲ್ಲಾ ಮಾಡು ವುದು ಯಾವ ನ್ಯಾಯ?

ಸರಕಾರಿ ಸ್ಥಳ ದೈತರ ಉಪಯೋಗಕ್ಕಲ್ಲ ದೈತರ ಸೊಪ್ಪು ಕಟ್ಟಿಗೆ ಉಪಯೋಗಕ್ಕೆ ಕುಮ್ಮಿ ರಿಯಾಯಿತಿಯ ಸ್ಥಳ ಅಂತಿಪಡಿ ದಿಟ್ಟು ಉಳಕೆಸ್ಥಳ ಸರಕಾರಿಯಾಗಿರುತ್ತದೆ ಇದನ್ನು ದರಖಾಸ್ತು ಕೊಡುವುದೇ ಸರಕಾರದ ಧ್ಯೇಯ ಯಾ ಅಗತ್ಯ ಬಿದ್ದ ಇತರ ಗವರ್ನ್ ಮೆಂಟಿನ ಕೆಲಸಕ್ಕೆ ಉಪಯೋಗಿಸುವುದು ಇಂಥ ಸ್ಥಳದ ಸೊಪ್ಪು, ಕಟ್ಟಿಗೆ ಲಗ್ತಿಯ ವರ್ಗದವರು ಬಲಕ್ಕಾಸಿ ಉಪಯೋಗಿಸಿ ತಮ್ಮ ಸ್ವಾರ್ಥಕ್ಕೆ ಲಾಭ ಪಡೆಯುತ್ತಾರೆ ಹೀಗಾವುದಾಗಿ ಇದು ಎಲ್ಲ ರಿಗೂ ಉಪಯೋಗ ಸಿಕ್ಕುವಂತೆ ಮಾಡುವ ಧ್ಯೇಯದಿಂದಲೇ ಪಂಚಾ ಯತ ಬೋರ್ಡಿನವರು — ಈರ ಗ್ರಾಮದ ಕೆಲವು ಸ್ಥಳಗಳನ್ನು ರಿಜರ್ವ್ ಮಾಡುವರಿ ಪ್ರೊಪೊಸಿಂಗ್ಸ್ ಮಾಡಿರುತ್ತಾರೆ ಇದರಿಂದ ಈ ಬಾತಮಿ

Zenith
Life Assurance Co., Ltd..
MANGALORE.

Zenith reached its *Zenith* in Prosperity!
Encourage this purely ndian concern for the Indians
Natural depression everywhere' But Zenith Co., thrived!
Increment in Assets counts 5 times more!
Tremendous improvement in Deposits!
Happiest Insurance Co., is *Zenith* and *Zenith* only!

You pay less—but—receive More!

ERE it is Sunset—you get the claim!
Prompt Payment is our Motto and Asset!

Wanted Agents in unrepresented areas.

Head Office—BOMBAY.

Branches' - Calcutta, Madras, Lahore, Karachi, Mangalore, Calicut, Delhi, Goa, Ahmedabad, Poona, Lucknow, Belgaum, Surat, Nagpur, Cochin, Baroda, Benares.

Branch Managers— **MESSRS. KERWAR & CO,** *Mangalore.*

ಮಾಡಿಕೊಂಡ ಕೂಲಿಯ ಸ್ವಲ್ಪ ಭಾಗ ಮಾತ್ರ ಅವರ ಕೈಗೆ ಸೇರುತ್ತದೆ. ಉಳಿದ ಭಾಗವು ಅವರ ಮೇಲಿನ ಅಧಿಕಾರಿಗಳ ಪಾಲಾಗುತ್ತದೆ. ಈ ಅಧಿಕಾರಿಗಳು ಕೆಲಸಗಾರರಿಗೆ ಕೊಡುವ ಕೂಲಿಯ ಹಣವನ್ನು ಕೆಲಸಗಾರರಿಗೆ ಕೊಡುವ ಮೊದಲು ಅವರಿಂದ ಲಂಚವನ್ನು ತೆಗೆದುಕೊಳ್ಳುತ್ತಾರೆ. ಈ ಲಂಚದ ಹಣವನ್ನು ಕೊಡಲು ಕೆಲಸಗಾರರು ಒಪ್ಪದಿದ್ದರೆ ಅವರಿಗೆ ಕೆಲಸವನ್ನೇ ಕೊಡುವುದಿಲ್ಲ. ಈ ಲಂಚದ ಹಣವನ್ನು ಕೊಡಲು ಕೆಲಸಗಾರರು ಒಪ್ಪಿದರೆ ಅವರಿಗೆ ಕೆಲಸವನ್ನು ಕೊಡುವ ಅಧಿಕಾರಿಗಳು ಅವರಿಗೆ ಕೆಲಸವನ್ನು

ಯುವಾಗ ಎರಡು ಕುಟುಂಬಗಳೂ ಕೆಲಕಾಲದ ವರೆಗೆ ಒಂದೇ ಮನೆಯಲ್ಲಿ ಇದ್ದುವು. ಮತ್ತು ಯಾವಾಗಲೂ ನೆರೆಕರೆಯವರಂತೆ ವಾಸಿಸಿರು.

ನೆರೆಕರೆಯವರು ಹೇಗೆ ಇರಬೇಕೋ ಹಾಗೆಯೇ ಅವರು ತಮ್ಮ ತಮ್ಮ ಜೀವನವನ್ನು ಸಾಗಿಸಿದರು. ವೆಂಕಪ್ಪನಿಗೆ ಯಾವಾಗಲೂ ತಂದೆಯ ಆಸ್ತಿಗಿಂತ ಜ್ಞಾನಾರ್ಜನೆಯಲ್ಲಿ ಪ್ರೀತಿಯಿದ್ದುದರಿಂದ, ಒಂದು ಕಲಹವಾಗಲೀ, ವ್ಯಥೆಯಾಗಲೀ ಆಗಲಿಲ್ಲ. ಗ್ರಾಮದವರ ಆಶ್ಚರ್ಯಕ್ಕೆ ಸರಿಯಾಗಿ ವೆಂಕಪ್ಪನು ತಾನು ಮೊದಲಿದ್ದಂತೆ ಜೀವನವನ್ನು ಸಾಗಿಸತೊಡಗಿದನು.

ಎಂ, ಗೋಪಾಲಕೃಷ್ಣ ಕಾಮತ್, ಮಂಗಳೂರು.

ಮುಂಗೈಯಾಳಿಕೆ.

ಗೋರಿಯೊಳು ಹೆಣಗಳು ಹೊರಳುತಿವೆ
ಬಸಿರಿನೀ ಕೊಸರುಗಳು ಉರಳುತಿವೆ
ಸಾತ್ಪಿಕ ಆತ್ಮಗಳು ನರಳುತಿವೆ
ಆಳು! ಮುಂಗೈ! ಆಳು!

ಉಸಿರಾಡದೊಲು ಜೀಲು ತುಂಬಿಹವು
ಲಾತಿಗಳು ನೆತ್ತರಿಂ ಕೊಬ್ಬಿಹವು
ಬೊಕ್ಕಸವು ಜಡಕಿಯಿಂ ಉಬ್ಬಿಹವು
ಆಳು! ಮುಂಗೈ! ಆಳು!

ಸುಳಿದಲ್ಲಿ ನೆತ್ತರವು ಸುರಿಯುತಿದೆ
ನಿಂತಲ್ಲಿ ನೆತ್ತರವು ನೊರೆಯುತಿದೆ
ದಿಸ್ಸಿಲ್ಲಿ ಗೋಳು ಭೋರ್ಗರೆಯುತಿದೆ
ಆಳು! ಮುಂಗೈ! ಆಳು!

ಎಲ್ಲವಕು ಕೆಡಿಸಿನವು ಬಂದಿಹುದು!
ಸರ್ವಕೂ ಸೃಷ್ಟಿಯೊಳು ಹದ್ದಿಹುದು!
ಸಾಟಿದರೆ ಅಳಿಗಾಲ ಬಂದಿಹುದು!
ಆಳು! ಮುಂಗೈ! ಆಳು!

ದಿಢುಗಡೆಯ ಸೃಷ್ಟಿಯು ನೂಲವಿದೆ
ಅದ ನೋಡಿ ಕೊಳ್ಳಲದಕೆ ರೀತಿಯಿದೆ
ಬಿದಕ ಕೈ ಹಾಕಿದರೆ ಕಾಲನದೆ!
ತಾಳು! ಮುಂಗೈ ಬಾಳು!

ಶ್ರದೊ ಕೇಳು! ರುದ್ರಾತ್ಮ ನೋಡುವದು
ರಾವಣ ಬಯಲಿಗೆ ಬಯಲಾಡುವದು
ಧರ್ಮಕೆ ಜಯ ಶಾಶ್ವತ ಕಡಿಗಿಹುದು
ಕೇಳು! ಮುಂಗೈ! ಬೀಳು!

ಕನ್ನಡ ಕಂದ.

ವಿಮರ್ಶೆ.

1. ಕಾವೇರಿ ಮಹಾತ್ಮೆ: ಮೈಪಾಡಿ ವೆಂಕಟರಮಣಯ್ಯನವರಿಂದ ಸಂಸ್ಕೃತಕ್ಕೆ ಅನುವಾದಿಸಲ್ಪಟ್ಟು, ಉಡುಪಿ ಶ್ರೀಕೃಷ್ಣ ಮುದ್ರಣಾಲಯದಲ್ಲಿ ಶಾಮಂಭಟ್ಟರಾಯರು ಪ್ರಕಟಿಸಿದರು. ಪುಟ ೧೮೫. ಬೆಲೆ ೧೦ ಆಣೆ.

ವೆಂಕಟ ರಮಣಯ್ಯನವರು ಭಾಮಿನಿ ಷಟ್ಪದಿ ರೂಪದಲ್ಲಿ ವೆಂಕಟೇಶ್ವರ ಸುಪ್ರಭಾತ, ಅಷ್ಟೋತ್ತರ ಶತನಾಮಾವಳಿ ಮುಂತಾದ ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥವೂ ಕಾವೇರಿ ನದಿಯ ಮಹಾತ್ಮೆಯನ್ನು ತೋರಿಸುವ ಪೌರಾಣಿಕ ಕಥೆಯನ್ನು ಕೊಟ್ಟಿರುತ್ತದೆ. ಕಥಾಭಾಗವು ಭಾಮಿನಿ ಷಟ್ಪದಿಯಲ್ಲಿ ಬರೆದಿದೆ.

2. ಸಂಧ್ಯಾಯಜ್ಞ: ಗ್ರಂಥಕರ್ತರು ಮತ್ತು ಪ್ರಕಾಶಕರು—ಕಾಸರಗೋಡು ವೇದಮೂರ್ತಿ ಎಟ್ಟೆಲ ಭಟ್ಟರು. ಪುಟ ೩೮. ಬೆಲೆ ೪ ಆಣೆ.

ಬ್ರಾಹ್ಮಣರು ದಿನಂಪ್ರತಿ ಹೇಳಬೇಕಾದ ಸಂಧ್ಯಾವಂದನೆಯ ಶ್ಲೋಕಗಳ ಅರ್ಥವನ್ನು ಕೊಡಲು ಈ ಚಿಕ್ಕ ಪುಸ್ತಕದಲ್ಲಿ ಪ್ರಯತ್ನಿಸಿರುತ್ತಾರೆ. ವೇದಶಾಲೆಯ ವಿದ್ಯಾರ್ಥಿಗಳಿಗೆ ಪ್ರಥಮ ಪಾಠವಾಗಿ ಅಧ್ಯಾಯನ ಮಾಡುವುದಕ್ಕೋಸ್ಕರ ರಚಿಸಿದುದು. ಅನೇಕ ಕಡೆಗಳಲ್ಲಿ ಮುದ್ರಣ ದೋಷಗಳಿವೆ. ವಿದ್ಯಾರ್ಥಿಗಳಿಗಾಗಿ ಚಿಕ್ಕದು ಪುಸ್ತಕಗಳು ಒಳ್ಳೆಯ ಕಾಗದದ ಮೇಲೆ ಮುದ್ರಿತವಾಗಬೇಕಷ್ಟುದು. ಶ್ಲೋಕಗಳ ಶಬ್ದಾರ್ಥಗಳನ್ನು ಸಾತ್ರ ಕೊಡುವುದಕ್ಕಿಂತ ಭಾವಾರ್ಥವನ್ನು ಕೊಡಬೇಕಿತ್ತು.

3. ಬುದ್ಧಿ ಬಂತು. ಬರಹಗಾರರು—ಬಿ. ಕಲ್ಯಾಣ ಕರ್ಮಾ. ಪುಟ ೩೨.

4. ವೇದಾಂತಿ. ಬರಹಗಾರರು: ಮುಗುಳಿ ರಂಗನಾಥ ಎಂ. ಎ. ಬಿ. ಟಿ. ಯವರು. ಪುಟ ೧೮.

ಈ ಎರಡು ಚಿಕ್ಕ ಕಥೆಪುಸ್ತಕಗಳು ವೆಳಗಾಂವಿಯ ತುಂಟರತಂಡದವರ ಒಂದಾಣೆ ಮಾಲೆಯ ಎರಡನೆಯ ವರ್ಷದ ೯ ಮತ್ತು ೧೦ನೇಯ ಪುಷ್ಪಗಳು.

ಬುದ್ಧಿ ಬಂತು ಇದರಲ್ಲಿ ವಿಲಾಯತಿಗೆ ಹೋದ ಹಿಂದಿ ತರುಣ ನೊಬ್ಬನ ಬುದ್ಧಿವಿಕಾಸನವನ್ನು ತೋರಿಸಿರುತ್ತದೆ. ವೇದಾಂತಿಯಲ್ಲಿ, ವೈದ್ಯ ವೃತ್ತಿ ತೊಡಕುಪ್ರಸಂಗವನ್ನು ತೋರಿಸಿರುತ್ತಾರೆ. ಮುದ್ರಣ ತಪ್ಪುಗಳು ಅನೇಕ ಕಡೆಗಳಲ್ಲಿ ಉಳಿದಿವೆ.

5. ಭಾವನಾತ್ರಯಂ. ರಾಜಯೋಗಂ, ಕೋಕಶೋತಂ; ಜೀವತತ್ವಂ, ಹನುಮಾನ ವೇಂಕಬರಾಯ, ಕವಿಯಿಂ ವಿರಚಿತಂ, ಹೊರ ಪೇಟೆ, ತುಮಕೂರು. ಪುಟ ೫೦. ಬೆಲೆ ೦—೬—೦.

ಹಸಿವು!

೧

ಎಲ್ಲಡಗಿ ಕುಳಿತಿರುವೆ?
ಕಳ್ಳಸಂತವಿರುವೆ,
ಪೆಲ್ಲಗೆನಿ ಒಂದಿನ್ನೆ ಸೇದುತಿರುವೆ;
ಎಲ್ಲಿಲ್ಲಿಗೋಡಿದರು ಅಲ್ಲಿ ಬಳುವೆ.

೨

ನಿನ್ನೇಟಪುರಿತಾಳ
ದಿನ್ನೇನು ಸಭದೋರ
ಜನ್ಯಾಯ ಮಾಡುವುದು ಜನಗಳೆಲ್ಲ!
ನಿನ್ನಿರುವಿಕೆಯು ಬಡವರೆದೆಗೆ ಶೂಲ!

೩

ಹೊರ ಕೂಡಿಹಾರದಾ
ಹೊರೆ ಹೊತ್ತು ಸೊರ್ಯಾನಾ
ಉರಿಗೆ ಸೈಯೊದ್ತಿ, ಜೆಪರೀಸಿ ಜನಿದು,
ಕೊರಗುತಿಹರಿಂದೆಲ್ಲ ನಿನ್ನ ಸಡಿದು.

೪

ಹೆ! ಪುಷ್ಟ, ನಿನ್ನೊಡನೆ
ಕಾದಲಾರದೆ, ದೇರೆ
ಹಾದಿಗಾಣದೆ, ವೇಷ್ಟಿನ್ನಕ್ತಿಗಿದ್ದು
ಹೋದ ಸಾಧ್ಯಿಯೆಷ್ಟು-ನಸ್ಸೆಯದು!

೫

"ಳಶ್ಶಿಲ್ಲ, ಶಾಲಿಲ್ಲ
ಹುಚ್ಚೆಯುದು ನೈ ಎಲ್ಲ!
ಉಣ್ಣಾಲಿಕೆ ಗತಿಗಾಣೆ! ಧಿಕ್ಕೆ ಕೊಡಿರಿ"
ಎಸ್ಸುತ್ತ ಕೂಗುವುದು ನಿನಗೆ ಬೆದರಿ.

೬

ನಿನ್ನಂಥ ಧಾರುಣಿಯು
ಬನ್ನಬಟುಕಿದ್ದರೂ—
ಅಣ್ಣ! ನೀಧರದಿದ್ದರಂಥ ಜಗವು
ಇನ್ನತ್ತೆ? ಬಾ! ಬಾಲೊ! ಬಾರೆ

[ಹಸಿವು!

ಬಿ. ನರ್ಸಪ್ಪ ಮಂಗಳೂರು.



ಸಂಪುಟ ೨ ಜೂನ್ ೩೦—೬—೧೯೩೩. ಸಂಚಿಕೆ ೨೬

— ಅನುಕ್ರಮಣಿಕೆ —

	ಪುಟ
ಸಾಹಿತ್ಯಸೇವೆಯಲ್ಲಿ ಸಭ್ಯತೆ.	೧೫
ಶ್ರೀ ಕಾರ್ನಾಡು ಸದಾಶಿವ ರಾಯರು	೧೫
ಲಕ್ಷ್ಮಿಸದ ಕಡಿ ಮನೆ ಸುದುವುದು	೧೫
ಮುಂಗೈಯಾಳಿಕೆ, ಹಸಿವು, ವಿಮರ್ಶೆ	೧೦

ಜೂನ್ ಫಾಲ್ಗುಣ ೩೦ನೇ ಶುಕ್ರವಾರ ೧೯೩೩

ಸಾಹಿತ್ಯ ಸೇವೆಯಲ್ಲಿ ಸಭ್ಯತೆ.

ಸಾಹಿತ್ಯದ ಬೆಳವಣಿಗೆಗಾಗಿ ಅನ್ಯಭಾಷೆಗಳಲ್ಲಿನ ಗ್ರಂಥಗಳನ್ನು ಭಾಷಾಂತರಿಸಿಯಾಗಲಿ ರೂಪಾಂತರಿಸಿಯಾಗಲೀ ನಮ್ಮ ಭಾಷೆಯಲ್ಲಿ ಸೇರಿಸುವುದು ಅನ್ಯಾಯವಲ್ಲ, ಅಗತ್ಯದ ಕಲಸ. ಭಾಷಾಂತರಕ್ಕೆ ಕೈಹಾಕುವುದು ಮೇಲೋ, ರೂಪಾಂತರಿಸುವುದು ಸಮಂಜಸವೋ ಎಂಬ ಪ್ರಶ್ನೆಯು ಆಗಾಗ್ಗೆ ಕೇಳಲುರುತ್ತದೆ. ಮೂಲಗ್ರಂಥವು ಜನ ಸಾಮಾನ್ಯ ಗ್ರಂಥವಾಗಿದ್ದರೆ ಅದನ್ನು ಇದ್ದಕ್ಕಿದ್ದಂತೆ ಭಾಷಾಂತರಿಸುವುದೆ ಎಲ್ಲಕ್ಕಿಂತ ಲೇಸೆಂದು ಎಲ್ಲರೂ ಒಪ್ಪುವರು. ಹೀಗೆ ಭಾಷಾಂತರ ಮಾಡಿದ ಗ್ರಂಥಗಳ ಮುಖಪತ್ರದ ಮೇಲೆ ಮೂಲ ಗ್ರಂಥಕಾರನ ಹೆಸರನ್ನೆ ಅಚ್ಚು ಮಾಡುವುದು ಅಗತ್ಯವೆಂದು ನಮ್ಮ ಕನ್ನಡಿಗರಿಗೆ ಹೇಳಬೇಕಾಗಿದೆ. ವೆಂಕಟಾಚಾರ್ಯರು ಬಂಗಾಳಿ ಕಥೆಗಳನ್ನು ಭಾಷಾಂತರಿಸಿದವರಾದರೂ ಜನರಲ್ಲಿ "ವೆಂಕಟಾಚಾರ್ಯರ ನೊವೆಲು"ಗಳು ಎಂದೆ ಖ್ಯಾತಿಯಾಗಿವೆಯಲ್ಲದೆ, ಬಂಕಿಮಚಂದ್ರರ ಹೆಸರು ಹೆಚ್ಚಿನ ಮಟ್ಟಿಗೆ ಪ್ರಕಟವಾಗಿಲ್ಲ. ಇದರಿಂದ ಮೂಲಗ್ರಂಥಕಾರನಿಗೆ ಸಲ್ಲಬೇಕಾದ ಮನ್ನಣೆಯ ಮಣಿಯನ್ನು ಭಾಷಾಂತರಕಾರನಿಗೆ ಕೊಟ್ಟಂತಾಗುವುದು. ಇದು ಅಸಭ್ಯನಲ್ಲವೇ? ಭಾಷಾಂತರಕಾರನಿಗೂ ಯೋಗ್ಯ ಮರ್ಯಾದೆ ಸಿಗಬೇಕು. ಆದರೆ ಮೂಲ ಗ್ರಂಥಕರ್ತನವ್ವಲ್ಲ.

ರೂಪಾಂತರ ಮಾಡಿದ್ದಲ್ಲಿ ಯಾರ ಕೀರ್ತಿ ಹೆಚ್ಚಿನದೆಂಬುದನ್ನು ಇತ್ಯರ್ಥಿಸುವುದು ಸುಲಭ ಕೆಲಸವಲ್ಲ. ಮೂಲಗ್ರಂಥವನ್ನು ಒಂದು ಮಣ್ಣು ಮುದ್ದೆಯಂತೆ ಇಟ್ಟುಕೊಂಡು ರೂಪಾಂತರಿಸುವನವನು ತನ್ನ ಸ್ವಂತ ಬುದ್ಧಿಚಕ್ರದ ಮೇಲೆ ಅದನ್ನು ತಿರುಗಿಸಿ ಅದಕ್ಕೆ ನವೀನ ಶೋಭೆ, ವಿಶಿಷ್ಟವಾದೊಂದು ಸೌಂದರ್ಯವನ್ನು ಕೊಟ್ಟರೆ ರೂಪಾಂತರಿಕಾರನಿಗೆ ಹೆಚ್ಚಿನವನಾಗುವನು. ಕಾಳಿದಾಸ, ರವೀಂದ್ರನಾಥ, ಶೇಕ್ಸ್ಪಿಯರ್, ಸ್ಕಾಟ್, ಇವರೆಲ್ಲ ಹಳೆಯ ಕತೆಗಳನ್ನು ಗಾದೆಗಳನ್ನು ಹಾಡುಗಳನ್ನು ಆರಿಸಿ ಅವುಗಳಿಗೆ ಪುಟ ಕೊಟ್ಟು ಹೊಸತೊಂದು ಮಿಣ್ಣು ಎಂದೂ ಸ್ಮರಿಸದಂತಹ ಒಂದು ಶೋಭೆಯನ್ನು ಕೊಟ್ಟಿದ್ದಾರೆ. ಅವರು ಜೋರರೆಂದು ಯಾರೂ ಹೇಳಲಿಕ್ಕಿಲ್ಲ.

ಆದರೆ? ಹೌದು, ನಮ್ಮ ಸುತ್ತಮುತ್ತ ಈಗ ತುಳಿ ಹಾಡುತ್ತಿರುವ ಕವಿಗಳು, ಕಾವ್ಯಸಂವಸ್ಥರು, ಸಾಹಿತ್ಯಧುರೀಣರೆಂಬುವರು ಏನು ಮಾಡುತಿದ್ದಾರೆ? ಮೂಲಗ್ರಂಥದ ಹೆಸರುಗಳನ್ನು ಮಾರ್ಪಡಿಸಿ ಘಟನೆಗಳಲ್ಲಿ ಒಂದೆರಡನ್ನು ಹೆಚ್ಚು ಕಡಿಮೆ ಮಾಡಿ ಸ್ವತಂತ್ರ ಗ್ರಂಥಗಳನ್ನು ಸೃಷ್ಟಿಸುತ್ತಿದ್ದಾರೆ, ಮೊತ್ತವಲ್ಲ ಮೂಲಗ್ರಂಥಕಾರನ ನಾಮ ಸ್ಮರಣೆಯನ್ನು ಮಾಡದೆ, ಮಾಡಿದರೂ ಗುಟ್ಟಿನಲ್ಲಿ ಶಪಿಸುವವರಂತೆ ಗೊಣಗುಟ್ಟಾರೆ. ಇವರನ್ನೂ ಪ್ರಾಚೀನ ಕರ್ನಾಟಕ ಕವಿಗಳೂ ಹೋಲಿಸಿರಿ. ಪ್ರತಿಯೊಬ್ಬ ಕವಿಯು ತನಗಿಂತ ಮುಂಚೆ ಸರಸ್ವತಿಯ ಸೇವೆ ಮಾಡಿ ಕೃತಾರ್ಥರಾದವರಿಗೆಲ್ಲ—ಅವರನ್ನು ಅನುಕರಿಸಲಿ ಇಲ್ಲ ದಿರಲಿ— ತನ್ನ ವಂದನೆಗಳನ್ನರ್ಪಿಸುತ್ತಿದ್ದನು. ಅಂಥವರ ಕುಲದಲ್ಲಿ ಹುಟ್ಟಿದ ನಮಗೆ ಸಾಹಿತ್ಯ ಸೇವೆಯಲ್ಲಿ ಇರಬೇಕಾದ ಸಭ್ಯತೆಯೇನೆಂದು ಹೇಳಬೇಕಾಗಿದೆಯೇ?

ಒತ್ತಿ ಹೇಳಬೇಕಾಗಿದೆ. ಮೂಲ ಗ್ರಂಥಗಳಲ್ಲಿನ ಘಟನೆಗಳನ್ನಾಗಲೀ ಪಾತ್ರಗಳ ವಿಶಿಷ್ಟ ಲಕ್ಷಣಗಳನ್ನಾಗಲಿ ಹೆಚ್ಚುಕಮ್ಮಟ್ಟಗೆ ಮಾರ್ಪಾಟು ಮಾಡುವ ಸಂದರ್ಭ ಅಥವಾ ಅಗತ್ಯವಿದ್ದಲ್ಲಿ ಹೆಸರುಗಳನ್ನು ಬೇರೆ ಮಾಡಿದರೂ ಚಿಂತೆಯಿಲ್ಲ. ಮೂಲಗ್ರಂಥವನ್ನು ಹೊತ್ತು ಹೆತ್ತವನ ಹೆಸರನ್ನೇ ಹೊಗಳಬೇಕು. ರೂಪಾಂತರಕಾರನಿಗೆ ಸಲ್ಲತಕ್ಕ ಸನ್ಮಾನವು ತಪ್ಪಿ ಮೂಲಗ್ರಂಥಕಾರನಿಗೆ ಸಂದರೂ ಯೋಚನೆಯಿಲ್ಲ, ದುಃಖವಿಲ್ಲ. ಕೊಸಿರ್ಯಾಟ್ ಕಾವೂನನ್ನು ತಪ್ಪಿಸಿಕೊಳ್ಳುವ ಅಥವಾ ತನ್ನ ಶಂಖವನ್ನು ತಾನೆ ಊದುವ ಆಶೆಯಿಂದ ರೂಪಾಂತರಕಾರರಾಗಲಿ ಭಾಷಾಂತರಕಾರರಾಗಲಿ ಸಾಹಿತ್ಯದ ಸಭ್ಯವರ್ತನೆಯನ್ನು ಮರೆಯಬಾರದಲ್ಲವೆ?

ಶ್ರೀ ಕಾರ್ನಾಡ್ ಸದಾಶಿವ ರಾಯರು.

(ಲೇಖಕ:–ಶ್ರೀ. ಕೊ. ಶಿ. ಕಾರಂತರು.)

ಕ್ರಿ.ಶ. ೧೯೨೦ನೆಯ ಇಸವಿ ಅಕ್ಟೋಬರ ತಿಂಗಳಿನ ಬೀದಿಯೊಂದ ಕಲ್ಲು ಸಂಚಿನಿಯ ವೇಳೆ, ಅಗಸ್ಟ ಕಾಲಕ್ಕೆ ತೀರ ಅಪ್—ಟು—ಡೇಟ್ ಆಗಿದ್ದ ಹೊಸಿಗೆಗಳೊಬ್ಬರನ್ನು ಕಂಡಿದ್ದೆ. ಇವರಾರು ಎಂದು ಬಳಿಯಿದ್ದವ ಕೇಳಿದ ನೆನಪು. ಅದಕ್ಕವರು 'ವಕೀಲ ಕಾರ್ನಾಡು ಸದಾಶಿವ ರಾಯರು' ಎಂದು ಉತ್ತರವಿತ್ತ ನೆನಪು. ಪ್ರಸಿದ್ಧ ವಕೀಲರಾಗಿ ಹೆಸರು ಮಾಡಿದವರೆಂದಿಲ್ಲ. ಮಂಗಳೂರಿನ ಲಿಕ್ಕಿದ್ಧಪತ್ತರ ಸಾಲಿನಲ್ಲಿ ಅವರ ಹೆಸರು ಇತ್ತು. ಆ ಬಳಿಕ ಎರಡನೆಯ ಬಾರಿಗೆ ನನಗವರ ಹೆಸರು ಪರಿಚಯವಾದುದು—'ಹಿಂದೂ' ಪತ್ರಿಕೆಯನ್ನು ಓದುವಾಗಿನಾಗ ಅವರು (೧೯೩೫ನೇ ಇಸವಿ) ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನ ಮುಂಬಯಿ ಜಿಲ್ಲೆಯಿಂದ ಹೋದ ಏಕಮಾತ್ರ ಪ್ರತಿನಿಧಿಗಳು ಎಂಬುದು ತಿಳಿಯಿತು. 'ಈ ಕಾರ್ನಾಡು ಸದಾಶಿವರಾಯರು ಯಾರು?' ಎಂದು ಕೇಳಿದೆ. 'ಇವರು ಅವರೇ'—ಎಂದು ಉತ್ತರ ದೊರೆತಾಗ ಮುಂಬಯಿಯಲ್ಲಿರುವ ಆಕ್ಸ್‌ಫರ್ಡ್ ಕೋಣ ಕರುವಿತ್ತು ಎಂಬಷ್ಟು ಆಗಲೆಗೆಯಲ್ಲಿ ನಾನು ಸಂಬಂಧಪಡದಿರಲಿಲ್ಲಿದ್ದೆ–ಆದರೆ ಇದು ಸಾವಿರ ರೂಪಾಯಿಗಳನ್ನು ಒಗೆಯುವರು. ಈ ಸಾವಿರ ಜನರ ಸಲುವಾಗಿ ಅಡುಗೆ ಮಾಡುವ ಜನರನ್ನು ಹುಡುಕುವರು–ಅಡುಗೆಯು ಆಯಿತು. ನಂಬಿಕೆ ಅಂದರೆ ಅಷ್ಟು ನಂಬಿಕೆ.' ಮುರುಗಳಿಗೆ ಬಂದು, 'ಸ್ವಾಮಿ, ಎಂಥಾ ಅಸಾಮಿಯನ್ನು ನೋಡಿ ಹಣ ಕೊಟ್ಟರಿ?'' ಎಂದರೆ ''ಹಾಗೋ, ನನಗೆ ಕಿಳಿದಿರಲಿಲ್ಲ. ಈ ರೀತಿ ವಂಚನೆ ಮಾಡುವುದೆಂದರೇನು? ಅಬ್ಬಾ ಜನರೇ'' ಅನ್ನುವರು–ಅಷ್ಟೇ, ಮುಗಿಯಿತು.

ಕಾರ್ಯಾಕುರವು ಅವರಲ್ಲಿರುವಂತೆ ನಮ್ಮಲ್ಲಿರುವುದು ಕಡಿಮೆ. ಮಿಾರಿದ ಆತುರಕ್ಕೆ ಸರಿಯಾಗಿ, ತೆರೆದ ಪೆಟ್ಟಿಗೆಯತ್ತ. ಅವರ ಅನುಯಾಯಿಗಳಲ್ಲಿ—ಕೆಲವರು ಕೊನೆಗೆ ಅನುನಾಯಿಗಳಾದರು! ಕೆಲವರು ಕಮ್ಮ ದೃಢ ತಕ್ಕಗಳನ್ನು ಬಿಡಲಾರದೆ ಅವರಿಂದ ದೂರಾದರು. ಕಾರ್ಯಪಟುತ್ವದ ಹಾದಿಗಿಂತ ಅವರಲ್ಲಿನ ಆಕುರದ ವೇಗವು ಬಲು ಹೆಚ್ಚು.

ಮುಂದೆ, ಅವರ ಸರಳತನ, ವಿಶ್ವಾಸಗಳ ಫಲವು ಅವರ ಜೀವನಕ್ಕೆ ಸಂದಿತು. ಅವರು ತೊಡಗಿದ ಕಾರ್ಯಗಳು, ಜನಸಹಾಯ ವಿಲ್ಲದೆ ಕಳ ತಪ್ಪಿ ಬಿದ್ದಂತೆ, ಅವರ ಭಂಡಾರವು ಬರಿದಾಯಿತು. "ಕಾರ್ನಾಡು ಸದಾಶಿವರಾಯರು ದಿವಾಳಿಯಂತೆ!''—ಎಂದವರೂ ಉಂಟು. ಅವರ ದಿವಾಳಿ ಉತ್ಸವಕ್ಕೆ–ಮಹಾತ್ಮಾಜೀಯರು ಅತೀವ್ರಾದ ಪತ್ರವೊಂದನ್ನು ಕಳುಹಿಸಿದ್ದರು! ಅದರಂತೆ ಅವರಾದರೂ ಅಪತ್ಕನ್ನು ಕಾಳ್ಮೆಯಿಂದ ವಹಿಸಿಕೊಂಡರು.

ತಿರುಗಿ—ಎರಡನೆಯ ಬಾರಿಯ ಕಾಯಿದೆಭಂಗದ ಚಳವಳಿಯಲ್ಲಿ ಅವರು ಮುಂದುಗಾಲಿಟ್ಟು ನಡೆದರು. ಮೊದಲಿನ ಅನುಭವಗಳನ್ನು ಎರಡನೆಯ ಬಾರಿಗೆ ಉಣ್ಣುವಂಶೆ ಅವಕಾಶ ಮಾಡಿಕೊಂಡರು. ಇನ್ನೂ ಅವರು ಸುಲಭ ವಂಚಿತರು. ಈಗ ಮೊದಲಿನ ಬಾರಿಗೆ ತುರಂಗವಾಸವು ಲಭಿಸಿತು. ಅವರಿಗೂ ನಾಲ್ಕು ಅಡಿ ಮುಂದಿರಿಸಿ ಜನರು ಸೆರೆಮನೆಯನ್ನು ಸೇರಿ ಬಂದರು—ಆ ಮೇಲೆ ಬಂದುದು ಗಾಂಧಿ–ಅರ್ವಿನ್ ಒಪ್ಪಂದ.

ಎರಡನೆಯ ಸಮರ. ಈಗ ಪ್ರಾಯಶಃ ಮುಂಜಾಗ್ರತೆಯನ್ನು ವಹಿಸಿ, ಮುಂದಾಗಿ ಸೆರೆಮನೆಯನ್ನು ಸೇರಿದರು. ಮುಂದಾಳಾಗಲು ಹೋಗಲಿಲ್ಲ. ಸಾಕಷ್ಟು ಮುಂದಾಳುಗಳು ಆಗಾಗಲೇ ಹುಟ್ಟಿ ಬೆಳೆದು ದರಿದರಬಹುದು. ಈಗ ಜೈಲಿನಿಂದ ಮರಳಿ ಬಂದ ಮೇಲೂ ಸೇವಾ ಕಾರ್ಯದಲ್ಲಿ ನಿರತರಾಗಿರುವರು.

ಉತ್ಸಾಹ, ಆತ್ಮೀಯತೆ ಪ್ರಮಾಣಿಕತೆಗಳು ಅವರಲ್ಲಿ ತುಂಬಾ. ಆದರೆ, ಕಾರ್ಯಪ್ರವಂಚದ ಗತಿಯನ್ನು ಅವರು ನೋಳ್ಕೆಸಿ ನಡೆಯುವುದಿಲ್ಲ. ಕಾರ್ಯಪ್ರವಂಚವು ಓಡುವ ಹಾಸಿಗೆಯಂತೆ ದಕ್ಷಿಣಕೆ ಹೋಗುತ್ತಿದ್ದರೆ, ಅವರು ಅಷ್ಟೇ ವೇಗದಿಂದ ಉತ್ತರಕ್ಕೆ ಅದನ್ನು ಎಳೆಟ್ಟಿ

ಪ್ರಕಾಶದಂತೆ ಅವನ ಮನೆಯತ್ತ ಕಡೆಯಿಂದ ಬೆಳಕು ಬರುತ್ತಲಿದ್ದಿತು; ಭಯಂಕರವಾದ ಶಬ್ದವೂ ಕೇಳಿಸುತ್ತಿದ್ದಿತು. ವೆಂಕಪ್ಪನು ತಿರುಗಿ ನೋಡಲಾಗಿ, ಕಾನು ಕಟ್ಟಿದ್ದ ಗುಡಿಸಲುಗಳಿಗೆಲ್ಲಾ ಬೆಂಕಿ ತಗಲಿ, ಗಾಳಿಯ ರಭಸಿನಿಂದ ತನ್ನ ಮನೆಯತ್ತಕಡೆ ಬೆಂಕಿ-ಕೆಂಡಗಳು ಹಾರುತ್ತಿದ್ದುವು. ''ಅಯ್ಯೋ! ಏನು ಮಾಡಿದೆನು ನಾನು! ಅಲ್ಲೀ ಬೆಂಕ್ಕಿಯನ್ನು ತುಳಿದುಬಿಟ್ಟರಾಗುತ್ತಿತ್ತು. ಏನು ಮಾಡಲಿ? ದೇವರೆ!'' ಎಂದೆನ್ನುತ್ತ ಮೆಲ್ಲಗೆ ಎದ್ದನು. ಬಹಳ ಆಕಕ್ಕೆಯಿಂದ ವಿಳಲಾಗಲಿಲ್ಲ. ಉಸಿರೆಳೆಯುತ್ತಾ ಬಹಳ ದುಃಖದಿಂದ ಮನೆಯತ್ತ ಕಡೆ ತೆರಳಿದನು. ಅಷ್ಟರಲ್ಲಿ ಬಚ್ಚಲಿಗೆ ಬೆಂಗಿ ತಗಲಿ, ಅಡುಗೆ ಕೋಣೆಗೂ ಹೊರಬಾಗಿಲಿಗೂ ತಾಗಿತು. ಮನೆಯಂಗಳಕ್ಕೆ ಕಾಲಿಡಲಾಗಲಿಲ್ಲ. ಜನರು ನೆರೆದಿದ್ದರು! ಅದರೆ, ಏನು ಮಾಡಲು ತಾನೇ ಸಾಧ್ಯ? ನಿರೆಕೆರೆಯವರು ತಮ್ಮ ತಮ್ಮ ಸಾಮಾನುಗಳನ್ನು ಹೊರಕ್ಕೆ ತಂದಿಟ್ಟು, ಅಳಕುಗಳನ್ನು ಹೊರಕ್ಕೆ ಒಟ್ಟದರು. ತರುಣಾಯ ಸುಬ್ಬಣ್ಣನ ಮನೆಗೂ ಬೆಂಕಿ ತಾಗಿತು. ಸ್ವಲ್ಪ ಸಮಯದಲ್ಲಿ ಬೆಂಕಿಯು ಗಾಳಿಯ ರಭಸದಿಂದ ಮನೆಮನೆಗೆ ತಾಗಿ ಅರ್ಧ ಗ್ರಾಮ ಸುಟ್ಟು ಹೋಯಿತು.

ವೆಂಕಪ್ಪನ ಮನೆಯವರೆಲ್ಲರೂ ಬಹು ಪ್ರಯಾಸದಿಂದ ಅವನ ತಂದೆಯನ್ನು ಹೊರಕ್ಕೆ ತಂದರು. ಸ್ವಲ್ಪ ಸಾಮಾನುಗಳನ್ನು ಅಗ್ನಿಯಿಂದ ಉಳಿಸಿದರು. ಹೆಚ್ಚಿನವು ಉರಿಗೆ ತುತ್ತಾದುವು. ದನಕರಗಳೂ ಬಚ್ಚಲು, ಪುಲ್ಲು ರಾಶಿ, ಉಗ್ರಾಣ, ಬನಳಿ, ಗಾಡಿಗಳು ಇವೆಲ್ಲ ಸುಟ್ಟು ಬೂದಿಯಾದವು.

ಸುಬ್ಬಣ್ಣನ ಮನೆಯಲ್ಲೂ ಅಕಳುಗಳೆನ್ನು ಹೊರಕ್ಕೆ ಅಟ್ಟಿ ಸ್ವಲ್ಪ ಸಾಮಾನುಗಳನ್ನು ಉಳಿಸಿದರು.

ಬೆಂಕೆಯು ಇಡೀ ರಾತ್ರಿ ಪ್ರಜ್ವಲಿಸುತ್ತಿತ್ತು. ವೆಂಕಪ್ಪನು ತನ್ನ ಮನೆಯ ಇದಿರಿಗೆ ನಿಂತು, 'ಇದೇನು, ಸ್ನೇಹಿತರೇ! ಏನನ್ನು ನೋಡುತ್ತೀರಿ ತುಳಿಯಿರಿ ಆ ಬೆಂಕೆಯನ್ನು!' ಎಂದು ಮೊದಲಾಗಿ ಹುಚ್ಚನಂತೆ ಮಾತಾಡುತ್ತಿದ್ದನು. ಬೆಂಕೆಯು ಅವನ ಇಡೀ ಮನೆಯನ್ನು ಸುಡುವಾಗ, ಅವನು ನೋಡಲಾರದೆ, ಹುಚ್ಚನಂತೆ ಓಡಿ, ಕೆಲವು ತೊಲೆಗಳನ್ನು ಸೆಳೆದನು. ಹೆಂಗುಸರು ಇದನ್ನು ನೋಡಿ ಚೀರಿದರು. ಅದರೆ, ಅವನು ಇನ್ನೂ ಒಳ ಹೊಕ್ಕು, ಬೆಂಕೆಯ ಮಧ್ಯವನ್ನು ಸೇರಿದನು. ಅಷ್ಟರಲ್ಲಿ ತನ್ನ ಶಾಲು ಜಾರಿದಂತೆ..... ಬಿದ್ದುಬಿಟ್ಟನು. ಅದರೆ, ಅವನ ಮಗಂದಿರು ಒಳ ನುಗ್ಗಿ, ಅವನನ್ನು ಹಿಡಿದು ಹೊರಕ್ಕೆ ತಂದರು. ಬೆಂಕೆಯಿಂದ ಅವನ ಮೈಯೆಲ್ಲಾ ಸುಟ್ಟು ಹೋಗಿದ್ದಿತು. ಆದರೆ ಅವನು ನೀರವ. ಅವನಿಗೆ ನೋವೂ ಇಲ್ಲ; ದುಃಖವೂ ಇಲ್ಲ. 'ಇದೇನು ನೋಡುತ್ತೀರಿ! ಬೆಂಕೆಕಣಗಳನ್ನು ತುಳಿದು ಬಿಡಿರಿ!' ಎಂದೇ ಕೂಗುತ್ತಿದ್ದನು, ಅವನ ಈ ಅವಸ್ಥೆಯನ್ನು ನೋಡಿ ಜನರು ಬೆಂಕೆಯಿಂದ ಇವನಿಗೆ ಹುಚ್ಚು ತಾಗಿತೆಂದರು.

ಮಾರುದಿನ, ಪಠೇಲರ ಮಗನು ವೆಂಕಪ್ಪನಲ್ಲಿಗೆ ಬಂದು, 'ವೆಂಕಪ್ಪಾ! ನಿನ್ನ ತಂದೆಯು ಮರಣಾವಸ್ಥೆಯಲ್ಲಿದ್ದಾನೆ. ಕೊನೆಗಾಲದಲ್ಲಿ ನಿನ್ನನ್ನು ನೋಡಬೇಕೆನ್ನುತ್ತಾನೆ' ಎಂದನು.

ವೆಂಕಪ್ಪನಿಗೆ ಎಲ್ಲವೂ ಮರೆತುಹೋಗಿತ್ತು. 'ಏನು? ಯಾವ ತಂದೆ? ಯಾರನ್ನು ಕರೆಯುತ್ತಾನೆ!''

'ನಿನ್ನ ತಂದೆಯು ಮರಣಾವಸ್ಥೆಯಲ್ಲಿದ್ದಾನೆ. ನಿನ್ನನ್ನು ಕರೆಯುತ್ತಾನೆ. ಬಾ! ಎಂದು ಅವನ ಕೈ ಹಿಡಿದು ಎಳೆಕೊಂಡುಹೋದನು.

ಮನೆಗೆ ಬೆಂಕೆ ತಗಲಿದ್ದಾಗ ಉರಿಯುತ್ತಿದ್ದ ಕೆಲವು ಮರದ ತುಂಡುಗಳು ವೆಂಕಪ್ಪನ ತಂದೆಯ ಮೈಮೇಲೆ ಬಿದ್ದು, ಅವನಿಗೆ ಗಾಯಗಳಾಗಿದ್ದುವು. ಇವರು ಅವನನ್ನು ಪಠೇಲರ ಮನೆಗೆ ಒಯ್ದಿದ್ದರು.

ವೆಂಕಪ್ಪನು ಪಠೇಲರ ಮನೆಗೆ ಬಂದಾಗ ಪಠೇಲರು ಇರಲಿಲ್ಲ. ಅವರ ಹೆಂಡತಿಯೂ ಮಕ್ಕಳೂ ಇದ್ದರು. ವೆಂಕಪ್ಪನ ತಂದೆಯನ್ನು ಜಾಬೆಯ ಮೇಲೆ ಮಲಗಿಸಿದ್ದರು. ಅವನು ವೆಂಕಪ್ಪನನ್ನು ನೋಡಿದೊಡನೆಯೇ ಹತ್ತಿರಕ್ಕೆ ಕರೆದ.

'ಈಗ ಅರಧ್ಗ ಹೆಬ್ಬಿ? ವೆಂಕಪ್ಪಾ?'

'ಅವನದಪ್ಪಾ! ಬೆಂಕೆ ಇಡುವಾಗ ನಾನು ಅವನನ್ನು ನೋಡಿರಲಿಲ್ಲ. ಅಲ್ಲಿಯೇ ನಾನು ಆ ಬೆಂಕೆಯನ್ನು ತುಳಿದು ಬಿಡುತ್ತಿದ್ದೆನೆ ಇದೆಲ್ಲಾ ಆಗುತ್ತಿದ್ದಿಲ್ಲ'.

'ವೆಂಕಪ್ಪಾ ನಾನೀಗ ಮರಣಾವಸ್ಥೆಯಲ್ಲಿದ್ದೇನೆ. ನೀನೂ ನಿನ್ನ ಸತಿ ಬಂದಾಗ ಮರಣವನ್ನು ಎದುರಿಸಬೇಕು. ಈಗಲಾದರೂ ಹೇಳು–ಯಾರದು ತಪ್ಪು?'

ವೆಂಕಪ್ಪನು ಮಾತಾಡತ್ತಿಲ್ಲ; ಬಾಯಿ ಬಿಡಲಿಲ್ಲ. 'ಈಗಲಾದರೂ ದೇವರ ಮುಂದೆ ಹೇಳು! ತಪ್ಪಿಸಿಕೊಳ್ಳಬೇಡ!'

ಆಗ ವೆಂಕಪ್ಪನು ಸ್ಮೃತಿಗೆ ಬಂದನು, ಹಿಂದೆ ತಾನು ಮಾಡಿದ್ದೇ ನೆನಪಿಗೆ ಬಂದಿತು. ಒಡನೆ ಕಣ್ಣು ತುಂಬಿ, ಒಂದೆರಡು ಕಂಬನಿ ತುಟಿಗಳು ಹೊರಗೆ ಬಿದ್ದುವು.....

'ಕ್ಷಮಿಸು, ಅಪ್ಪಾ! ನಾನೇ ಆ ಪಾಪಿ—ನಿನ್ನ ಮತ್ತು ದೇವರ ಮುಂದೆ ನಾನು ಮಹಾ ಪಾಪಿ!'

ಮುದುಕನಿಗೆ ಬಹಳವಾದ ಆನಂದವುಂಟಾಯಿತು. ಅವನು ಪರಮಾತ್ಮನ ನಾಮ ಸ್ಮರಣೆಮಾಡುತ್ತಾ, 'ವೆಂಕಪ್ಪಾ! ಈಗ ನೀನು ಮಾಡಿದೇಕಾರುದೇನು?' ಎಂದು ಕೇಳಿದನು.

ವೆಂಕಪ್ಪನು ಅಳುತಿದ್ದನು.

'ಈಗ ಹೇಗೆ ಜೀವಿಸುವುದೆಂದು ನನಗೆ ತಿಳಿಯದಲ್ಲ!'

ಮುದುಕನು ಬಹಳ ಪ್ರಯಾಸದಿಂದ ಮಾತನಾಡಿದನು–"ಹೇಗಾದರೂ ಪ್ರಯತ್ನಿಸು–ಭಗವಂತನ ಮೇಲೆ ಭರವಸೆ ಇಡು.'' ಮತ್ತೆ ಮುಗುಳುನಗೆ ನಗುತ್ತಾ, "ಬೆಂಕೆ ಇಟ್ಟವರಾರೆಂದು ಹೇಳಿದಿರಿ! ಪರವಾಗಿಲ್ಲ ಒಂದು ತಪ್ಪನ್ನು ನೀನು ಕ್ಷಮಿಸಿದರೆ, ನಿನ್ನ ಎರಡು ತಪ್ಪನ್ನು ದೇವರು ಕ್ಷಮಿಸುವನು'' ಮುದುಕನು ಹೀಗೆಂದು, ಅತೀವ್ರವಿಸುತ್ತಾ ಪ್ರಾಣವನ್ನು ಬಿಟ್ಟನು.

ವೆಂಕಪ್ಪನು ಸುಬ್ಬಣ್ಣನ ವಿಷಯ ಏನೂ ಹೇಳಲಿಲ್ಲ.

ಕಾಲವು ಸವೆದಂತೆ ವೆಂಕಪ್ಪನ ಕೋಪವೂ ಅಳಿಯಿತು. ಸುಬ್ಬಣ್ಣನು ತನ್ನ ಮಾರ್ಪಾಟನ್ನು ನೋಡಿ ಕೌತುಕಗೊಂಡನು. ಮೊದಲು ಅವನು ಭಯಪಟ್ಟನು. 'ಆದರೆ ಕೊನೆಗೆ ವೆಂಕಪ್ಪನು ಮಾತಿನಿರುವುದನ್ನು ಕಂಡು, ಭಯವನ್ನು ಬಿಟ್ಟನು. ಇಬ್ಬರೂ ಜೊತೆಯಾಗಿ ಕೊಳ್ಳುವುದನ್ನು ನಿಲ್ಲಿಸಿದರು. ತಿರಿಗಿ ತಮ್ಮ ಮನೆಗಳನ್ನು ಕಟ್ಟಿದರು

ತಪ್ಪು ಮಾಡಿದವರನ್ನು ಕ್ಷಮಿಸಲು ನಾವೆಲ್ಲಿಯವರು?, ದೇವರು ನೋಡಿ ಕೊಳ್ಳಲಿ.'

ವೆಂಕಪ್ಪನು ಮಾತೆತ್ತಲಿಲ್ಲ.

'ಈಗಲೇ ಒಂದು ಗಾಡಿಯನ್ನು ಗೊತ್ತು ಮಾಡಿಕೊಂಡು ಸರಕಾರೀ ಸ್ಟೇಷನ್ನಿಗೆ ಹೋಗಿ ಎಲ್ಲವನ್ನೂ ತೀರಿಸಿಬಿಡು. ಸುಬ್ಬಣ್ಣನ ಮನೆಗೆ ಹೋಗಿ ಕ್ಷಮಾಪಣೆ ಬೇಡಿ, ನಾಡದು ಕೃತ್ತಾಬ್ದಿಮಿಗೆ ನಮ್ಮ ಮನೆಗೆ ಔತಣಕ್ಕೆ ಬರಹೇಳು.'

ವೆಂಕಪ್ಪನಿಗೆ ಇದೆಲ್ಲ ನಿಜವೆಂದು ತೋರಿತು. ಆದರೆ ಸುಬ್ಬಣ್ಣನ ಹತ್ತಿರ ಕ್ಷಮಾಪಣೆಯನ್ನು ಬೇಡುವುದು ಮಾತ್ರ ಅಸಾಧ್ಯನಾಗಿ ತೋರಿತು.

'ಆದರೆ ಮುದುಕನು ಮತ್ತೂ ಮತ್ತೂ (ಹೋಗು, ಬೆಂಕಿ ಹಚ್ಚುವ ಮೊದಲೇ ಅದನ್ನು ನೋಂದಿಸಿ ಬಿಡು ' ಎಂದು ಹೇಳಿದನು

'ಮುದುಕನು ಇನ್ನೇನೋ ಹೇಳಲು ಹೋದನು ಆದರೆ ಗುಡ್ಡೆಕೈ ಹೋಗಿದ್ದ ಹೆಂಗುಸರು ಹಿಂದಿರುಗಿದರು ಸುಬ್ಬಣ್ಣನಿಗೆ ಶಿಕ್ಷೆಯಾದುದು ಅವರಿಗೆ ತಿಳಿದೇ ಇದ್ದಿತು ಸಂಜೆಯಲ್ಲೇ ಅವನ ಮನೆಯ ಹೆಂಗುಸರೊಡನೆ ಇನ್ನೊಂದು ಹೊಸ ಜಗಳವಾಗಿದ್ದಿತು ಸುಬ್ಬಣ್ಣನು ನ್ಯಾಯಾಧೀಶನಲ್ಲಿ ಹೊಸತೊಂದು ಅರ್ಜಿ ಮ್ಯಾಡಿಸಿ ವೆಂಕಪ್ಪನನ್ನು ಸೆರೆಗೆ ಕಳುಹಿಸುವನೆಂದೂ, ತಾಲೆಯ ಉಪಾಧ್ಯಾಯ ತೀನಯ್ಯ ಸ್ವಾಮಿಯಿಂದ ಒಂದು ಅರ್ಜಿ ಮಾಡಿಸಿರುವನೆಂದೂ ಅವರೆಲ್ಲ ವಾರ್ತೆ ತಂದರು ಇದರಿಂದ ವೆಂಕಪ್ಪನ ಹೃದಯವು ತಿರಿಗಿ ವೈರತ್ವದಿಂದ ತುಂಬಿತು

ವೆಂಕಪ್ಪನಿಗೆ ಹತ್ತಿರಿನಲ್ಲಿ ತುಂಬ ಕೆಲಸವಿದ್ದುದರಿಂದ ಅವನು ಹೊರಟು ಹೋದನು. ಹುಲ್ಲುರಾಶಿಯ ಬಳಿ ಸ್ವಲ್ಪ ಗುಡಿಸುವಾಗ 'ಕಕ್ಕಲಾದುದರಿಂದ ಗದ್ದೆಯಿಂದ ಹುಡುಗರು ಕೋಣಗಳನ್ನು ಅಟ್ಟಿಕೊಂಡು ಬಂದರು. ವೆಂಕಪ್ಪನು ಅವರನ್ನು ಗದ್ದೆ ಹೊಲಗಳ ವಿಷಯ ಪ್ರಶ್ನಿಸಿ, ನೇಗಿಲಿನಲ್ಲಿ ತುಂಡಾಗಿ ಹೋದ ಸ್ವಲ್ಪ ಭಾಗಗಳನ್ನು ಸರಿಪಡಿಸುತ್ತಾ ಇರುವಷ್ಟರಲ್ಲಿ ಬಹಳ ಕತ್ತಲಾದುದರಿಂದ, ನೇಗಿಲು ಮೊದಲಾದುವುಗಳನ್ನು ಅಲ್ಲಿಯೇ ಬಿಟ್ಟು, ಪಟ್ಟೆಗೆ ಹೋಗಿ, ದನಕರುಗಳಿಗೂ ಕೋಣಗಳಿಗೂ ಹುಲ್ಲು ಹಾಕಿ, ಸೆಗಣೆಯನ್ನು ಬತ್ತಲ್ಪಟ್ಟಿ ಮಾಡಿ, ಬಾಗಿಲು ಹಾಕಿ ಕೇಲು ಸಿಲುಕಿಸಿದನು ಮತ್ತು ಹೊರಗಿದ್ದ ನೇಗಿಲನ್ನು ಎತ್ತಿಕೊಂಡು ಮನೆಯ ಕಡೆ ಬರುವಷ್ಟರಲ್ಲಿ ಬೀಲಿಯ ಆ ಕಡೆ ಸುಬ್ಬಣ್ಣನು, 'ಅವನು ಯಾವ ಳೆಲಸಕ್ಕೆ ಯೋಗ್ಯನು! ಕೊಲ್ಲುವುದಕ್ಕೆ ಮಾತ್ರ!' ಎನ್ನುವುದು ಕೇಳಿಸಿತು ವೆಂಕಪ್ಪನು ಮಾತೆತ್ತದೆ, ಮನೆಯೊಳಗೆ ಕಾಲಿಟ್ಟನು ಊಟಕ್ಕೆ ತಯಾರಾಗುತ್ತಿದ್ದಿತು. ಮಿನೆಯಿನೆ ದೀಪವೊಂದು ಉರಿಯುತಿದ್ದಿತು ಅದರ ಬೆಳಕಿನಲ್ಲಿ ಒಬ್ಬನು ನೇಯುತ್ತಿದ್ದನು ಮತ್ತೊಬ್ಬನು ವಸ್ತ್ರವನ್ನು ಹೊಲಿದುಕೊಡುತ್ತಿದ್ದನು. ವೆಂಕಪ್ಪನಿಗೆ ಬಂದು ಗಳಿಗೆ ಮಾತ್ರ ಸಂತೋಷವಾಯಿತು, ಆದರೆ, ಆ ಕ್ಷಣದಲ್ಲಿ ಸುಬ್ಬಣ್ಣನ ಕ್ರೂರ ಮುಖವು ಅವನ ಎದುರಿಗೆ ಬಂದು ನಿಂತಿತು. ಇದರಿಂದ ಅವನು ಬಹಳ ವೇಸರದಿಂದ ಹೊರಕ್ಕೆ ಬಂದು, ಜಗಲಿಯ ಮೇಲೆ ಕುಳಿತುಕೊಂಡನು

ಆಗಲೂ ಸುಬ್ಬಣ್ಣನದೇ ಚಿಂತೆ,—'ನಿನ್ನ ಪ್ರಿಯ ವಸ್ತುವೊಂದು ಇದಕ್ಕೆಂತಹ ಜೆಚ್ಚು ಉರಿಯದೆ ಇರಲಾರದು!' ಎಂಬ ವಚನವು ಅವನನ್ನು ಪದೇಪದೇ ಬಾಧಿಸ ತೊಡಗಿತು. 'ಮೊದಲೇ ಕಗ್ಗತ್ತಲಿನ ರಾತ್ರೆ, ಉತ್ತರ ದಿಕ್ಕಿನಿಂದ ಗಾಳಿಯೂ ಪ್ರಬಲವಾಗಿ ಬೀಸುತ್ತಿತ್ತು. ಎಲ್ಲಾ ಸಾವಾಸಾನುಗಳೂ ಚೆನ್ನಾಗಿ ಒಣಗಿವೆ ಸುಬ್ಬಣ್ಣನು ಯಾವ ಕಾರ್ಯಕ್ಕೂ ಹಿಂಜರಿಯುವವನಲ್ಲ ಎಲ್ಲಿಯಾದರೆ ಬೆಂಕೆಯನ್ನಿಟ್ಟರೆ . . ಛೆ ಛೆ. ಆವನಿಗೆ ಅಷ್ಟು ಧೈರ್ಯ ಇರಲಿಕ್ಕಿಲ್ಲ —ಇವೇ ಮೊದಲಾದುವುಗಳನ್ನು ಅವನು ಆಲೋಚಿಸುತ್ತಿದ್ದನು ಕೂಡಲೆ ಅವನೆದ್ದು, ದೀಪಿಯ ಬಾಗಿಲ ವರೆಗೂ ಬಂದು, 'ಮನೆಯ ಮತ್ತು ಹತ್ತಿರಿನ ಒಂದು ಸುತ್ತು ತೆಗೆದು ಬಿಡುತ್ತೇನೆ,' ಎಂದೆನಿಸಿ ಬಾಗಿಲನ್ನು ದಾಟಿ, ಮೆಲ್ಲಗೆ ಸುತ್ತಲೂ ನೋಡಿದನು ದೂರದ ಪೇಲಿಯನ್ನು ಯಾರೋ ಹಾರಿ, ತಿರಿಗಿ ಹೋದಂತೆ ಅವನಿಗೆ ಕಂಡಿತು ವೆಂಕಪ್ಪನು ಅಲ್ಲಿ ನಿಂತು ಸದ್ದಿಲ್ಲದೆ ಕೇಳಿದನು, ನೋಡಿದನು ಎಲ್ಲವೂ ಮೌನವಾಗಿತ್ತು ಗಾಳಿಗೆ ಮರಗಳ ಎಲೆಗಳು ಅಲುಗಾಡುವ ಶಬ್ದವಲ್ಲದೆ ಇತರ ಯಾವ ಶಬ್ದವೂ ಕೇಳಿಸಲಿಲ್ಲ ದೂರದ ಹಾಳು ನೇಗಿಲೂ ಎರಡು ಮೂರು ಮರದ ಕೊರಡುಗಳೂ ಹೊರತು ಇನ್ನಾವ ವಸ್ತುವೂ ಕಂಡು ಬರಲಿಲ್ಲ.

'ನನ್ನ ಭ್ರಾಂತಿಯಾಗಿರಬೇಕು ಅದರೂ ಜಿಂತೆಯಿಲ್ಲ. ಒಂದು ಸುತ್ತು ತೆಗೆದು ಬರುವೆನು' ಎಂದು ಅವನು ತಿರಿಗಿ ಎಣಿಸಿ ಮೆಲ್ಲನೆ ಹುಲ್ಲು ರಾಶಿಗಳ ಬಳಿ ಬಂದನು ದೂರದ ನೇಗಿಲಿನ ಬಳಿ ಜಗ್ಗನೆ ಕ್ಷಣಮಾತ್ರಕ್ಕೆ ಒಂದು ಬೆಳಕು ಕೆಡಿಯೂ ಕಂಡಿತು. ಆದರೆ ಆ ಕೆಡಿಯು ಕೂಡಲೇ ವೆಂಕಪ್ಪನ ದೃಷ್ಟಿಪಥವನ್ನೂ ಆತುರತೆಯನ್ನೂ ತನ್ನ ಕಡೆಗೆ ಸೆಳೆಯಿತು ಅವನ ಕಾಲುಗಳು ಅವನನ್ನು ಮುಂದಕ್ಕೊಯ್ಯಲಿಲ್ಲ ಕೂಡಲೆ ಜಗ್ಗನೆ ತಿರಿಗಿ ಬೆಂಕಿ ಕಂಡಿತು, ಬೆಳಕೆನಲ್ಲಿ ತಲೆಗೆ ಮುಂಡಾಸು ಸುತ್ತಿದ್ದ ಒಂದು ವ್ಯಕ್ತಿಯೂ ತೋರಿತು ದೆನ್ನು ವೆಂಕಪ್ಪನ ಕಡೆಗೆ ತಿರುಗಿನಲ್ಪಟ್ಟಿತ್ತು ವ್ಯಕ್ತಿಯು ಸ್ವಲ್ಪ ಹುಲ್ಲನ್ನು ಕೈಗೆತ್ತಿಕೊಡಿದು ಹಿಡಿಯಿತು ವೆಂಕಪ್ಪನ ಹೃದಯವು ಧಡಧಡನೆ ಹೊಡೆಯಿತು ಅವನು ರೋಷಾವೇಶನಾಗಿ ನಡುಗುತ್ತಾ ಒಂದೇ ಸವನೆ ವ್ಯಕ್ತಿಯದ್ದಲ್ಲಿಗೆ ಓಡಿದನು, 'ಈ ಸಲ ಅವನನ್ನು ಬಿಡಲಾರೆನು!' ಎಂದು ಅವನು ಮನಸ್ಸನ್ನು ಗಟ್ಟಿ ಮಾಡಿಕೊಂಡು, 'ಈ ಕೃತ್ಯವನ್ನು ಮಾಡುವಾಗಲೇ ಅವನನ್ನು ಹಿಡಿದರಾಯಿತು! ಎಂದೆನಿಸಿದನು

ಅಷ್ಟರಲ್ಲಿ, ಸ್ವಲ್ಪ ದೂರದಲ್ಲೆ ಇನ್ನೊಂದು ಬೆಂಕಿ ಉಣಹುಲ್ಲು ರಾಶಿಗೆ ಬೇಗನೇ ಹಿಡಿದು, ಸಾಮಾಗ್ರಿಗಳನ್ನು ಇಡುವ ಕೋಣೆಗೂ ತಗುಲಿತು ಬೆಂಕೆಯ ಬೆಳಕಿನಲ್ಲಿ ಸುಬ್ಬಣ್ಣನು! ವೆಂಕಪ್ಪನು ಕೋಪದ ಭರದಲ್ಲಿ ಹಾರಿ ಹಾರಿ, ''ಈಗಲೇ ಇವನ ಎಲುಬು ಮುರಿಯುವೆನೆನ್ನ—ಎಂದು ಅವನನ್ನು ಹಿಂದಿನಿಂದ ಹಿಡಿಯುವಷ್ಟರಲ್ಲಿ ಸುಬ್ಬಣ್ಣನು ತಪ್ಪಿಸಿ ಕೊಂಡು ಬಹಳ ವೇಗದಿಂದ ಬಂದ ಹಾದಿಯಲ್ಲಿ ಓಡಿದನು

'ನನ್ನನ್ನು ತಪ್ಪಿಸಲಾರೆ!' ಎಂದು ಕೂಗಿಕೊಂಡು ವೆಂಕಪ್ಪನೂ ಅವನ ಹಿಂದೆ! ಅವನ ದೋತರವನ್ನು ಹಿಡಿದೇ ಬಿಟ್ಟನು ಆದರೆ ದುರ್ದೈವ! ಅಷ್ಟು ದೋತರದ ತುಂಡು ಮಾತ್ರ ಅಈನ ಕೈಯಲ್ಲಿ, ಕೆಳಕ್ಕೆ ಬಿದ್ದು ಬಿಟ್ಟನು ಆದರೆ ಕೂಡಲೇ ಎದ್ದು, 'ಅಯ್ಯೋ' ಕಳ್ಳರು! ಖೂನಿ ಎಂದು ಕೂಗಿ ಹಿಂಬಾಲಿಸಿದನು ಆದರೆ, ಸುಬ್ಬಣ್ಣನು ದೇಲಿ ಹಾರಿ ತನ್ನ ಬಾಗಿಲನ್ನು ಸೇರಿದನು ವೆಂಕಪ್ಪನು ಅವನನ್ನು ಹಿಡಿಯುವಷ್ಟರಲ್ಲಿ ನಿನೊ ಒಂದು ಭಾರವಾದ ವಸ್ತು ಅವನ ನೆತ್ತಿಯ ಮೇಲೆ ಹೊಡೆದಂತಾಯಿತು, ಸಿಡಿಲು ಬಡೆದಂತೆ ಅವನಿಗೆ ಭಾಸವಾಯಿತು ಸುಬ್ಬಣ್ಣನು ಹತ್ತಿರವಿದ್ದ ಒಂದು ಮರದ ಕೊರಡಿನಿಂದ ಅವನ ತಲಗೇ ಬಡಿದಿದ್ದನು

ವೆಂಕಪ್ಪನು ಕೆಳಕ್ಕೆ ದಿದ್ದುಬಿಟ್ಟನು, ಎಂತಹ ಗಾಢಾಂಧಕಾರ! ಮೂರ್ಛೆ ತಿಳಿದೆದ್ದು ನೋಡುವಾಗ ಸುಬ್ಬಣ್ಣನು ಇಲ್ಲ ಸೂರ್ಯನ

ಓಡುತ್ತಿದ್ದಾರೆ. ಓಡಿದ ಆಯಾಸ ಅವರಿಗೆ ತುಂಬಾ, ಸಾಗಿದ ಹಾದಿ ಮಾತ್ರ ಕಾಣದು.

ಬಡವರ ಸೇವೆ ಮಾಡುವ ಆತುರ ತುಂಬಾ. ಬಡವನೊಬ್ಬನ ಗೋಳನ್ನು ಕೇಳಿಯೇ, ಒಂದು ಕೊಡ ತುಂಬ ಕಣ್ಣೀರನ್ನು ಸುರಿಯ ಬಲ್ಲರು, ಆದರೂ ಜಗತ್ತಿನ ಸುಧಾರಣೆಯು ನಾಲಿಗೆಗಳಿಂದಾಗಲಿ ಬರಿ ಕಣ್ಣೀರಿನಿಂದಾಗಲಿ ಆಗದೆಂಬ ವಿಶ್ವಾಸವು ಹೋಗಿಲ್ಲ. ಅವರು ಬಡತನದ ಸದ್ದಿಗಾಗಿ ಸುರುಗಿದರು, ಅದರ ಆಳನನ್ನು ಇಳಿಯ ಬೇಕು ಅವರೂ ಈಗ ಬಡವರೇ! ಅವರ ಆ ಶ್ರೀಮಂತಿಕೆಗೆ ಇದು ತೀರ ಹಿಚ್ಚಿನ ಬಡತನ—ಆದರೆ ಈ ಬಡ ಜಗತ್ತಿನ ಪಾಲಿಗೆ ಅದು ಶ್ರೀಮಂತಿಕೆಯಾಗಿಯೇ ಇದೆ! ಅಂಥ ಆಳನನ್ನು ಇಳಿದರೆ, ಆಗ ಕರ್ತವ್ಯದ ಸ್ವರೂಪ ತಿಳಿಯುವುದು ಅವರು, ಬೆರಳಿನಿಂದ ಮಂಧರ ವನ್ನು ಎತ್ತಲು ಬಯಸುವರು ಅಷ್ಟು ಕರುಣೆಯಿದೆ ಆದರೆ, ಕೃಷ್ಣನಿಗೆ ಅದು ಸಾಧ್ಯವಾಯಿತಂತೆ— ನಾವು ಸುಧಾಕರು, ಸ ಧಾನರ ಹಾದಿಯು ಕೃಷ್ಣರ ಹಾದಿಯಲ್ಲ

ಅವರು ಸೃಷ್ಟಿಯನ್ನು ಎರಡು ವರ್ಗವಾಗಿ ವಿಭಾಗಿಸುವಂತೆ ಕಾಣುವುದು ಒಂದು ವಿಭಾಗದ ಜನರು ದೇವತೆಗಳೇ—ಇನ್ನೊಂದು ವಿಭಾಗದವರು ದಾನವರೆನ್ನಲಾರೆ—'ಪಡಪೋಷಿಗಳು'! ನಡುವಿನ ತರಗತಿಯ ಜನರಿರುವ ತಿಳಿವಳಿಕೆ ಅವರಿಗಿರುವುದಿಲ್ಲ—ಅಥವಾ ಈ ಎರಡರ ಮಿಶ್ರ ಲೋಹವೇ ಅಧಿಕವಾಗಿರುವುದೆಂದು ಅವರು ಅನುಭವ ದಿಂದ ತಿಳಿದಿಲ್ಲ ತಮ್ಮ ದೇವತೆಗಳನ್ನು ಕಂಡು ಅವರು ಪೂಜಿಸುವರು ವಿಚಿಕಿತ್ಸಾ ಅಣಿಸಸ್ಕೀಯವರು ಆದರೆ 'ಪಡಪೋಷಿ' ಗಳಿಗೆ ಹಾನಿಯಂಸನ್ನು ಬಗೆಯುವ ಹವ್ಯಾಸವಿಲ್ಲ

ಅಂತು ಉಪಸಂಹಾರದ ಕೆಲವು ಮಾತುಗಳನ್ನು ಹೇಳುವುದಾದರೆ ಹೀಗೆ ನಮ್ಮ ಜಿಲ್ಲೆಯಲ್ಲಿ ಳ್ಳರಜೀಯ ತ್ಯಾಗಿಯಾದವರೊಬ್ಬರಿದ್ದರೆ ಅದು ಅವರೇ ಒಂದು ಕಾಲದಲ್ಲಿ ಡಾಂಭಿಕತೆಯು ಎಸ್ಪಿತ್ತು (ಎಸ್ಪಿತ್ತೆಂದು ನನಗೆ ಅನಿಸಿತ್ತೊ) ಅಷ್ಟೇ ಸರಳತೆಯು ಅವರಲ್ಲಿದೆ ಮುಖಂಡರಾದರೂ, ಅವರು ಆಳನ್ನು ಅರಸಿನಿಂದ ಬೇರೆ ಮಾಡುವು ದಿಲ್ಲ ಕುಗ್ಗಿದ ಕೈಯಾದರೂ ಹಿಗ್ಗಿದ ಔದಾರ್ಯವು ಸಾಯಲಿಲ್ಲ ಅನರ ಕರಿ ವಿಾಸೆಯು ನೆರೆತು ಬಿಳಿಯಾಯಿತು ಕಾಲಚಕ್ರವು ಪರಿ ಳಿತವನ್ನು ತೋರಿಸಿ ಹೋಗುವಂತೆ ಅವರ ಮುಂದೆ ತಿರುಗಿತು ಆದರೆ ಅವರನ್ನೂ ನೋಡುತ್ತಿದ್ದಾರೆ, ಅದನ್ನೆ ಕಾಣುತ್ತಿದ್ದಾರೆ ಆದರೆ ಅದು? ಕಣ್ಮುಂಚಿರುಗಿದೆ ಎಂಬುದನ್ನು ಕಡಿಸರಲ್ಲ

ರಾಜಕೀಯ ವಿಷಯಗಳಲ್ಲಿ ಅವರ ಅಭಿಪ್ರಾಯವನ್ನು ಅವರಾಗಿ ಹೇಳುವುದಿಲ್ಲ ನಾವು ಕೇಳಿದರೆ ಹೇಳುವರು ನಮ್ಮಿಂದಲೂ ಕೇಳಿ ರ ಈ ವಿಷಯದಲ್ಲಿ ಸೋಲು ಅವರಿಗೇ ಹೆಚ್ಚು ಆದರೆ—ಅವರು ಒಂದು ಕೈಕ ಭನನ್ನು ಕಾಲಿಡಲು ಯತ್ನಿಸುತ್ತಿರುವ ರಾದರಿಂದ ಈ ವಿಚಾರಗಳ ತಳಗುಳ ನ ಳವು ಅವರ ಹಾಯಿಯನ್ನು ಹರಿಯ ನಂತಿಲ್ಲ

ಗೆಳತನಕ್ಕೆ ತಕ್ಕವರು, ಅಭಿಮಾನಕ್ಕೆ ತಕ್ಕವರು—ಶ್ರೀ ಸದಾಶಿವ ರಾಯರು ಅವರನ್ನು ಅಖಿಲ ಕರ್ನಾಟಕ ರಾಜಕೀಯ ರಂಗದಲ್ಲಿ ಮೆರೆಯಿಸಿದವರು—ಟು ನೆರೆದವರಲ್ಲಿ, ಅನರಂಥ ಪ್ರಾಮ್ಯಾಣಿಕ ವ್ಯಕ್ತಿಗಳು ಕೇನಲ ಮುಷ್ಯಯಲ್ಲಿ ಇಣಿಸುವಷ್ಟು ಜನರು ಸಿಕ್ಕಿಲ್ಲ ಕಾರ್ನಾಡ ಸದಾಶಿವರಾಯರು ಅಖಿಲ ಕಾರ್ನಾಡ ಸದಾಶಿವರಾಯರೂ ಅವರಿಂದಾಗಿ ಭವಿಷ್ಯದ ದಿಗಂತದಲ್ಲಿ ಬೆಳಕು ಕತ್ತಲೆರಡೂ ಕುಂಠಾಗಿ ಲಿಲ್ಲ ಅವರನ್ನು ಗದ್ದುಗೆಯಲ್ಲಿಟ್ಟು ಹಗೆಯಿದ್ದವರೂ ನಿಜವಾದ ಅರಸುತನ ಮಾಡಬಹುದು.

ಎಷ್ಟು ಕೊರತೆ, ದೌರ್ಬಲ್ಯಗಳಿದ್ದರೂ ಅವರ ಸೌಜನ್ಯವು ಅವರನ್ನು ಕಾಯುವಂಥದ್ದು

ಲಕ್ಷಿಸದ ಕೆಡಿ ಮನೆ ಸುಡುವುದು.

(ಟೋಲ್‌ಸ್ಟೊಯ್ಯಯವರ "A spark neglected burnt the house" ಎಂಬ ಕಥೆಯ ಆಧಾರದಿಂದ)

ವೆಂಕಪ್ಪನ ಬಾಳು ನಿಜವಾಗಿಯೂ ಬಡತನದಿಂದ ತುಂಬಿದ್ದರೂ ಸಂತೃಪ್ತಿಯುಳ್ಳದು; ಅವನಿಗೆ ಉಳುವುದಕ್ಕೆ ಭೂಮಿ ಇದ್ದಿತು; ಇರುವು ದಕ್ಕೆ ಮನೆಯೂ ಹಿತ್ತಿಲೂ ಇದ್ದುವು. ಮತ್ತಿರು ಜನ ಮಕ್ಕಳಲ್ಲಿ ಮೊಮ್ಮಕ್ಕ ಯವನಿಗೆ ಮದುವೆಯಾಗಿದ್ದಿತು; ಎರಡನೆಯವಳು ತೀರ ತರುಣನು ತಿರಿ ಯವನು ಮೊನ್ನೆ ತಾನೆ ದನಕರುಗಳನ್ನು ಗುಡ್ಡೆಗೆ ಅಟ್ಟುವುದಕ್ಕೂ ಗದ್ದೆ ಉಳುವುದಕ್ಕೂ ಕಲಿತಿದ್ದನು. ಮನೆಯ ಹೆಂಗಸರು—ಎಂದರೆ, ವೆಂಕಪ್ಪನ ಹೆಂಡತಿಮತ್ತು ಸೊಸೆ,—ಇವರು ದಿಡುವಿದ್ದಾಗ ನೂಲು ನೇತು ಸಂಸಾರಕ್ಕೆ ಬೇಕಾದ ಬಟ್ಟೆಬರೆಗಳನ್ನು ಮಾಡುತ್ತಿದ್ದರು ಹೀಗೆ ವೆಂಕಪ್ಪನ ಸಂಸಾರವು ಸುಲಭದಲ್ಲಿ ಸಾಗುತ್ತಿದ್ದಿತು ವೆಂಕಪ್ಪನ ಮುದಿ ತಂದೆ ಯೊಬ್ಬನು ಮಾತ್ರ ಜ್ವರದಿಂದ ಎಳು ವರುಷಗಳಿಂದ ಹಾಸಿಗೆ ಹಿಡಿದು ಯಾವ ಕೆಲಸವನ್ನೂ ಮಾಡದವನಾಗಿದ್ದನು.

ವೆಂಕಪ್ಪನಿಗೆ ಸುಬ್ಬಣ್ಣನು ನೆರೆಯವನು. ವೆಂಕಪ್ಪನ ತಂದೆಯು ಮನೆಯ ಯಜಮಾನನಾಗಿದ್ದಾಗ ಸುಬ್ಬಣ್ಣನ ತಂದೆಯು ದೇವಂತನಾಗಿ ದ್ದನು. ಎರಡು ಕುಟುಂಬಗಳು ಅನ್ಯೋನ್ಯ ಪ್ರೀತಿಯಿಂದ ಇದ್ದುವು. ಕೊಯ್ಯುವ ಕಾಲ ಬಂತೆಂದರೆ, ಒಬ್ಬನು ಇನ್ನೊಬ್ಬನ ತೋಟಕ್ಕೆ ಹೋಗಿ ಸಹಾಯವನ್ನು ಮಾಡುವುದೂ ಒಬ್ಬನ ದನ ಕರು ಈಯುತಿಂದರೆ ಮತ್ತೊಬ್ಬನು ಬೇಗ ಹೋಗಿ ವೈದ್ಯನನ್ನು ಕರೆತರುವುದೂ ವಾಡಿಕೆಯಾಗಿದ್ದಿತು ಮನೆಯ ಹೆಂಗಸೆರೂ ಹಾಗೆಯೇ ಇದ್ದರು, ಒಬ್ಬನ ದನ ಮತ್ತೊಬ್ಬನ ಹೊಲಕ್ಕೆ ಮೇಯ ಹೋದರೆ, ಮನೆಯ ಹೆಂಗಸರು ಬಂದು ಅದನ್ನು ನೆರೆ ಯವರ ಪಟ್ಟಿಗೆ ಅಟ್ಟಿ, 'ಸೋಡಿ, ನಿಮ್ಮ ದನ, ನಮ್ಮ ಹೊಲ ಹಾಳು ಮಾಡುತ್ತಿದೆ' ಎಂದು ಹೇಳುವುದಲ್ಲದೆ ಸಿಟ್ಟುಗೊಳ್ಳುತ್ತಿದ್ದಿಲ್ಲ, ಈ ರೀತಿಯು ಬಂಧುತ್ವೋಮದಲ್ಲಿ ಈ ಕುಟುಂಬಗಳು ಬಡತನದಲ್ಲಿದ್ದರೂ ಸುಖ ವಾಗಿಯೇ ವಾಸಿಸುತ್ತಿದ್ದುವು.

ಇದೆಲ್ಲ ತಾತಂದಿರ ಕಾಲದಲ್ಲಾಯಿತು. ಈಗಿದು ಮಗಂದಿರ ಕಾಲ ಆ ಅನ್ಯೋನ್ಯಭಾವವು ತೀರ ಪರಿವರ್ತನೆ ಹೊಂದಿತು—ಒಂದು ಚಿಕ್ಕ ತಪ್ಪಿಗಾಗಿ ಅವರೆಲ್ಲ ಹೊಡೆದಾಡಿಕೊಂಡರು

ವೆಂಕಪ್ಪನ ಸೊಸೆಯು ತವರುಮನೆಯಿಂದ ಒಂದು ಪ್ರೇಂಛೆಯನ್ನು ತಂದಿದ್ದಳು ಅದು ಪ್ರತಿದಿನವೂ ಕುಲ್ಲುಗಾಡಿಯ ಬಳಿ ಬಂದೊಯ್ದು

ಯಿಟ್ಟುಮುನ್ನಿಡುತ್ತಿದ್ದಿತು. ಒಮ್ಮೆ ಅದು ಸುಬ್ಬಣ್ಣನ ದೇಲಿ ಹಾರಿ ಅಲ್ಲಿ ಪಟ್ಟಿ ಕೊಟ್ಟಿ ಇಟ್ಟಿತು. ವೆಂಕಪ್ಪನ ಸೊಸೆ ಅದರ ಕೂಡಿನ್ನು ಕೇಳಿದರೂ ಹೋಗದೇ ಒಂದು ಕೆಲಸದಲ್ಲಿದ್ದುದರಿಂದ ಅಲ್ಲಿಗೆ ಹೋಗಲು ಆಗಲಿಲ್ಲ. ಆದೇ ಸಂಜೆ ಅವಳು ಮೊಟ್ಟೆಯನ್ನು ಪ್ರತಿದಿನ ಇಡುವಲ್ಲಿ ಹುಡುಕಿದಳು; ಆದರೆ ಸಿಗಲಿಲ್ಲ. ಸುಬ್ಬಣ್ಣನ ಹತ್ತಿಲಲ್ಲಿ ಇರಬೇಕೆಂದು ಎಣಿಸಿ ಅಲ್ಲಿಗೆ ಹೋದಳು. ತನ್ನ ಕೇಣಿಯು ಅಲ್ಲಿದ್ದಿತು, ಆದರೆ ಮೊಟ್ಟೆ ಇರಲಿಲ್ಲ. ಸುಬ್ಬಣ್ಣನ ತಾಯಿಯ ಬಾಗಿಲಲ್ಲೇ ಅವಳನ್ನು ಎದುರಾಗಲು, ವೆಂಕಪ್ಪನ ಸೊಸೆಯು ಅಬ್ಬೇ, ನಮ್ಮ ಜೀವವು ನಿನ್ನ ದೇಲಿ ಹಾರಿ ನಿಮ್ಮ ಹಿತ್ತಲಿಗೆ ಬಂದುದನ್ನು ನೋಡಿದಿರಾ?—ಇಲ್ಲಿ ಅದು ಮೊಟ್ಟೆ ಇಡಲಿಲ್ಲವೇನು?' ಎಂದು ಕೇಳಲು ಅವಳು, 'ಇಲ್ಲವಮ್ಮಾ! ನಿಮ್ಮ ಮೊಟ್ಟೆಯ ಆಸೆ ನಮಗೇಕೆ? ನಮ್ಮ ಜೀವವು ಈಗ ಮೊಟ್ಟೆ ಇಡಲು ಪ್ರಾರಂಭಿಸಿರುವುದು' ಎಂದು ಉತ್ತರ ಕೊಟ್ಟಳು.

ವೆಂಕಪ್ಪನ ಸೊಸೆಗೆ ಸ್ವಲ್ಪ ಕೋಪ ಬಂದು ಮಾತಿನ ಧರಧಲ್ಲಿ ಅಂದುಬಿಟ್ಟಳು! ಅವಳ ನೆರೆಕರೆಯವಳು ಬಡ್ಡಿ ಸಮೇತವಾಗಿ ಹಿಂತಿರುಗಿಸಿದ್ದಳು. ವೆಂಕಪ್ಪನ ಹೆಂಡತಿ ದಾವಿಯ ನೀರು ಸೇದುತ್ತಿದ್ದ ಬಾವಿಯ ಬಗ್ಗೆಯನ್ನು ಸೇರಿದರು. ಸುಬ್ಬಣ್ಣನ ಪತ್ನಿಯೂ ಹಿಂದಿನ ಘಟನೆಯನ್ನು ತಿಳಿದು ಉಪನ್ಯಾಸಕ್ಕೆ ಆರಂಭಿಸಿಬಿಟ್ಟಳು; ಹೆಂಗಸರೊಳಗೆ ಮಾತು ಬಂದು, ಅವರವರ ಕೆಟ್ಟ ಗುಣಗಳನ್ನು ತೋರಿಸಿ ಕೈಯಲು ನೋಡಲು ಮಾಡಿದರು.

ಆಗ ಒಬ್ಬಳು ಇನ್ನೊಬ್ಬಳ ಕೂದಲನ್ನು ಹಿಡಿದೆಳೆದಳು; ಮತ್ತೊಬ್ಬಳು ಅವರ ತೊಡವನ್ನು ಕೆಳಗೆ ಜೆಲ್ಲಿದಳು; ಹೆಂಗಸರ ಈ ಕಾದಾಟದಲ್ಲಿ ಅಲ್ಲಿ ಕೆಲಸ ಮಾಡುತ್ತಿದ್ದ ಸುಬ್ಬಣ್ಣನು ಓಡಿ ಬಂದು ಅವರನ್ನು ಬಿಡಿಸಿದನು. ಹಿತ್ತಲಲ್ಲಿ ದೈಹುಲ್ಲಿನ ರಾಶಿ ಮಾಡುತ್ತಿದ್ದ ವೆಂಕಪ್ಪನೂ ಮನೆಗೂ ಬಂದು ಗುದ್ದಾಟಕ್ಕಾರಂಭಿಸಿದರು. ವೆಂಕಪ್ಪನು ಎಲ್ಲರಿಗಿಂತಲೂ ಬಲಶಾಲಿಯಾದುದರಿಂದ ಸುಬ್ಬಣ್ಣನ ಕೆಲವು ಮೊಸೆಗಳನ್ನು ತಿಂದಿದ್ದನು. ಸ್ವಲ್ಪ ಸಮಯದಲ್ಲಿ ಜನರು ಕೆರೆದು, ಕಾದಾಡುತ್ತಿದ್ದವರು ಹಂಗಡಿಗಳನ್ನು ಬಹು ಪ್ರಯಾಸದಿಂದ ವಿಂಗಡಿಸಿದರು.

—ಈಗ ಆ ಎರಡು ಕುಟುಂಬದಲ್ಲಿ ಕಲಹವು ಉಂಟಾಯಿತು. ಸುಬ್ಬಣ್ಣನು ತನ್ನ ಕೆತ್ತ ಮೊಸೆಗಳನ್ನು ಕಾಗದದಲ್ಲಿ ಮಡಚಿ ನ್ಯಾಯಾಧೀಶರ ಮುಂದಿಟ್ಟನು. ಅವನ ಹೆಂಡತಿಯಾದರೋ ವೆಂಕಪ್ಪನನ್ನು ಆರು ತಿಂಗಳ ಸೆರೆ ವಿಧಿಸುವೆಂದು ಖರೆಕರೆಯವರಲ್ಲಿ ಸುದ್ದಿ ಹರಡಿದಳು.

ವೆಂಕಪ್ಪನ ತಂದೆಯು ಈ ಕಲಹವನ್ನು ನೋಡುತ್ತಾ ಎರಡು ಹಂಗಡಿಗಳ ಮಧ್ಯೆ ಪ್ರೀತಿಯಲ್ಲಿರಬೇಕೆಂದು ಎಷ್ಟೋ ಪ್ರಯತ್ನಿಸಿದನು; ಆದರೆ ಅವನ ಮಾತನ್ನು ಅವರು ಲಕ್ಷಿಸದೆ ಹೋದರು. ಅವನು ಎಷ್ಟೋ ಹೇಳಿದನು—ಅವರಿಗೆ ನೀವು ಮಾಡಿರುವ ಕಾರ್ಯವು ಎಂದಿಗೂ ಒಳ್ಳೆಯದಲ್ಲ. ಒಂದು ಮೊಟ್ಟೆಯಾಗಿ ಇಷ್ಟು ದೊಡ್ಡ ಕಲಹವನ್ನು ಮಾಡಬೇಕಾಗಿದ್ದಿಲ್ಲ. ಅದನ್ನು ತೆಗೆದುಬಿಡುವುದು. ದೇವರು ಎಲ್ಲರಿಗೆ ಸಾಕಾಗುವ ಆಸ್ತಿಯಿರುವವಲ್ಲವೇ? ಮತ್ತು ನೆರೆಕರೆಯವರು ಒಂದು ತಪ್ಪು ಮಾಡಿದರು. ಅದನ್ನು ಸಂಹರಿಸುವುದು ನಮ್ಮ ಕರ್ತವ್ಯವಲ್ಲವೆ? ಬಾಳು ಮಾಡಿಕೊಡುವುದು—ಅದರಲ್ಲೇನು? ನಾವೆಲ್ಲರೂ ಪಾಪಿ ಮನುಷ್ಯರು ತಿಳಿದು ಹಿಂದಿನದೆಲ್ಲ ಬಿಟ್ಟು, ಸ್ನೇಹಿತರಾಗಿರಿ—ದ್ವೇಷವನ್ನಿಟ್ಟುಕೊಳ್ಳುವುದು ಮತ್ತೂ ಕೆಟ್ಟದು' ಎಂದು ಹೇಳಿದನು. ಆದರೆ, ಮುದೀ ತಂದೆಯ ಮಾತನ್ನು ಕೇಳುವವರಾರು?

'ನಾನು ಅವನ ಮೊಸೆಯನ್ನು ಕೆತ್ತಿರಬಹುದು—ಆದರೆ, ನಾನು ಮೊಸೆಯ ಸಂತೆಯಲ್ಲಿ ಮಾಡಿಸಿದ ಅಂಗಿಯನ್ನು ಸುಬ್ಬಣ್ಣನ ಮಗನು ಹರಿಯಲಿಲ್ಲವೇನು? ಎಂದು ವೆಂಕಪ್ಪನು ಅಂದುಕೊಂಡು ನ್ಯಾಯಾಧೀಶನಲ್ಲಿ ದೂರಿಟ್ಟನು' ಇದು ವಿಚಾರಣೆಯಲ್ಲಿದ್ದಾಗ ಸುಬ್ಬಣ್ಣನ ಗಾಡಿಯು ಕೇಳೊಂದು ಕಳವಾಗಿ ಹೋಯಿತು. ಎಲ್ಲರೂ ವೆಂಕಪ್ಪನ ಮಗನ ಕಳವು ಮಾಡಿದರೆಂದು. ಹೀಗೆ ಪ್ರತಿಯೊಂದು ದಿನವು ಒಂದೊಂದು ಜಗಳವಾಗುತ್ತಿದ್ದಿತು. ಮತ್ತು ಹೆಂಗುಸರು ಕೆರೆಗೆ ವಸ್ತ್ರ ಒಗೆಯಲು ಹೋದಾಗ ಅಲ್ಲಿಯೂ ಬೈದುಕೊಳ್ಳದೆ ಹಿಂದಿರುಗುತ್ತಿರಲಿಲ್ಲ.

ನೊದಲು ನೊದಲು ಅವರ ಬಾಯಿಯಂದಲೇ ಜಗಳಾಡಿಕೊಳ್ಳುತ್ತಿದ್ದರು. ಕೊನೆಗೆ ಒಬ್ಬರ ಸಾಮಾಗ್ರಿಗಳನ್ನು ಇನ್ನೊಬ್ಬರು ಕಳವುಮಾಡ ಹತ್ತಿದರು. ಮಕ್ಕಳು ಹಿರಿಯರ ರೀತಿಯನ್ನನುಲಂಬಿಸಿದರು. ಜೀವನವು ಇವರಿಗೆ ದಿನೇ ದಿನೇ ಕಷ್ಟವಾಗಿ ಪರಿಣಮಿಸಿತು. ಪ್ರತಿದಿನವೂ ಇವರ ದೂರನ್ನು ವಿಚಾರಿಸಿಯೇ ನ್ಯಾಯಾಧೀಶರು ಬೇಸರ ಪಟ್ಟರು. ವೆಂಕಪ್ಪನು ಸುಬ್ಬಣ್ಣನಿಗೆ ಜೈಲಾಗುವಂತೆ ಮಾಡಿದನು; ಅಥವಾ ದಂಡ ತೆರುವಂತೆ ಮಾಡಿದನು. ಸುಬ್ಬಣ್ಣನು ಹಾಗೆಯೇವೆಂಕಪ್ಪನ ಮೇಲೆ ದೂರು ಹಾಕಿಸಿ ಹಾಗೆಯೇ ಮಾಡಿಸಿದನು. ಯಾವದಾದರೂ ನಿಕ್ಕದೊಂದು ಕಾರಣ ಮಾತ್ರದಿಂದಲೆ ನ್ಯಾಯಸ್ಥಾನದ ವರೆಗೂ ದೂರು ಹೋಗಿ ಬಂಬ್ಬನಿಗಲ್ಲು ದಿದ್ದರೆ ವತ್ತೊಬ್ಬನಿಗೆ ಶಿಕ್ಷೆಯಾಗುತ್ತಿದ್ದಿತು. ವೆಂಕಪ್ಪನ ತಂದೆಯಾದರೋ ಸಂಧಿಸಾಮಾಧಿಕೊಳ್ಳಿರೆಂದು ಒತ್ತಿ ಒತ್ತಿ ಹೇಳುತ್ತಿದ್ದರೂ ಅವನ ಮಾತುಗಳನ್ನು ಯಾರೂ ಎಣಿಕೆಗೈಯ್ಯಲಿಲ್ಲ' ಹೀಗೆ ಆರು ವರುಷಗಳು ಕಳೆದು ಹೋದುವು.

ವಿಳಿಸೆಯ ವರುಷದಲ್ಲಿ ಒಂದು ಮದುವೆಸಮಾರಂಭದಲ್ಲಿ, ವೆಂಕಪ್ಪನ್ನ ಸೊಸೆಯು ಸುಬ್ಬಣ್ಣನನ್ನು ಕಂದುರೆಜೋರನೆಂದು ಕರೆದು ಹೀನ್ಸೆಸಿದುದರಿಂದ ಅವನು ಕೋಪಗೊಂಡು ಕೋಪದ ಧರದಲ್ಲಿ ಅವಳಿಗೆ ಒಂದೆಟ್ಟು ಕೊಟ್ಟುಬಿಟ್ಟನು. ಗರ್ಭಿಣಿಯಾದ ವೆಂಕಪ್ಪನ ಸೊಸೆಯು ಇದರಿಂದ ಒಂದು ವಾರದ ತನಕ ಹಾಸಿಗೆ ಹಿಡಿದಳು. ವೆಂಕಪ್ಪನು ಸುಬ್ಬಣ್ಣನನು ಜೈಲಿಗೆ ಕಳುಹಿಸುವ ಸಂದರ್ಭವು ಒದಗಿ ಬಂತೆಂದು ಹಿಗ್ಗಿ, ನ್ಯಾಯಸ್ಥಾನಕ್ಕೆ ದೂರು ಕಳುಹಿಸಿದನು. ಕೆಲವರ ಕೈ ಬೆಚ್ಚಗಿರಿಸಿ ಸಾಕ್ಷಿ ಹಾಕಿಸಿದನು. ಇದರಿಂದ ನ್ಯಾಯಸ್ಥಾನದಲ್ಲಿ ಸುಬ್ಬಣ್ಣನಿಗೆ ಇಪ್ಪತ್ತು ಚಡೀ ಹೊಡಿಸಬೇಕೆಂದು ತೀರ್ಪಾಯಿತು. ತೀರ್ಪನ್ನು ಕೇಳಿ ಸುಬ್ಬಣ್ಣನು ಬಹಳ ಮ್ಲಾನವದನವದನವಾಗಿ, ಬಹಳ ನಿಟ್ಟುಸಿರನ್ನು ಬಿಟ್ಟು, 'ವೆಂಕಪ್ಪಾ! ಈಗ ನೀನು ನನ್ನ ಬೆನ್ನನ್ನುತ್ತಿಸುವೆ! ಆದರೆ ನಿನ್ನ ಪ್ರಿಯ ವಸ್ತುವೊಂದು ಇದಕ್ಕಿಂತ ಹೆಚ್ಚು ಉರಿಯಿದಿರಾದರು'! ಎಂದು ಅಂದುಬಿಟ್ಟನು.

ಸಂತೋಷದಿಂದ ನಗುತ್ತಿದ್ದ ವೆಂಕಪ್ಪನಿಗೆ ಈ ಮಾತುಗಳನ್ನು ಕೇಳಿ ಸ್ವಲ್ಪ ಭಯಭೀತನಾಯಿಗೆ ನ್ಯಾಯಾಧೀಶರಿಗೆ, 'ಸೋದಿ ಸ್ವಾಮೀ ನನ್ನ ಮನೆಗೆ ಉರಿಹಾಕುವೆನೆನ್ನುತ್ತಾನೆ!' ಎಂದು ಹೇಳಿದನು. ಆದರೆ ಸುಬ್ಬಣ್ಣನು ಇದಕ್ಕೆ ಉತ್ತರವನ್ನು ಕೊಡದೆ, ನ್ಯಾಯಾಧೀಶರ ಕಡೆಗೆ ಬೆನ್ನು ತಿರುಗಿಸಿ ನಿಂತು, 'ನನ್ನನ್ನು ಹೊಡಿಯುವಿಕಾದರೆ ಹೊಡಿಯಿರಿ! ನ್ಯಾಯ ಸ್ಥಾನವೆನಿಗಾಗಿ ನನ್ನನ್ನು ಹೊಡಿಯಬೇಕಾದರೆ ನಾನು ಎಂದಿಗೂ ಸಿದ್ಧನೇ!' ಎಂದು ಕೂಗಿದನು. ಅವನ ಕಣ್ಣುಗಳಲ್ಲಿ ಕಠ್ರರವಾದ ಅಂದೊಂದು

ಹೊಳಪು ಪ್ರೇಕ್ಷಕರ ಹೃದಯವನ್ನು ಬೇಧಿಸುವಂತೆ ತೋರಿತು. ಎಲ್ಲರೂ 'ಇವನು ಹಿಗೆ ತೀರಿಸದೆ ಇರಲಿಕ್ಕಿಲ್ಲ" ಎಂದು ಅಂದುಕೊಂಡರು.

'ಆಗ ನ್ಯಾಯಾಧೀಶನು, 'ಇಲ್ಲಿ ನೋಡ್ರಿ, ನೀವು ತಿರಿಗಿ ಒಪ್ಪಂದವನ್ನು ಮಾಡಿಕೊಂಡು ಸ್ನೇಹಿತರಾಗಿ ಅನ್ಯೋನ್ಯವನ್ನು ಪ್ರೀತಿಯಿಂದ ಇದ್ದರೆ ಒಳ್ಳೆಯದಿತ್ತು. ಈ ನ್ಯಾಯಸ್ಥಿಂತ ಉತ್ತಮವಾದ ನ್ಯಾಯವು ಅದಾ ವುದು? ದೇವರು ಸ್ಥಾಪಿಸಿದ ನ್ಯಾಯವನ್ನು ಮೊದಲು ಹೇಳಬೇಕಾದುದು ನನ್ನ ಕರ್ತವ್ಯವು. ಸುಬ್ಬಣ್ಣ! ನೀನು ಆ ಬಸುರಿನ ಹೆಂಗುಸನ್ನು ಹೊಡೆದುದು ಮಹಾ ಪಾಪವು. ಆದುದರಿಂದ ನೀನು ಸುಬ್ಬಣ್ಣನೊಡನೆ ಕ್ಷಮೆ ಕೇಳಿ ಸ್ನೇಹವನ್ನು ಮಾಡಬೇಕು''' ಎಂದು ವಿಸ್ತಾರವಾಗಿ ಹೇಳಿ ಭೋದಿಸಿದನು.

ಆದರೆ ಸುಬ್ಬಣ್ಣನು ಇದಕ್ಕುಲಕ್ಷ್ಯ ಕೊಡಲಿಲ್ಲ. 'ಬರುವ ಅಷ್ಟಮಿಗೆ ನನಗೆ ಏವತ್ತು ವರುಷಗಳಾಗುತ್ತವೆ. ನನ್ನ ಇಡೀ ಜೀವಮಾನ ಕಾಲದಲ್ಲಿ ನನ್ನನ್ನು ಯಾರೂ ಹೀಗೆ ಹೊಡೆಯಲಿಲ್ಲ. ಈಗ ಆ ಸುಟ್ಟ ವೆಂಕಪ್ಪನ ಕ್ಷಮೆ ಬೇಡಬೇಕೆಂದರಿವಿಲಾ? ಎಂದಿಗೂ ಆಗದು. ವೆಂಕಪ್ಪನು ಇದನ್ನು ನೆನಪಿಗೆ ಇರುವಂತೆ ಮಾಡಿದರಾಯಿತು' ಎಂದು ಗೊಣಗುಟ್ಟನು.

ವೆಂಕಪ್ಪನು ಗ್ರಹಾಧಿಮುಖನಾಗಿ ನಡೆದನು. ನ್ಯಾಯಸ್ಥಾನದಿಂದ ಮನೆಗೆ ಏಳು ಮೈಲು ದೂರವಿತ್ತು. ಮನೆಗೆ ಬರುವಾಗ ಸಂಜೆಯಾಗಿ ದ್ದಿತು. ಬಾಗಿಲಲ್ಲಿ ನಿಂತಿದ್ದ ಕೋಣವನ್ನು ಹಟ್ಟಿಗೆ ಓಡಿಸಿ ಮನೆಯನ್ನು ಸೇರಿದನು. ಹೆಂಗುಸರು ದನಕರಗಳನ್ನು ಆಟ್ಟಿಕೊಂಡು ಇನ್ನೂ ಬಂದಿರಲಿಲ್ಲ. ಮಕ್ಕಳು ಗದ್ದೆ ಕೆಲಸವನ್ನು ಮುಗಿಸಿ ಹಿಂದಿರುಗಿರಲಿಲ್ಲ. ವೆಂಕಪ್ಪನು ಬಹಳ ಆಲೋಚನೆಯಿಂದ ಮನೆಯ ಜಾವಡಿಯ ಸ್ಟೇಲೆ ಕುಳಿತು ಕೊಂಡನು. ನ್ಯಾಯಸ್ಥಾನದಲ್ಲಾದ ಕೆಲ ಘಟನೆಗಳು—ಸುಬ್ಬಣ್ಣನ ವಿಚಾರಣೆಯಲ್ಲಿ ಅವನ ಮುಖ ಬಾಡಿದುದೂ—ಅವನು ಬೆನ್ನು ತಿರುಗಿಸಿ ನಿಂತುದೂ—ಎಲ್ಲ ಅವನ ಕಣ್ಣೆದುರಿಗೆ ಬಂದು ನಿಂತುವು—ಎಷ್ಟೆಂದರೂ ಮನುಷ್ಯನಲ್ಲವೆ? ವೆಂಕಪ್ಪನಿಗೆ ಸುಬ್ಬಣ್ಣನ ಮೇಲೆ ಜಳಪಳಾದ ಕನಿಕರ ವುಂಟಾಯಿತು. ತನಗೆ ಹಾಗೆ ಶಿಕ್ಷೆ ವಿಧಿಸಿದರೆ ತನಗೆಷ್ಟು ದುಃಖ ವಾದೀತು? ..... ಅಷ್ಟರಲ್ಲಿ ಒಳಗಿದ್ದ ವೆಂಕಪ್ಪನ ತಂದೆಯು ನೆಲ್ಲನ್ನ ಕೋಲೂರಿ ಕೆಮ್ಮುತ್ತಾ ಹೊರಕ್ಕೆ ಬಂದು, ವೆಂಕಪ್ಪನ ಪಕ್ಕ ತಂದಲ್ಲಿ ಕುಳಿತು 'ವೆಂಕಪ್ಪಾ! ಏನು ಅವನಿಗೆ ಶಿಕ್ಷೆಯಾಯಿತೆ?'

'ಹೌದು, ಇಪ್ಪತ್ತು ಚಡೀ ಹೊಡಿಸಬೇಕೆಂದಾಯಿತು.' ವೆಂಕಪ್ಪನ ತಂದೆ ತಲೆ ಅಲ್ಲಾಡಿಸಿ, 'ಮೂರ್ಖತನದ ಕೆಲಸವಿದು—ನಿಜವಾಗಿಯೂ ಬಹಳ ಕೆಟ್ಟದು—ಇದರ ಪರಿಣಾಮವು ಅವನಿಗಷ್ಟಿಲ್ಲ! ನಿನಗೇ! ಅವನಿಗೆ ಚಡೀ ಹೊಡಿಸಿದರಿಂದ ನಿನಗೇನು ಪ್ರಯೋಜನವಾಗುವುದು?'

'ಅವನು ಅದನ್ನು ತಿರಿಗಿ ಮಾಡಲಿಕ್ಕಿಲ್ಲ' 'ತಿರಿಗಿ ಮಾಡದಿರುವುದಕ್ಕೆ ಅವನೇನು ಮಾಡಿದ್ದಾನೆ ನನಗೆ?'

ಅದೆಷ್ಟೋ ಬಗೆಯಲ್ಲಿ ನನಗೆ ಹಾನಿಯನ್ನುಂಟುಮಾಡಿರುವನು. ಮೊನ್ನೆ ನಮ್ಮ ಸೇಸಿಯನ್ನು ಅರ್ಧ ಕೊಂದು ಬಿಡಲಿಲ್ಲವೇ? ಈಗ ನಮ್ಮ ಮನೆಗೆ ಉರಿ ಹಾಕುವೆಹೆಂದು ಹೇಳಿರುವನು?

ವೆಂಕಪ್ಪನ ತಂದೆ ನಿಟ್ಟುಸಿರನ್ನೂ ಬಿಟ್ಟು, 'ವೆಂಕಪ್ಪಾ! ನೀನು ಹೊರಗೆ ತಿರುಗಾಡುತ್ತಿದ್ದರೂ ಸಾಕಷ್ಟು ಅನುಭವವಿರುವುದೆಂದು ತಿಳಿಯ ಬೇಡ! ನಮ್ಮ ನಮ್ಮ ಪಾಪಗಳಿಗೆ ನಾವು ಕುರುಡರಾಗಿದ್ದು ಪರರ ಪಾ ಹುಡುಕಲು ನಾವು ಎಂದಿಗೂ ಸಿದ್ಧರೇ ಸರಿ! ಒಬ್ಬನು ಕೆಟ್ಟವನಾಗಿದ್ದರೆ ಮತ್ತೊಬ್ಬನು ಒಳ್ಳೆಯವನಾದರೂ ಅವರೊಳಗೆ ಕಳಹವಾದರೂ ಯಾಕಾ ಬೇಕು? ಎಂದಿಗೂ ಆಗಲಾರದು. ಸುಬ್ಬಣ್ಣನ ಗಾಡಿಯ ಚಕ್ರವನ್ನ ಮುರಿದವರಾದು? ಅವನನ್ನು ನ್ಯಾಯ್ಯಸ್ಥಾನಕ್ಕೆ ಎಳೆದೆಯ್ದು ಅಪಮಾನ ಪಡಿಸಿದವರಾರು? ಹೀಗಿದ್ದರೂ ಎಲ್ಲಾ ಪಾಪವನ್ನು ಅವನ ತಲೆಯ ಮೇಲೆ ಏಕೆ ಹಾಕುತ್ತಿರುವೆ? ನೀನೇ ನಿನ್ನ ಜೀವನವನ್ನು ಹಾಳುಮಾಡಿಯಲ್ಲಿ ನಿ ಸುತ್ತಲಿರುವೆ. ನಾವು ಹಿಂದೆ ಹೀಗೆಯೇ ಜೀವನವನ್ನು ನಡೆಸುತ್ತಿದ್ದೇವೆ ನಾವು ಹೇಗೆ ಜೀವಿಸುತ್ತಿದ್ದವು? ಯಾಕೆ? ನೆರೆಕರೆಯವರು ಹೇಗೆ ಇ ದೇಕೋ ಹಾಗೆಯೇ! ನೆರೆಕರೆಯ ಮನೆಯ ಹೆಂಗುಸರಿಗೆ ಅಕ್ಕಿ ಇ ನಾವಾದರೆ, ನಮ್ಮಲ್ಲಿಗೆ ಬಂದು, 'ಅಜ್ಜಾ ನಮಗಿಷ್ಟು ಅಕ್ಕಿಯಾಗದೇಕು! ಎಂದು ಕೇಳುವರು. ನಾವಾದರೋ ಉಗ್ರಾಣಕ್ಕೆ ಹೋಗಿ ಬೇಕಾದ ದನ್ನು ತೆಗೆದುಕೊಂಡು ಹೋಗವ್ವಾ' ಎಂದು ಹೇಳುತ್ತಿದ್ದೆವು. ಅವ ದನಕರುಗಳನ್ನು ಗುದ್ದಿಕ್ಕೆ ಅಟ್ಟಲು ಯಾರೂ ಇಲ್ಲದಿದ್ದಾಗ ನಾವೇ ನಿನ್ನನ್ನು ಕಳುಹಿಸಲಿಲ್ಲವೆ? ಹಾಗೆಯೇ ನಾವೂ ಅವರಿಂದ ನಮಗೆ ಬೇಕಾದುದನ್ನು ಮಾಡಿಸಿಕೊಳ್ಳುತ್ತಿದ್ದೆವು. ಆದರೆ ಈಗ ಮೊನ್ನೆ ಆ ನರಸಯ್ಯನು ಬಹು ವಿನ ಕಾಲದಲ್ಲಿ ಆದ ಹಿಂದು ಯುದ್ಧವನ್ನು ವಿವರಿಸಿದನು; ಯಾಕೆ, ನಿನ್ನೊ ಳಗೆ ಆದ ಕಲಹವು ಆದಕ್ಕೆಂತ ಭಯಾನಕ! ಮೊನ್ನೆ ನಿನ್ನ ಜೆನ್ನಿ ಅವ ಅಂಬಕ್ಕನನ್ನು ಬಾಯಿಗೆ ಬಂದ ಹೆಸರನ್ನಿಟ್ಟು ಕರೆವಾಗ ನಿನ್ನ ಹೆಂಡತಿಯು ಹೊಟ್ಟೆ ತುಂಬ ನಕ್ಕುಬಿಟ್ಟಳು. ಅದು ಸರಿಯೇ? ನೀನು ನಿನ್ನ ಕುಟುಂಬಕ್ಕೆ ಕಲಿಸಿದುದೇನು?—ಬೈದಾಡಲಿಕ್ಕೆ ಮತ್ತು ಹೊಡೆದಾಡಲಿಕ್ಕೆಯದು ಕಾಣು ತ್ತದೆ. ಕುಟುಂಬದವರ ಹಾನಿಗೆ ನುತ್ತು ಪಾಪಕ್ಕೆ'ನಿನೇ ಕಾರಣನಾಗಿರುವೆ. ಇದಕ್ಕೇನು ಉತ್ತರ ಕೊಡುವೆ? ನೀನು ಒಂದು ಮಾತನಾಡಿದೆಯೆಂದು ನಾನು ಎಂಡು ಮಾತನಾಡುವುದು. ನೀನು ಒಂದೇಟು ಹೊಡೆದೆಯೆಂದು ನಾನೆರಡು—ಇದು ಸರಿಯೇ? ಆಹಾ! ಇದೇನೋ ನಿಮ್ಮ ದೈವಧರ್ಮ! ಬೇರೆಯವರು ನಿನಗೆ ಮಾತನಾಡಿದರೆ ಸುಮ್ಮಗಿದ್ದ ಪಕ್ಷಕ್ಕೆ ಅವರ ಹೆಂಡ ಯನೇ ಕರಗಿ ಅವರು ತಮ್ಮ ತಪ್ಪಿಗೆ ದುಃಖಪಟ್ಟು ಕ್ಷಮೆ ಕೇಳಿದರ ಲಾರರು..... ನೀನೇಕ ಮಾತನಾಡದಿರುವೆ?'

ವೆಂಕಪ್ಪನು ನಿರುತ್ತರ.

ಮುದುಕನು ಮುಂದುವರಿಸಿದನು..'ನಿನ್ನೊಳಗಿನ ಕಲಹದಿಂದ ಎಷ್ಟು ಹಾನಿಯಾಗಿದೆ ನೋಡು! ನ್ಯಾಯಸ್ಥಾನಕ್ಕೆಂದು ಎಷ್ಟು ಹಣ ಹಾಳುಮಾಡಿದೆ? ನಿನ್ನ ಮಕ್ಕಳು ಎಂಥಾ ಸುಗುಣಗಳಿಂದ ಶೋಭಿಸುತ್ತಾರೆ, ನೋಡು! ನಮ್ಮ ಆಸ್ತಿಪಾಸ್ತಿಗಳೆಲ್ಲ ಹೇಗೆ ಹಾಳುಬಿದ್ದಿವೆ ನೋಡು:—ಎಲ್ಲ ಈ ಕಲಹದಿಂದ. ನಿನ್ನ ಗರ್ವದಿಂದ. ಈ ಸಮಯದಲ್ಲಿ ನಿನ್ನ ಮಕ್ಕಳೊಡನೆ ಗದ್ದೆ ಉಳೆಬೇಕಿತ್ತು. ಆದರೆ ಆ ಶನಿಯು ನಿನ್ನನ್ನು ನ್ಯಾಯಸ್ಥಾನಕ್ಕೆಳ ಒಯ್ಯುದ್ದಿತ್ತಿನೆ. ಗದ್ದೆ ಸರಿಯಾಗಿ ಉಳಲಿಲ್ಲ; ಕೈ ಜೆನ್ನಾಗಿ ಕೊಯ್ಯಲಿಲ್ಲ. ಆದರೆ, ಭೂಮಿಯು ಜೆನ್ನಾಗಿಲ್ಲವೆಂದು ನೀನು ಹೇಳುತ್ತಿರುವೆ. ಯಾರ ತಪ್ಪು ನೋಡಿದೆಯೆ? ಈ ಸಲ ಅಕ್ಕಿ ಏನು ಕಮ್ಮಿ ಎಂದಿದೆ? ನುಮ್ಮನಿದ್ದು ಸುಖದಲ್ಲಿ ಜೀವನವನ್ನು ಸಾಗಿಸುತ್ತಿದ್ದವನು ಏಕೆ ಈ ಕಷ್ಟ ಗಳನ್ನು ಕಟ್ಟಿಕೊಂಡೆ? .... ನಿನ್ನ ಕೆಲಸವನ್ನು ನೋಡು. ನಿನ್ನ ಮಕ್ಕ ಕೂಡನ ಹೊಲಕ್ಕೆ ಹೋಗಿ ಕೆಲಸ ಮಾಡು: ನೋಡೋಣ. ಮತ್ತು ಯಾರಾದರೂ ನಿನ್ನನ್ನು ಮೋಯಿಸಿದರೆ, ಮಾತೆತ್ತದಿದ್ದರು. ಅವನನ್ನು ಕ್ಷಮಿಸು. ಕ್ಷಮಾಪಣೆ ಮಾಡುವುದು ದೈವಿಕವೆಂದು ಹೇಳುತ್ತಾರೆ.

ಮಂಗಳೂರಿನಲ್ಲಿ ದೇವಸ್ಥಾನ ಪ್ರವೇಶ??

ಶ್ರೀ ಗೋಕರ್ಣನಾಥ ಕ್ಷೇತ್ರವು ದ. ಕನ್ನಡದಲ್ಲಿ ಮುಂದಾಗುವುದೇ?

ಮಹಾತ್ಮಾ ಗಾಂಧಿಯವರು ದಕ್ಷಿಣ ಶ್ರಾಂತ್ಯದವರಿಗೆ ಪ್ರತ್ಯೇಕ ಮನವಿಯನ್ನು ಮಾಡಿ ದೇವಸ್ಥಾನ ಪ್ರವೇಶವಾಗ ಬೇಕೆಂದು ಕೇಳಿಕೊಂಡರಾದರೂ, ಹೆಚ್ಚಿನವರ ಮನಸ್ಸಿನ ಮೇಲೆ ಅದು ಪರಿಣಾಮವನ್ನುಂಟುಮಾಡಲಿಲ್ಲ ಅದರಲ್ಲೂ, ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಅವರ ದೀನಮನವಿಯೇ ಆಂಗೇ ಆಗಲಿಲ್ಲ ಕಾರಣವಾಗಿ, ಹರಿಜನರ ದೇವಸ್ಥಾನ ಪ್ರವೇಶದ ಪ್ರಶ್ನೆಯು ಅಲ್ಲಿಯೇ ಮುಗಿದು ಬಿದ್ದಿತು ಸ್ಥಳೀಕ ಹರಿಜನ ಸಂಸ್ಥೆಯವರು ತಮ್ಮ ಸಾಮರ್ಥ್ಯಕ್ಕೆ ಸಾಕಷ್ಟು ಕೆಲಸವನ್ನು ಮಾಡುತ್ತಿರುವರಾದರೂ, ದೇವಸ್ಥಾನ ಪ್ರವೇಶ ಪ್ರಶ್ನೆಯಲ್ಲಿ ಅವರಿಗೆ ಜಯವು ಸಿಗಲೇ ಇಲ್ಲ. ಉಡುಪಿಯಲ್ಲಿ ಶ್ರೀ ಕೃಷ್ಣ ದೇವಸ್ಥಾನವನ್ನೂ, ಮಂಗಳೂರಿನಲ್ಲಿ ಶ್ರೀ ವೆಂಕಟರಮಣ ದೇವಸ್ಥಾನವನ್ನೂ ತಮ್ಮ ಕಾರ್ಯರಂಗವನ್ನಾಗಿ ತೆಗೆದುಕೊಳ್ಳೆದೇಕೆಂದು ಹರಿಜನ ಸಂಘದವರು ಯೋಚಿಸಿದ್ದರೂ, ಅಂತಹ ಯೋಜನೆಯಲ್ಲಿ ಅವರು ಒಂದಡಿಯನ್ನಾದರೂ ಮುಂದಿಡಲಾರದಾದರು

ಈ ತಿಂಗಳ ಪ್ರಥಮದಿಂದಾಗಿ ಇಲ್ಲಿಯ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಹೊಸ ರೀತಿಯ ಚಟುವಟಿಕೆ ಗಾರಂಭವಾಗಿರುತ್ತದೆ ಮಲಬಾರಿನ ವಿಧೂತ ಪುರುಷರಾದ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರು ಈ ದೇವಸ್ಥಾನವನ್ನು ಪ್ರತಿಷ್ಠಿಸಿ ೫೬ ವರ್ಷಗಳು ಸಂದುವು ಇಶ್ವರ ತನಕವೂ ಈ ಸಂಸ್ಥೆಯು ಇದರ ಶ್ರೀ ಶಿವಭಕ್ತಿಯೋಗ ಸಂಘದಿಂದೊಡಗೂಡಿ ನಡೆಯುತ್ತಾ ಬರುತ್ತಿತ್ತು ಆದರೆ ಈ ವರ್ಷದಲ್ಲಿ ಆಡಳಿತ ಯವರಲ್ಲೂ, ಸಂಘದವರಲ್ಲೂ ಭಿನ್ನಾಭಿಪ್ರಾಯವೊಮ್ಮೆಲಾಗಿ ಇತ್ತಂಡಗವರೂ ಒಪ್ಪಂದಕ್ಕಾಗಿ ಎಡೆಗಳನ್ನು ಹುಡುಕುತ್ತಿದ್ದರು ತನ್ನಲ್ಲೆ, ಯುವಕರ ಪ್ರೋತ್ಸಾಹನದಿಂದಾಗಿ 'ಶ್ರೀ ಶಿವಭಕ್ತಿ ಯೋಗ' ಸಂಘದ ವಾರ್ಷಿಕೋತ್ಸವವನ್ನು ಜರಗಿಸುವ ನಿರ್ಧತೆ ಯಾಯಿತು

ಇದಾಗುವ ಎರಡು ವಾರ ವಾರಗಳ ಮೊದಲು ಈ ದೇವಸ್ಥಾನಕ್ಕೆ ಶ್ರೀ ಬ್ರಹ್ಮನಾರಾಯಣ ಸ್ವಾಮಿಯವರ ಶಿಷ್ಯರಲ್ಲೊಬ್ಬರಾದ ಸ್ವಾಮಿ ಧರ್ಮ ತೀರ್ಥನ್ ಬಿ ಎ ಎಲ್. ಬಿ. ಎಂಬವರು ಬಂದಿದ್ದರು ಕಾವಿಧಾರಣೆ ಮಾಡಿದ್ದರವರಾದರೂ ಇವರ ವಾಗ್ವೈಖರಿಯೂ ಉಜ್ವಲ ಆದರ್ಶವೂ ಎಲ್ಲರನ್ನೂ ಬೆರಗು ಗೊಳಿಸಿದುವು ಈ ಮಹನೀಯರು ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಮೂರು ವಾರಗಳ ತನಕ ಉಪನ್ಯಾಸವನ್ನೀಯುತ್ತಾ—"ನೋಡಲಾಗಿ, ಈ ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಡ ಬೇಕು, ಧರ್ಮಾತ್ಮಶ್ರೇಷ್ಠನೆ, ದೀನ ಜನಸೇವಿಯೇ ನಮ್ಮ ಸ್ವಾಮಿಯವರ ಧ್ಯೇಯವಾಗಿತು ಅದರೆ ಈ ದೇವಸ್ಥಾನ ದವರು ಸ್ವಾಮಿಯವರ ಧ್ಯೇಯವನ್ನು ಪೂಜಿಸಿ ಅವರ ಧ್ಯೇಯವನ್ನು ಮರೆತು ವರ್ತಿಸುತ್ತಾರೆ, ಇದು ಅಸಂಗತ—ಹೀಗಾದರೆ ನಾರಾಯಣ ಸ್ವಾಮಿಯವರು ಈ ದೇವಸ್ಥಾನದೋಳಿಂದ ಹೊರಗೆನೇ ನಿಲ್ಲುವರು ಹರಿಜನರ ಪ್ರವೇಶವು ಈ ದೇವಸ್ಥಾನ ಕ್ಕಾಗಬೇಕು, ನನ್ನ ನಿನ್ನದೆಂದು ಈ ಸಂಸ್ಥೆಯನ್ನು ಯಾರೂ ವರ್ಗೀಕರಿಸಬಾರದು—ಇದು ಯಾರ ದೇವಸ್ಥಾನವೂ ಅಲ್ಲ ಶ್ರೀ ಗುರುದೇವನದ್ಯಾಗಿರುತ್ತದೆ ಸಮಾಜದ ಒತ್ತಾಟಕ್ಕೆ ಕಿದರದೆ, ಅಂಜದೆ, ಆ ಗುರುದೇವನ ಮೇಲೆ ಎಲ್ಲಾ ಭಾರವನ್ನಿಟ್ಟು, ಹಿಂದು ಮುಂದು ನೋಡದೆ, ಲಾಧನಪ್ಪವನ್ನು ಲಕ್ಷೀಕರಿಸದೆ ಇವರ ಮೊಕ್ತೇಸರರು ಇದನ್ನು ಹರಿಜನರಿಗಾಗಿ ತೆರೆಯಿರಿ ಎಳೆ ಹಿಂಜರಿಯುವಿರಿ? ನಿಮಗೆ ನಿಜವಾಗಿಯೂ ಗುರುದೇವನ ಮೇಲೆ ವಿಶ್ವಾಸವಿದ್ದರೆ, ಭಕ್ತಿಯಿದ್ದರೆ, ನೀವು ನಿಜವಾಗಿಯೂ ಅವನ ಶಿಷ್ಯರೆಂದಾದರೆ ಅವನ ಅಂಗಿತವನ್ನು ಈಡೇರಿಸಲೇ ಬೇಕು ಎಂದು ಮುಂತಾಗಿ ಉಪದೇಶಿಸಿದರು ಈ ಸ್ವಾಮಿಯವರ ಧಾವನೋದ್ರೇಕವನ್ನೂ, ಹೃದಯಂಗಮ ಭಾಷಣವನ್ನೂ ಕೇಳಿ ಮೆಚ್ಚಿದ ಸಭಿಕರು, ಸಂಘದ ವಿರ್ಷಿಕೋತ್ಸವಕ್ಕೆ ಇವರನ್ನೇ ಅಧ್ಯಕ್ಷರನ್ನಾಗಿ ಆಮಂತ್ರಿಸಿದರು ವಾರ್ಷಿಕೋತ್ಸವದ ದಿನ ಶ್ರೀ ಸ್ವಾಮಿಯವರು ಪುನಃ ಮೇಲಿನ ರೀತಿಯ ಅಭಿಪ್ರಾಯವನ್ನು ಕೊಡುತ್ತಾ "ಅನ್ಯ ಜಾತಿಯವರು ಹರಿಜನರಿಗೆ ದೇವಸ್ಥಾನ ಕೊಟ್ಟರೆ ನೀವೂ ಕೊಡುವೆವೆಂದು ಮಾಡಿದ ನಿಮ್ಮ ಠರಾವನ್ನು ಹಿಂದೆಗೆಯಿರಿ, ನಿಮ್ಮ ಅಂತರಾತ್ಮನ ಪ್ರೇರೇಪಣೆಯನುಸಾರವಾಗಿ ನಡೆಯಿರಿ ಎಂದ ಮುಂತಾಗಿ ಹೇಳಿದರು ಈ ಧಾಷಣದ ಕಾರಣ ದೆಸೆಯಿಂದ ಮೋಕ್ತೇಸರರ ಮನಸ್ಸಿನ ತನ್ನೆೀರು ಕುದಿಯಿತು. ಮರು ವಾರವೇ ಆಡಳಿತದಲ್ಲಿ ನವ ಚೇತನವುಂಟಾಗಿ "ಹರಿಜನರಿಗೆ ದೇವಸ್ಥಾನದೊಗೆ ಪ್ರವೇಶ ಕೊಡಬಹುದೆಲೆ?' ಎಂಬ ಕುರಿತು ಚರ್ಚೆ ನಡೆಯಿತು ತಾ ೫೫೬೬ ದಿನ ಹರಿಜನ ಸಂಘದ ಶ್ರೀ ಎಂ ನಾಧವರಾಯರೂ ಶ್ರೀ ರಂಗರಾವ ತಲಚೇರಿಕರರೂ ಸಂಘದಲ್ಲಿ ಧಾಷಣವಿತ್ತು "ಹರಿಜನರನ್ನು ನಿಮ್ಮ ದೇವಸ್ಥಾನದೊಳಗೆ ಪ್ರವೇಶಿಸಲಡಿಕೂಡದೇಕೆ"ಂದು ಒತ್ತಿ ಒತ್ತಿ ಹೇಳಿದರು ಇವರಿಬ್ಬರೂ ಕೂಡಾ "ನಿಮ್ಮ ಮೊದಲಿನ ಠರಾವನ್ನು ಹಿಂತೆಗೆಯಿರಿ—ಅದು ಅಸಮಂಜಸ ಠರಾವು ಅನ್ಯ ಮತದವರನ್ನು ಅನುಸರಿಸುತ್ತೀರೆಂದು ನೀವು ಹೇಳುತ್ತೀರಿ, ನಿಮಗೇನು ದೆನ್ನೆಲುಬಿಲ್ಲವೋ? ನಿಮಗಾಗಿ ನೀವೊಂದು ದೇವಸ್ಥಾನವನ್ನು ಕಟ್ಟಿ ನಿಮ್ಮಚ್ಛೆ ಪ್ರಕಾರ ಅದನ್ನು ನಡಿಸಿಕೊಂಡು ಬರುವಾಗ ನೀವು ಇನ್ನೂ ಅನ್ಯರ ಮೋರೆಯನ್ನು ನೋಡುವುದು ಯೋಗ್ಯವಲ್ಲ' ಎಂದು ಧಾಷಣ ಮಾಡಿದರು

ಈಗಿನ ಪರಿಸ್ಥಿತಿಯನ್ನು ಪರಿತೀಲಿಸುವಾಗ, ಈ ದೇವಸ್ಥಾನವು ಬೇಗನೇ ಹರಿಜನರಿಗಾಗಿ ತೆರೆಯಲ್ಪಡುವ ಸಂಧವವಿದೆಯೆಂದು ಧೈರ್ಯವಾಗಿ ಹೇಳಬಹುದು ಬೇಗನೇ ಸರ್ವ ಮುಖಂಡರ ಪರಿಮತ್ತು ಒಂದು ಸೇರಿ ಅನುಮತಿಯನ್ನು ವೆೀ ಚಿನಲಾಗುವುದು ಸಂಘದವರು ಶಿಕ್ಷಿತ ತರುಣರಿರುವುದರಿಂದ ಅವರಲ್ಲಿ ಯಾರ ಅಡ್ಡಿಯೂ ಇರುವಂತೆ ತೋರುವುದಿಲ್ಲ ಆದರೆ ಗುರಿಕಾರರುಗಳು ಈಗಾಗಲೇ ತಲೆಮರಸಿ ಕರಟುತ್ತಿರುವರು ಇವರ ಹರಪಿಯ ಪ್ರಯೋಜಕತೆಯು ಎಷ್ಟೊಂದು ಪರಿಣಾಮಕಾರಿಯಾದೀತೆಂದು ಊಹಿಸಲು ಸಾಧ್ಯವಿರುವುದಿಲ್ಲ

ಈ ದೇವಸ್ಥಾನದ ಆಡಳಿತೆಯು ಶ್ರೀ ಎಚ್ ಕೊರಗಪ್ಪ, ಶ್ರೀ ಎನ್ ಎಸ್ ಸುವರ್ಣರೇ ಮೊದಲಾದವರ ಕೈಯಲ್ಲಿರುವುದರಿಂದಲೂ, ಶ್ರೀ ಸುವರ್ಣರು ಯುವಕರಿಗೊಬ್ಬ ಮಾರ್ಗದರ್ಶಕರಾಗಿರುವುದರಿಂದಲೂ, ಅಲ್ಲದೆ ಹೆಚ್ಚಿನ ಯುವಕರ ಬೆಂಬಲವು ಇವರಿಗಿರುವುದರಿಂದಲೂ ಈ ಸಮಸ್ಯೆಯ ಪರಿಣಾಮವು ಹರಿಜನ ಪ್ರವೇಶದಲ್ಲೇ ಪರ್ಯವಸಾನ ಹೊಂದೀತೆಂದು ಊಹಿಸಲಾಗಿದೆ. ಕುದ್ರೋಳಿಯಲ್ಲಿ ದೇವಸ್ಥಾನ ಪ್ರವೇಶವಾದೀತೆ? ದಕ್ಷಿಣ ಕನ್ನಡದಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರವು ಅದರ್ಶಸ್ಥಾಯವಾದೀತೇ ಎಂಬ ಆಕಾಂಕ್ಷೆಗಳಿಂದಿಂದ ಜನತೆಯು ಈ ದೇವಸ್ಥಾನದವರ ಹೆಜ್ಜೆಯನ್ನು ಆತಾತುರಗಳಿಂದ ನಿರೀಕ್ಷಿಸಿ, ಪ್ರೋತ್ಸಾಹಿಸಿ, ಮುಂದೊತ್ತುವಂತೆ ನೋಡಬೇಕಾಗಿದೆ ಹಳ್ಳಿಗರ ಮತ್ತು ಮುಂದುಕ ' ಸನಾತನಿ'ಗಳ ವಿರುದ್ಧಭಾವದ ಪ್ರದರ್ಶನವಾಗುವ ಅದಿಯಲ್ಲಿ, ಹರಿಜನ ಸಂಘದವರು ನಡುಗಟ್ಟಿ, ಮಹಾತ್ಮಾ ಗಾಂಧಿಯವರ ಸಲಹೆಗನುಸಾರವಾಗಿ, ಶೀಘ್ರವಾಗಿಯೇ ಈ ಮಹತ್ಕಾರ್ಯದಲ್ಲಿ ನಿರತರಾಗುವುದು ಯುಕ್ತವೆಂದು ನಮ್ಮ ಅಭಿಪ್ರಾಯವಿರುತ್ತದೆ

ಮ ಜಾ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಅಯುರ್ವೇದೋಕ್ತ

ಶಾಖಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು

ಈ ದ್ರಾಕ್ಷಾದ್ರವ್ಯವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ವಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಪಕೇ ರಕ್ತ (ಗಜಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನ ವೈೃಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣೊಳಗೆ ಉರುಪು ಜೀರ್ಣವಾಣಿ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಭೋಗಕೆ ಬರೋಣ, ಸೌಕಕ್ಕೆ ಸಾವು ಆಗದೇ ಇರೋಣ ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಜೀರ್ಣಾಗ್ನಿಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತಾಯಂದಿರಿಗೆ ವೃಥಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯಾವನಂತರ ಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು ಈ ಔಷಧದ ೨ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು

ಒಂದು ಬಾಟ್ಲಿ ಬೆಲೆ ೦-೪-೦ ೬ ಬಾಟ್ಲಿಗೆ ೪ ೦ ಡಜನು ಬಾಟ್ಲಿಗೆ ೨ ರೂಪ್ಯಾ ೬೫ಪೈಸೆ ಖರ್ಚು ಪೊಸ್ಟೇಜ ಬೇರೆ ಬೇಳುತ್ತದೆ

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸ್‌ಮೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು

ಮ್ಯಾನೇಜರ— ದ್ರಾಕ್ಷಾಮೃತ ವೈದ್ಯ ಕಾರ್ಯಾಲಯ, ಪೋಷ್ಟು ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು— ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್

ಕುಂದಾಪುರ— ಕೆ ಆರ್ ಭಟ್ಟ, ಕೆಮಿಸ್ಟ್ಸ್, ಉಡುಪಿ— ಸೈ ಫಾರ್ಮೆಸಿ, ತೆಂಕಪೇಟೆ ಕಾರ್ಕಳ— ಎ. ವಿ. ಶೆಣೈ. ಪುತ್ತೂರು— ಗೋಪಾಲ ನಾರಾಯಣ ಸೈ ಮತ್ತು ಸೈ ಫಾರ್ಮೆಸಿ ಕಾಸರಗೋಡು— ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ದಿ ಕೆನರಾ ಪೊಲ್ಯೂಲರ್ ಸ್ಟಾರ್ಸ್.

3-6-'38

ಹರಿಜನರಿಗಾಗಿ ದೇವಸ್ಥಾನಗಳು ತೆರೆಯಲ್ಪಟ್ಟುವು

ನಾಗಪುರದಲ್ಲಿ ಹನುಮಾನ್ ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಟ್ಟಿತು. ಜಾತಿ ಭೇದವಿಲ್ಲದೆ ಎಲ್ಲರ ಪೂಜಾ ವಿಧಿಗಳು ಸಲ್ಲಿಸಲ್ಪಟ್ಟುವು

ಜೆಸ್ಸೂರಿನ ಎರಡು ದೊಡ್ಡ ದೊಡ್ಡ ಕಾಳಿಕಾ ದೇವಸ್ಥಾನಗಳು ಹರಿಜನರಿಗಾಗಿ ತೆರೆದಿಡಲ್ಪಟ್ಟು ಅವುಗಳನ್ನು ಯಾರೂ ಪ್ರವೇಶಿಸಬಹುದೆಂದು ನಿರ್ಧರಿಸಿದರು

ಗಾಂಧಿಜೀಯವರು ತನ್ನ ಉಪವಾಸವನ್ನು ಬಿಡುವ ದಿನ ಕಾನ್ಪುರದ ಸರ್ವಯ್ಯ ಘಾಟಿಯ ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಟ್ಟಿತು

ಅಮರಾವತಿಯ ವಕೀಲ ಆರ್ ಎ ಡಿ ದೇಶಪಾಂಡೆಯವರು ಭಾಷಣ ಮಾಡುತ್ತಾ ತಾನು ಒಬ್ಬ ಹರಿಜನ ಬಾಲಕನನ್ನು ತನ್ನ ಮನೆಯಲ್ಲಿರಿಸುವೆನೆಂದು ಘೋಷಿಸಿದರು

ಅಸೋರದ ಶ್ರೀರಾಮ ದೇವಸ್ಥಾನವು ಹರಿಜನರಿಗೆ ತೆರೆಯಲ್ಪಟ್ಟಿತು ಸ್ವಲ್ಪ ಒತ್ತಾಟವಿದ್ದರೂ ಕಡೆಗೆ ಗಡಿಬಿಡಿಸಿದವರು ಸೋತರು

ಭರೂಕಾಚಾದಿನಲ್ಲಿ ೯ ದೇವಸ್ಥಾನಗಳು ಹರಿಜನರಿಗಾಗಿ ತೆರೆದು ನಿಂತುವು.

ಲಕ್ನೋ ನಗರದ ವಿಶ್ವಕರ್ಮ ದೇವಸ್ಥಾನವೆಂದರೆ ಮಹಾ ಪ್ರಸಿದ್ಧಿಯನ್ನುಳ್ಳದು ಹರಿಜನರು ಇದನ್ನು ಪ್ರವೇಶಿಸಬಹುದೆಂದು ಒಪ್ಪಿದ್ದಾರೆ.

ದಕ್ಷಿಣ ಕನ್ನಡದಲ್ಲಿ???

+++++

ಅಕ್ಕಿ ಉಕ್ಕಿ ಬರುವ ಹೆಮ್ಮಾರಿಯಾಗಿರುವ ಕೆಮ್ಮನ್ನು ಉಪೇಕ್ಷೆ ಮಾಡಿದಲ್ಲಿ ಅದು ಕ್ಷಯ ಮೊದಲಾದ ರೋಗಗಳಿಗೆ ಆಹ್ವಾನವನ್ನೀಯುವುದು. ನಿಮ್ಮ ಮಕ್ಕಳನ್ನು ಈ ಔಷಧಿಯ ಉಪಯೋಗದಿಂದ ರಕ್ಷಿಸಿರಿ!

"ಕೂ-ಕೂಮಿನ್"

ಸಾಮಾನ್ಯವಾದ ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮುಗಳಿಂದ ಪಾರುಮಾಡುತ್ತದೆ. ಮಹದುಪಕಾರಿಯು ಕಂಡುಬಂದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧಿಯನ್ನೇ ಪ್ರಯೋಗಿಸುತ್ತಾರೆ.



ಅಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲದೆ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯೌಷಧವಾಗಿದೆ. ಕ್ರಯ 1-8-0

ಮುದ್ರಾಸಿನಲ್ಲಿ ದಿ ಒರಿಯಂಟಲ್ ಡಿಸರ್ಟ್ ಲೆಬೊರೆಟರಿಯವರಿಂದ ಸಿದ್ಧವಾದುದು.

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್:-

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn.
Malleswaram Post, BANGALORE.

OR

The Managing Agents,
The S. I. G. A. Co. Ltd.
55. Poonamallee High Road, Kilpauk, MADRAS.

ನಿಮಗೆ ಭಕ್ತಿ ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.
ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ನೇಟಿಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು.

ಮತಕ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚುರವಾಗಿರುವುದು ಸರಿಯಷ್ಟೆ. ಈಗ 11—12ನೇಯ ಸ್ಕಂಧಗಳೆ ಎಂಟನೆಯ ಸಂಪುಟವು ಪೀಠಿಕಾ ವಿವರಣೆ ಸಹಿತ ಒಕ್ಕಣೆ ಬೆಕ್ಕಣಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರು ದೇಶಬಾಂಧವರೂ ಸಕಾಲ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ

1ನೇಯ ಸಂಪುಟ	(1—2ನೇ ಸ್ಕಂಧಗಳು)	3- 4-0	7ನೆಯ ಸಂಪುಟ (ದಶಮ ಉತ್ತರಭಾಗ) 4-8-0
2 ,,	,, (3ನೆಯ ಸ್ಕಂಧ)	3-12-0	8 ,, ,, (11, 12ನೆಯ ಸ್ಕಂಧಗಳು ಟೀಕಾತಾತ್ಪರ್ಯ ಸಹಿತ) 4-8-0
3 ,,	,, (4 ,,)	3- 8-0	ಶ್ರೀ ಭಾಗವತ ಪುರಾಣ ವಿಮರ್ಶೆ ಮಾತ್ರ 0-8-0
4 ,,	,, (5-6ನೇಯ ಸ್ಕಂಧಗಳು)	4- 0-0	ಕರ್ನಾಟಕ ಕುದ್ರಾಂಕ್ಷಕ ನಾಮಕ 1-4-0
5 ,,	,, (7, 8, 9 ಸ್ಕಂಧಗಳು)	5- 8-0	(ಇವೇ ಗ್ರಂಥಕರ್ತರಿಂದ ರಚಿಸಲ್ಪಟ್ಟುದು)
6 ,,	,, (ದಶಮ ಪೂರ್ವಭಾಗ)	5-0 0	

ಈ ಬೆಲೆಗಳಿಗೆ ಟಪಾಲಿನ ಹಣವು ಸೇರಿಲ್ಲ. ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಧಾರಣೀ ಭವನಂ, ಆತಮಾರಾಜಪೇಟೆ, ಬೆಂಗಳೂರು ಸಿಟಿ.

ಕೆಸರು ಒಕರೆಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಬ್ಬರ್‌ಸ್ಟಾಂಪುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮೂರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಡಿಯಲ್ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ಈ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.

ಡಾಕ್ಟರ್ ಗೌತಮರಾವ್, ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಧಾರವಾಡ. ಮುಂಬಾಯಿ ೨. ಸ್ಟ್ರೈಕ್ನಸ್ ಹಾಕಂಬಿನ್,
[ಪ್ರತ್ಯೇಕವಾದ ಅಂಗ್ಲಿಷ್ ಆಡಳಿತ ಮಂಡಲಿಯಲ್ಲಿ] ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ
ದಶಮೂಲಾರಿಷ್ಟ.
ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧನ್ವಂತ್ರೈದ್ಯಾಶ್ರಮ ಸಂಘ,
ದೊಂಗರಕೇರಿ ರಸ್ತೆ, ಮಂಗಳೂರು.

THE SOUTH INDIA
CO-OPERATIVE INSURANCE SOCIETY,
LIMITED, MADRAS.

LOCAL BOARD:—

THE SOUTH CANARA CENTRAL CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

FOR TERMS APPLY TO:—

The Secretary,
South Canara Central Co-operative
Bank, Ltd., KODIALBAIL P. O. (Mangalore)
SOUTH CANARA.

ಮೂರಾಟಕ್ಕಿವೆ! ಮೂರಾಟಕ್ಕಿವೆ!!

ಕಾಫಿ ಪ್ಲೆಂಟರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್‌ರೋಲ್‌ಗಳು
ಮೂರು ಸ್ಥಾನಗಳಲ್ಲಿ ತಯಾರಿಸಲ್ಪಟ್ಟು
ಮೂರಾಟಕ್ಕೆ ಸಿದ್ಧವಿವೆ.

ರಟಂ. ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕೃಯಕ್ಕು, ಇತರ ಮಾಹಿತಿಗೂ ಈ ವೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಫಾಷಣಾಕ್ಷಿ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.